| | | • ಬಾಲನ್ಯಾಯ (ಮಕ್ಕಳಪಾಲನೆಮತ್ತುರಕ್ಷಣೆ) ತಿದ್ದುಪಡಿಕಾಯ್ದೆ 2021, 2016ರಮಾದರಿ ನಿಯಮಗಳು.<br>• ಮಕ್ಕಳಮೇಲಿನಲೈಂಗಿಕದೌರ್ಜನ್ಯತಡೆ (ಪೋಕ್ಸೋ) ಕಾಯ್ದೆ-2012 ನಿಯಮಗಳು-2020.<br>• ಬಾಲ್ಯವಿವಾಹನಿಷೇಧಕಾಯ್ದೆ-2006,<br>• ಬಾಲ್ಯವಿವಾಹನಿಷೇಧ (ಕರ್ನಾಟಕ) ನಿಯಮಗಳು- 2014.<br>• ಬಾಲ್ಯವಿವಾಹನಿಷೇಧ (ಕರ್ನಾಟಕತಿದ್ದುಪಡಿ)ಕಾಯ್ದೆ-2016.<br>• ಬಾಲಕಾರ್ಮಿಕ (ನಿಷೇಧಮತ್ತುನಿಯಂತ್ರಣ) ಕಾಯ್ದೆ-1986.<br>• ಮಹಿಳೆಯರ ಮತ್ತು ಮಕ್ಕಳ ಅನೈತಿಕಸಾಗಾಣಿಕೆ (ತಡೆಗಟ್ಟುವಿಕೆ) ಕಾಯ್ದೆ-1956.<br>• ಮಕ್ಕಳ ಮೇಲೆ ಆಗುತ್ತಿರುವ ದೌರ್ಜನ್ಯ ಹಾಗೂ ಬಾಲ್ಯ ವಿವಾಹಗಳನ್ನು ತಡೆಯಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳು:<br>• ಮಕ್ಕಳ ಸಹಾಯವಾಣಿ-1098 24*7 ಮಕ್ಕಳ ಸುರಕ್ಷತೆಗಾಗಿ ಕಾರ್ಯನಿರ್ವಹಿಸುತ್ತಿದೆ. ಸಂಕಷ್ಟದಲ್ಲಿರುವ ಮಗುವಿನ ಬಗ್ಗೆ ಯಾವುದೇ ಸಮಯದಲ್ಲಿ ಕರೆ ಸ್ವೀಕೃತವಾದರೂ ತಕ್ಷಣ ಮಗುವನ್ನು ರಕ್ಷಿಸಲು ಸಂಬಂಧಿಸಿದ ಅಧಿಕಾರಿಗಳು ಕಾರ್ಯ ಪ್ರವೃತ್ತರಾಗಿರುತ್ತಾರೆ.<br>• ಮಕ್ಕಳ ರಕ್ಷಣಾ ಕಾರ್ಯಕ್ರಮಗಳ ಕುರಿತು ಮಾನ್ಯ ಇಲಾಖಾ ಸಚಿವರ ಸಂದೇಶವನ್ನು ಆಕಾಶವಾಣಿ ಮೂಲಕ ದಿ:16-09-2024 ರಿಂದ 15-10-2024ರ ವರೆಗೆ ಪ್ರಸಾರ ಮಾಡಲಾಗಿದೆ.<br>• ದಿನಾಂಕ:11.08.2024 ರಿಂದ "ವಾತ್ಸಲ್ಯ ವಾಣಿಎಂಬ13 ವಾರಗಳ ಸರಣಿ ಕಾರ್ಯಕ್ರಮವನ್ನು ಆಕಾಶವಾಣಿ ಮೂಲಕ ಪ್ರಸಾರ ಮಾಡಲಾಗುತ್ತಿದ್ದು, ಈ ಕಾರ್ಯಕ್ರಮದಲ್ಲಿ ಮಾನ್ಯ ಇಲಾಖಾ ಸಚಿವರು, ಇಲಾಖಾ ಕಾರ್ಯದರ್ಶಿಗಳು, ನಿರ್ದೇಶಕರು ಸೇರಿದಂತೆ ಹಲವು ಅಧಿಕಾರಿಗಳು ಭಾಗವಹಿಸಿ ಜಾಗೃತಿ ಮೂಡಿಸಿದ್ದಾರೆ .<br>• ರಾಜ್ಯಾದ್ಯಂತ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಶಾಲೆಗಳು, ವಿವಿಧ ಇಲಾಖೆಗಳು ಮತ್ತು ಸಾರ್ವಜನಿಕರಿಗೆ ಒಟ್ಟು 697 ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು ಸುಮಾರು 575349 ಭಾಗೀದಾರರು ಸಾರ್ವಜನಿಕರು ಒಳಗೊಂಡಂತೆ ಪ್ರಯೋಜನ ಪಡೆದಿರುತ್ತಾರೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ)<br>• ಪ್ರತಿ ಜಿಲ್ಲೆಯಲ್ಲೂ ಮಕ್ಕಳ ಕಲ್ಯಾಣ ಸಮಿತಿ, ಬಾಲನ್ಯಾಯ ಮಂಡಳಿ, ಮಕ್ಕಳ ವಿಶೇಷ ಪೊಲೀಸ್ ಘಟಕ, ಮಕ್ಕಳ ಪಾಲನಾ ಸಂಸ್ಥೆ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು ಪಾಲನೆ/ ಪೋಷಣೆ ಅವಶ್ಯಕತೆ ಇರುವ ಮಕ್ಕಳು ಮತ್ತು ಕಾನೂನು ಸಂಘರ್ಷ ಕ್ಕೊಳಗಾದ ಮಕ್ಕಳ ಪುನರ್ವಸತಿಗೋಸ್ಕರ ಕಾರ್ಯ ನಿರ್ವಹಿಸುತ್ತಿವೆ. |

| | | |
|---|---|---|
| | | • ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ ಮಹಿಳೆಯರ ಮತ್ತು ಮಕ್ಕಳ ಹಕ್ಕುಗಳ ಕಾವಲು ಸಮಿತಿಯನ್ನು ರಚಿಸಲಾಗಿದೆ.<br>• ಬಾಲ ಗರ್ಭಿಣಿಯರ ಪ್ರಕರಣಗಳಿಗೆ ಸಂಬಂಧಿಸಿದಂತೆ, ದಿನಾಂಕ:06.09.2024ರ ಸರ್ಕಾರದ ಆದೇಶದಂತೆ ಅಪ್ರಾಪ್ತ ವಯಸ್ಸಿನ ಹೆಣ್ಣುಮಕ್ಕಳು ಬಾಲ ಗರ್ಭಿಣಿಯ ರಾಗುವುದನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ವಿವಿಧ ಇಲಾಖೆಗಳಿಗೆ ಜವಾಬ್ದಾರಿಗಳನ್ನು ನಿಗದಿ ಪಡಿಸಲಾಗಿದೆ.<br>• ಬಾಲಗರ್ಭಿಣಿಯರ ಪ್ರಕರಣಗಳನ್ನು ತಡೆಗಟ್ಟುವ ಸಂಬಂಧ ಪ್ರಸ್ತುತ ವರ್ಷ ಅಧಿಕಾರಿ/ ಸಿಬ್ಬಂದಿಗಳ ಸಾಮರ್ಥ್ಯಾಭಿವೃದ್ಧಿ ತರಬೇತಿ ಆಯೋಜಿಸಲು ಸರ್ಕಾರದ ಆದೇಶದಂತೆ ಸ್ವಯಂ ಸೇವಾ ಸಂಘದೊಂದಿಗೆ ಒಡಂಬಡಿಕೆ ಮಾಡಿಕೊಂಡು ಕ್ರಮವಹಿಸಲಾಗುತ್ತಿದೆ.<br>• ಲೈಂಗಿಕ ದೌರ್ಜನ್ಯಕ್ಕೊಳಗಾದ ಸಂತ್ರಸ್ಥ ಮಗುವಿಗೆ ಕಾನೂನು ಸಲಹೆ ಮತ್ತು ಆಪ್ತ ಸಮಾಲೋಚನೆಗಾಗಿ ಪ್ರತಿಯೊಂದು ಜಿಲ್ಲೆಯಲ್ಲೂ ಬೆಂಬಲ ವ್ಯಕ್ತಿಗಳನ್ನು ನೇಮಿಸಲು ಕ್ರಮವಹಿಸಲಾಗಿದೆ.<br>• ನ್ಯಾಯಾಲಯಗಳಲ್ಲಿ ದಾಖಲಾಗುವ ಪ್ರಕರಣಗಳನ್ನು ಸರ್ಕಾರಿ ಅಭಿಯೋಜಕರು ಮತ್ತು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ನಿರ್ವಹಿಸುತ್ತಾರೆ.<br>• ಬಾಲ್ಯ ವಿವಾಹ ಮತ್ತು ದೌರ್ಜನ್ಯಗಳನ್ನು ತಡೆಯಲು ಹಾಗೂ ಕ್ರಮ ತೆಗೆದುಕೊಳ್ಳಲು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ/ ಮಕ್ಕಳ ರಕ್ಷಣಾ ನಿರ್ದೇಶನಾಲಯ ಅಧಿಕಾರಿಗಳನ್ನು ಒಳಗೊಂಡಂತೆ ಈ ಕೆಳಕಂಡ ಇಲಾಖೆಯ ಅಧಿಕಾರಿಗಳನ್ನು ಬಾಲ್ಯವಿವಾಹ ನಿಷೇಧಾಧಿಕಾರಿಗಳೆಂದು (CMPOs) ನೇಮಿಸಲಾಗಿದೆ. ರಾಜ್ಯದಲ್ಲಿ ಈ ರೀತಿ ನೇಮಿಸಲಾದ ಸುಮಾರು 58000 ಕ್ಕಿಂತ ಹೆಚ್ಚು ಬಾಲ್ಯವಿವಾಹ ನಿಷೇಧಾಧಿಕಾರಿಗಳು ಇರುತ್ತಾರೆ<br>• ಕಂದಾಯ ಇಲಾಖೆ<br>• ಕಾರ್ಮಿಕ ಇಲಾಖೆ<br>• ಶಿಕ್ಷಣ ಇಲಾಖೆ<br>• ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ<br>• ಒಳಾಡಳಿತ ಇಲಾಖೆ<br>• ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ<br>• ಸಮಾಜ ಕಲ್ಯಾಣ ಇಲಾಖೆ |

| | | |
|---|---|---|
| | | ಮೇಲಿನ ಎಲ್ಲಾ ಇಲಾಖೆಗಳ ಸಂಬಂಧಿಸಿದ ಅಧಿಕಾರಿಗಳು ಬಾಲ್ಯವಿವಾಹ ನಿಷೇಧ ಕಾಯ್ದೆ 2006 ರ ಪ್ರಕಾರ ಕ್ರಮಕೈಗೊಳ್ಳಲು ಅಧಿಕಾರವಿರುತ್ತದೆ.<br><br>ಮಕ್ಕಳ ರಕ್ಷಣಾ ನಿರ್ದೇಶನಾಲಯದ ವತಿಯಿಂದ ಜಿಲ್ಲಾಮಟ್ಟದಲ್ಲಿ ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ, ಪೋಕ್ಸೋ ಕಾಯ್ದೆ, ಮಕ್ಕಳ ಭಿಕ್ಷಾಟನೆ, ಬಾಲ ಕಾರ್ಮಿಕತೆ, ತಂಬಾಕು ನಿರ್ಮೂಲನೆ, ಬಾಲ್ಯವಿವಾಹ ಹಾಗೂ ಮಮತೆಯ ತೊಟ್ಟಿಲು ಈ ರೀತಿ ಮಕ್ಕಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಪೋಸ್ಟರ್‌ಗಳನ್ನು ಪ್ರಕಟಿಸಿ ಜನರಿಗೆ ಅರಿವು ಮೂಡಿಸಲು ಜಾಗೃತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. 2024-25 ನೇ ಸಾಲಿನಲ್ಲಿಯೂ ಸದರಿ ಕಾರ್ಯಕ್ರಮಗಳನ್ನು ಮುಂದುವರೆಸಲಾಗಿದೆ ಹಾಗೂ ದೇವಸ್ಥಾನಗಳಲ್ಲಿ ಬಾಲವಿವಾಹ ಮತ್ತು ಬಾಲಬಿಕ್ಷಾಟನೆಯನ್ನು ತಡೆಯಲು ಮುಂಜಾಗ್ರತೆ ಕ್ರಮಗಳನ್ನು ವಹಿಸುವಂತೆ ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರಿಗೆ ದಿನಾಂಕ: 14/11/2024 ರಂದು ಪತ್ರ ವ್ಯವಹರಿಸಲಾಗಿದೆ.<br><br>ಪೊಲೀಸ್ ಇಲಾಖೆ:<br><br>• ರಾಜ್ಯದಲ್ಲಿ ಮಹಿಳೆ ಮತ್ತು ಮಕ್ಕಳ ದೌರ್ಜನ್ಯಗಳನ್ನು ತಡೆಗಟ್ಟಲು ಒಟ್ಟು: 42 ಮಹಿಳಾ ಪೊಲೀಸ್ ಠಾಣೆಗಳನ್ನುಸ್ಥಾಪಿಸಲಾಗಿದೆ.<br>• ಮಹಿಳೆ ಮತ್ತು ಮಕ್ಕಳ ದೌರ್ಜನ್ಯಗಳನ್ನು ತಡೆಗಟ್ಟಲು ಪೊಲೀಸ್ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣಾಭಿವೃದ್ಧಿ ಇಲಾಖೆಗಳ ಸಹಯೋಗ ಬಹುಮುಖ್ಯವಾಗಿರುತ್ತದೆ.<br>• ಎಂಎಲ್‌ಎ ಫಂಡ್‌ನಿಂದ ಶೇ.20 ರಷ್ಟು ಅನುದಾವನ್ನು ಮಹಿಳೆ ಮತ್ತು ಮಕ್ಕಳ ದೌರ್ಜನ್ಯಗಳನ್ನು ತಡೆಗಟ್ಟುವ ಕಾರ್ಯಕ್ರಮಗಳಿಗೆ ಮೀಸಲಿಡುವ ಕುರಿತು ಸಮಿತಿಯು ಪರಿಶೀಲಿಸಿ ಕ್ರಮ ಕೈಗೊಳ್ಳಬಹುದಾಗಿದೆ.<br>• ಸಿಎಸ್‌ಆರ್ ಫಂಡ್‌ನಲ್ಲಿಯೂಸಹ ಮೇಲ್ಕಂಡ ಕಾರ್ಯಕ್ರಮಗಳಿಗೆ ಅನುದಾನವನ್ನು ಉಪಯೋಗಿಸುವ ಕುರಿತು ಉತ್ತೇಜನ ನೀಡ ಬಹುದಾಗಿದ್ದು ಮತ್ತು ಈ ಕುರಿತು ರಾಷ್ಟ್ರೀಯ ನೀತಿಯನ್ನು ರೂಪಿಸಲು ಕ್ರಮ ಕೈಗೊಳ್ಳಬಹುದಾಗಿ ಕೋರಿದೆ.<br>• ಎಲ್ಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಹಿಳೆ ಮತ್ತು ಮಕ್ಕಳ ದೌರ್ಜನ್ಯ ಕುರಿತು ಮಹಿಳೆಯರು ಕೆಲಸ ಮಾಡುವ ಸ್ಥಳಗಳಲ್ಲಿ ಹಾಗೂ ಶಾಲಾ/ ಕಾಲೇಜುಗಳಲ್ಲಿ ಮಹಿಳೆ ಮತ್ತು ಮಕ್ಕಳ ರಕ್ಷಣೆಗಾಗಿ ಇರುವ ಕಾನೂನುಗಳ ಬಗ್ಗೆ, ಅಪರಾಧಗಳ ಅರಿವು, ಸ್ವಯಂ ರಕ್ಷಣಾ ಕೌಶಲ್ಯದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. |

| | | |
|---|---|---|
| | | • ಪ್ರಧಾನ ಕಛೇರಿಯ ಆದೇಶ "ಸ್ಥಾಯಿ ಆದೇಶ ಸಂಖ್ಯೆ: 920" ರ ಸೂಚನೆಗಳನ್ವಯ ಪ್ರತಿ ಮಾಹೆಯಲ್ಲು, ಕಡ್ಡಾಯವಾಗಿ ಜನ ಸಂಪರ್ಕ ಸಭೆ ನಡೆಸಿ ಮಹಿಳೆ ಮತ್ತು ಮಕ್ಕಳ ಕಾನೂನುಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.<br>• ಪ್ರತಿಯೊಂದು ಪೊಲೀಸ ಠಾಣೆಗಳಲ್ಲಿ ಪ್ರತಿ ಗುರುವಾರ ಮಕ್ಕಳಿಗೆ ಕಾನೂನು ಅರಿವು ಮೂಡಿಸಲು "ತೆರೆದಮನೆ" ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. |
| 3. | ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಕೃತ್ಯಗಳ ಬಗ್ಗೆ, ಕಾನೂನಿನ ಚೌಕಟ್ಟಿನಲ್ಲಿ ಶೀಘ್ರ ಗತಿಯಲ್ಲಿ ತನಿಖೆ ನಡೆಸಿ, ನ್ಯಾಯಾಲಯಗಳಿಗೆ ವರದಿ/ಚಾರ್ಜ್ ಶೀಟ್ಗಳನ್ನು ದಾಖಲು ಮಾಡಿ. ಕೇಸುಗಳು ಕಾಲಬದ್ಧವಾಗಿ ಶೀಘ್ರಗತಿಯಲ್ಲಿ ಇತ್ಯರ್ಥವಾಗುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಜವಾಬ್ದಾರಿ ಹೊರಿಸುವಂತಹ ಕಾನೂನನ್ನು ಸರ್ಕಾರ ಮಾಡಬೇಕು. | **ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ:**<br>• ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಕೃತ್ಯಗಳ ಬಗೆ ಪೊಲೀಸರು ಸಲ್ಲಿಸುವ ದೋಷಾರೋಪಣಾ ಪಟ್ಟಿಗಳನ್ನು ಕಾಲಮಿತಿಯೊಳಗೆ ಪರಿಶೀಲಿಸಿ, ಅಗತ್ಯ ಮಾಹಿತಿಗಳನ್ನು ತನಿಖಾಧಿಕಾರಿಗಳಿಗೆ ನೀಡಲಾಗುತ್ತಿದೆ ಹಾಗೂ ಶೀಘ್ರಗತಿಯಲ್ಲಿ ಪ್ರಕರಣಗಳನ್ನು ಇತ್ಯರ್ಥವಾಗಲು ಸರ್ಕಾರಿ ಅಭಿಯೋಜಕರುಗಳಿಗೆ ನಿರ್ದೇಶನ ನೀಡಲಾಗುತ್ತಿದೆ. Prevention is betterthan cure.<br>• ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಮತ್ತು ಇತರೆ ಅಪರಾಧಗಳು ಹೆಚ್ಚು ಆಗುತ್ತಿರುವುದಕ್ಕೆ ಕಾರಣಗಳನ್ನು ಕಂಡು ಹಿಡಿದು ತಡೆಗಟ್ಟುವ ಕ್ರಮಗಳನ್ನು (Preventing measures)<br>• ತೆಗೆದುಕೊಳ್ಳುವ ಅವಶ್ಯಕತೆಯಿದ್ದು ಈ ನಿಟ್ಟಿನಲ್ಲಿ ಸಮಿತಿಗಳನ್ನು ರಚಿಸಿ ಈ ಬಗ್ಗೆ ಕ್ರಮ ವಹಿಸಬೇಕಾಗಿರುತ್ತದೆ. ಹೆಚ್ಚು ಒತ್ತು ತಡೆಗಟ್ಟುವ (Prevention) ಬಗ್ಗೆ ಕ್ರಮ ವಹಿಸಬೇಕಾಗಿರುತ್ತದೆ.<br>**ಪೊಲೀಸ್ ಇಲಾಖೆ:**<br>• ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ (ಅತ್ಯಾಚಾರ & ಪೋಕ್ಸೊ) ಪ್ರಕರಣಗಳಲ್ಲಿ ತ್ವರಿತವಾಗಿ ತನಿಖೆ ಕೈಕೊಂಡು, ಕಡ್ಡಾಯವಾಗಿ 60 ದಿನಗಳ ಒಳಗಡೆ ತನಿಖೆಯನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗುತ್ತಿದೆ.<br>▪ ಪೋಕ್ಸೊ ಪ್ರಕರಣಗಳ ವಿಚಾರಣೆಯನ್ನು ಶೀಘ್ರಗತಿಯ ನ್ಯಾಯಾಲಯಗಳು (Fast Track Court) ನಡೆಸುತ್ತಿರುವದರಿಂದ ಪ್ರಕರಣಗಳ ವಿಚಾರಣೆ ಕಾಲಕ್ಕೆ ಸಾಕ್ಷಿದಾರರನ್ನು ಸಕಾಲದಲ್ಲಿ ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿ ಪ್ರಕರಣಗಳು ಶೀಘ್ರಗತಿಯಲ್ಲಿ ಮುಕ್ತಾಯಗೊಳ್ಳುವಂತೆ ಅಗತ್ಯ ಕ್ರಮ ಕೈಕೊಳ್ಳಲಾಗುತ್ತಿದೆ.<br>▪ ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಜೆ.ಜೆ. ಬೋರ್ಡ್‌ಗೆ ಸಂಬಂಧಿಸಿದ ಪ್ರಕರಣಗಳಲ್ಲಿ 3 ವರ್ಷ ಹಾಗೂ ಅದಕ್ಕಿಂತ ಕಡಿಮೆ ಶಿಕ್ಷೆ ವಿಧಿಸಬಹುದಾದಂತಹ ಪ್ರಕರಣಗಳನ್ನು ಲಘು (Petty) ಪ್ರಕರಣ ಅಂತಾ ಹಾಗೂ 7 ವರ್ಷ ಹಾಗೂ ಅದಕ್ಕಿಂತ ಕಡಿಮೆ ಶಿಕ್ಷೆ ವಿಧಿಸಬಹುದಾದಂತಹ ಪ್ರಕರಣಗಳನ್ನು ಗಂಭೀರ (Serious) ಪ್ರಕರಣಗಳೆಂದು ಮತ್ತು 7 |

| | | |
|---|---|---|
| | | ವರ್ಷ ಹಾಗೂ ಅದಕ್ಕಿಂತ ಹೆಚ್ಚಿನ ಅವಧಿಗೆ ಶಿಕ್ಷೆ ವಿಧಿಸಬಹುದಾದಂತ ಹಪ್ರಕರಣಗಳನ್ನು ಘೋರ (Henisous) ಅಪರಾಧ ಪ್ರಕರಣಗಳೆಂದು ಪರಿಗಣಿಸಲು ಸೂಚಿಸಲಾಗಿದೆ.<br>• ಲಘು (Petty) ಮತ್ತು ಗಂಭೀರ ಪ್ರಕರಣಗಳಲ್ಲಿ 4 ರೂಲ್-8 ರಂತೆ ಕಡ್ಡಾಯವಾಗಿ ಪ್ರಥಮ ವರ್ತಮಾನ ವರದಿಯನ್ನು (FIR) ಮಾಡದೇ ಫಾರ್ಮ ನಂ-1 ನ್ನು ತುಂಬಿ ಜೆ.ಜೆ. ಬೋರ್ಡಗೆ ಸಲ್ಲಿಸುವುದು ಹಾಗೂ ಅದರೊಂದಿಗೆ ವರದಿಯಾದ ಫಿರ್ಯಾದದ ಸಾರಾಂಶವನ್ನು ಎಸ್ ಎಚ್‌ಡಿಯಲ್ಲಿ ನಮೂದಿಸುವುದು ಮತ್ತು ಕಾನೂನು ಸಂಘರ್ಷಕ್ಕೊಳಗಾದ ಬಾಲಕನ ಸಾಮಾಜಿಕ ಸ್ಥಿತಿಗತಿಯ (Social Background) ಬಗ್ಗೆ ವರದಿ ಸಮೇತ ಜೆ.ಜೆ. ಬೋರ್ಡಗೆ ಸಲ್ಲಿಸಲಾಗುತ್ತಿದೆ.<br>• ಲಘು (Petty) ಮತ್ತು ಗಂಭೀರ ಪ್ರಕರಣಗಳಲ್ಲಿ ಕಾನೂನು ಸಂಘರ್ಷಕ್ಕೊಳಗಾದ ಬಾಲಕ/ ಬಾಲಕಿಗೆ ತಂದೆ ಅಥವಾ ತಾಯಿಯೊಂದಿಗೆ ಅಥವಾ ಪೋಷಕರೊಂದಿಗೆ ಕಳುಹಿಸಿಕೊಟ್ಟು ಜೆ.ಜೆ. ಬೋರ್ಡ ಮುಂದೆ ಹಾಜರಾಗಬೇಕಾದ ದಿನಾಂಕವನ್ನು ಮುಂಚಿತವಾಗಿತಿ ಳಿಸಲಾಗುತ್ತಿದೆ<br>• ಪ್ರತೀ ಜಿಲ್ಲೆ ಹಾಗೂ ನಗರಗಳಲ್ಲಿ ಮಹಿಳಾ ಪೊಲೀಸ ಠಾಣೆಗಳನ್ನು ರಚಿಸಿದ್ದು ದೌರ್ಜನ್ಯಕ್ಕೊಳಗಾದ ಮಹಿಳೆಯರ ಪ್ರಕರಣಗಳನ್ನು ದಾಖಲಿಸಿಕೊಂಡು ನಿಗದಿತ ವೇಳೆಯಲ್ಲಿ ತನಿಖೆ ಪೂರ್ಣಗೊಳಿಸಿ ದೋಷಾರೋಪಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸುವ ಮುಂಚೆ ಕಡ್ಡಾಯವಾಗಿ ಎಪಿಪಿ ರವರಿಂದ ಪರಿಶೀಲನೆಗೊಳಪಡಿಸಿ ಅವರ ಸಹಿ ಮತ್ತು ಮೊಹರು ಪಡೆದುಕೊಂಡು ಮೇಲಾಧಿಕಾರಿಗಳ ಅನುಮತಿಯೊಂದಿಗೆ ಸಲ್ಲಿಸಲಾಗುತ್ತಿದೆ.<br>**ಕಾನೂನು ಇಲಾಖೆ:**<br>• ಶೀಘ್ರಗತಿ ನ್ಯಾಯಾಲಯಗಳ ಪರಿಣಾಮಕಾರಿ ಕಾರ್ಯ ನಿರ್ವಹಣೆಗಾಗಿ ಕರ್ನಾಟಕದ ಗೌರವಾನ್ವಿತ ಉಚ್ಛ ನ್ಯಾಯಾಲಯವು ಪ್ರತ್ಯೇಕ ಸಮಿತಿಯನ್ನು ರಚಿಸಿರುತ್ತದೆ.<br>• ಪೋಕ್ಸೋ ಪ್ರಕರಣಗಳ ತ್ವರಿತ ವಿಲೇವಾರಿಗಾಗಿ ಗುರಿಗಳನ್ನು ಸಾಧಿಸುವಂತೆ ರಾಜ್ಯದಲ್ಲಿನ ಎಲ್ಲಾ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರುಗಳಿಗೆ ಕರ್ನಾಟಕ ಉಚ್ಛ ನ್ಯಾಯಾಲಯವು ದಿನಾಂಕ: 23.06.2023 ರ ಪತ್ರದಲ್ಲಿ ನಿರ್ದೇಶನ ನೀಡಿರುತ್ತದೆ.<br>**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**<br>ಪೋಕ್ಸೋ ಪ್ರಕರಣಗಳಲ್ಲಿ 90 ದಿನಗಳಲ್ಲಿ ತನಿಖೆ ಮುಗಿಸಿ ಚಾರ್ಜ್ ಶೀಟ್ ಅನ್ನು ಸಲ್ಲಿಸಬೇಕೆಂದು ಮತ್ತು ಚಾರ್ಜ್ ಶೀಟ್ ಸಲ್ಲಿಕೆಯಾದ 60 ದಿನಗಳಲ್ಲಿ ವಿಚಾರಣೆ ಮುಕ್ತಾಯಗೊಳಿಸಬೇಕೆಂದಿದೆ. |
| 4. | ಪ್ರತಿ ಜಿಲ್ಲೆಯಲ್ಲಿ, ವಿಶೇಷವಾಗಿ ಮಹಿಳಾ ಮತ್ತು ಮಕ್ಕಳ ಮೇಲಿನ | **ಕಾನೂನು ಇಲಾಖೆ:** |

| | | |
|---|---|---|
| | ಶೋಷಣೆ, ದೌರ್ಜನ್ಯ. ಅತ್ಯಾಚಾರ ಪ್ರಕರಣಗಳನ್ನಷ್ಟೇ ಇತ್ಯರ್ಥ ಮಾಡಲು ವಿಶೇಷ ನ್ಯಾಯಾಲಯಗಳನ್ನು ಬರುವ ಒಂದು ವರ್ಷದಲ್ಲಿ ಸರ್ಕಾರ ಪ್ರಾರಂಭ ಮಾಡಲು ಕ್ರಮ ವಹಿಸಬೇಕು. ವಿಶೇಷ ನ್ಯಾಯಾಲಯಗಳಲ್ಲಿ ಮಹಿಳೆ ಮತ್ತು ಮಕ್ಕಳಿಗೆ ಸಂಬಂಧಪಟ್ಟ ಪ್ರಕರಣಗಳನ್ನು ಮಾತ್ರ ನಡೆಸುವುದು. ಅಂತಹ ನ್ಯಾಯಾಲಯಗಳಲ್ಲಿ ವಿಶೇಷ ಪ್ರಾಸಿಕ್ಯೂಟರ್‌ಗಳನ್ನು ನೇಮಿಸುವುದು, ಇಂತಹ ವಿಶೇಷ ನ್ಯಾಯಾಲಯಗಳ ನ್ಯಾಯಾಧೀಶರು, ಪ್ರಾಸಿಕ್ಯೂಟರ್‌ಗಳ ಹುದ್ದೆಗಳಿಗೆ ಮಹಿಳೆಯರನ್ನು ನೇಮಕ ಮಾಡುವಂತೆ ಕ್ರಮ ಜರುಗಿಸುವುದು. ಜಸ್ಟೀಸ್ ವರ್ಮಾ ಆಯೋಗದ ಶಿಫಾರಸ್ಸಿನನ್ವಯ ಇವರೆಲ್ಲರಿಗೂ ಲಿಂಗ ಸಂವೇದನಾ ತರಬೇತಿಯನ್ನು ಕಡ್ಡಾಯವಾಗಿ ನೀಡಬೇಕು. | ಸರ್ಕಾರಿ ಆದೇಶ ಸಂಖ್ಯೆ: LAW 99 LAC 2019 ದಿನಾಂಕ: 14.10.2019 ಮತ್ತು 27.02.2020 ರಲ್ಲಿ ಅತ್ಯಾಚಾರ ಮತ್ತು ಪೋಕ್ಸೋ ಪ್ರಕರಣಗಳ ವಿಚಾರಣೆಗಾಗಿ 31 ಫಾಸ್ಟ್‌ಟ್ರಾಕ್ ನ್ಯಾಯಾಲಯ (17 courts for trial of cases filed under POCSO Act and 14 courts for trial of rape cases along with POCSO Act cases) ಸ್ಥಾಪಿಸಲಾಗಿರುತ್ತದೆ.<br><br>ಖಾಲಿ ಇರುವ ಫಾಸ್ಟ್‌ಟ್ರಾಕ್ ನ್ಯಾಯಾಲಯಗಳಲ್ಲಿ ಮಹಿಳಾ ನ್ಯಾಯಮೂರ್ತಿಗಳ ನೇಮಕಕ್ಕೆ ಕ್ರಮ ಕೈಗೊಳ್ಳಲಾಗುವುದು.<br><br>**ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ:**<br><br>ಮಹಿಳಾ ಮತ್ತು ಮಕ್ಕಳ ಮೇಲಿನ ಶೋಷಣೆ, ದೌರ್ಜನ್ಯ ಅತ್ಯಾಚಾರ ಪ್ರಕರಣಗಳನ್ನು ಸರ್ಕಾರಿ ಅಭಿಯೋಜಕರುಗಳು ಪರಿಣಾಮಕಾರಿಯಾಗಿ ಪ್ರಕರಣಗಳನ್ನು ನಡೆಸುತ್ತಿದ್ದಾರೆ.<br><br>ವಿಶೇಷ ನ್ಯಾಯಾಲಯಗಳು ತೆರೆದ ಸಮಯದಲ್ಲಿ ಅಗತ್ಯವಿರುವ ಮಹಿಳಾ ಸರ್ಕಾರಿ ಅಭಿಯೋಜಕರನ್ನು ಅಂತಹ ನ್ಯಾಯಾಲಯಗಳಿಗೆ ನಿಯೋಜಿಸಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ. ನಮ್ಮ ಇಲಾಖೆಯ ಸರ್ಕಾರಿ ಅಭಿಯೋಜಕರುಗಳಿಗೆ ಹೆಚ್ಚಿನ ಹೊಣೆಗಾರಿಕೆ (Accountability) ಇರುವುದರಿಂದ ಅಲ್ಲದೆ, ಅಧಿಕಾರಿಗಳು ಅಭಿಯೋಜನಾಧಿಕಾರಿಗಳು<br><br>10-15 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುತ್ತಾರೆ. ಈ ಹಿನ್ನಲೆಯಲ್ಲಿ ನಮ್ಮ ಇಲಾಖೆಯ ಖಾಯಂ ಅಧಿಕಾರಿಗಳನ್ನು ಅಂತಹ ನ್ಯಾಯಾಲಯಗಳಿಗೆ ನಿಯೋಜಿಸಬೇಕಾಗಿರುತ್ತದೆ. ಸಾಧ್ಯವಾದಷ್ಟು ಮಹಿಳಾ ಅಧಿಕಾರಗಳನ್ನು ನೇಮಿಸಿದ್ದಲ್ಲಿ ಮಕ್ಕಳು ತಮಗೆ ಆಗಿರುವ ಶೋಷಣೆಯನ್ನು ಮುಕ್ತವಾಗಿ ಮತ್ತು ಗೌಪ್ಯ (Confidential) ವಾಗಿ ಮಹಿಳಾ ಅಧಿಕಾರಿಯೊಂದಿಗೆ ಅವರ ಸಮಸ್ಯೆಯನ್ನು ಮತ್ತು ಮಾತ್ರ ಹೃದಯಸ್ಪರ್ಶಿ ಸಿಗುವ ಸಾಧ್ಯತೆ ಇರುತ್ತದೆ. ಈ ಹಿನ್ನಲೆಯಲ್ಲಿ ಮಹಿಳಾ ಅಧಿಕಾರಿಯವರನ್ನು ನೇಮಿಸುವುದು ತುರ್ತು ಅವಶ್ಯಕತೆ ಇರುತ್ತದೆ. ಈ ಸಂಬAಧ ಈಗಾಗಲೇ ಸರ್ಕಾರವು ಇಲಾಖೆಯ ಅಭಿಯೋಜಕರುಗಳನ್ನು ವಿಶೇಷ ಸರ್ಕಾರಿ ಅಭಿಯೋಜಕರಾಗಿ ನೇಮಿಸುವ ಬಗ್ಗೆ ದಿನಾಂಕ:08.01.2025 ರಂದು ಅಧಿಸೂಚನೆ ಹೊರಡಿಸಿದ್ದು, ಸದರಿ ಅಧಿಸೂಚನೆಗೆ ಕರ್ನಾಟಕ ಉಚ್ಚ ನ್ಯಾಯಾಲಯ ತಡೆಯಾಜ್ಞೆ ನೀಡಿದೆ. ಪ್ರಕರಣವನ್ನು ಪ್ರತಿನಿಧಿಸಿದೆ.<br><br>**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:** |

| | | |
|---|---|---|
| | | ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಪೋಕ್ಸೋ ಪ್ರಕರಣಗಳಿಗಾಗಿ ಪೋಕ್ಸೋ ವಿಶೇಷ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತಿವೆ. |
| 5. | ಸಂತ್ರಸ್ತೆಯರಿಗೆ ರಕ್ಷಣೆ ನೀಡುವ ವಿಶೇಷ ವ್ಯವಸ್ಥೆಗೆ ಸರ್ಕಾರ ಕ್ರಮ ವಹಿಸಬೇಕು. ಸಂತ್ರಸ್ತೆಯರು ಸಮಾಜದ ಮುಖ್ಯವಾಹಿನಿಯಲ್ಲಿ ತಮ್ಮ ಬದುಕನ್ನು ರೂಪಿಸಿಕೊಳ್ಳಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೂಪಿಸಿರುವ ಪರಿಹಾರವನ್ನು, ಕೇಸು ದಾಖಲಾದಾಗ ಪರಿಹಾರದ ಮೊತ್ತದ 25% ಹಾಗೂ ಔಷಧೋಪಚಾರದ ವೆಚ್ಚ ನೀಡುವುದು, ಚಾರ್ಜ್‌ಶೀಟ್ ದಾಖಲಾದ ಕೂಡಲೇ 25% ಮೊತ್ತವನ್ನು ಹಾಗೂ ಉಳಿದ 50% ಪರಿಹಾರವನ್ನು ಕೇಸು ನ್ಯಾಯಾಲಯದಲ್ಲಿ ಇತ್ಯರ್ಥವಾದ ಕೂಡಲೇ ನೀಡುವಂತೆ ಕಾನೂನು ರೂಪಿಸುವುದು. ರಾಜ್ಯದಲ್ಲಿಯೂ ಪರಿಹಾರ ಪಡೆಯಲು ಅರ್ಹವಾದ ಹಲವು ಪ್ರಕರಣಗಳಿದ್ದಾಗ್ಯೂ ಕೇಂದ್ರ ಸರ್ಕಾರದ ನಿರ್ಭಯ ಪರಿಹಾರ ನಿಧಿಯನ್ನು ರಾಜ್ಯ ಸರ್ಕಾರ ಇಲ್ಲಿಯವರೆಗೂ ಬಳಸಿಕೊಂಡಿಲ್ಲ.<br>ಮುಂದೆಯಾದರೂ ರಾಜ್ಯ ಸರ್ಕಾರ ಪ್ರತಿ ಕೇಸಿನಲ್ಲಿ ಸಂತ್ರಸ್ತೆಯರಿಗೆ ಪರಿಹಾರ ನೀಡಿ ಪ್ರತಿ ವರ್ಷದ ಕೊನೆಯಲ್ಲಿ ಕೇಂದ್ರ ಸರ್ಕಾರದ | **ಒಳಾಡಳಿತ ಇಲಾಖೆ:**<br>ಸಂತ್ರಸ್ಥರ ಪರಿಹಾರ ಯೋಜನೆ-2011ರಡಿ ದಾಖಲಾದ ಪ್ರಕರಣದ ಸಂತ್ರಸ್ಥರಿಗೆ ನ್ಯಾಯಾಲಯವು ಆದೇಶಿಸಿರುವ ಮೇರೆಗೆ ಬಾಧಿತರಿಗೆ ಅಥವಾ ಅವಲಂಬಿತರಿಗೆ ಮಧ್ಯಂತರ ಪರಿಹಾರ ಮೊತ್ತ ಹಾಗೂ ಅಂತಿಮ ಪರಿಹಾರ ಮೊತ್ತವನ್ನು ರಾಜ್ಯ ಸರ್ಕಾರದ ಷೆಡ್ಯೂಲ್ ಹಾಗೂ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ಷೆಡ್ಯೂಲ್‌ನಂತೆ ಸಂತ್ರಸ್ಥರಿಗೆ ಪರಿಹಾರವನ್ನು ವಿತರಿಸಲಾಗುತ್ತದೆ.<br><br>**ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ(KSLSA) ಮಾಹಿತಿ:**<br>ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಕಾಯ್ದೆ 1987 ರಅಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ರಾಜ್ಯಾದ್ಯಂತ ಜಿಲ್ಲಾ ಮತ್ತು ತಾಲ್ಲೂಕು ಸೇವಾ ಸಮಿತಿಗಳ ಮೂಲಕ ಕಾನೂನು ಅರಿವು ಕಾರ್ಯಕ್ರಮಗಳನ್ನು ಹಾಗೂ ಕಲಂ 12ರ ಕಾನೂನು ಸೇವಾ ಪ್ರಾಧಿಕಾರದಕಾಯ್ದೆ 1987ರ ಅಡಿಯಲ್ಲಿಅರ್ಹ ವ್ಯಕ್ತಿಗಳಿಗೆ ಉಚಿತ ಕಾನೂನು ಸಲಹೆಯನ್ನು ನೀಡುವುದು ಮತ್ತು ನ್ಯಾಯಾಲಯಗಳಲ್ಲಿ ಬಾಕಿ ಇರುವ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಕಾಲಕಾಲಕ್ಕೆ ರಾಷ್ಟ್ರೀಯ ಲೋಕ್ ಅದಾಲತ್‌ಗಳನ್ನು ನಡೆಸುವ ಮೂಲಕ ಶೀಘ್ರ ಖರ್ಚು ರಹಿತ ವಿಲೇವಾರಿಗೆಕ್ರಮಕೈಗೊಂಡು ಹಾಗೂ ನ್ಯಾಯಾಲಯದಲ್ಲಿ ವ್ಯಾಜ್ಯದಾಖಲಾಗುವ ಪೂರ್ವದಲ್ಲಿಯೇ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಗುರುತಿಸಿ, ಪಕ್ಷಗಾರರನ್ನು ಕರೆಸಿ ರಾಜೀ ಮೂಲಕ ಇತ್ಯರ್ಥ ಮಾಡಿ, ಜನರಿಗೆ ಸಮಯ ಹಾಗೂ ಹಣ ಉಳಿತಾಯ ಆಗುವುದರೊಂದಿಗೆ ಸಾಮರಸ್ಯ ಜೀವನಕ್ಕೆ ಅವಕಾಶ ಕಲ್ಪಿಸಿಕೊಡಲಾಗುತ್ತಿದೆ.<br><br>• ಸದರಿ ಕಾನೂನು ಅರಿವು ಕಾರ್ಯಕ್ರಮಗಳಲ್ಲಿ ಮಹಿಳೆ ಮತ್ತು ಮಕ್ಕಳು ಹಾಗೂ ಸಂತ್ರಸ್ಥರಿಗೆ ಸಿಗುವ ಪರಿಹಾರಗಳ ಬಗ್ಗೆ, ಕಾನೂನು ಅರಿವು ಕಾರ್ಯಕ್ರಮಗಳನ್ನು ಜಿಲ್ಲಾ, ತಾಲ್ಲೂಕು ಮತ್ತುಗ್ರಾಮ ಮಟ್ಟದಲ್ಲಿ ಕಾಲಕಾಲಕ್ಕೆ ಮೂಡಿಸಲಾಗುತ್ತದೆ.<br>• ಸಂತ್ರಸ್ತೆಯರು ಸಮಾಜದ ಮುಖ್ಯ ವಾಹಿನಿಗಳಲ್ಲಿ ತಮ್ಮ ಬದುಕನ್ನು ರೂಪಿಸಿಕೊಳ್ಳಲು ಅಪರಾಧಿಕ ಕೃತ್ಯಕ್ಕೆ ಸಂಬAಧ ಪಟ್ಟಂತೆದೂರು ಠಾಣೆಯಲ್ಲಿ ದಾಖಲಾದಾಗ ಮತ್ತು ನ್ಯಾಯಾಲಯದ ವಿಚಾರಣೆಗೆ ಒಳಪಟ್ಟು, ಸಂತ್ರಸ್ಥರು ಹಾಗೂ ಮುಖ್ಯ ಸಾಕ್ಷಿಗಳು ಪೂರಕ ಸಾಕ್ಷಿಯನ್ನು ಘಟನೋತ್ತರವಾಗಿ ಅಭಿಯೋಜನೆ ಪರವಾಗಿ ಸಾಕ್ಷಿಯು ನುಡಿದಾಗ, ಸದರಿ ಸಂತ್ರಸ್ಥರು ಅಥವಾ ಅವಲಂಭಿತರ ಪುನರ್ವಸತಿಗಾಗಿ ಪ್ರಸ್ತುತ ಲಭ್ಯವಿರುವ ಕರ್ನಾಟಕ ಸಂತ್ರಸ್ಥರ ಪರಿಹಾರ ಯೋಜನೆ 2011 ಹಾಗೂ ಪರಿಷ್ಕೃತ 2013 ಮತ್ತು 2015 ರ ಪ್ರಕಾರ |

| | | |
|---|---|---|
| | ನಿರ್ಭಯ ನಿಧಿಯಿಂದ ಪರಿಹಾರದ ಹಣವನ್ನು ಪಡೆಯಲು ಕಟ್ಟುನಿಟ್ಟಿನ ಕ್ರಮ ಜರುಗಿಸುವುದು. | ನಿಗಧಿತ ಪರಿಹಾರವನ್ನು ಕಾಲಕಾಲಕ್ಕೆ ಸರ್ಕಾರ ಮಂಜೂರು ಮಾಡಿದಕೂಡಲೇ ಬಿಡುಗಡೆ ಮಾಡಲಾಗುತ್ತಿದೆ.<br>• ಮಹಿಳಾ ಸಂತ್ರಸ್ಥರಿಗೆ ಸಂಬಂಧ ಪಟ್ಟಂತೆ NALSAs compensation Scheme for Women Victims/Survivors/Sexual Assault/Other Crimes 2018 ರ ಪ್ರಕಾರ ನಿಗಧಿಪಡಿಸಲಾದಂತಹ ಪರಿಹಾರದ ಮೊತ್ತವನ್ನು ಸಂತ್ರಸ್ಥರಿಗೆ ಅಥವಾ ಅವಲಂಭಿತರಿಗೆ ಕಾಲಕಾಲಕ್ಕೆ ಸರ್ಕಾರಿ ಆದೇಶದ ಪ್ರಕಾರ ಬಿಡಿಗಡೆ ಮಾಡುವ ಮುಖಾಂತರ ಪುನರ್ವಸತಿ ಕಲ್ಪಿಸಲಾಗುತ್ತಿದೆ.<br>• ಭಾರತೀಯ ದಂಡಸಂಹಿತೆ ಹಾಗೂ ಪ್ರಸ್ತುತ BNS ಕಾಯ್ದೆಯ ಅಪರಾಧಕ್ಕೆ, ನ್ಯಾಯಲಯದ ಸೂಚನೆಯ ಪ್ರಕಾರ ಪರಿಹಾರದ ಮೊತ್ತ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಸಂತ್ರಸ್ಥರ ಪರಿಹಾರ ಸಮಿತಿಯ ಮುಖಾಂತರ ಲಭ್ಯವಿರುವ ಯೋಜನೆಯಡಿಯಲ್ಲಿ ಪರಿಹಾರವನ್ನು ಮಂಜೂರು ಮಾಡಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅನುಮೋದನೆಗೆ ಕಳುಹಿಸಿಕೊಟ್ಟು, ಸರ್ಕಾರ ಅನುದಾನವನ್ನು ಬಿಡುಗಡೆ ಮಾಡಿದ ಬಳಿಕ ಆಯಾ ಸಂತ್ರಸ್ಥರಿಗೆ ಕೂಡಲೇ ಅವರ ಖಾತೆಗೆ ನಗದು ಮತ್ತು ರೇವಣಿ ಮುಖಾಂತರ ಪಾವತಿಸಿ ಪುನರ್ವಸತಿ ಖಾತರಿ ಪಡಿಸಿಕೊಳ್ಳಲಾಗುವುದು.<br>• ಪೋಕ್ಸೋ ಕಾಯ್ದೆಗಳಡಿಯಲ್ಲಿನ ಅಪರಾಧಗಳಲ್ಲಿ ಸಂಬAಧಪಟ್ಟ ಪೋಕ್ಸೋ ನ್ಯಾಯಾಲಯ ನಿಯಮಾನುಸಾರ ಸದರಿ ಸಂತ್ರಸ್ಥರ ಪರಿಹಾರಯೋಜನೆಯ ಅಡಿಯಲ್ಲಿ ಉಲ್ಲೇಖಿಸಿದ ಪರಿಹಾರವನ್ನು ಆದೇಶಿಸಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅನುಮೋದನೆಗೆ ಕಳುಹಿಸಿಕೊಟ್ಟು, ಸರ್ಕಾರ ಅನುದಾನವನ್ನು ಬಿಡುಗಡೆ ಮಾಡಿದ ಬಳಿಕ ಆಯಾ ಸಂತ್ರಸ್ಥರಿಗೆ ಕೂಡಲೇ ಅವರ ಖಾತೆಗೆ ನಗದು ಮತ್ತು ರೇವಣಿ ಮುಖಾಂತರ ಪಾವತಿಸಿ ಪುನರ್ವಸತಿ ಖಾತರಿ ಪಡಿಸಿಕೊಳ್ಳಲಾಗುವುದು.<br>• ಅಲ್ಲದೇ, ಸದರಿ ಉಲ್ಲೇಖಿತ ಕಾಯ್ದೆಯಡಿಯಲ್ಲಿನ ಪ್ರಕರಣಗಳಲ್ಲಿ ಅಥವಾ Acid Attack, Rape ಇಂತಹ ಪ್ರಕರಣಗಳಲ್ಲಿ ಸಂಬಂಧಪಟ್ಟ ಪೋಕ್ಸೋ ನ್ಯಾಯಾಲಯ ಅಥವಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳು ಮಧ್ಯಕಾಲಿಕ ಪರಿಹಾರವನ್ನು ಸಂತ್ರಸ್ಥರಿಗೆ ಮತ್ತು ಅವಲಂಭಿತರಿಗೆ ಲಭ್ಯವಿರುವಂತಹ ನಿಧಿಗಳಿಂದಲೇ ಹಣವನ್ನು ಕೂಡಲೇ ಬಿಡುಗಡೆ ಮಾಡಿ ಪುನರ್ವಸತಿ ಕಲ್ಪಿಸಲಾಗುತ್ತಿದೆ.<br>• ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ (ತಡೆಗಟ್ಟುವಿಕೆ ದೌರ್ಜನ್ಯಗಳು) ಕಾಯ್ದೆ, 1989 ಅಡಿಯಲ್ಲಿ ಅಪರಾಧಗಳು ಘಟಿಸಿದಾಗ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೂಲಕ ದೂರು ದಾಖಲಾದಾಗ 25% ಹಾಗೂ ದೋಷಾರೋಪಣೆ ಪಟ್ಟಿ ಸಲ್ಲಿಸಿದಾಗ 25% ಹಾಗೂ ತೀರ್ಪಾದ ಬಳಿಕ ಉಳಿಕೆ 50% ಪರಿಹಾರವನ್ನು ಸಂತ್ರಸ್ತರಿಗೆ ನೀಡುವ |

| | | |
|---|---|---|
| | | ಅವಕಾಶವಿರುತ್ತದೆ ವಿನ: ಬೇರೆಕಾಯ್ದೆಯಡಿ ಘಟಿಸಿದ ಅಪರಾಧಕ್ಕೆ ಅನ್ವಯಿಸುವದಿಲ್ಲ. ಆದ್ದರಿಂದ, ಇತರೆ ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ, ಅತ್ಯಾಚಾರ, ಶೋಷಣೆಯ ಪರಿಹಾರಕ್ಕಾಗಿ ತುರ್ತು ಪುನರ್ವಸತಿ ಪರಿಹಾರಕ್ಕಾಗಿ ಹಾಗೂ ಪ್ರಕರಣಗಳು ದಾಖಲಾದ ಆಯಾ ಹಂತಗಳಲ್ಲಿ ಸಮಾಜ ಕಲ್ಯಾಣ ಇಲಾಖೆಗಳಿಂದ ಪರಿಹಾರದ ಮೊತ್ತವನ್ನು ನಿಗಧಿ ಮಾಡಲಾಗುತ್ತದೆ ಹಾಗೂ ಇಲಾಖೆಯಿಂದ ಸಂತ್ರಸ್ಥರ ಖಾತೆಗೆ ಜಮಾ ಮಾಡಲಾಗುತ್ತಿದೆ. ಸಂತ್ರಸ್ಥರ ಪರಿಹಾರಯೋಜನೆಯಡಿ ಪರಿಹಾರ ನಿಗಧಿಗೊಳಿಸುವಾಗ ಗಮನದಲ್ಲಿಟ್ಟುಕೊಂಡು ಸೂಕ್ತ ಆದೇಶವನ್ನು ಮಾಡಲಾಗುತ್ತದೆ.<br>• ಮಹಿಳಾ ಸಂತ್ರಸ್ಥರಿಗೆ ಸಂಬAಧ ಪಟ್ಟಂತೆ NALSAs compensation Scheme for Women Victims/Survivors/Sexual Assault/Other Crimes 2018ರ ಯೋಜನೆಯಡಿಯಲ್ಲಿ Rape ಸಂತ್ರಸ್ಥರಿಗೆರೂ. 4,00,000/- ರಿಂದರೂ. 7,00,000/- ಲಕ್ಷ ಪರಿಹಾರಗಳನ್ನು ಕೊಡಲು ಅವಕಾಶವಿದ್ದು, ವಿಶೇಷ ಪ್ರಕರಣಗಳಲ್ಲಿ 50 ಪ್ರತಿ ಶತ: ಹೆಚ್ಚು ಪರಿಹಾರಕೊಡುವ ಅವಕಾಶವಿರುತ್ತದೆ.<br>• Acid Attack ಸಂತ್ರಸ್ಥರಿಗೆ ನಿಗಧಿತ ಪರಿಹಾರದ ಜೊತೆಯಲ್ಲಿ ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಲ್ಲಿ Vide Memorandum No. 24313/94/MIS./2014-CSR-II/GO I/MHA Dtd. 09-01-2016 ರ ಪ್ರಕಾರ ಹೆಚ್ಚುವರಿ ರೂ. 1,00,000/- ಪರಿಹಾರಗಳನ್ನು ಪಡೆಯಲು ಅವಕಾಶವಿರುತ್ತದೆ. ಅಲ್ಲದೇ Victim Acid ಸಂತ್ರಸ್ಥರು ವೈದ್ಯಕೀಯ ಖರ್ಚಿಗಾಗಿ ರೂ. 5,00,000/- ಗಳನ್ನು Central Victim Compensation Fund, Guidelines 2016 No. 24013/94/MISC/2014-CSR.III, MHA/GOI ರ ಪ್ರಕಾರ ಪಡೆಯಲು ಅರ್ಹರಾಗಿರುತ್ತಾರೆ.<br>• ಕೇಂದ್ರಸರ್ಕಾರದ ನಿರ್ಭಯ ನಿಧಿಯಿಂದ ಮುಂದಿನ ದಿನಗಳಲ್ಲಿ ಸೂಕ್ತ ಪ್ರಕರಣಗಳಲ್ಲಿ ಸರ್ಕಾರ ಬಿಡುಗಡೆ ಮಾಡಿದ್ದಲ್ಲಿ ಸಮಯಕ್ಕೆ ಪರಿಹಾರ ಪುನರ್ವಸತಿ ಒದಗಿಸುವಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗಿದೆ.<br>• ಸಂತ್ರಸ್ಥರ ಪರಿಹಾರ ಯೋಜನೆಯಡಿ ಪೋಕ್ಸೋ ನ್ಯಾಯಾಲಯ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಸಂತ್ರಸ್ಥರಿಗೆ ಪರಿಹಾರವನ್ನು ನಿರ್ಧರಿಸಿ ರಾಜ್ಯ ಪ್ರಾಧಿಕಾರಕ್ಕೆ ಕಳುಹಿಸಿರುವ ಆದೇಶಗಳಿಗೆ ಈ ಕೆಳಕಂಡಂತೆ ವಿತರಿಸಿರುವ ಪ್ರಕರಣಗಳ ಪರಿಹಾರದ ಮೊತ್ತದ ವಿವರ ಹೀಗಿರುತ್ತದೆ. |

**KARNATAKA STATE LEGAL SERVICES AUTHORITY, BENGALURU.**

**In Respect of Victim Compansation Scheme concerned.**

| Sl. No. | Period | Amount released from Government under Victim Compensation Scheme | Total No. of Victims compensated | Amount disbursed by KSLSA to DLSA under Victim Compensation Scheme |
|---|---|---|---|---|
| 1 | 2012-13 | Rs. 25.00 lakhs | - | - |
| 2 | 2013-14 | Amount allotted during the year 2012-13 viz Rs.25 Lakhs was utilized | 15 | 25,00,000-00 |
| 3 | 2014-15 | Rs.100.00 lakhs | 61 | 1,00,36,000-00 |
| 4 | 2015-16 | Rs.150.00 lakhs | 117 | 1,48,96,000-00 |
| 5 | 2016-17 | Rs. 200.00 lakhs | 133 | 2,02,28,650-00 |
| 6 | 2017-18 | Rs.500.00 lakhs | 269 | 5,03,69,500-00 |
| 7 | 2018-19 | Rs.800.00 lakhs | 414 | 8,01,65,000-00 |
| 8 | 2019-20 | Rs.995.00 lakhs | 469 | 10,15,48,225-00 |
| 9 | 2020-21 | Rs.950.00 lakhs | 379 | 9,67,90,000-00 |

| | | | | |
|---|---|---|---|---|
| 10 | 2021-22 | Rs.750.00 lakhs | 276 | 7,78,95,000-00 |
| 11 | 2022-23 | Rs.500.00 lakhs | 292 | 10,24,40,000-00 |
| 12 | 2023-24 | Rs. 1000.000 lakhs | 379 | 10,02,94,500-00 |
| 13 | 2024-25 | Rs.9,75,45,000/- | 254 | 9,62,10,000-00 |
| | | **Total** | **2768** | **75,33,72,875-00** |

- ರಾಜ್ಯಾದ್ಯಂತ 30 ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ಆದೇಶವಾಗಿ ಬಂದಂತಹ ಬಾಕಿ ಇರುವ ಪ್ರಕರಣಗಳು ಸುಮಾರು 836 ಇದೆ. ಈ ಪ್ರಕರಣಗಳಿಗೆ ಪಾವತಿಸಬಹುದಾದಂತಹ ಬಾಕಿ ಪರಿಹಾರ ಮೊತ್ತ ರೂ.26,35,60,500/-ಗಳು ಆಗಿರುತ್ತದೆ. ಸದರಿ ಪ್ರಕರಣಗಳಿಗೆ ರಾಜ್ಯ ಸರ್ಕಾರವು ಅತಿ ಹೆಚ್ಚು ಪರಿಹಾರ ಹಣವನ್ನು ನಿಗಧಿಗೊಳಿಸಿ ಬಿಡುಗಡೆ ಮಾಡಿದರ ಬಾಧಿತರಿಗೆ ಕೂಡಲೇ ಪರಿಹಾರವನ್ನು ಬಿಡುಗಡೆಗೊಳಿಸಿ ಪಾವತಿಸಬಹುದು.
- ಕಾನೂನು ಅರಿವು-ನೆರವು ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಶಾಲಾ ಮತ್ತು ಕಾಲೇಜುಗಳು, ಆಶಾ ಕಾರ್ಯಕರ್ತೆಯರು, ಸ್ತ್ರೀ ಶಕ್ತಿ ಸಂಘ ಕಾರ್ಯಕರ್ತೆಯರು, ಸಮುದಾಯಗಳು, ಶಾಲಾ ಶಿಕ್ಷಕರು, ಸ್ವಯಂ ಸೇವಕರು, ಸಿ.ಆರ್.ಪಿ., ಬಿ.ಆರ್.ಪಿ., ಮುಖಾಂತರ ಮಕ್ಕಳ ಹಕ್ಕುಗಳು, ಬಾಲ ಕಾರ್ಮಿಕರ ನಿಷೇಧ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ, ಪೋಕ್ಸೋ ಕಾಯ್ದೆ, ಕೌಟುಂಬಿಕ ಸಮಸ್ಯೆ ನಿರ್ವಹಣಾ ಕಾಯ್ದೆ, ಜೀವನಾಂಶ, ಮಹಿಳಾ ಆಸ್ತಿ ಹಕ್ಕುಗಳು ಹಾಗೂ ಸಂತ್ರಸ್ಥರ ಪರಿಹಾರ ಯೋಜನೆಯಡಿ ಲಭ್ಯವಿರುವ ಪರಿಹಾರಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಕಾಲಕಾಲಕ್ಕೆ ನೀಡುತ್ತಾ ಬರುತ್ತಿದೆ.
- ಆ ಬಗ್ಗೆ ಈ ಕೆಳಕಂಡಂತೆ ರಾಜ್ಯಾದ್ಯಂತ ಕಾನೂನು ಅರಿವು-ನೆರವು ಕಾರ್ಯಕ್ರಮಗಳನ್ನು ನೀಡುತ್ತಾ ಬರಲಾಗಿದೆ:-

| Year | No. of Programmes conducted for Childrens | No.of Beneficiaries | No. of programmes conducted | No.of Beneficiaries |
|---|---|---|---|---|

| | | | for Women's | |
|---|---|---|---|---|
| **2016** | 1787 | 273897 | 573 | 215002 |
| **2017** | 2137 | 456020 | 784 | 365215 |
| **2018** | 2599 | 544241 | 764 | 417747 |
| **2019** | 2500 | 563786 | 809 | 354225 |
| **2020** | 920 | 185615 | 261 | 109846 |
| **2021** | 11960 | 1751199 | 917 | 2932604 |
| **2022** | 13314 | 1661658 | 935 | 730793 |
| **2023** | 45327 | 4076669 | 857 | 248312 |
| **2024** | 22916 | 2811532 | 938 | 196776 |
| **2025** | 1258 | 245771 | 236 | 36257 |
| **Total** | **104718** | **125770388** | **7074** | **5606777** |
| | | | | |

**ಪೊಲೀಸ್ ಇಲಾಖೆ:**

ಮಹಿಳೆ ಮತ್ತು ಮಕ್ಕಳ ಮೇಲಿನ ಅತ್ಯಾಚಾರ & ಪೋಕ್ಸೊ ಹಾಗೂ ಇತರೆ ದೌರ್ಜನ್ಯ ಪ್ರಕರಣಗಳಲ್ಲಿ ನೊಂದವರಿಗೆ ಪರಿಹಾರ ದೊರಕಿಸಿ ಕೊಡುವ ಸಂಬಂಧ "Karnataka Victim Compansation Scheme , 2011" ರ ಅನ್ವಯ ಸಂತ್ರಸ್ತೆಯರಿಗೆ ನಿಯಮಾನುಸಾರ ಪರಿಹಾರ ಮೊತ್ತ ವಿತರಿಸಲು ಸಂಬಂಧ ಪಟ್ಟ ಇಲಾಖೆಗಳಿಗೆ ಮಾಹಿತಿ ನೀಡಲಾಗುತ್ತಿದೆ.

**ಸಮಾಜ ಕಲ್ಯಾಣ ಇಲಾಖೆ**

ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯಪ್ರತಿಬಂಧ) ನಿಯಮಗಳನ್ವಯ ದೌರ್ಜನ್ಯ ಸಂತ್ರಸ್ತರಿಗೆ ಅಪರಾಧದ ಸ್ವರೂಪದ ಅನುಗುಣವಾಗಿ

| | | |
|---|---|---|
| | | ರೂ.85,000/- ದಿಂದ ರೂ.8,25,000/- ಗಳ ಪರಿಹಾರಧನವನ್ನು ಮಂಜೂರು ಮಾಡಲಾಗುತ್ತಿದೆ.<br><br>FIR ಹಂತ – 25%<br><br>Charge Sheet ಹಂತ - 50%<br><br>ಮಾನ್ಯ ನ್ಯಾಯಾಲಯವು ಆರೋಪಿಯನ್ನು ಅಪರಾಧಿಯೆಂದು ನಿರ್ಣಯಿಸಿದಾಗ – ಶೇ 25%<br><br>**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**<br><br>ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತೆ ಮಗುವಿಗೆ ಬೆಂಬಲವಾಗಿ ನಿಂತು ಸಹಕರಿಸಲು ಪ್ರತಿಯೊಂದು ಜಿಲ್ಲೆಯಲ್ಲಿಯೂ ಬೆಂಬಲ ವ್ಯಕ್ತಿಗಳನ್ನು ನೇಮಿಸಲು ಕ್ರಮವಹಿಸಲಾಗಿದೆ.<br><br>ಇಂತಹ ಸಂತ್ರಸ್ಥ ಮಕ್ಕಳಿಗೆ ಬಾಲನ್ಯಾಯ ನಿಧಿಯಿಂದ ಆರ್ಥಿಕ ನೆರವು, ಲೈಂಗಿಕ ದೌರ್ಜನ್ಯದಿಂದ ಗರ್ಭಿಣಿಯಾದ ಸಂತ್ರಸ್ಥ ಮಗುವಿಗೆ Scheme for Care and Support to Victims under section 4 &6 of the Protection of Children From Sexual Offences (POCSO) Act, 2012 ರನ್ವಯ ರೂ. 6,000/-ಗಳ ಆರ್ಥಿಕ ಸಹಾಯವನ್ನು ನೀಡಲಾಗುತ್ತಿದೆ, |
| 6. | ಪರಿಹಾರ ನೀಡಲು ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ತಮ್ಮ ಜವಾಬ್ದಾರಿಗಳನ್ನು ವಿಳಂಬ ಮಾಡದೆ ನಿರ್ವಹಿಸುವುದು, ಜವಾಬ್ದಾರಿಗಳ ನಿರ್ವಹಣೆಯಲ್ಲಿ ಕಂಡುಬರುವ ಲೋಪಗಳಿಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡುವ ಕಾನೂನನ್ನು ರೂಪಿಸುವುದು ಮತ್ತು ಅದರ ಸಮರ್ಪಕ ಜಾರಿಗೆ ಕ್ರಮವಹಿಸುವುದು. | **ಪೊಲೀಸ್ ಇಲಾಖೆ:**<br><br>ಮಹಿಳೆ ಮತ್ತು ಮಕ್ಕಳ ಮೇಲಿನ ಅತ್ಯಾಚಾರ & ಪೋಕ್ಸೊ ಹಾಗೂ ಇತರೆ ದೌರ್ಜನ್ಯ ಪ್ರಕರಣಗಳಲ್ಲಿ ಸಂತ್ರಸ್ಥರಿಗೆ ಪರಿಹಾರ ದೊರಕಿಸಲು ಪೊಲೀಸ್ ಇಲಾಖೆಯಿಂದ ಪರಿಹಾರ ವಿತರಿಸುವ ಸಲುವಾಗಿ ಯಾವುದೇ ಕಾಲ ವಿಳಂಬ ಮಾಡದೆ ಮಾಹಿತಿಯನ್ನು ಸಲ್ಲಿಸಲಾಗುತ್ತಿದೆ.<br><br>**ಸಮಾಜ ಕಲ್ಯಾಣ ಇಲಾಖೆ**<br><br>ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) 1989 ನಿಯಮ (4) ರಂತೆ ಕರ್ತವ್ಯ ನಿರ್ಲಕ್ಷ್ಯತೆಗಾಗಿ ದಂಡನೆ ಕ್ರಮವನ್ನು ಕೈಗೊಳ್ಳಲಾಗುವುದು. |

**ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ(KSLSA) ಮಾಹಿತಿ:**

- ಸಂತ್ರಸ್ತರ ಪರಿಹಾರ ಯೋಜನೆ-2011ರಡಿ ದಾಖಲಾದ ಪ್ರಕರಣಗಳಿಗೆ ರಾಜ್ಯ ಸರ್ಕಾರದಿಂದ ನಿಗಧಿಗೊಳಿಸಿ ಬಿಡುಗಡೆ ಮಾಡಿದ ಅನುದಾನವನ್ನು ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ಯೋಜನೆ ಹಾಗೂ ರಾಜ್ಯ ಸರ್ಕಾರದ ಅಧಿಸೂಚನೆ ನಿಯಮದಂತೆ ಸಂಬಂಧಪಟ್ಟ ಪ್ರಕರಣದ ಬಾಧಿತರಿಗೆ ಕೂಡಲೇ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಬಿಡುಗಡೆಗೊಳಿಸಿ ಸದರಿ ಪ್ರಾಧಿಕಾರದ ಮುಖಾಂತರ ಎಷ್ಟು ಸಾಧ್ಯವೋ ಅಷ್ಟು ತುರ್ತಾಗಿ ಸಂತ್ರಸ್ತರಿಗೆ ಪರಿಹಾರವನ್ನು ವಿಳಂಬಕ್ಕೆ ಆಸ್ಪದವಿಲ್ಲದಂತೆ ಬಿಡುಗಡೆಗೊಳಿಸುತ್ತಾ ಬಂದಿರುತ್ತದೆ.
- ಸಂತ್ರಸ್ತರ ಪರಿಹಾರ ಯೋಜನೆಯಡಿ ಪೋಕ್ಸೋ ನ್ಯಾಯಾಲಯ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಸಂತ್ರಸ್ತರಿಗೆ ಪರಿಹಾರವನ್ನು ನಿರ್ಧರಿಸಿ ರಾಜ್ಯ ಪ್ರಾಧಿಕಾರಕ್ಕೆ ಕಳುಹಿಸಿರುವ ಆದೇಶಗಳಿಗೆ ಈ ಕೆಳಕಂಡಂ ವಿತರಿಸಿರುವ ಪ್ರಕರಣಗಳ ಪರಿಹಾರದ ಮೊತ್ತದ ವಿವರ ಹೀಗಿರುತ್ತದೆ.

**KARNATAKA STATE LEGAL SERVICES AUTHORITY, BENGALURU.**

**In Respect of Victim Companssation Scheme concerned.**

| Sl. No. | Period | Amount released from Government under Victim Compensation Scheme | Total No. of Victims compensated | Amount disbursed by KSLSA to DLSA under Victim Compensation Scheme |
|---|---|---|---|---|
| 1 | 2012-13 | Rs. 25.00 lakhs | - | - |
| 2 | 2013-14 | Amount allotted during the year 2012-13 viz Rs.25 Lakhs was utilized | 15 | 25,00,000-00 |

| | | | | |
|---|---|---|---|---|
| 3 | 2014-15 | Rs.100.00 lakhs | 61 | 1,00,36,000-00 |
| 4 | 2015-16 | Rs.150.00 lakhs | 117 | 1,48,96,000-00 |
| 5 | 2016-17 | Rs. 200.00 lakhs | 133 | 2,02,28,650-00 |
| 6 | 2017-18 | Rs.500.00 lakhs | 269 | 5,03,69,500-00 |
| 7 | 2018-19 | Rs.800.00 lakhs | 414 | 8,01,65,000-00 |
| 8 | 2019-20 | Rs.995.00 lakhs | 469 | 10,15,48,225-00 |
| 9 | 2020-21 | Rs.950.00 lakhs | 379 | 9,67,90,000-00 |
| 10 | 2021-22 | Rs.750.00 lakhs | 276 | 7,78,95,000-00 |
| 11 | 2022-23 | Rs.500.00 lakhs | 292 | 10,24,40,000-00 |
| 12 | 2023-24 | Rs. 1000.000lakhs | 379 | 10,02,94,500-00 |
| 13 | 2024-25 | Rs.9,75,45,000/- | 254 | 9,62,10,000-00 |
| | | **Total** | **2768** | **75,33,72,875-00** |

-ರಾಜ್ಯಾದ್ಯಂತ 30 ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ಆದೇಶವಾಗಿ ಬಂದಂತಹ ಬಾಕಿ ಇರುವ ಪ್ರಕರಣಗಳು ಸುಮಾರು 836 ಇದೆ. ಈ ಪ್ರಕರಣಗಳಿಗೆ ಪಾವತಿಸಬಹುದಾದಂತಹ ಬಾಕಿ ಪರಿಹಾರ ಮೊತ್ತ ರೂ.26,35,60,500/-ಗಳು ಆಗಿರುತ್ತದೆ. ಪ್ರಸ್ತುತ ಕರ್ನಾಟಕ ರಾಜ್ಯ ಸರ್ಕಾರ ಸಂತ್ರಸ್ಥರ ಪರಿಹಾರ ನಿಧಿ ಯೋಜನೆಯಡಿಯಲ್ಲಿ ವರ್ಷಕ್ಕೆ ಕೇವಲ ರೂ.10.00 ಕೋಟಿಗಳಾಗಿ ವರ್ಷಕ್ಕೆ 3 ರಿಂದ 4 ಕಂತುಗಳಲ್ಲಿ ಬಿಡುಗಡೆ ಮಾಡಿದ ಬಳಿಕ ವಿಳಂಬವಿಲ್ಲದಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಮುಖಾಂತರ ಬಾಧಿತರಿಗೆ ಕಾಲಕಾಲಕ್ಕೆ ಪುನರ್ವಸತಿಗಾಗಿ ಪಾವತಿಸಲಾಗಿರುತ್ತದೆ

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**

| | | |
|---|---|---|
| | | ಸಂತ್ರಸ್ಥ ಮಕ್ಕಳಿಗೆ ಸಿಗಬೇಕಾದ ಪರಿಹಾರ ವಿಳಂಬವಿಲ್ಲದೆ ದೊರೆಯುವುದನ್ನು ಖಾತ್ರಿಪಡಿಸಿಕೊಳ್ಳಲು ಪರಿಶೀಲನಾ ಸಭೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br><br>ಪ್ರತಿ ಜಿಲ್ಲೆಯಲ್ಲಿಯೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮಕ್ಕಳ ರಕ್ಷಣಾ ಸಮಿತಿ ಇದ್ದು, ಸದರಿ ಸಮಿತಿಯು ಮಕ್ಕಳಿಗೆ ರಕ್ಷಣೆಗೆ ಸಂಬಂಧಿಸಿದಂತೆ ಹಾಗೂ ಸಂತ್ರಸ್ಥ ಮಕ್ಕಳಿಗೆ ಸಿಗಬೇಕಾದ ಪರಿಹಾರಗಳು ಪೂರ್ತಿಯಾಗಿ ಮತ್ತು ವಿಳಂಬವಿಲ್ಲದೆ ಸಿಗುವಂತೆ ನಿಗಾವರ್ಹಿಸುತ್ತದೆ.<br><br>ಜಿಲ್ಲಾ ಹಂತದಲ್ಲಿ ಕಾಣೆಯಾದ ಮಕ್ಕಳ ಕುರಿತು ಪ್ರತಿ ತಿಂಗಳು ಮಕ್ಕಳ ವಿಶೇಷ ಪೊಲೀಸ್ ಘಟಕ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಸಭೆಯನ್ನು ನಡೆಸಲಾಗುತ್ತಿದ್ದು, ಈ ಸಭೆಯಲ್ಲಿಯೂ ಕೂಡ ಕಾಣೆಯಾದ ಮಕ್ಕಳ ವಿಷಯದೊಂದಿಗೆ ಮಕ್ಕಳ ರಕ್ಷಣೆಗೆ ಸಂಬಂಧಿಸಿದ ಇತರೆ ವಿಷಯಗಳ ಕುರಿ ಚರ್ಚಿಸಿ ಕ್ರಮಕೈಗೊಳ್ಳಲಾಗುತ್ತಿದೆ. |
| 7. | ಮಹಿಳೆ ಮತ್ತು ಮಕ್ಕಳ ಮೇಲಿನ ಶೋಷಣೆ, ದೌರ್ಜನ್ಯ, ಅತ್ಯಾಚಾರ, ಮುಂತಾದ ವಿಚಾರಗಳ ಬಗ್ಗೆ ದೆಹಲಿಯಲ್ಲಿ ನಡೆದ ನಿರ್ಭಯಾ ಪ್ರಕರಣದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾದ ಜೆ.ಎಸ್. ವರ್ಮಾ ಸಮಿತಿಯನ್ನು ರಚನೆ ಮಾಡಿತ್ತು. ಸದರಿ ಸಮಿತಿಯು ನಿರ್ಭಯಾ ಪ್ರಕರಣದ ಹಿನ್ನೆಲೆಯಲ್ಲಿ 2013 ರಲ್ಲಿ ಒಂದು ವರದಿಯನ್ನು ನೀಡಿ, ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರ, ದೌರ್ಜನ್ಯ, ಶೋಷಣೆ ಹಿನ್ನೆಲೆಯಲ್ಲಿ ಏನೆಲ್ಲಾ ಕ್ರಮಗಳನ್ನು ಜರುಗಿಸಬೇಕು ಎಂಬ ಬಗ್ಗೆ ಕೇಂದ್ರ ಸರ್ಕಾರಕ್ಕೆ ಈಗಾಗಲೇ | **ಪೊಲೀಸ್ ಇಲಾಖೆ:**<br><br>ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ಚಾಚೂ ತಪ್ಪದೇ ಪಾಲಿಸಲಾಗುತ್ತಿದೆ. |

| | | |
|---|---|---|
| | ವರದಿಯನ್ನು ನೀಡಿರುತ್ತದೆ. ಆ ವರದಿಯಲ್ಲಿ ಪ್ರಸ್ತಾಪ ಮಾಡಿರುವ ಸಂಬಂಧಿಸಿದ ವಿಚಾರಗಳ ಜಾರಿಯ ಬಗ್ಗೆ ರಾಜ್ಯ ಸರ್ಕಾರ ತುರ್ತು ಕ್ರಮ ಜರುಗಿಸುವುದು. ನ್ಯಾಯಮೂರ್ತಿ ವರ್ಮಾರವರ ವರದಿಯಲ್ಲಿ ಕೆಲವು ಮೂಲಭೂತ ಬದಲಾವಣೆಗಳ ಬಗ್ಗೆ, ವಿಶೇಷ ನ್ಯಾಯಾಲಯಗಳ ಸ್ಥಾಪನೆ. ಸಂತ್ರಸ್ತೆಯರಿಗೆ ಪರಿಹಾರ ನೀಡುವ, ಮುಂತಾದ ಅನೇಕ ವಿಚಾರಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ವರದಿಯಲ್ಲಿ ಅನೇಕ ವಿಚಾರಗಳ ಬಗ್ಗೆ ಸಲಹೆಗಳನ್ನು ನೀಡಲಾಗಿದೆ. ಅದರ ಜೊತೆಗೆ ಹಾಲಿ ಇರುವ ಕಾನೂನು ತಪ್ಪಿತಸ್ಥರಿಗೆ ಶಿಕ್ಷೆ ಕೊಡಲು ಶಕ್ತವಾಗಿರುತ್ತದೆ. ಆದ್ದರಿಂದ ಈ ವಿಚಾರಗಳ ಬಗ್ಗೆ ನಮ್ಮ ಸಮಿತಿಯು ಹೆಚ್ಚಿನ ಶಿಫಾರಸ್ಸುಗಳನ್ನು ನೀಡಲು ಬಯಸುವುದಿಲ್ಲ. ನ್ಯಾಯಮೂರ್ತಿ ವರ್ಮಾರವರ ವರದಿಯಲ್ಲಿ ಪ್ರಸ್ತಾಪವಾಗದೆ ಇರುವ ಹಾಗೂ ರಾಜ್ಯದಲ್ಲಿ ಕಂಡುಬಂದಿರುವ ಇತರೇ ವಿಚಾರಗಳ ಬಗ್ಗೆ ಸಮಿತಿಯು ಶಿಫಾರಸ್ಸು ನೀಡಲು ಬಯಸುತ್ತದೆ. | |
| 8. | ಅಪರಾಧವೆಸಗಿ ನ್ಯಾಯಾಲಯದಿಂದ ಶಿಕ್ಷೆಗೆ ಗುರಿಯಾಗುವವರ ಮತದಾನದ ಹಕ್ಕನ್ನು ಶಾಶ್ವತವಾಗಿ | **ಚುನಾವಣಾ ಆಯೋಗ:**<br>**ಪ್ರಜಾಪ್ರತಿನಿಧಿ ಕಾಯ್ದೆ 1950**<br>ಕಲಂ 16. ಮತದಾರರ ಪಟ್ಟಿಯಲ್ಲಿ ನೊಂದಾಯಿಸಲು ಅನರ್ಹತೆಗಳು (Disqualifications for registration in an electoral roll).- |

| | | |
|---|---|---|
| | ಕಿತ್ತುಹಾಕುವುದು, ಅವರ ಹೆಸರಿನಲ್ಲಿರುವ ಆಸ್ತಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡು, ಸಂತ್ರಸ್ತೆಗೆ ಪರಿಹಾರ ರೂಪದಲ್ಲಿ ಕೊಡಲು ಕಾನೂನು ರೂಪಿಸುವುದು. ಸರ್ಕಾರ ನೀಡಿರುವ ಸೌಲಭ್ಯಗಳನ್ನು ವಾಪಸ್ಸು ಪಡೆಯುವುದು. | (1) ಯಾವುದೇ ವ್ಯಕ್ತಿಯು ಮತದಾರರ ಪಟ್ಟಿಯಲ್ಲಿ ನೋಂದಾಯಿಸಲು ಈ ಕೆಳಕಂಡ ಕಾರಣಗಳಿಂದ ಅನರ್ಹನಾಗುತ್ತಾನೆ:-<br>(ಸಿ) ಚುನಾವಣೆಗೆ ಸಂಬಂಧಿಸಿದಂತೆ ಭ್ರಷ್ಟಾಚಾರ ಅಥವಾ ಬೇರಾವುದೇ ಅಪರಾಧದಲ್ಲಿ ಯಾವುದೇ ಕಾಯಿದೆಯಡಿಯಲ್ಲಿ ತೊಡಗಿಸಿಕೊಂಡ ಕಾರಣಕ್ಕೆ ತಾತ್ಕಾಲಿಕವಾಗಿ ಮತ ಚಲಾಯಿಸುವ ಹಕ್ಕಿನಿಂದ ಅನರ್ಹನಾಗಿದ್ದ ಪಕ್ಷದಲ್ಲಿ.<br>(2) ಈ ರೀತಿ ನೋಂದಣಿಯಾದ ನಂತರ ಅನರ್ಹವಾಗುವ ವ್ಯಕ್ತಿಯ ಹೆಸರನ್ನು ಆತನ ಹೆಸರನ್ನು ಸೇರಿಸಿರುವಂತಹ ಮತದಾರರ ಪಟ್ಟಿಯಿಂದ ಕೂಡಲೇ ತೆಗೆದು ಹಾಕತಕ್ಕದ್ದು:<br>[ಪರಂತು ಉಪ-ಪ್ರಕರಣ (1)ರ ಖಂಡ (ಸಿ) ರನ್ವಯ ಅನರ್ಹತೆಯ ಕಾರಣ ಯಾವುದೇ ವ್ಯಕ್ತಿಯ |
| 9. | ನ್ಯಾಯಾಲಯದಲ್ಲಿ ಶಿಕ್ಷೆಗೆ ಗುರಿಯಾಗುವ ಅಪರಾಧಿಗಳ ಮತದಾನದ ಹಕ್ಕನ್ನು ಶಾಶ್ವತವಾಗಿ ತೆಗೆಯಲು ಅನುವಾಗುವಂತೆ 1951ರ ಜನತಾ ಪ್ರಾತಿನಿಧ್ಯ ಕಾಯಿದೆಗೆ ಸೂಕ್ತ ತಿದ್ದುಪಡಿ ತರಲು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಶಿಫಾರಸ್ಸು ಮಾಡುವುದು. | ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕಿದ್ದಲ್ಲಿ ಮತ್ತು ಅಂತಹ ಅನರ್ಹತೆಯನ್ನು ರದ್ದುಪಡಿಸಲು ಅಧಿಕಾರವುಳ್ಳ ಯಾವುದೇ ಕಾನೂನಿನ ಮೂಲಕ ಅನರ್ಹತೆಯನ್ನು ರದ್ದುಪಡಿಸಿದ್ದಲ್ಲಿ, ಅಂತಹ ವ್ಯಕ್ತಿಯ ಹೆಸರನ್ನು ಆ ಮತದಾರರ ಪಟ್ಟಿಯಲ್ಲಿ ಕೂಡಲೇ ಪುನ: ಸೇರಿಸತಕ್ಕದ್ದು.]<br>**ಪ್ರಜಾಪ್ರತಿನಿಧಿ ಕಾಯ್ದೆ 1951**<br>ಕಲಂ 62. ಮತದಾನದ ಹಕ್ಕು (Right to vote).-(5) ಯಾವುದೇ ವ್ಯಕ್ತಿಯು ಕಾರಾಗೃಹದಲ್ಲಿದ್ದ ಪಕ್ಷದಲ್ಲಿ ಆತನು ಸೆರೆಮನೆ ಶಿಕ್ಷೆಗೆ ಗುರಿಯಾಗಿದ್ದಲ್ಲಿ ಅಥವಾ ಗಡಿಪಾರು ಶಿಕ್ಷೆಗೆ ಒಳಗಾಗಿದ್ದಲ್ಲಿ ಅಥವಾ ಇನ್ನಾವುದೇ ಶಿಕ್ಷೆಗೊಳಗಾಗಿದ್ದಲ್ಲಿ ಯಾವುದೇ ಚುನಾವಣೆಯಲ್ಲಿ |
| 10. | ಅಪರಾಧವೆಸಗಿ ಜಾಮೀನಿನ ಮೇಲೆ ಅಥವಾ ನ್ಯಾಯಾಂಗ ಬಂಧನದಲ್ಲಿರುವ ಅವಧಿಯಲ್ಲಿ ಆರೋಪಿಗಳ ಮತದಾನದ ಹಕ್ಕು, ಸರ್ಕಾರದ ಸೌಲಭ್ಯಗಳನ್ನು ಆಸ್ತಿಯ ಹಕ್ಕುಗಳನ್ನು ಅಮಾನತ್ತಿನಲ್ಲಿ ಇಡಲು ಕಾನೂನು ರೂಪಿಸುವುದು. | ಮತಚಲಾಯಿಸತಕ್ಕದ್ದಲ್ಲ:<br>ಪರಂತು ಯಾವುದೇ ಕಾರಣದಿಂದ ತಾತ್ಕಾಲಿಕವಾಗಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ನಿರೋಧನಾತ್ಮಕ ಬಂಧಿಯಾಗಿರುವಂತಹ ವ್ಯಕ್ತಿಗೆ ಈ ಉಪ-ಪ್ರಕರಣದ ಯಾವುದೂ ಅನ್ವಯವಾಗತಕ್ಕದ್ದಲ್ಲ:<br>[ಮತ್ತು ಪರಂತು ಈ ಉಪ-ಪ್ರಕರಣದಡಿಯಲ್ಲಿ ಮತ ಚಲಾಯಿಸುವ ಹಕ್ಕಿನಿಂದ ನಿರ್ಬಂಧಿತನಾದ ಕಾರಣದಿಂದಾಗಿ ಯಾವುದೇ ವ್ಯಕ್ತಿಯ ಹೆಸರು ಮತದಾರರ ಪಟ್ಟಿಯಲ್ಲಿ ನಮೂದಾಗಿದ್ದಲ್ಲಿ ಆತನು ಮತದಾರನಾಗಿಯೇ ಇರತಕ್ಕದ್ದು.]<br>ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಕಾನೂನಿನಲ್ಲಿ ಅಪರಾಧವೆಸಗಿ ನ್ಯಾಯಾಲಯದಿಂದ ಶಿಕ್ಷೆಗೆ ಗುರಿಯಾಗುವವರ ಮತದಾನದ ಹಕ್ಕನ್ನು ಶಾಶ್ವತವಾಗಿ ಕಿತ್ತು ಹಾಕುವ ಬಗ್ಗೆ ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಮುಂದುವರೆದು, ಪ್ರಜಾಪ್ರತಿನಿಧಿ ಕಾಯ್ದೆ 1950 ಮತ್ತು 1951 ಗಳ ತಿದ್ದುಪಡಿಯ ವಿಷಯವು ಭಾರತದ ಸಂಸತ್ತಿಗೆ ಒಳಪಡುತ್ತದೆ. ಆದ್ದರಿಂದ, ಸದರಿ ಶಿಫಾರಸ್ಸಿನ ಕುರಿತು ಕಾನೂನು ರೂಪಿಸಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಕಾನೂನು ಮತ್ತು ನ್ಯಾಯಿಕ ಸಚಿವಾಲಯಕ್ಕೆ ಪ್ರಸ್ತಾವನೆ ಸಲ್ಲಿಸಬಹುದಾಗಿರುತ್ತದೆ. |

| | | |
|---|---|---|
| | | |
| 11. | ಲೈಂಗಿಕ ಕ್ರಿಯೆಗಳಿಂದ ಆಗುವ ಪರಿಣಾಮ ಮತ್ತು ದುಷ್ಪರಿಣಾಮಗಳ ವಿಚಾರವಾಗಿ ಸ್ಪಷ್ಟ ಮಾಹಿತಿಯನ್ನು ಯುವಪೀಳಿಗೆಗೆ ನೀಡುವ ದೃಷ್ಟಿಯಿಂದ ಪ್ರೌಢಶಾಲಾ ಹಾಗೂ ಇನ್ನಿತರೆ ಶಾಲಾ- ಕಾಲೇಜುಗಳಲ್ಲಿ ದೇಹಶಾಸ್ತ್ರ ಶಿಕ್ಷಣ ಅಳವಡಿಸುವುದು, ಪ್ರಾಥಮಿಕ ಶಾಲೆಯಿಂದಲೇ ಪಠ್ಯಗಳಲ್ಲಿ ಅಂಗ ಸಮಾನತೆಯನ್ನು ಬೋಧಿಸಲು ಕ್ರಮ ಕೈಗೊಳ್ಳುವುದು. | **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ**<br>• 6 ನೇ ತರಗತಿಯಿಂದ 10 ನೇ ತರಗತಿಯವರೆಗಿನ ಎಲ್ಲಾ ಸಾಮಾನ್ಯ ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳಲ್ಲಿ ಅನುವಂಶೀಯತೆ, ಸಂತಾನೋತ್ಪತ್ತಿ, ಹದಿಹರೆಯಕ್ಕೆ ಪ್ರವೇಶ ಮತ್ತು ದೇಹಶಾಸ್ತ್ರದ ಬಗ್ಗೆ ವಿಷಯ ಅಳವಡಿಸಲಾಗಿದೆ.<br>• POCSO ಕಾಯ್ದೆ 2012ರ ಅಡಿಯಲ್ಲಿ ವಿದ್ಯಾರ್ಥಿಗಳಲ್ಲಿ ಕಾನೂ ನ ಅರಿವು ಮೂಡಿಸುವ ಸಂಬಂಧ module ರಚಿಸಿ Website ನಲ್ಲಿ ಅಳವಡಿಸಲಾಗಿದೆ ಹಾಗೂ ಪ್ರಸಕ್ತ ಸಾಲಿನಲ್ಲಿ ಶಿಕ್ಷಕರಿಗೆ ತರಬೇತಿ ನೀಡಲಾಗಿದೆ.<br>• NCERT ಮಾರ್ಗಸೂಚಿಯನ್ವಯ NPEP (National Population Education Project) ಕಾರ್ಯಕ್ರಮದ ಚಟುವಟಿಕೆಗಳ ಮೂಲಕ ಮಾಹಿತಿ ನೀಡಲಾಗುತ್ತಿದೆ. |
| 12. | ಸರ್ಕಾರಿ ಮತ್ತು ಸರ್ಕಾರೇತರ ಶಾಲಾ-ಕಾಲೇಜುಗಳು, ಕಛೇರಿಗಳು, ಕೈಗಾರಿಕೆಗಳು, ಮುಂತಾದವುಗಳಲ್ಲಿ ವರ್ಷಕ್ಕೆ ಒಂದು ಬಾರಿಯಾದರೂ ಲೈಂಗಿಕ ವಿಚಾರಗಳ ಪರಿಣಾಮ ಹಾಗೂ ದುಷ್ಪರಿಣಾಮಗಳ ಬಗ್ಗೆ ವಿಚಾರ ಸಂಕಿರಣ ಮುಂತಾದ ಜಾಗೃತಿ ಕಾರ್ಯಕ್ರಮಗಳನ್ನು ಏರ್ಪಡಿಸುವಂತೆ ಕಡ್ಡಾಯವಾಗಿ ಕಾನೂನು ರೂಪಿಸುವುದು, ಅವುಗಳ ಸಚಿತ್ರ ವರದಿ ನೀಡುವಂತೆ ಮತ್ತು ಅವುಗಳ ಮೇಲ್ವಿಚಾರಣೆಗೆ ಸೂಕ್ತ ಕ್ರಮ ಕೈಗೊಳ್ಳುವುದು. | **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ**<br>▪ ಶಾಲೆಗಳಲ್ಲಿ ವರ್ಷಕ್ಕೆ ಒಂದು ಬಾರಿಯಾದರೂ ಲೈಂಗಿಕ ವಿಚಾರಗಳ ಪರಿಣಾಮ ಹಾಗೂ ದುಷ್ಪರಿಣಾಮಗಳ ಬಗ್ಗೆ ವಿಚಾರ ಸಂಕಿರಣ ಮುಂತಾದ ಜಾಗೃತಿ ಕಾರ್ಯಕ್ರಮಗಳನ್ನು ಸ್ಥಳೀಯ ಆರೋಗ್ಯ ಕಾರ್ಯಕರ್ತೆಯರಿಂದ ಏರ್ಪಡಿಸಲಾಗುತ್ತಿದೆ. ಈ ಬಗ್ಗೆ ಆರೋಗ್ಯ ಇಲಾಖೆ, ಪೋಲೀಸ್ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳ ಸಹಕಾರವನ್ನು ಪಡೆಯಲಾಗಿದೆ.<br>▪ ಆಯುಷ್ಮಾನ್ ಭಾರತ್ ಶಾಲಾ ಆರೋಗ್ಯ ಕಾರ್ಯಕ್ರಮದಡಿ ಶಾಲಾ ಶಿಕ್ಷಣ ಇಲಾಖೆ ಹಾಗೂ ಆರೋಗ್ಯ ಇಲಾಖೆಗಳ ಸಹಭಾಗಿತ್ವದಲ್ಲಿ ಶಿಕ್ಷಕರಿಗೆ ತರಬೇತಿಯನ್ನು ನೀಡಲು NCERT ಯು ಸಿದ್ಧಪಡಿಸಿರುವ 11 ಮಾಡ್ಯೂಲ್ ಗಳ ಬಗ್ಗೆ ಡಯಟ್ ಉಪನ್ಯಾಸಕರಿಗೆ, ಡಯಟ್ ಗಳ ಮೂಲಕ ಪ್ರೌಢಶಾಲಾ ಶಿಕ್ಷಕರಿಗೆ ತರಬೇತಿಯನ್ನು ನೀಡಲಾಗಿದೆ.<br>▪ ಕಾರ್ಯಕ್ರಮಗಳ ಸಚಿತ್ರ ವರದಿ ನೀಡುವಂತೆ ಕ್ರಮವಹಿಸಲಾಗಿದೆ.<br>▪ ದಿನಾಂಕ:08/11/2022 ರಲ್ಲಿ ಈ ಕಛೇರಿಯಲ್ಲಿ ಹೊರಡಿಸಿರುವ ಸುತ್ತೋಲೆಯಂತೆ ಪ್ರತಿ ಶಾಲೆಯಲ್ಲಿ ಮಕ್ಕಳ ಸುರಕ್ಷಾ ಸಮಿತಿ ಯನ್ನು ಶಾಲಾ ಮಟ್ಟದಲ್ಲಿ ರಚಿಸಿ, ಈ ಸಮಿತಿಯಲ್ಲಿ ಶಾಲಾ ಮುಖ್ಯಸ್ಥರು /ಶಾಲೆಯ ಆಡಳಿತ ಮಂಡಳಿಯವರು ಈ ಸಮಿತಿಯ ಅಧ್ಯಕ್ಷರಾಗಿದ್ದು, |

ಕನಿಷ್ಠ ಇಬ್ಬರು ಶಿಕ್ಷಕರು ಮೂವರು ಪೋಷಕರು , ಎಸ್ ಡಿ ಎಂ ಸಿ ಅಧ್ಯಕ್ಷರು ಇಬ್ಬರು ಮಕ್ಕಳು ಹಾಗೂ ಒಬ್ಬರು ಆರೋಗ್ಯ ಇಲಾಖೆಯ ಅಧಿಕಾರಿ/ಸಿಬ್ಬಂದಿ ಒಳಗೊಂಡಂತೆ ಸಮಿತಿ ರಚಿಸಲು ಸೂಚಿಸಲಾಗಿದೆ.ಸದರಿ ಸಭೆಯಲ್ಲಿ ಮಕ್ಕಳ ಹಕ್ಕು ಮತ್ತು ರಕ್ಷಣೆ ಬಗ್ಗೆ ಅರಿವು ಮೂಡಿಸಲು ಹಾಗೂ ಆಪ್ತ ಸಮಾಲೋಚನೆ ಮಾಡುವುದು ಈ ಬಗ್ಗೆ ಅನುಪಾಲನೆ ಮಾಡಲು ಸಕ್ಷಮ ಪ್ರಾಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ.

## ಕಾರ್ಮಿಕ ಇಲಾಖೆ:

ಕಾರ್ಮಿಕ ಆಯುಕ್ತಾಲಯ ಹಾಗೂ ಅಧೀನದಲ್ಲಿ ಬರುವ ಮಂಡಳಿಗಳಲ್ಲಿ ವರ್ಷಕ್ಕೆ ಒಂದು ಬಾರಿಯಾದರೂ ಲೈಂಗಿಕ ವಿಚಾರಗಳ ಪರಿಣಾಮ ಹಾಗೂ ದುಷ್ಪರಿಣಾಮಗಳ ಬಗ್ಗೆ ವಿಚಾರ-ಸಂಕಿರಣ ಮುಂತಾದ ಜಾಗೃತಿ ಕಾರ್ಯಕ್ರಮಗಳನ್ನು ಏರ್ಪಡಿಸುವ ಕುರಿತು ಕ್ರಮಕೈಗೊಳ್ಳಲಾಗುವುದು. ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಲ್ಲಿ ಮಹಿಳೆಯವರ ಸುರಕ್ಷತೆಗಾಗಿ ಇರುವ ಕಾಯ್ದೆಗಳ ಕುರಿತು ಎರಡು ಕಾನೂನು ಅರಿವು ಕಾರ್ಯಕ್ರಮ ಏರ್ಪಡಿಸಲಾಗಿರುತ್ತದೆ.

ಕಾರ್ಮಿಕ ಆಯುಕ್ತಾಲಯಕ್ಕೆ ಸಂಬಂಧಿಸಿದಂತೆ, ಶ್ರೀಮತಿ ವಿನುತ ಎನ್., ಸಹಾಯಕ ಕಾರ್ಮಿಕ ಆಯುಕ್ತರು, ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ, ಬೆಂಗಳೂರು ಇವರನ್ನು ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ ಮತ್ತು ನಿವಾರಿಸುವಿಕೆ) ಕಾಯ್ದೆಯಡಿ SHE Box Portal ಅನ್ನು ಅನುಷ್ಠಾನಗೊಳಿಸುವ ಬಗ್ಗೆ "ರಾಜ್ಯ ನೋಡಲ್ ಅಧಿಕಾರಿ (SNO)" ಯನ್ನಾಗಿ ನೇಮಕ ಮಾಡಲಾಗಿರುತ್ತದೆ ಹಾಗೂ ಮಾಹಿತಿಯನ್ನು ಪತ್ರ ಸಂಖ್ಯೆ: ಜಿಜಿಡಬ್ಲ್ಯು/ಸಿಆರ್-30/2023-24 ರಲ್ಲಿ ದಿನಾಂಕ: 02-01-2025 ರಂದು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ದೂರುಗಳು ಸ್ವೀಕೃತವಾದ್ದಲ್ಲಿ ಸದರಿ ದೂರುಗಳ ಬಗ್ಗೆ ನಿಯಮಾನುಸಾರ ಪರಿಶೀಲಿಸಿ, ಕಾನೂನು ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ಶಿಫಾರಸ್ಸು ಮಾಡಲಾಗುವುದು.

ಮಂಡಳಿಯಲ್ಲಿ 15 ಮಹಿಳಾ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಈ ಸಿಬ್ಬಂದಿಗಳ ಸುರಕ್ಷತೆಯ ದೃಷ್ಟಿಯಿಂದ ಹಾಗೂ ಅವರಿಗೆ ಕರ್ತವ್ಯ ನಿರ್ವಹಿಸಲು ಮುಕ್ತವಾದ ವಾತಾವರಣ ಕಲ್ಪಿಸುವ ದೃಷ್ಟಿಯಿಂದ ಅವರ ಕುಂದು ಕೊರತೆಗಳನ್ನು ನಿವಾರಿಸಲುThe Sexual Harassment of Women at Workplace (Prevention Prohibition and Redressal) Act, 2013 ರನ್ವಯ ಆಂತರಿಕ ದೂರು ಸಮಿತಿ(ICC)/ಸ್ಥಳೀಯದೂರುಸಮಿತಿ(LCC)ಯನ್ನುರಚಿಸಲಾಗಿರುತ್ತದೆ.

ಮುಂದುವರೆದು, ಕಾರ್ಮಿಕ ಇಲಾಖೆಯ ಕಾರ್ಯವ್ಯಾಪ್ತಿ/ಅಧಿಕಾರವ್ಯಾಪ್ತಿಗೆ ಸಂಬಂಧಿಸಿದಂತೆ, ಎಲ್ಲಾ ಅಧೀನ ಕಛೇರಿಗಳಿಗೆ ತಪಾಸಣಾ ಸಂದರ್ಭದಲ್ಲಿ ಕಾರ್ಯವ್ಯಾಪ್ತಿಯಲ್ಲಿನ

| | | |
|---|---|---|
| | | ಕೈಗಾರಿಕೆಗಳಿಗೆ ವರ್ಷಕ್ಕೆ ಒಂದು ಬಾರಿಯಾದರೂ ಲೈಂಗಿಕ ವಿಚಾರಗಳ ಪರಿಣಾಮ ಹಾಗೂ ದುಷ್ಪರಿಣಾಮಗಳ ಬಗ್ಗೆ ವಿಚಾರ-ಸಂಕಿರಣ ಮುಂತಾದ ಜಾಗೃತಿ ಕಾರ್ಯಕ್ರಮಗಳನ್ನು ಏರ್ಪಡಿಸುವಂತೆ ಹಾಗೂ ಕೈಗಾರಿಕೆಗಳಲ್ಲಿ ವಿಶಾಖಾ ಮತ್ತು ಇನ್ನಿತರೆ ಮಾರ್ಗದರ್ಶಿ ಸೂತ್ರಗಳನುಸಾರ ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ವಿವರಗಳನ್ನು ಹಾಗೂ ದೌರ್ಜನ್ಯಗಳ ದುಷ್ಪರಿಣಾಮಗಳ ಬಗ್ಗೆ ವಿವರಗಳನ್ನು ಬಹಿರಂಗವಾಗಿ ಬಿತ್ತರಿಸುವ ಕುರಿತು ಮತ್ತು ವಿಶಾಖಾ ಮಾರ್ಗಸೂಚಿ ಹಾಗೂ ದುಡಿಯುವ ಸ್ಥಳಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳ ತಡೆ ಕಾಯ್ದೆ, 2013 ರನ್ವಯ 10 ಜನಕ್ಕೂ ಹೆಚ್ಚು ಜನ ಕೆಲಸ ಮಾಡುತ್ತಾರೋ ಅಂತಹ ಕಛೇರಿ ಮತ್ತು ಸಂಸ್ಥೆಗಳಲ್ಲಿ ಲೈಂಗಿಕ ತಡೆ, ಆಂತರಿಕ ದೂರು ಸಮಿತಿಗಳನ್ನು ಕಡ್ಡಾಯವಾಗಿ ರಚಿಸುವಂತೆ ಆಡಳಿತ ಮಂಡಳಿಗೆ ತಿಳಿಸುವಂತೆ ಹಾಗೂ ಸದರಿ ವಿಷಯದ ಕುರಿತು ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ತಿಳಿಸಲಾಗಿರುತ್ತದೆ.<br><br>**ಕಾನೂನು ಇಲಾಖೆ:**<br><br>ರಾಜ್ಯದ ಎಲ್ಲಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳು ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿಗಳು ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಸರ್ಕಾರೇತರ ಶಾಲಾ-ಕಾಲೇಜುಗಳು, ಕಛೇರಿಗಳು, ಕೈಗಾರಿಕೆಗಳು, ಮುಂತಾದವುಗಳಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸರ್ಕಾರೇತರ ಹಾಗೂ ಸ್ವಸಹಾಯ ಸಂಘಗಳ ಸಹಯೋಗದೊಂದಿಗೆ ನಿರಂತರವಾಗಿ ಲೈಂಗಿಕ ವಿಚಾರಗಳ ಪರಿಣಾಮ ಹಾಗೂ ದುಷ್ಪರಿಣಾಮಗಳ ಬಗ್ಗೆ ವಿಚಾರ ಸಂಕಿರಣ ಮುಂತಾದ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುತಿರುತ್ತವೆ. |
| 13. | ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳ ತನಿಖೆ ಮಾಡಲು ವಿಶೇಷ ಪೊಲೀಸ್ ಠಾಣೆಯನ್ನು ರಾಜ್ಯದ ಪ್ರತಿ ತಾಲ್ಲೂಕಿನಲ್ಲಿ ಬರುವ ಒಂದು ವರ್ಷದಲ್ಲಿ ಪ್ರಾರಂಭಿಸುವುದು. ಅಂತಹ ಠಾಣೆಗಳಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ವೇದಗಳ | **ಪೊಲೀಸ್ ಇಲಾಖೆ:**<br><br>• ಪ್ರಸ್ತುತ ರಾಜ್ಯದಲ್ಲಿ ಮಹಿಳಾದೌರ್ಜನ್ಯ ಪ್ರಕರಣಗಳ ವಿಚಾರಣೆಗಾಗಿ ಜಿಲ್ಲೆಗೊಂದರಂತೆ ಮಹಿಳಾ ಪೊಲೀಸ್ ಠಾಣೆಕಾರ್ಯನಿರ್ವಹಿಸುತ್ತಿವೆ.<br>• ಪೊಲೀಸ್ ಠಾಣೆಗಳಲ್ಲಿ ಸಿಬ್ಬಂದಿಯ ಸಂಖ್ಯಾಬಲವನ್ನು ಹೆಚ್ಚಿಸುವ ಸಂಬಂಧ ಕ್ರಮಕೈಗೊಳ್ಳಲಾಗುತ್ತಿದೆ. |

| | | |
|---|---|---|
| | ಹುದ್ದೆಗಳಿಗೆ ಮಹಿಳೆಯರನ್ನೇ ನೇಮಿಸುವುದು. ಅಂತಹ ವಿಶೇಷ ಪೊಲೀಸ್ ಠಾಣೆಗಳ ಠಾಣಾಧಿಕಾರಿಗಳನ್ನಾಗಿ ಸಾಧ್ಯವಾದಷ್ಟು ಕಾನೂನು ಪದವೀಧರರಾಗಿರುವವವರನ್ನು ನೇಮಿಸುವುದು. ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಗಾಢವಾಗಿ ಕಾಣುತ್ತಿದ್ದು, ಅದರ ನಿವಾರಣೆಗೆ ಸೂಕ್ತ ಕ್ರಮವಹಿಸಬೇಕು. | |
| 14. | ಪ್ರತಿ ಪೊಲೀಸ್ ಠಾಣೆಯ ಕಾರ್ಯವೈಖರಿಯನ್ನು ಪರಿಶೀಲಿಸಲು ನಿವೃತ್ತ ನ್ಯಾಯಾಧೀಶರು, ವಕೀಲರು, ವೈದ್ಯರು. ಸಮಾಜ ಸೇವಾಕಾರ್ಯಕರ್ತರು, ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಮಹಿಳಾ ಚಳುವಳಿಯಲ್ಲಿ ಭಾಗವಹಿಸಿರುವಂತಹ ಪ್ರತಿನಿಧಿಗಳನ್ನೊಳಗೊಂಡ ವಿಜಿಲೆನ್ಸ್ ಸಮಿತಿಯನ್ನು ಪ್ರತಿ ಠಾಣೆಯಲ್ಲಿ ರಚಿಸಬೇಕು. ಆ ಸಮಿತಿಯು ಠಾಣೆಯಲ್ಲಿ ನಡೆಯುವ ಕಾರ್ಯವೈಖರಿಯನ್ನು ಆಗಿಂದಾಗ್ಗೆ ಪರಿಶೀಲಿಸಿ ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಕನಿಷ್ಠ ಮೂರು ತಿಂಗಳಿಗೊಮ್ಮೆ ವರದಿ ಮಾಡುವುದು. | ಪ್ರಸ್ತಾವನೆ ಇರುವುದಿಲ್ಲ. |

| | | |
|---|---|---|
| 15. | ಮಹಿಳೆ ಮತ್ತು ಮಕ್ಕಳ ಮೇಲೆ ನಡೆಯುವ ದೌರ್ಜನ್ಯಗಳು, ಅತ್ಯಾಚಾರಗಳ ಪ್ರಕರಣಗಳಲ್ಲಿ ತನಿಖೆ ವಿಚಾರಣೆ ಕನಿಷ್ಠ 6 ತಿಂಗಳು, ಗರಿಷ್ಟ ಒಂದು ವರ್ಷದ ಒಳಗೆ ಇತ್ಯರ್ಥ ಮಾಡಲು ಸಂಬಂಧಿಸಿದ ಕಾನೂನಿನಲ್ಲಿ ಬದಲಾವಣೆ ತರುವುದು. | ಜಾರಿಯಲ್ಲಿರುವ ಕಾನೂನಿನನ್ವಯ ಕ್ರಮ ವಹಿಸಲಾಗುತ್ತಿದೆ. |
| 16. | ಶಿಕ್ಷೆಯಾಗುತ್ತಿರುವ ಪ್ರಕರಣಗಳು 5% ಕ್ಕೂ ಕಡಿಮೆ ಆಗುತ್ತಿದೆ. 95% ಪ್ರಕರಣಗಳಲ್ಲಿ ಆರೋಪಿಗಳು ಖುಲಾಸೆಯಾಗುತ್ತಿದ್ದಾರೆ. ಇದರಿಂದ ಅಪರಾಧವೆಸಗುವಂತಹವರಿಗೆ ಭಯ ಇಲ್ಲದಂತೆ ಆಗುತ್ತಿದೆ. ಆದುದರಿಂದ ಶಿಕ್ಷೆಯ ಪ್ರಮಾಣ ಕನಿಷ್ಠ 50%ಕ್ಕೂ ಹೆಚ್ಚಾಗುವಂತೆ ಕ್ರಮ ಜರುಗಿಸುವುದು. ಇದರ ಪೂರ್ಣ ಜವಾಬ್ದಾರಿಯನ್ನು ಸಂಬಂಧಿಸಿದ ಎಸ್.ಪಿ./ಡಿ.ಸಿ.ಪಿ. ಹಾಗೂ ತನಿಖಾಧಿಕಾರಿಗಳನ್ನು ಕಡ್ಡಾಯವಾಗಿ ಹೊಣೆಗಾರರನ್ನಾಗಿಸಿ ಕಾನೂನಿನಲ್ಲಿ ಬದಲಾವಣೆ ತರುವುದು. ಪಬ್ಲಿಕ್ ಪ್ರಾಸಿಕ್ಯೂಟರ್ ಗಳಿಗೆ ಲಿಂಗ ಸಂವೇದನಾ ತರಬೇತಿ ಶಿಬಿರಗಳನ್ನು ಕಡ್ಡಾಯಗೊಳಿಸಬೇಕು. | **ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ:-**<br><br>ಅಭಿಯೋಜನಾ ಪ್ರಕರಣಗಳನ್ನು ಪರಿಣಾಮಕಾರಿಕಾರಿಯಾಗಿ ಅಭಿಯೋಜಿಸುವ ಬಗ್ಗೆ, ಹಾಗೂ ನೊಂದವರಿಗೆ ನ್ಯಾಯ ದೊರಕಿಸಿಕೊಡುವ ಸಂಬಂಧವಾಗಿ ಅಭಿಯೋಜಕರುಗಳಿಗೆ ತರಬೇತಿಯನ್ನು ಕಾಲಕಾಲಕ್ಕೆ ನೀಡಲಾಗುತ್ತಿದೆ. ಮಾನ್ಯ ನ್ಯಾಯಾಲಯಗಳು ನೀಡುವ ತೀರ್ಪುಗಳನ್ನು ಪರಿಶೀಲಿಸಿ, Acquittal review committee ನೀಡುವ ಅಭಿಪ್ರಾಯದಂತೆ ಸಂಬಂಧಿಸಿದ ಸರ್ಕಾರಿ ಅಭಿಯೋಜರುಗಳ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ..<br><br>**ಪೊಲೀಸ್ ಇಲಾಖೆ:**<br><br>• ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ (ಅತ್ಯಾಚಾರ & ಪೋಕ್ಸೊ) ಪ್ರಕರಣಗಳನ್ನು ಆದ್ಯತೆಯ ಮೇರೆಗೆ ಪರಿಗಣಿಸಿ, ಪ್ರಕರಣ ದಾಖಲಿಸಿ, ತ್ವರಿತವಾಗಿ ತನಿಖೆ ಕೈಕೊಳ್ಳಲಾಗುತ್ತಿದೆ.<br>• ಪ್ರಕರಣಗಳಲ್ಲಿ ಗುಣಮಟ್ಟದ ತನಿಖೆ ನಡೆಸಿ, ಕಡ್ಡಾಯವಾಗಿ 60 ದಿನಗಳ ಒಳಗಡೆ ತನಿಖೆಯನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗುತ್ತಿದೆ.<br>• ನ್ಯಾಯಾಲಯದಲ್ಲಿ ಪ್ರಕರಣಗಳ ವಿಚಾರಣೆಯು ಸರಿಯಾದ ರೀತಿಯಲ್ಲಿ ನಡೆಯುತ್ತಿದೆ ಎಂಬುದರ ಬಗ್ಗೆ ಖಾತ್ರಿಪಡಿಸಿಕೊಳ್ಳಲು ಪ್ರತಿ ಠಾಣೆಯಲ್ಲಿಯು ಕೋರ್ಟ ಮಾನಿಟರಿಂಗ್ ಸೆಲ್ ಕಾರ್ಯನಿರ್ವಹಿಸುತ್ತಿದೆ.<br>• ನ್ಯಾಯಾಲಯದ ಪ್ರಕರಣಗಳ ಶಿಕ್ಷೆಯ ಪ್ರಮಾಣ ಉನ್ನತಿಗೊಳಿಸುವ ನಿಟ್ಟಿನಲ್ಲಿ ಪ್ರತಿ ಜಿಲ್ಲೆ/ ವಲಯ/ ರಾಜ್ಯ ಮಟ್ಟದ "Acquittal Review Committee " ರಚಿಸಿದ್ದು ಕಾರ್ಯನಿರ್ವಹಿಸುತ್ತಿದೆ. |

| | | |
|---|---|---|
| 17. | ಯಾವ ಜಿಲ್ಲೆಯಲ್ಲಿ ಶಿಕ್ಷೆ ಪ್ರಮಾಣ 50% ಕ್ಕಿಂತಲೂ ಕಡಿಮೆ ಆಗುತ್ತದೆಯೋ, ಅಂತಹ ತನಿಖಾಧಿಕಾರಿ, ಪ್ರಾಸಿಕ್ಯೂಟರ್ ಮತ್ತು ಎಸ್.ಪಿ.ಯವರನ್ನು ಹೊಣೆಗಾರರನ್ನಾಗಿ ಮಾಡುವ ಕಾನೂನು ರೂಪಿಸುವುದು. | **ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ:-**<br><br>50 % ಗಿಂತಲೂ ಕಡಿಮೆ ಶಿಕ್ಷೆಯ ಪ್ರಮಾಣ ಇರುವ ಜಿಲ್ಲೆಯ ಸರ್ಕಾರಿ ಅಭಿಯೋಜಕರುಗಳಿಗೆ ಸಂಬಂಧಿಸಿದಂತೆ, ಮಾನ್ಯ ನ್ಯಾಯಾಲಯದ ತೀರ್ಪು ಮತ್ತು ದಾಖಲೆಗಳನ್ನು ಪರಿಶೀಲಿಸಿ ಸರ್ಕಾರಿ ಅಭಿಯೋಜಕರುಗಳನ್ನು ಹೊಣೆಗಾರರನ್ನಾಗಿ ಮಾಡಲು ಕ್ರಮ ಕೈಗೊಳ್ಳಲಾಗುವುದು.<br><br>**ಪೊಲೀಸ್ ಇಲಾಖೆ:**<br>• ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ (ಅತ್ಯಾಚಾರ & ಪೋಕ್ಸೊ) ಪ್ರಕರಣಗಳ ತನಿಖೆಯಲ್ಲಿ ಲೋಪವೆಸಗುವ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಕೈಕೊಳ್ಳಲಾಗುತ್ತಿದೆ. |
| 18. | ರಾಜ್ಯವ್ಯಾಪಿ ಸಹಶಿಕ್ಷಣದ ಮೂಲಕ ಹೆಣ್ಣು ಮತ್ತು ಗಂಡು ಮಕ್ಕಳು ಒಟ್ಟಿಗೆ ಶಿಕ್ಷಣ ಕಲಿಯುವುದರ ಮೂಲಕ ಹೆಣ್ಣು, ಗಂಡು ಮಕ್ಕಳ ಮಧ್ಯೆ ಸಾಮರಸ್ಯ ಮತ್ತು ಸಮಾನತೆಯ ಭಾವ ಮೂಡುವಂತೆ ಶಿಕ್ಷಣ ನೀತಿ ರೂಪಿಸುವುದು. | **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ**<br>• ಲಿಂಗ ಸಮಾನತೆಯ ಬಗ್ಗೆ ಕ್ರಮವಹಿಸಲಾಗಿದೆ. ಶಾಲೆಗಳಲ್ಲಿ ಸಹ ಶಿಕ್ಷಣದ ಮೂಲಕವೇ ಬೋಧಿಸಲಾಗುತ್ತಿದೆ. ಲಿಂಗ ತಾರತಮ್ಯ ಅಸಮಾನತೆ ಹೋಗಲಾಡಿಸಲು ಸಮಾನ ಕೆಲಸಗಳನ್ನು ಮಕ್ಕಳಿಗೆ ನೀಡಲಾಗುತ್ತಿದೆ.<br>• ಲಿಂಗ ಅಸಮಾನತೆ ಹೋಗಲಾಡಿಸುವ ಬಗ್ಗೆ ಎಲ್ಲಾ ಶಿಕ್ಷಕರಿಗೂ ತರಬೇತಿ ನೀಡಲಾಗಿದೆ. ಈ ಮೂಲಕ ಹೆಣ್ಣು ಮತ್ತು ಗಂಡು ಮಕ್ಕಳ ಮಧ್ಯೆ ಸಾಮರಸ್ಯ ಮತ್ತು ಸಮಾನತೆಯ ಭಾವ ಮೂಡುವಂತೆ ಶಾಲಾ ಹಂತದಲ್ಲಿ ಕ್ರಮವಹಿಸಲಾಗುತ್ತಿದೆ. ಉದಾ:ಪ್ರತಿಭಾ ಕಾರಂಜಿ, ಸಾಮೂಹಿಕ ಕವಾಯತು, ಸಾಮೂಹಿಕ ಸಹ ಭೋಜನ, ಸಾಮೂಹಿಕ ತರಗತಿ ನಿರ್ವಹಣೆ, ಇತ್ಯಾದಿ..<br>• ಈ ಬಗ್ಗೆ ಕಾನೂನು ಮತ್ತು ಸೇವಾ ಪ್ರಾಧಿಕಾರಗಳಿಂದಲೂ ಕಾರ್ಯ ನಿರ್ವಹಿಸಲಾಗುತ್ತಿದೆ.<br>• ಪಠ್ಯ ಪುಸ್ತಕ ರಚನಾ ಹಂತದಲ್ಲಿ ಲಿಂಗ ಸಮಾನತೆಯ ಅಂಶಗಳನ್ನು ಅಳವಡಿಸಲಾಗಿದೆ.<br>• ಈ ಸಂಬಂಧ ಪ್ರಸ್ತುತ ಶಿಕ್ಷಣ ನೀತಿಯ ನಿಯಮಗಳು ಪಾಲನೆ ಮಾಡುತ್ತಿವೆ.<br>• ರಾಜ್ಯದ 68989 ಶಾಲೆಗಳಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳು ಒಟ್ಟಿಗೆ ಶಿಕ್ಷಣ ಪಡೆಯುತ್ತಿದ್ದಾರೆ. ಕೆಲವೆಡೆ ಹಲವು ಕಾರಣಗಳಿಂದ ಪ್ರತ್ಯೇಕವಾಗಿ ಹೆಣ್ಣು ಮಕ್ಕಳ ಅಥವಾ ಗಂಡು ಮಕ್ಕಳ ಶಾಲೆಗಳನ್ನು ತೆರೆಯಲು ಬೇಡಿಕೆ ಇದ್ದು, ಇದರಂತೆ 467 ಗಂಡು ಮಕ್ಕಳ ಶಾಲೆ ಮತ್ತು 1252 ಹೆಣ್ಣು ಮಕ್ಕಳ ಶಾಲೆಗಳಿವೆ. |

| | | |
|---|---|---|
| 19. | ಸರ್ಕಾರೇತರ ವಸತಿ ಶಾಲೆ ಹಾಗೂ ಇನ್ನಿತರೆ ಶಾಲೆಗಳ ಕಾರ್ಯವೈಖರಿ ಮತ್ತು ಶುಲ್ಕ ಸಂಗ್ರಹಿಸುವ ವ್ಯವಸ್ಥೆಯನ್ನು ಆಗಿಂದಾಗ್ಗೆ ಪರಿಶೀಲಿಸಲು ಆಯಾ ಪೋಷಕರು, ಉಪಾಧ್ಯಾಯರು ಹಾಗೂ ಶಾಲಾ ಪ್ರದೇಶಗಳಲ್ಲಿ ವಾಸವಾಗಿರುವ ನ್ಯಾಯಾಧೀಶರು/ವಕೀಲರು, ಸಮಾಜಸೇವಕರು. ಬುದ್ಧಿಜೀವಿಗಳನ್ನೊಳಗೊಂಡಂತಹ ವಿಜಿಲೆನ್ಸ್ ಸಮಿತಿಗಳನ್ನು ರೂಪಿಸಲು ಕ್ರಮ ಜರುಗಿಸುವುದು. ಅಂತಹ ಸಮಿತಿಗಳು ಆಯಾ ಶಾಲೆಯ ವಿದ್ಯಮಾನಗಳ ಬಗ್ಗೆ ಪರಿಶೀಲಿಸಿ, ನ್ಯೂನತೆ/ಸಮಸ್ಯೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿ, ಆಯಾ ಜಿಲ್ಲೆಯ ಡಿಡಿಪಿಐ/ಡಿ.ಸಿ./ಸಿ.ಇ.ಓ./ಎಸ್.ಪಿ. ರವರಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ವರದಿ ನೀಡಲು ಕಾನೂ ರೂಪಿಸುವುದು. | **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ**<br><br>▪ ಜಿಲ್ಲಾ ಹಂತದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ DERA (District Education Regulatory Authority) ಸಮಿತಿಯಿದ್ದು, ಅದರ ಮೂಲಕ ಶಾಲೆಗಳ ಕಾರ್ಯವೈಖರಿ ಮತ್ತು ಶುಲ್ಕ ಸಂಗ್ರಹಿಸುವ ವ್ಯವಸ್ಥೆಯಲ್ಲಿ ದೂರುಗಳು ಬಂದಾಗ ಗಮನಹರಿಸಲಾಗುತ್ತಿದೆ. |
| 20. | ಮಹಿಳೆ ಮತ್ತು ಮಕ್ಕಳ ಮೇಲೆ ನಡೆಯುವ ದೌರ್ಜನ್ಯಗಳ ವಿರುದ್ಧ ದಾಖಲಾಗುವ ದೂರುಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿದ್ದು, ಅದನ್ನು ಸಮರ್ಥ ಮತ್ತು ಶೀಘ್ರವಾಗಿ ವಿಲೇವಾರಿ ಮಾಡಿ ಸಮಸ್ಯೆಗೆ ಪರಿಹಾರ ನೀಡಲು | **ಮಹಿಳಾ ಆಯೋಗ:**<br><br>ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳ ವಿರುದ್ಧ ದಾಖಲಾಗುವ ದೂರುಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿರುವುದರಿಂದ, ಅದನ್ನು ಸಮರ್ಥವಾಗಿ, ಶೀಘ್ರವಾಗಿ ವಿಲೇವಾರಿ ಮಾಡಿ, ಸಮಸ್ಯೆಗೆ ಪರಿಹಾರ ನೀಡಲು ಸಾಧ್ಯವಾಗುವಂತೆ ಕರ್ನಾಟಕ ರಾಜ್ಯ ಮಹಿಳಾ ಆಯೋಗದಲ್ಲಿ ಸರ್ಕಾರದಿಂದ ಅನುಮೋದಿಸಿರುವ ಹುದ್ದೆಗಳ ಪೈಕಿ ಖಾಲಿ ಇರುವ ಹುದ್ದೆಗಳಿಗೆ ಹೊರಗುತ್ತಿಗೆ |

| | | |
|---|---|---|
| | ಸಾಧ್ಯವಾಗುವಂತೆ ರಾಜ್ಯ ಮಹಿಳಾ ಆಯೋಗವನ್ನು ಇನ್ನಷ್ಟು ಬಲಗೊಳಿಸಲು, ಕೆಳಹಂತದಿಂದಲೂ ಪ್ರತ್ಯೇಕ ಸಿಬ್ಬಂದಿ ಸೌಲಭ್ಯಗಳನ್ನು ಒದಗಿಸಬೇಕು. ಸಮರ್ಪಕ ಕಾರ್ಯನಿರ್ವಹಣೆಗೆ ವ್ಯವಸ್ಥೆ ಕಲ್ಪಿಸಬೇಕು. | ಆಧಾರದ ಮೇಲೆ ನೇಮಿಸಲಾಗಿದೆ. ಆಯೋಗಕ್ಕೆ ಬರುವ ದೂರರ್ಜಿಗಳ ಬಗ್ಗೆ ಕಾನೂನು ಸಲಹೆ ಪಡೆಯಲು 3 ಜನ ತಾತ್ಕಾಲಿಕ ಕಾನೂನು ಸಲಹೆಗಾರರನ್ನು ನೇಮಿಸಿಕೊಳ್ಳಲಾಗಿದೆ. |
| 21. | ಮಹಿಳೆ ಮತ್ತು ಮಕ್ಕಳ ಮೇಲೆ ನಡೆಯುವ ದೌರ್ಜನ್ಯ, ಶೋಷಣೆ, ಅತ್ಯಾಚಾರ, ಮುಂತಾದ ಪ್ರಕರಣಗಳನ್ನು ಪತ್ತೆಹಚ್ಚಲು ಎಲ್ಲಾ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಮಾಹಿತಿದಾರರು ಇರತಕ್ಕದ್ದು. ಅಂತಹ ಮಾಹಿತಿದಾರರು ತಮ್ಮ ವ್ಯಾಪ್ತಿಯಲ್ಲಿ ನಡೆಯುವಂತಹ ಘಟನೆಗಳನ್ನು ಸಂಬಂಧಪಟ್ಟ ಪೊಲೀಸರ ಗಮನಕ್ಕೆ ತಂದು, ಅಂತಹ ಮಾಹಿತಿಯ ಆಧಾರದ ಮೇಲೆ ಸಂಬಂಧಪಟ್ಟ ಪೊಲೀಸರು ಪ್ರಕರಣಗಳನ್ನು ದಾಖಲು ಮಾಡಿಕೊಳ್ಳುವಂತಹ ವ್ಯವಸ್ಥೆ ಜಾರಿಗೆ ತರುವುದು. ಮಾಹಿತಿದಾರರಿಗೆ ಸೂಕ್ತ ರಕ್ಷಣೆಗೆ ವ್ಯವಸ್ಥೆ ಕಲ್ಪಿಸುವುದು. | **ಪೊಲೀಸ್ ಇಲಾಖೆ:**<br>• ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಮಾಹಿತಿದಾರರ ವಿವರಗಳನ್ನು ಗೌಪ್ಯವಾಗಿ ಇಡಲಾಗುತ್ತಿದೆ.<br>• ಅಲ್ಲದೇ ಮಾಹಿತಿದಾರ/ ಸಾಕ್ಷಿದಾರರಿಗೆ "Witness protection Scheme" ಅಡಿಯಲ್ಲಿ ಪೊಲೀಸ್ ಇಲಾಖೆಯಿಂದ ರಕ್ಷಣೆ ನೀಡಲಾಗುತ್ತಿದೆ. |
| 22. | ಸಾಂತ್ವನ ಕೇಂದ್ರಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಬೇಕು. ಕೆಲವು ಜಿಲ್ಲೆಗಳಲ್ಲಿ | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ** |

| | | |
|---|---|---|
| | ಸಮಿತಿಯ ಗಮನಕ್ಕೆ ಬಂದಂತ ಅತ್ಯಾಚಾರದ ಪ್ರಕರಣಗಳನ್ನು ಸಮಾಲೋಚನೆಯ ಇತ್ಯರ್ಥಪಡಿಸಲಾಗುತ್ತಿದೆ. ಮೂಲಕ ಇದು ಶೋಷಣೆಯ ಮತ್ತೊಂದು ಮುಖವಾಗಿದ್ದು, ಇಂತಹ ಕಾರ್ಯವಿಧಾನಕ್ಕೆ ತಡೆಯೊಡ್ಡಬೇಕು. | • ಸಾಂತ್ವನ ಕೇಂದ್ರಗಳು ಕಾನೂನು ಚೌಕಟ್ಟಿನೊಳಗೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಂತ್ವನ ಯೋಜನೆಯ ಮಾರ್ಗಸೂಚಿಯನ್ನು ಪರಿಷ್ಕರಿಸಿದ್ದು, 31 ಜಿಲ್ಲೆಗಳಿಗೆ ಕಳುಹಿಸಿದ್ದು, ಅದರಂತೆ ಕ್ರಮವಹಿಸಲು ಸೂಚಿಸಲಾಗಿದೆ.<br>• 180 ಸಾಂತ್ವನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, NGOಗಳಿಂದ ನಿರ್ವಹಿಸಲಾಗುತ್ತಿರುವ ಸಾಂತ್ವನ ಕೇಂದ್ರಗಳಲ್ಲಿ ಖಾಲಿ ಹುದ್ದೆಗಳನ್ನು ಉತ್ತಮ ನಡತೆಯುಳ್ಳ ಮಹಿಳಾ ಅಭ್ಯರ್ಥಿಗಳನ್ನು ತೆಗೆದುಕೊಂಡು ತಕ್ಷಣ ಭರ್ತಿ ಮಾಡಲು ಕ್ರಮವಹಿಸುವಂತೆ ಉಪ ನಿರ್ದೇಶಕರುಗಳಿಗೆ ಸೂಚಿಸಲಾಗಿದೆ. |
| 23. | ರಾಜ್ಯದ ಜನನಿಬಿಡ ಪ್ರದೇಶಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮರಾಗಳನ್ನು ಅಳವಡಿಸಿ, ವಿಧಿದ್ರಕಾರಿ ಪ್ರವೃತ್ತಿ ವ್ಯಕ್ತಿಗಳ ಚಲನವಲನಗಳ ಮಾಹಿತಿ ಸಂಗ್ರಹಿಸಲು ಕ್ರಮ ಜರುಗಿಸುವುದು. ಚುಡಾಯಿಸುವ (ಈವ್ ಟೀಸಿಂಗ್) ಪ್ರವೃತ್ತಿ ನಿಯಂತ್ರಣಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನದ ಅನುಸಾರ ಪ್ರತಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ವ್ಯವಸ್ಥೆ ಮಾಡಬೇಕು. | **ಪೊಲೀಸ್ ಇಲಾಖೆ:**<br>• ಈಗಾಗಲೇ ರಾಜ್ಯದ ಎಲ್ಲ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ "Public Safety Act" ಅಡಿಯಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ.<br>• ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಈವ್-ಟೀಸಿಂಗ್ ತಡೆಯಲು ಶಾಲಾ/ ಕಾಲೇಜುಗಳ ಹತ್ತಿರ, ಮಹಿಳಾ ವಸತಿ ನಿಲಯ ಹಾಗೂ ಮಹಿಳೆಯರು ಕೆಲಸ ಮಾಡುವ ಸ್ಥಳಗಳಲ್ಲಿ ಬೆಳಿಗ್ಗೆ ಹಾಗೂ ಸಂಜೆ ವಿಶೇಷ ಗಸ್ತು ಕರ್ತವ್ಯಕ್ಕೆ ಸಿಬ್ಬಂದಿಯವರನ್ನು ನಿಯೋಜಿಸಲಾಗುತ್ತಿದೆ.<br>• ರಾಜ್ಯದಲ್ಲಿ ನ್ಯೂ ಬೀಟ್ ಸಿಸ್ಟಮ್ ಜಾರಿಗೊಳಿಸಿ, ಬೀಟ್ ಮೀಟಿಂಗ್ ವೇಳೆಯಲ್ಲಿ ಮಹಿಳೆಯರ ದೌರ್ಜನ್ಯ ಮತ್ತು ಈವ್-ಟೀಸಿಂಗ್‌ಗಳಿಗೆ ಹೆಚ್ಚಿನ ಒತ್ತುನೀಡಿ ಮಾಹಿತಿ ನೀಡಲಾಗುತ್ತಿದೆ. |
| 24. | ಸಂತ್ರಸ್ತರು ಅಥವಾ ಅವರ ಪರವಾಗಿ ಅವರ ಪಾಲಕರು, ಪೋಷಕರು, ಹಿತೈಷಿಗಳು ಅಥವಾ ಪ್ರತ್ಯಕ್ಷ ಸಾಕ್ಷಿಗಳು ನೀಡುವಂತಹ ಫಿರ್ಯಾದನ್ನು ಪೊಲೀಸರು ವಿಳಂಬ ಮಾಡದೆ ಪ್ರಕರಣವನ್ನು ದಾಖಲು ಮಾಡಿಕೊಳ್ಳಬೇಕು. ವಿಳಂಬ ಮಾಡುವವರ ಮೇಲೆ ಜಸ್ಟೀಸ್ ವರ್ಮಾ ಆಯೋಗದ ಶಿಫಾರಸ್ಸಿನ ಅನ್ವಯ ಶಿಕ್ಷೆಗೆ ಒಳಪಡಿಸಬೇಕು | **ಪೊಲೀಸ್ ಇಲಾಖೆ:**<br>• Free and Fair Registration ಎಂಬುದು ರಾಜ್ಯ ಪೊಲೀಸ್ ಇಲಾಖೆಯ ಘೋಷ ವಾಕ್ಯವಾಗಿದೆ.<br>• ರಾಜ್ಯದ ಎಲ್ಲ ಪೊಲೀಸ್ ಠಾಣೆಗಳಲ್ಲಿ ಮಹಿಳೆ ಮತ್ತು ಮಕ್ಕಳ ಪ್ರಕರಣಗಳನ್ನು ಆದ್ಯತೆಯ ಮೇರೆಗೆ ಪರಿಗಣಿಸಲಾಗುತ್ತಿದೆ. ಹಾಗೂ ಇಂತಹ ದೂರುಗಳ ಬಗ್ಗೆ ಯಾರೇ ಮಾಹಿತಿ ನೀಡಿದರೂ ತಕ್ಷಣ ಪ್ರಕರಣ (ಎಫ್.ಐ.ಆರ್) ದಾಖಲಿಸಿ ಸೂಕ್ತ ಕಾನೂನು ಕ್ರಮ ಕೈಕೊಳ್ಳಲಾಗುತ್ತಿದೆ.<br>• ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ (ಅತ್ಯಾಚಾರ & ಪೋಕ್ಸೊ) ಪ್ರಕರಣಗಳನ್ನು ದಾಖಲಿಸುವಲ್ಲಿ ವಿಳಂಬ ಮಾಡುವ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಕೈಕೊಳ್ಳಲಾಗುತ್ತಿದೆ. |

| | | |
|---|---|---|
| 25. | ಸಂತ್ರಸ್ತೆಯರು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾದಾಗ, ಅವರನ್ನು ವಿಶೇಷ ಚಿಕಿತ್ಸಾ ಘಟಕದಲ್ಲಿಟ್ಟು ಚಿಕಿತ್ಸೆ ನೀಡಬೇಕು. ಅದೇ ಸೂರಿನ ಅಡಿಯಲ್ಲಿ ಚಿಕಿತ್ಸೆ, ಕಾನೂನು ಸಲಹೆಗಳು, ಆತ್ಮಸ್ಥೈರ್ಯ ತುಂಬುವ ಸಮಾಲೋಚನೆ ನೀಡುವುದು. ಇವುಗಳನ್ನು ಗೌಪ್ಯವಾಗಿಡಬೇಕು. ಇಂತಹ ಜವಾಬ್ದಾರಿ ಕಾನೂನು ರೀತ್ಯಾ ನಿರ್ವಹಿಸದ ಅಧಿಕಾರಿಗಳ ಮೇಲೆ ಕ್ರಮಜರುಗಿಸಲು ಕಾನೂನು ರಚಿಸುವುದು. (ಇನ್ ಕ್ಯಾಮೆರಾ ವಿಚಾರಣೆ ನಡೆಸಬೇಕು. | **ಪೊಲೀಸ್ ಇಲಾಖೆ:**<br>• ಮಹಿಳಾ ಮತ್ತು ಮಕ್ಕಳ ದೌರ್ಜನ್ಯ ಪ್ರಕರಣಗಳಲ್ಲಿ ಸಂತ್ರಸ್ಥರಿಗೆ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ.<br>• ಮಹಿಳಾ ಮತ್ತು ಮಕ್ಕಳ ರಕ್ಷಣಾ ಘಟಕದ ಇಬ್ಬರು ಆಪ್ತ ಸಮಾಲೋಚಕರ ವ್ಯವಸ್ಥೆ ಮಾಡಲಾಗಿದೆ.<br>• ಸಂತ್ರಸ್ಥರ ವಿವರಗಳನ್ನು ಗೌಪ್ಯವಾಗಿ ಇಡಲಾಗುತ್ತಿದೆ. |
| 26. | ಮಹಿಳಾ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳ ಬಗ್ಗೆ ವರದಿ ಮಾಡುವಾಗ ಅನೇಕ ಮಾಧ್ಯಮಗಳು ಮತ್ತು ದೃಶ್ಯ ಮಾಧ್ಯಮಗಳು ಸಂತ್ರಸ್ತೆಯ ಭಾವಚಿತ್ರ, ಹೆಸರು, ಇನ್ನಿತರೆ ಮಾಹಿತಿಗಳನ್ನು ಪ್ರಕಟಿಸಿರುವಂತಹ ಸಂದರ್ಭಗಳು ಇವೆ. ಕೆಲವು ಸಂದರ್ಭಗಳಲ್ಲಿ ಘಟನೆಯ ಸತ್ಯಾಸತ್ಯತೆಯನ್ನು ಪರಿಶೀಲಿಸದೆ, ಘಟನೆಯ ಹಿನ್ನೆಲೆಯನ್ನು ವೈಭವೀಕರಿಸಿರುವಂತೆ ಆಗಿರುತ್ತದೆ. ಇದರಿಂದ ಸಂತ್ರಸ್ತೆಯರಿಗೆ ಹಾನಿಯಾಗಿ, ತನಿಖೆ ದಾರಿ ತಪ್ಪಿದಂತಾಗುತ್ತದೆ. ಕೆಲವು | ***ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ:***<br>ಈ ಕುರಿತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಕ್ಕಳ ರಕ್ಷಣಾ ನಿರ್ದೇಶನಾಲಯ ಪ್ರಕಟಿಸಿರುವ ಕಿರುಹೊತ್ತಿಗೆಗಳನ್ನು ಮಾಧ್ಯಮ ಸಂಸ್ಥೆಗಳಿಗೆ, ಮಾಧ್ಯಮ ಪ್ರತಿನಿಧಿಗಳಿಗೆ ತಲುಪಿಸಿ ಜಾಗೃತಿ ಮೂಡಿಸುವ ಪ್ರಯತ್ನಗಳನ್ನು ಮಾಡಲಾಗಿದೆ.<br><br>ಮಾಧ್ಯಮ ಪ್ರತಿನಿಧಿಗಳಿಗೆ ಕಾರ್ಯಗಾರ ಏರ್ಪಡಿಸಿ ಮಹಿಳಾ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಸಂದರ್ಭಗಳಲ್ಲಿ ವರದಿಗಾರಿಕೆ ಮಾಡುವಾಗ ಅನುಸರಿಸಬೇಕಾದ ಹಾಗೂ ಗಮನಿಸಬೇಕಾದ ಅಂಶಗಳ ಕುರಿತು ಸಂವೇದನಾ ಶೀಲರನ್ನಾಗಿಸಲು ಕ್ರಮವಹಿಸಬಹುದಾಗಿದೆ. ಕಾರ್ಯಗಾರ ಆಯೋಜನೆ ಕೋರಿ ಮಕ್ಕಳ ರಕ್ಷಣಾ ನಿರ್ದೇಶನಾಲಯಕ್ಕೆ ಪತ್ರ ಬರೆಯಲಾಗಿದೆ. ಸದರಿ ಇಲಾಖೆಯ ಪ್ರತಿಕ್ರಿಯೆ ನಿರೀಕ್ಷಿಸಲಾಗುತ್ತಿದೆ.<br><br>2022 ರ ಅಕ್ಟೋಬರ್ ನಲ್ಲಿ ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕಿನ ಅಪ್ರಾಪ್ತ ಬಾಲಕಿಯೊಬ್ಬಳ ಮೇಲೆ ನಡೆದ ದೌರ್ಜನ್ಯ ಕುರಿತ ವರದಿಗಳಲ್ಲಿ ಬಳಸಿದ ಪದಗಳು ಮತ್ತು ಬಾಲಕಿಯ ಭಾವಚಿತ್ರ ಬಹಿರಂಗಪಡಿಸಿರುವುದು ಶಿಕ್ಷಾರ್ಹ ಅಪರಾಧ ಎಂಬುದನ್ನು ಮಾಧ್ಯಮ ಸಂಸ್ಥೆಗಳಿಗೆ ಪತ್ರ ಬರೆದು ತಿಳಿಸಲಾಗಿದೆ. ಹಾಗೂ ಈ ಕುರಿತು ಮಾಧ್ಯಮಗಳಲ್ಲಿ ಪ್ರಕಟಣೆಗಳನ್ನು ನೀಡಲಾಗಿದೆ. |

| | | |
|---|---|---|
| | ಸಂದರ್ಭಗಳಲ್ಲಿ ತನಿಖಾಧಿಕಾರಿಗಳ ಆತ್ಮಸ್ಥೈರ್ಯ ಕುಂದುವಂತದ್ದಾಗಿರುತ್ತದೆ. ಆದುದರಿಂದ, ತನಿಖೆ ಪೂರ್ಣವಾಗುವವರೆಗೆ ಯಾವುದೇ ಕಾರಣಕ್ಕೂ ಮಹಿಳೆ ಮತ್ತು ಮಕ್ಕಳ ಮೇಲೆ ನಡೆಯುವ ದೌರ್ಜನ್ಯ ಪ್ರಕರಣದಲ್ಲಿ ಸಂತ್ರಸ್ತೆಯ ವಿವರಗಳನ್ನು ಪ್ರಕಟಿಸದೆ ಇರುವಂತೆ ಕಟ್ಟುನಿಟ್ಟಿನ ಕ್ರಮ ಜರುಗಿಸಲು ಕಾನೂನು ರೂಪಿಸುವುದು. | 2023 ಡಿಸೆಂಬರ್ ನಲ್ಲಿ ಬೆಳಗಾವಿಯಲ್ಲಿ ನಡೆದ ಮಹಿಳೆಯೊಬ್ಬರನ್ನು ಬೆತ್ತಲೆಗೊಳಿಸಿ ದೌರ್ಜನ್ಯಗೊಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನಿರ್ದೇಶನದ ಮೇರೆಗೆ ಮಾಧ್ಯಮಗಳಿಗೆ ಸಲಹಾ ರೂಪದಲ್ಲಿ ಕೆಲವು ಅಂಶಗಳನ್ನು ತಿಳಿಸಿ ಸುದ್ದಿ ಪ್ರಸಾರ ಸಂದರ್ಭದಲ್ಲಿ ಎಚ್ಚರಿಕೆ ವಹಿಸಬೇಕಾದ ಅಂಶಗಳ ಕುರಿತು ಗಮನ ಸೆಳೆಯಲಾಗಿದೆ.<br><br>**ಪೊಲೀಸ್ ಇಲಾಖೆ:**<br>• ಸಂತ್ರಸ್ತರ ವಿವರಗಳನ್ನು ಗೌಪ್ಯವಾಗಿ ಇಡಲಾಗುತ್ತಿದೆ.<br>• ಸಂತ್ರಸ್ತರ ಹೆಸರು, ವಿವರಗಳನ್ನು ಬಹಿರಂಗ ಪಡಿಸುವ ಮಾಧ್ಯಮಗಳು ಅಥವಾ ವ್ಯಕ್ತಿಗಳ ಮೇಲೆ ಸೂಕ್ತ ಕಾನೂನು ಕ್ರಮ ಕೈಕೊಳ್ಳಲಾಗುತ್ತಿದೆ. |
| 27. | ಯಾವುದೇ ಸಂದರ್ಭದಲ್ಲಿ ಸುಳ್ಳು ಮಾಹಿತಿ ಮತ್ತು ವದಂತಿಗಳ ಮೇಲೆ ಇಂತಹ ಪ್ರಕರಣಗಳನ್ನು ವೈಭವೀಕರಿಸಬಾರದು ಎಂದು ಕಾನೂನು ಇದ್ದರೂ, ಇಲ್ಲಿಯವರೆಗೂ ಹಾಗೆ ಮಾಡಿದ ಯಾರ ಮೇಲೂ ಕ್ರಮ ಜರುಗಿಸಿರುವುದಿಲ್ಲ. ಆದುದರಿಂದ, ಕಾನೂನುಬಾಹಿರ ಕೃತ್ಯಗಳನ್ನು ಯಾರಾದರೂ ನಡೆಸಿದರೆ, ಅಂತಹವರ ಮೇಲೆ ಕಡ್ಡಾಯವಾಗಿ ಕ್ರಮ ಜರುಗಿಸಲು ಸರ್ಕಾರ ಕಾನೂನು ರೂಪಿಸಬೇಕು. ಸಮರ್ಪಕ ಜಾರಿಗೆ ಕ್ರಮ ಕೈಗೊಳ್ಳಬೇಕು. | **ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ:** ಸುಳ್ಳು ಮಾಹಿತಿ ಮತ್ತು ವದಂತಿಗಳನ್ನು ತಡೆಯಲು ಸಂಬಂಧಿಸಿದ ಇಲಾಖೆಗಳಿಂದ ಅಧಿಕೃತ ಮಾಹಿತಿ ಪಡೆದು ಸ್ಪಷ್ಟೀಕರಣಗಳನ್ನು ಕಾಲಕಾಲಕ್ಕೆ ಬಿಡುಗಡೆ ಮಾಡಲಾಗುತ್ತಿದೆ.<br><br>**ಐಟಿಬಿಟಿ ಇಲಾಖೆ:** ಈ ಕುರಿತು ಅಂತಹ ಯಾವುದೇ ಪ್ರಕರಣಗಳು ಇಲಾಖೆಯಲ್ಲಿ ವರದಿಯಾಗಿರುವುದಿಲ್ಲ. ಒಂದು ವೇಳೆ ಪ್ರಕರಣಗಳು ದಾಖಲಾದಲ್ಲಿ ಕ್ರಮ ಕೈಗೊಳ್ಳಲಾಗುವುದು<br><br>**ಪೊಲೀಸ್ ಇಲಾಖೆ:**<br>• ಮಹಿಳಾ ಮತ್ತು ಮಕ್ಕಳ ದೌರ್ಜನ್ಯ ಪ್ರಕರಣಗಳ ಕುರಿತು ಸುಳ್ಳು ಮಾಹಿತಿ ಹರಡುತ್ತಿರುವವರ ವಿರುದ್ಧ ದೂರುಗಳನ್ನಾದರಿಸಿ ಪೊಲೀಸ್ ಇಲಾಖೆಯಿಂದ ಸೂಕ್ತ ಕಾಯ್ದೆಗಳಡಿಯಲ್ಲಿ ಕಾನೂನು ಕ್ರಮ ಕೈಕೊಳ್ಳಲಾಗುತ್ತಿದೆ. |
| 28. | ಪ್ರಾರಂಭದಲ್ಲಿ ಯಾವ ಪ್ರಕರಣ ಕುತೂಹಲಕಾರಿ ಪ್ರಕರಣವೆಂದು | **ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ:** ಪ್ರಕರಣಗಳ ಕುರಿತು ತೀರ್ಪುಗಳ ಸಾರಾಂಶ, ಘೋಷಿಸಿರುವ ಪರಿಹಾರ, ಆರೋಪಿಗಳಿಗೆ ವಿಧಿಸಿರುವ ಶಿಕ್ಷೆ, ಇತರೆ ಮಾಹಿತಿಯನ್ನು ಸಂಬಂಧಿಸಿದ |

| | | |
|---|---|---|
| | ಪ್ರಕಟಿಸಿ, ಆ ನಂತರ ಪ್ರಕರಣದಲ್ಲಿ ಅಂತ್ಯ ಹೇಗೆ ಆಯಿತು ಎಂಬುದನ್ನು ಪ್ರಕಟಿಸದೆ ಇರುವುದು ಸಮಂಜಸವಾಗಿರುವುದಿಲ್ಲ. ಯಾವ ಪ್ರಕರಣವನ್ನು, ಯಾವ ಮಾಧ್ಯಮ ಪ್ರಾರಂಭದಲ್ಲಿ ಪ್ರಕಟಿಸಿರುತ್ತದೋ, ಅದು ಅಂತ್ಯವಾದಾಗಲೂ ಅವರ ಅಂತಿಮ ತೀರ್ಪಿನಲ್ಲಿ ಶಿಕ್ಷೆಯಾಗಿದೆಯೇ ಅಥವಾ ಇಲ್ಲವೇ, ಸಂತ್ರಸ್ತೆಗೆ ಪರಿಹಾರ ಸಿಕ್ಕಿದೆಯೇ ಅಥವಾ ಇಲ್ಲವೇ ಎನ್ನುವುದರ ಬಗ್ಗೆ, ತಪ್ಪದೆ ಪ್ರಕಟಿಸುವಂತೆ ಕಡ್ಡಾಯಗೊಳಿಸಲು ನಿಯಮಾವಳಿಗಳನ್ನು ರೂಪಿಸುವುದು. | ಇಲಾಖೆಗಳು ಅಧಿಕೃತವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಒದಗಿಸಿದರೆ ಮಾಧ್ಯಮಗಳ ಮೂಲಕ ಪ್ರಕಟಣೆಗೆ ಕ್ರಮವಹಿಸಲಾಗುವುದು. |
| 29. | ಪ್ರತೀ ಪೊಲೀಸ್ ಠಾಣೆಗೆ ಬಂದು-ಹೋಗುವ ಪಿರ್ಯಾದಿದಾರರು ಹಾಗೂ ಪೊಲೀಸರ ಚಲನವಲನಗಳನ್ನು ಸಿ.ಸಿ.ಟಿ.ವಿ. ಕವರೇಜ್ ಒಳಪಡಿಸತಕ್ಕದ್ದು. ಯಾವುದಾದರೂ ಪೊಲೀಸರು ಅಥವಾ ಅದಕ್ಕೆ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳು ಪಿರ್ಯಾದನ್ನು ದಾಖಲು ಮಾಡಿಕೊಳ್ಳಲು ವಿಳಂಬ ಮಾಡಿದರೆ ಅಥವಾ ಅಸಡ್ಡೆ ತೋರಿದರೆ, ಅಂತಹ ಪ್ರಕರಣಗಳಲ್ಲಿ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಸಂಬಂಧಪಟ್ಟ | **ಪೊಲೀಸ್ ಇಲಾಖೆ:**<br>• ರಾಜ್ಯದಲ್ಲಿನ ಒಟ್ಟು 1052 ಪೊಲೀಸ್ ಠಾಣೆಗಳಲ್ಲಿದ್ದು, ಈಗಾಗಲೇ ಪ್ರತಿ ಠಾಣೆಯಲ್ಲಿಯೂ ಒಟ್ಟು 4 ಸಿಸಿಟಿವಿ ಕ್ಯಾಮೇರಾಗಳನ್ನು ಅಳವಡಿಸಲಾಗಿದೆ.<br>• ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ (ಅತ್ಯಾಚಾರ & ಪೋಕ್ಸೊ) ಪ್ರಕರಣಗಳನ್ನು ದಾಖಲಿಸುವಲ್ಲಿ ವಿಳಂಬ ಮಾಡುವ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಶಿಸ್ತಿನ ಕ್ರಮ ಕೈಕೊಳ್ಳಲಾಗುತ್ತಿದೆ. |

| | | |
|---|---|---|
| | ಪೊಲೀಸರ ಮೇಲೆ ಕೂಡಲೇ ಕ್ರಮ ಜರುಗಿಸುವಂತೆ ನಿಯಮಾವಳಿಗಳನ್ನು ರೂಪಿಸುವುದು. | |
| 30. | ನೊಂದವರು ಅಥವಾ ಅವರ ಹತ್ತಿರದ ಸಂಬಂಧಿಕರು ಅಥವಾ ಯಾರಾದರೂ ದೂರನ್ನು ನೀಡುವ ಪ್ರಕರಣಗಳಲ್ಲಿ ಕೂಡಲೇ ಪೊಲೀಸರು ಪ್ರಥಮ ವರ್ತಮಾನ ವರದಿ (ಎಫ್.ಐ.ಆರ್.)ಯನ್ನು ಪಿರ್ಯಾದಿದಾರರಿಗೆ ಒದಗಿಸತಕ್ಕದ್ದು. ಯಾವುದಾದರೂ ಕಾರಣದಿಂದ ಪಿರ್ಯಾದು ದಾಖಲಿಸಿಕೊಳ್ಳದಿದ್ದರೆ ಕೂಡಲೇ ಬರವಣಿಗೆಯಲ್ಲಿ ಯಾವ ಕಾರಣಕ್ಕೆ ಪಿರ್ಯಾದು ದಾಖಲಿಸಿಕೊಳ್ಳಲು ಆಗಿರುವುದಿಲ್ಲವೆಂದು ಹಿಂಬರಹವನ್ನು ಸಂಬಂಧಪಟ್ಟ ಠಾಣಾಧಿಕಾರಿಗಳು ನೀಡುವಂತಹ ಕ್ರಮವನ್ನು ಕಡ್ಡಾಯವಾಗಿ ನಿರ್ವಹಿಸಲು ಕಾನೂನು ರೂಪಿಸುವುದು. ಕಟ್ಟುನಿಟ್ಟಿನ ಜಾರಿಗೆ ಕ್ರಮ ವಹಿಸುವುದು. | **ಪೊಲೀಸ್ ಇಲಾಖೆ:**<br>• ರಾಜ್ಯದ ಎಲ್ಲ ಪೊಲೀಸ್ ಠಾಣೆಗಳಲ್ಲಿ ಮಹಿಳೆ ಮತ್ತು ಮಕ್ಕಳ ಪ್ರಕರಣಗಳನ್ನು ಆದ್ಯತೆಯ ಮೇರೆಗೆ ಪರಿಗಣಿಸಲಾಗುತ್ತಿದೆ. ಹಾಗೂ ಇಂತಹ ದೂರುಗಳ ಬಗ್ಗೆ ನೊಂದವರು, ಅವರ ಹತ್ತಿರದ ಸಂಬಂಧಿಕರು ಅಥವಾ ಯಾರೇ ಮಾಹಿತಿ ನೀಡಿದರೂ ತಕ್ಷಣ ಪ್ರಕರಣ (ಎಫ್.ಐ.ಆರ್) ದಾಖಲಿಸಿ ಕ್ರಮ ಕೈಗೊಳಲಾಗುತ್ತಿದೆ ಹಾಗೂ ಪ್ರತಿಯನ್ನು ಒದಗಿಸಲಾಗುತ್ತದೆ.<br>• ಅಸಂಜ್ಞೇಯ ಪ್ರಕರಣಗಳ ಬಗ್ಗೆ ಮಾಹಿತಿ ಬಂದಲ್ಲಿ ಪಿರ್ಯಾದಿದಾರರಿಗೆ ಸ್ವೀಕೃತಿ/ ಹಿಂಬರಹ ನೀಡಿ ನಂತರ ಮಾನ್ಯ ನ್ಯಾಯಾಲಯದ ಅನುಮತಿ ಪಡೆದು/ ಆದೇಶದಂತೆ ಕ್ರಮ ವಹಿಸಲಾಗುತ್ತಿದೆ. |
| 31. | ರಾಜ್ಯದಲ್ಲಿ ಸಾವಿರಾರು ಮಕ್ಕಳು, ಮಹಿಳೆಯರು ಪ್ರತಿ ವರ್ಷ ನಾಪತ್ತೆ ಹಾಗೂ ಅಪಹರಣಕ್ಕೆ ಒಳಗಾಗುತ್ತಿದ್ದು, ಅನೇಕ ಪ್ರಕರಣಗಳಲ್ಲಿ ನಾಪತ್ತೆಯಾದವರು ಮತ್ತು ಅಪಹರಣಕ್ಕೆ ಒಳಗಾದವರು | **ಪೊಲೀಸ್ ಇಲಾಖೆ:**<br>• ಮಹಿಳೆ ಮತ್ತು ಮಕ್ಕಳ ಕಾಣೆ ಪ್ರಕರಣಗಳನ್ನು ಆದ್ಯತೆಯ ಮೇರೆಗೆ ಪರಿಗಣಿಸಿ, ಕೂಡಲೇ ಎಫ್.ಐ.ಆರ್. ದಾಖಲಿಸಿ ತನಿಖೆ ಕೈಕೊಳ್ಳಲಾಗುತ್ತಿದೆ.<br>• ಮಹಿಳೆ ಮತ್ತು ಮಕ್ಕಳ ಕಾಣೆ ಪ್ರಕರಣಗಳನ್ನು ಪತ್ತೆ ಮಾಡಲು ಪ್ರತಿ ಪೊಲೀಸ್ ಠಾಣೆಯಲ್ಲಿ ವಿಶೇಷ ತಂಡಗಳನ್ನು ರಚಿಸಲಾಗಿದೆ. |

| | | |
|---|---|---|
| | ವರ್ಷಗಳಾದರೂ ಪತ್ತೆಯಾಗದಿರುವುದು ರಾಜ್ಯವ್ಯಾಪಿ ಎಲ್ಲಾ ಜಿಲ್ಲೆಗಳಲ್ಲಿ ಸಮಿತಿಯ ಗಮನಕ್ಕೆ ಬಂದಿರುತ್ತದೆ. ಹೇಬಿಯಸ್ ಕಾರ್ಪಸ್ ದಾಖಲಾದ ಪ್ರಕರಣಗಳಲ್ಲಿ ಮಾತ್ರ ಬಹುತೇಕ ಪ್ರಕರಣಗಳಲ್ಲಿ ನಾಪತ್ತೆಯಾದವರು/ಅಪಹರಣಕ್ಕೆ ಒಳಗಾದವರು ಪತ್ತೆಯಾಗುತ್ತಾರೆ. ಆದುದರಿಂದ ಅಂತಹ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಮೂರು ತಿಂಗಳೊಳಗೆ ಪತ್ತೆ ಮಾಡುವುದಾಗಬೇಕು. ಅಂತಹ ಜವಾಬ್ದಾರಿ ನಿರ್ವಹಿಸದ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲು ನಿಯಮಾವಳಿಗಳನ್ನು ರೂಪಿಸುವುದು. ಪತ್ತೆಯಾದವರನ್ನು ಸರಿಯಾಗಿ ನೋಡಿಕೊಳ್ಳಲು ಈಗಿರುವ ವ್ಯವಸ್ಥೆ ಸಾಲದಾಗಿದ್ದು, ವಸತಿ ಮತ್ತಿತರ ಸೌಲಭ್ಯಗಳನ್ನು ವಿಸ್ತರಿಸಬೇಕು. | • ಮಕ್ಕಳು ಕಾಣೆಯಾದ ಪ್ರಕರಣಗಳನ್ನು ಅಪಹರಣ ಪ್ರಕರಣಗಳೆಂದು ಪರಿಗಣಿಸಿ ಪ್ರಕರಣ ದಾಖಲಿಸಲಾಗುತ್ತಿದೆ.<br>• ಹೇಬಿಯಸ್ ಕಾರ್ಪಸ್ ದಾಖಲಾದ ಪ್ರಕರಣಗಳಲ್ಲಿ ಮಾತ್ರವಲ್ಲದೇ ಪ್ರತಿಯೊಂದು ಪ್ರಕರಣಗಳಲ್ಲೂ ಸಹ ಪ್ರಾಮಾಣಿಕ ಪ್ರಯತ್ನ ಮಾಡಿ ನಾಪತ್ತೆಯಾದವರು/ ಅಪಹರಣಕ್ಕೆ ಒಳಗಾದವರನ್ನು ಪತ್ತೆ ಮಾಡಲಾಗುತ್ತಿದೆ.<br>• ಪ್ರಧಾನ ಕಛೇರಿಯಿಂದ ಹೊರಡಿಸಿರುವ ಸುತ್ತೋಲೆ ಮತ್ತು ಸ್ಥಾಯಿ ಆದೇಶಗಳನ್ವಯ ಪತ್ತೆಹಚ್ಚಲು ಕ್ರಮ ಕೈಗೊಳ್ಳಲಾಗುತ್ತದೆ. |
| 32. | ನಾಪತ್ತೆಯಾದ ಹೆಣ್ಣುಮಕ್ಕಳನ್ನು ವ್ಯಭಿಚಾರ, ಇನ್ನಿತರೆ ಕೃತ್ಯಗಳಿಗೆ ಬಳಸುತ್ತಿದ್ದಾರೆ. ಅಂತಹವರುಗಳ ಮಾಹಿತಿ ಲಭ್ಯವಾಗಿರುವುದಿಲ್ಲ. ಅಂತಹವರನ್ನು ಪತ್ತೆಹಚ್ಚಲು ತನಿಖಾ ತಂಡಗಳು ಅನೇಕ ಸಂದರ್ಭಗಳಲ್ಲಿ ವಿಫಲವಾಗುತ್ತಿರುತ್ತವೆ. | **ಪೊಲೀಸ್ ಇಲಾಖೆ:**<br>• ಮಹಿಳೆ ಕಾಣೆ ಪ್ರಕರಣಗಳಲ್ಲಿ ಕಾಣೆಯಾದ ಮಹಿಳೆಯರನ್ನು ವೇಶ್ಯಾವಾಟಿಕೆ ಮತ್ತು ಇನ್ನಿತರ ಕೃತ್ಯಗಳಿಗೆ ಬಳಸುವುದನ್ನು ತಡೆಯಲು ಜಿಲ್ಲಾ ಮಟ್ಟದಲ್ಲಿ ವಿಶೇಷ ತಂಡವನ್ನು ರಚಿಸಲಾಗಿದೆ.<br>• ಮಹಿಳಾ ದೌರ್ಜನ್ಯ ಪ್ರಕರಣಗಳ ತನಿಖೆ ನಡೆಸುವ ತನಿಖಾಧಿಕಾರಿಗಳಿಗೆ ವಿಶೇಷ ಸಂವೇದನಾ ಕಾರ್ಯಾಗಾರಗಳನ್ನು ಏರ್ಪಡಿಸಿ ತರಬೇತಿ ನೀಡಲಾಗುತ್ತಿದೆ.<br>• ರಾಜ್ಯದ ಎಲ್ಲಾ ಪೊಲೀಸ್ ಘಟಕಗಳಲ್ಲಿ ಮಾನವ ಕಳ್ಳ ಸಾಗಾಣಿಕೆ ತಡೆ ಘಟಕ (Anti Human Trafficking Unit) ಕಾರ್ಯನಿರ್ವಹಿಸುತ್ತಿದೆ. |

| | | |
|---|---|---|
| | ಆದುದರಿಂದ, ನಾಪತ್ತೆ ಮತ್ತು ಅಪಹರಣ ಪ್ರಕರಣಗಳ ಬಗ್ಗೆ ಪತ್ತೆಹಚ್ಚಲು ಒಂದು ವಿಶೇಷ ಪೊಲೀಸ್ ದಳವನ್ನು ರೂಪಿಸಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಎಲ್ಲಾ ಜಿಲ್ಲೆಗಳಲ್ಲಿ ಈ ಕ್ರಮದ ಅಡಿಯಲ್ಲಿ ಮಹಿಳಾ ಪೊಲೀಸರ ವಿಶೇಷ ನೇಮಕಾತಿಯಾಗಬೇಕು. ಅವರಿಗೆ ವಿಶೇಷ ತರಬೇತಿ, ಅಂಗ ಸಂವೇದನಾ ಶಿಬಿರಗಳನ್ನು ಕಾಲಕಾಲಕ್ಕೆ ನೀಡಬೇಕು. ಪ್ರಗತಿ ಪರಿಶೀಲಿಸಬೇಕು. | |
| 33. | ನಾಪತ್ತೆ ಮತ್ತು ಅಪಹರಣ ಪ್ರಕರಣಗಳ ಬಗ್ಗೆ ಫಿರ್ಯಾದು ದಾಖಲಾದ ಕೂಡಲೇ ಅಂತಹವರ ಬಗ್ಗೆ ಮಾಹಿತಿಗಳನ್ನು ಟಿ.ವಿ. ರೇಡಿಯೋ ಮಾಧ್ಯಮಗಳಲ್ಲಿ ಬಿತ್ತರಿಸುವುದು ಮತ್ತು ಪತ್ರಿಕೆಗಳಲ್ಲಿ ಉಚಿತವಾಗಿ ಪ್ರಕಟಿಸುವಂತೆ ಸರ್ಕಾರ ಕಾನೂನಿಗೆ ಬದಲಾವಣೆ ತರುವುದು. | **ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ:** ನಾಪತ್ತೆ ಮತ್ತು ಅಪಹರಣ ಪ್ರಕರಣಗಳ ಬಗ್ಗೆ ಫಿರ್ಯಾದು ದಾಖಲಾದ ಕೂಡಲೇ ಮಾಧ್ಯಮಗಳ ಮೂಲಕ ಉಚಿತವಾಗಿ ಸುದ್ದಿ ಪ್ರಕಟಿಸಲು ಕೋರಿ ಸುದ್ದಿ, ಛಾಯಾಚಿತ್ರಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಆದರೆ, ಮಾಧ್ಯಮ ಸಂಸ್ಥೆಗಳು ಖಾಸಗಿಯಾಗಿ, ಸ್ವತಂತ್ರವಾಗಿ ಕಾರ್ಯನಿರ್ವಹಿಸುವುದರಿಂದ ರಾಜ್ಯಮಟ್ಟದ ವಾಹಿನಿಗಳು, ಪತ್ರಿಕೆಗಳಲ್ಲಿ ಪ್ರಕಟಿಸಲು ಜಾಹೀರಾತು ನೀಡಬೇಕಾಗುತ್ತದೆ. ಜಾಹೀರಾತು ಪ್ರಕಟಣೆಯ ಅಂಶಗಳು ಹಾಗೂ ವೆಚ್ಚವನ್ನು ಸಂಬಂಧಿಸಿದ ಇಲಾಖೆಯ ಮೂಲಕ ಪಾವತಿಸಲು ನಿರ್ದೇಶನ ಅಥವಾ ಕಾನೂನು ರೂಪಿಸುವ ಅಗತ್ಯವಿದೆ.<br>**ಪೊಲೀಸ್ ಇಲಾಖೆ:**<br>• ಮಹಿಳೆ ಕಾಣೆ ಪ್ರಕರಣಗಳಲ್ಲಿ ಕಾಣೆಯಾದವರ ಬಗ್ಗೆ ವಿವರಗಳನ್ನೊಳಗೊಂಡ ಪ್ರಕಟಣೆಗಳನ್ನು ವೃತ್ತ ಪತ್ರಿಕೆಗಳಲ್ಲಿ ಹಾಗೂ ಆಕಾಶವಾಣಿ ಮುಖಾಂತರ ಉಚಿತವಾಗಿ ಪ್ರಕಟಿಸಲಾಗುತ್ತಿದೆ.<br>• ಆದಾಗ್ಯೂ ಕಾನೂನು ತಿದ್ದುಪಡಿ ತರುವ ನಿಟ್ಟಿಯಲ್ಲಿ ಸರ್ಕಾರ ಕ್ರಮ ಕೈಗೊಳಬೇಕು. |
| 34. | ನಾಪತ್ತೆ ಮತ್ತು ಅಪಹರಣಕ್ಕೆ ಒಳಗಾದಂತಹವರನ್ನು ಶೀಘ್ರಗತಿಯಲ್ಲಿ ಪತ್ತೆ ಹಚ್ಚುವಂತಹ, ಅತಿ ಹೆಚ್ಚು ಎಂದರೆ | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ** |

| | | |
|---|---|---|
| | ಮೂರು ತಿಂಗಳ ಅವಧಿಯ ಒಳಗೆ ಪತ್ತೆ ಮಾಡುವುದು. ಇಂತಹ ಪ್ರಕರಣಗಳಲ್ಲಿ ಲೋಪವೆಸಗುವಂತಹ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಿನ ಕ್ರಮ ಜರುಗಿಸುವಂತೆ ಕಾನೂನು ರೂಪಿಸುವುದು. ಪತ್ತೆಯಾಗಿ ಬಂದ ಮಹಿಳೆಯರು ಮತ್ತು ಮಕ್ಕಳನ್ನು ಕುಟುಂಬದವರು ನಿರಾಕರಿಸದಂತೆ ಮನ ಒಲಿಸುವ ಕೌನ್ಸೆಲಿಂಗ್ ಸೆಂಟರ್‌ಗಳನ್ನು ರಚಿಸಬೇಕು. ಕೆಲವು ಪ್ರಕರಣಗಳಿಗಾಗಿ ಪುನರ್ವಸತಿ ವ್ಯವಸ್ಥೆ ಕಲ್ಪಿಸಬೇಕು. | ಪತ್ತೆಯಾಗಿ ಬಂದ ಮಹಿಳೆಯರು ಮತ್ತು ಮಕ್ಕಳನ್ನು ಕುಟುಂಬದವರು ನಿರಾಕರಿಸದಂತೆ ಮನ ಒಲಿಸುವ ಸಾಂತ್ವನ (ಕೌಟುಂಬಿಕ ಸಮಾಲೋಚನಾ ಕೇಂದ್ರಗಳು) ಹಾಗೂ ಒನ್ ಸ್ಟಾಪ್ ಸೆಂಟರ್ ಕೇಂದ್ರಗಳಲ್ಲಿ ಸೂಕ್ತ ಸಮಾಲೋಚನ ಕೈಗೊಂಡು ಪುನರ್ವಸತಿ ಕಲ್ಪಿಸಲಾಗುತ್ತಿದೆ.<br>ಶಕ್ತಿ ಸದನ ಕೇಂದ್ರದಲ್ಲಿ (ಸ್ವಾಧಾರ ಗೃಹ ಹಾಗೂ ಉಜ್ವಲ) ಪತ್ತೆಯಾಗಿ ಬಂದ ಮಹಿಳೆಯರು ಮತ್ತು ಮಕ್ಕಳನ್ನು ಪುನರ್ವಸತಿ ವ್ಯವಸ್ಥೆ ಕಲ್ಪಿಸಲಾಗುತ್ತಿದೆ.<br><br>ಇಲಾಖಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ದಾಖಲಾಗಿರುವ ಮಕ್ಕಳು ಓಡಿಹೋದ ಸಂದರ್ಭದಲ್ಲಿ ಪತ್ತೆಗಾಗಿ ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ಎಫ್.ಐ.ಆರ್‌ನ್ನು ದಾಖಲಿಸಲಾಗುತ್ತದೆ. ಮಕ್ಕಳು ಪತ್ತೆಯಾದ ನಂತರದಲ್ಲಿ ಸಂಸ್ಥೆಗೆ ಪುನರ್ ದಾಖಲಿಸಲು ಕ್ರಮವಹಿಸಲಾಗುತ್ತಿದೆ.<br><br>**ಕಾಣೆಯಾದ** ಮಕ್ಕಳ ಕುರಿತು ಪ್ರತಿ ತಿಂಗಳು ಜಿಲ್ಲಾಮಟ್ಟದಲ್ಲಿ **ಕಾಣೆಯಾದ ಮಕ್ಕಳ** ಪಾಲಕರು ಮಕ್ಕಳ ಅಧೀಕ್ಷಕರು, ಎಸ್‌ಜೆಪಿಯು, Member Secretary DSLA, pyara Medical & CWC ಸದಸ್ಯರನ್ನು ಸೇರಿಸಿ ಸಭೆ ನಡೆಸಿ ವರದಿಯನ್ನು KSLA ಗೆ ಸಲ್ಲಿಸಲು ಕರ್ನಾಟಕ ಉಚ್ಛ ನ್ಯಾಯಾಲಯ ನಿವೃತ್ತ ನ್ಯಾಯಾಧೀಶರಾದ ಶ್ರೀ ಜಸ್ಟೀಸ್ ಸುಭಾಷ್ **ಅಡಿ** ರವರ ಅಧ್ಯಕ್ಷತೆಯಲ್ಲಿ ಸಮಿತಿ ಸಭೆಯನ್ನು ನಡೆಸಲಾಗುತ್ತಿದೆ. ಸದರಿ ಸಭೆಗಳಲ್ಲಿ ಎಸ್‌ಜೆಪಿಯು ಯಿಂದ ಕಾಣೆಯಾದ /ಪತ್ತೆಯಾದ ಮಕ್ಕಳ ಕುರಿತು ಹಾಗೂ ಪತ್ತೆಯಾಗದ ಬಾಕಿ ಇರುವ ಮಕ್ಕಳ ಕುರಿತು ಮಾಹಿತಿಯನ್ನು ಪಡೆಯಲಾಗುತ್ತಿದೆ. ಕಾಣೆಯಾದ / ಪತ್ತೆಯಾದ ಮಕ್ಕಳಿಗೆ ಪಾಲನೆ ಮತ್ತು ಪೋಷಣೆ ಅಗತ್ಯ ವಿರುವ ಮಕ್ಕಳಿಗೆ ಮಕ್ಕಳ ಪಾಲನಾ ಸಂಸ್ಥೆಗೆ ದಾಖಲಿಸಿಕೊಂಡು ಪಾಲನೆ ಮತ್ತು ಪೋಷಣೆ ನೀಡಿ ಆ ಮಕ್ಕಳಿಗೆ ಆಪ್ತಸಮಾಲೋಚನೆಯನ್ನು ನೀಡಲಾಗುತ್ತಿದೆ.<br><br>**ಪೊಲೀಸ್ ಇಲಾಖೆ**:<br>• ಮಹಿಳೆ ಮತ್ತು ಮಕ್ಕಳ ಕಾಣೆ ಪ್ರಕರಣಗಳನ್ನು ಪತ್ತೆ ಮಾಡಲು ಪ್ರತಿ ಪೊಲೀಸ್ ಠಾಣೆಯಲ್ಲಿ ವಿಶೇಷ ಘಟಕಗಳನ್ನು ರಚಿಸಲಾಗಿದೆ.<br>• ನಾಪತ್ತೆ ಹಾಗೂ ಅಪಹರಣದಂತಹ ಪ್ರಕರಣಗಳನ್ನು ತನಿಖೆ ಮಾಡುವಲ್ಲಿ ನಿರ್ಲಕ್ಷ್ಯ ಅಥವಾ ಲೋಪವೆಸಗುವ ಅಧಿಕಾರಿಗಳ ವಿರುದ್ಧ ಇಲಾಖಾ ಶಿಸ್ತಿನ ಕ್ರಮ ಕೈಕೊಳ್ಳಲಾಗುತ್ತಿದೆ. |

| | | |
|---|---|---|
| | | • 3 ತಿಂಗಳ ಅವಧಿಯಲ್ಲಿ ಪತ್ತೆಯಾಗದ ಪ್ರಕರಣಗಳನ್ನು ಮಾನವ ಕಳ್ಳ ಸಾಗಾಣಿಕೆ ತಡೆ ಘಟಕ (Anti Human Trafficking Unit) ಗೆ ವರ್ಗಾವಣೆ ಮಾಡಿ ಪತ್ತೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.<br>• ಮಹಿಳೆ ಅಥವಾ ಮಕ್ಕಳ ಕಾಣೆ ಪ್ರಕರಣಗಳು ಪತ್ತೆಯಾದ ನಂತರ ಅವರಿಗೆ ಮಹಿಳಾ ಮತ್ತು ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳಿಂದ ಆಪ್ತ ಸಮಾಲೋಚನೆ ನಡೆಸಲಾಗುತ್ತಿದೆ.<br>• ರಾಜ್ಯ ಎಲ್ಲಾ ಪೊಲೀಸ್ ಠಾಣೆಗಳಲ್ಲಿ "Women Help Desk" ಸೃಜಿಸಿ ನೊಂದ/ ಸಂತ್ರಸ್ತ ಮಹಿಳೆ ಮತ್ತು ಮಕ್ಕಳ ಸಮಾಲೋಚನೆಗೆ ಸ್ಥಾಪಿಸಲಾಗಿದೆ. |
| 35. | ಪೊಲೀಸ್ ಠಾಣೆಯಲ್ಲಿ ದಾಖಲಾಗುವ ಎಲ್ಲಾ ಮೊಕದ್ದಮೆಗಳಲ್ಲಿ ತನಿಖೆಯನ್ನು ವಿಳಂಬ ಮಾಡದೆ ಕಾನೂನುಬದ್ಧವಾಗಿ ಅವಧಿಯ ಒಳಗೆ ತನಿಖೆ ಪೂರೈಸಿ, ಅಂತಿಮ ವರದಿಯನ್ನು (ಚಾರ್ಜ್ ಶೀಟ್ ಅಥವಾ "ಬಿ" ವರದಿ) ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು. ಕಾನೂನು ವಿರುದ್ಧವಾಗಿ ತನಿಖೆ ವಿಳಂಬ ಮಾಡುವಂತಹ ಅಧಿಕಾರಿಗಳ ಹೊಣೆಗಾರಿಕೆಗೆ ಕಾನೂನು ರೂಪಿಸುವುದು. ಜಾರಿಯ ಕುರಿತು ಕಾಲಕಾಲಕ್ಕೆ ವರದಿ ಸಲ್ಲಿಸುವುದು ಕಡ್ಡಾಯ ಮಾಡಬೇಕು. | **ಪೊಲೀಸ್ ಇಲಾಖೆ:**<br>• ಪ್ರತಿ ಪೊಲೀಸ್ ಠಾಣೆಯಲ್ಲಿ ದಾಖಲಾಗುವ ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ (ಅತ್ಯಾಚಾರ & ಪೋಕ್ಸೊ) ಪ್ರಕರಣಗಳಲ್ಲಿ ತ್ವರಿತವಾಗಿ ತನಿಖೆ ಕೈಕೊಂಡು, ಕಡ್ಡಾಯವಾಗಿ 60 ದಿನಗಳ ಒಳಗಾಗಿ ತನಿಖೆಯನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗುತ್ತಿದೆ.<br>• ತನಿಖೆಯಲ್ಲಿ ಅನಗತ್ಯ ವಿಳಂಬ ಮಾಡುವ ತನಿಖಾಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಕೈಕೊಳ್ಳಲಾಗುತ್ತಿದೆ. |
| 36. | ಸಂತ್ರಸ್ತರ ಹೇಳಿಕೆಗಳನ್ನು ವಿಳಂಬ ಮಾಡದೆ ಸಿಆರ್‌ಪಿಸಿ ಕಲಂ 154 ರಡಿಯಲ್ಲಿ ನ್ಯಾಯಾಧೀಶರ ಮುಂದೆ ಮಾಡಿಸತಕ್ಕದ್ದು. ತನಿಖೆಯನ್ನು ನಿಗದಿತ ಅವಧಿಯಲ್ಲಿ ಕಡ್ಡಾಯವಾಗಿ | **ಪೊಲೀಸ್ ಇಲಾಖೆ:**<br>• ಮಹಿಳಾ ಮತ್ತು ಮಕ್ಕಳ ದೌರ್ಜನ್ಯ ಪ್ರಕರಣಗಳಲ್ಲಿ ನೊಂದವರ ಹೇಳಿಕೆಯನ್ನು ವಿಳಂಬವಿಲ್ಲದೆ ಮಾನ್ಯ ನ್ಯಾಯಾಧೀಶರ ಮುಂದೆ ಮಾಡಿಸಲಾಗುತ್ತಿದೆ.<br>• ಪ್ರಕರಣದ ತನಿಖೆಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಲಾಗುತ್ತಿದೆ. |

| | | |
|---|---|---|
| | ಪೂರ್ಣಗೊಳಿಸುವಂತೆ ಮಾಡಲು ಮತ್ತು ತಪ್ಪಿತಸ್ಥ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲು ಕಾನೂನು ರೂಪಿಸುವುದು. | |
| 37. | ಮಹಿಳೆ ಮತ್ತು ಮಕ್ಕಳ ದೌರ್ಜನ್ಯ ಪ್ರಕರಣಗಳಲ್ಲಿ ವೈದ್ಯಾಧಿಕಾರಿಗಳ ಮತ್ತು ಎಫ್.ಎಸ್.ಎಲ್.ನ ವರದಿಯನ್ನು ವಿಳಂಬ ಮಾಡದೆ ಒಂದೆರಡು ವಾರಗಳಲ್ಲಿ ಕೊಡಲು ಸಂಬಂಧಪಟ್ಟ ಇಲಾಖೆಗಳು ಕ್ರಮ ಜರುಗಿಸುವುದು, ಸುಸಜ್ಜಿತ ಎಫ್.ಎಸ್.ಎಲ್. ಪ್ರಯೋಗಾಲಯಗಳನ್ನು ರಾಜ್ಯದ ಪ್ರತಿ ಜಿಲ್ಲೆಯಲ್ಲಿಯೂ ತೆರೆಯುವುದು. ಆ ಪ್ರಯೋಗಾಲಯಗಳಲ್ಲಿ ವೈದ್ಯರು ಮತ್ತು ಇತರೆ ಸಿಬ್ಬಂದಿ ವರ್ಗದವರ ಹುದ್ದೆಗಳನ್ನು ಕಡ್ಡಾಯವಾಗಿ ನೇಮಕ ಮಾಡಲು ಕ್ರಮ ಜರುಗಿಸುವುದು. | **ಪೊಲೀಸ್ ಇಲಾಖೆ:**<br>• ರಾಜ್ಯದಲ್ಲಿ ಎಫ್.ಎಸ್.ಎಲ್ ಘಟಕವನ್ನು ವಿಸ್ತರಿಸಿ ವಲಯವಾರು ಆರ್.ಎಫ್.ಎಸ್.ಎಲ್ ಪ್ರಯೋಗಾಲಯಗಳನ್ನು ಪ್ರಾರಂಭಿಸಿದ್ದು ಕಾರ್ಯನಿರ್ವಹಿಸುತ್ತಿದೆ.<br>• ವರದಿಗಳನ್ನು ತ್ವರಿತವಾಗಿ ಪಡೆಯಲು ಕ್ರಮ ಕೈಗೊಳ್ಳಲಾಗುತ್ತದೆ.<br><br>**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ :**<br><br>ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ವೈದ್ಯಕೀಯ ಅಭಿಪ್ರಾಯ (Medical Opinion/ Medical Report) ನೀಡುವಲ್ಲಿ ವೈದ್ಯಾಧಿಕಾರಿಗಳು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಈಗಾಗಲೆ ಸುತ್ತೋಲೆ ಹೊರಡಿಸಲಾಗಿದೆ.<br>Circular pertaining to the steps to be followed by Hospitals and Medical Practitioners During the Medical Examination of Sexual Assault/Rape Victims has already been issued.<br>The medical examination of the victim of rape is to be conducted only by, or under the supervision of a female registered medical practitioner.<br>The Hospitals or the medical practitioners have to provide computer generated or at least legibly written wound certificate/s or medical report/s. (JD-MEDICAL) |
| 38. | ಪ್ರಕರಣ ದಾಖಲಾದ ನಂತರ ತನಿಖೆ ಪೂರೈಸಿ, ಗರಿಷ್ಠ 90 ದಿನಗಳ ಒಳಗೆ ಅತ್ಯಾಚಾರ, ದೌರ್ಜನ್ಯ ಮತ್ತು ಇತರೆ ಪ್ರಕರಣಗಳಲ್ಲಿ ಚಾರ್ಜ್ ಶೀಟನ್ನು ನ್ಯಾಯಾಲಯಕ್ಕೆ ಸಲ್ಲಿಸುವಂತೆ ಕ್ರಮ ಜರುಗಿಸತಕ್ಕದ್ದು. | **ಪೊಲೀಸ್ ಇಲಾಖೆ:**<br>• ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ (ಅತ್ಯಾಚಾರ & ಪೋಕ್ಸೊ) ಪ್ರಕರಣಗಳಲ್ಲಿ ತ್ವರಿತವಾಗಿ ತನಿಖೆ ಕೈಕೊಂಡು, ಕಡ್ಡಾಯವಾಗಿ 60 ದಿನಗಳ ಒಳಗಡೆ ತನಿಖೆಯನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗುತ್ತಿದೆ<br>• ವೈಧ್ಯಾಧಿಕಾರಿಗಳ ಅಭಿಪ್ರಾಯ ವರದಿ/ ಎಫ್.ಎಸ್.ಎಲ್ ವರದಿಗಳು ಬರುವದು ಕಾರಣಾಂತರಗಳಿಂದ ವಿಳಂಬವಾದಲ್ಲಿ ಅಂತಹ ಪ್ರಕರಣಗಳಲ್ಲಿ ಮಾನ್ಯ |

| | | |
|---|---|---|
| | | ನ್ಯಾಯಾಲಯದ ಆದೇಶ ಪಡೆದು 90 ದಿನಗಳೊಳಗಾಗಿ ತನಿಖೆಯನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗುತ್ತಿದೆ. |
| 39. | ಪೋಕ್ಸೋ ಅಪರಾಧವೆಸಗಿರುವ ಪ್ರಕರಣಗಳಲ್ಲಿ ಒಂದು ವರ್ಷದ ಒಳಗೆ ನ್ಯಾಯಾಲಯಗಳು ಇತ್ಯರ್ಥ ಮಾಡುವಂತೆ ಸರ್ಕಾರ ಕ್ರಮ ಜರುಗಿಸತಕ್ಕದ್ದು. ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ವಿಚಾರಣೆ ಮಾಡಲು ವಿಶೇಷ ನ್ಯಾಯಾಲಯಗಳನ್ನು ಸ್ಥಾಪನೆ ಮಾಡುವುದು. ಅಂತಹ ವಿಶೇಷ ನ್ಯಾಯಾಲಯಗಳಲ್ಲಿ ಇರುವ ಪೋಕ್ಸೋ ಪ್ರಕರಣಗಳನ್ನು ಕಾನೂನಿನ ರೀತ್ಯಾ ಒಂದು ವರ್ಷದ ಒಳಗೆ ಇತ್ಯರ್ಥವಾಗುವಂತೆ ಕ್ರಮ ಜರುಗಿಸತಕ್ಕದ್ದು. ವಿಳಂಬವಾದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಹೊಣೆಗಾರರನ್ನಾಗಿಸಲು ಕ್ರಮವಹಿಸುವುದು. | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**<br><br>ಪೋಕ್ಸೋ ಪ್ರಕರಣಗಳ ವಿಚಾರಣೆಗೆ ಜಿಲ್ಲಾಮಟ್ಟದಲ್ಲಿ ವಿಶೇಷ ಪೋಕ್ಸೋ ನ್ಯಾಯಾಲಯಗಳು ಇರುತ್ತವೆ. ಪೋಕ್ಸೋ ಪ್ರಕರಣಗಳನ್ನು 90 ದಿನಗಳಲ್ಲಿ ತನಿಖೆ ಮುಗಿಸಿ ಚಾರ್ಜ್ ಶೀಟ್‌ನ್ನು ಸಲ್ಲಿಸಬೇಕೆಂದು ಮತ್ತು ಚಾರ್ಜ್ ಶೀಟ್ ಸಲ್ಲಿಕೆಯಾದ 60 ದಿನಗಳಲ್ಲಿ ವಿಚಾರಣೆಯನ್ನು ಮುಕ್ತಾಯಗೊಳಿಸಬೇಕೆಂದಿದೆ. |
| 40. | ಅತ್ಯಾಚಾರ ಪ್ರಕರಣಗಳಲ್ಲಿ 90 ದಿನಗಳ ಒಳಗೆ ಚಾರ್ಜ್ ಶೀಟ್ (ಆರೋಪ ಪಟ್ಟಿ) ಸಲ್ಲಿಸತಕ್ಕದ್ದು. ಚಾರ್ಜ್‌ಶೀಟ್ ಹಾಕಿದ ದಿನದಿಂದ 60 ದಿನಗಳ ಒಳಗೆ ವಿಚಾರಣೆ ಮುಗಿದು ತೀರ್ಪು ಬರುವಂತೆ ಮಾಡುವುದು. ಅದೇ ರೀತಿ ಇನ್ನಿತರೆ ಪ್ರಕರಣಗಳಲ್ಲಿ ಅಂದರೆ ವರದಕ್ಷಿಣೆ, ಅಪಹರಣ. | **ಪೊಲೀಸ್ ಇಲಾಖೆ:**<br><br>ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ (ಅತ್ಯಾಚಾರ & ಪೋಕ್ಸೊ) ಪ್ರಕರಣಗಳಲ್ಲಿ ತ್ವರಿತವಾಗಿ ತನಿಖೆ ಕೈಕೊಂಡು, ಕಡ್ಡಾಯವಾಗಿ 60 ದಿನಗಳ ಒಳಗಡೆ ತನಿಖೆಯನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗುತ್ತಿದೆ |

| | | |
|---|---|---|
| | ಹೆಣ್ಣಿನ ಮೇಲಿನ ದೌರ್ಜನ್ಯ, ಕೌಟುಂಬಿಕ ಹಿಂಸೆ, ಮುಂತಾದ ಪ್ರಕರಣಗಳನ್ನು ಶೀಘ್ರಗತಿಯಲ್ಲಿ ಇತ್ಯರ್ಥವಾಗುವಂತಹ ವ್ಯವಸ್ಥೆ ಜಾರಿಗೊಳಿಸಲು ಸರ್ಕಾರ ಕ್ರಮ ಜರುಗಿಸತಕ್ಕದ್ದು. | |
| 41. | ಕೌಟುಂಬಿಕ ಹಿಂಸಾಚಾರ ತಡೆ ಕಾಯ್ದೆಯ ಸಮರ್ಪಕ ಜಾರಿಗೆ ರಕ್ಷಣಾಧಿಕಾರಿಗಳ ಕೊರತೆ ಇದ್ದು, ನೇಮಕಕ್ಕೆ ಶೀಘ್ರ ಕ್ರಮ ಕೈಗೊಳ್ಳಬೇಕು. | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**<br><br>ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ ಅಡಿ, ತಾಲ್ಲೂಕು ಮಟ್ಟದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನು ಹಾಗೂ ಜಿಲ್ಲಾ ಉಪ ನಿರ್ದೇಶಕರನ್ನು ಸಂರಕ್ಷಣಾಧಿಕಾರಿಗಳೆಂದು ಹೆಚ್ಚುವರಿಯಾಗಿ ನೇಮಿಸಲಾಗಿದೆ. ಇದಲ್ಲದೆ, 47 ಪ್ರತ್ಯೇಕ ಸಂರಕ್ಷಣಾಧಿಕಾರಿ ಹುದ್ದೆಗಳು ಮಂಜೂರಾಗಿರುತ್ತದೆ. ಹಂತ ಹಂತವಾಗಿ ಪ್ರತ್ಯೇಕ ಸಂರಕ್ಷಣಾಧಿಕಾರಿಗಳ ಹುದ್ದೆಗಳನ್ನು ಸೃಜನೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. |
| 42. | ನ್ಯಾಯಾಲಯದ ವಿಚಾರಣೆಯಲ್ಲಿ ಹಾಸ್ಟೈಲ್ (ಪ್ರತಿಕೂಲ) ಆಗುವ ಸಂತ್ರಸ್ತೆಯರು ಹಾಗೂ ಇನ್ನಿತರ ಸಾಕ್ಷಿಗಳ ಮೇಲೆ ಕಡ್ಡಾಯವಾಗಿ ಕಾನೂನು ರೀತ್ಯಾ ಪರ್ಜೂರಿ ಪ್ರಕರಣಗಳನ್ನು ದಾಖಲಿಸುವಂತಹ ವ್ಯವಸ್ಥೆ ಜಾರಿಯಾಗಲು ಕ್ರಮ ಜರುಗಿಸುವುದು, ಪರ್ಜೂರಿ ಕೇಸು ದಾಖಲಿಸಲು ವಿಫಲರಾದ ಸಂಬಂಧಿಸಿದ ವಿಚಾರಣಾಧಿಕಾರಿ ಮತ್ತು ಪ್ರಾಸಿಕ್ಯೂಟರ್ಸ್ ಗಳನ್ನು ಜವಾಬ್ದಾರರನ್ನಾಗಿ ಮಾಡಲು ಕಾನೂನು ರೂಪಿಸುವುದು. ಇದರ ಜೊತೆಯೇ ಸಾಕ್ಷಿದಾರರ ರಕ್ಷಣೆಗಾಗಿ | **ಪೊಲೀಸ್ ಇಲಾಖೆ**:<br><br>• ಸಾಕ್ಷಿದಾರರು ಪ್ರಕರಣಗಳಲ್ಲಿ ಪ್ರತಿಕೂಲ ಸಾಕ್ಷಿಯಾಗದಂತೆ ತಿಳುವಳಿಕೆ ನೀಡಲಾಗುತ್ತಿದೆ.<br>• ಸಾಕ್ಷಿದಾರರಿಗೆ ಪ್ರಕರಣಗಳಲ್ಲಿ ಅಭಿಯೋಜಕರಿಂದ ಬ್ರೀಫಿಂಗ್ ಮಾಡಿಸಲಾಗುತ್ತಿದೆ.<br>• ಸಾಕ್ಷಿದಾರರ ರಕ್ಷಣೆಗಾಗಿ "(Witness Protection Scheme)" ಅಡಿಯಲ್ಲಿ ಅವಶ್ಯವೆಂದು ಕೋರಿದಲ್ಲಿ, ಪೊಲೀಸ್ ಇಲಾಖೆಯಿಂದ ರಕ್ಷಣೆ ನೀಡಲಾಗುತ್ತಿದೆ.<br><br>**ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ** :<br><br>ಮಾನ್ಯ ನ್ಯಾಯಾಲಯದಲ್ಲಿ ಪ್ರತಿಕೂಲ ಸಾಕ್ಷಿ ನುಡಿಯುವ ಸಾಕ್ಷಿದಾರರ ವಿರುದ್ಧ ಫರ್ಜೂರಿ ಪ್ರಕರಣಗಳನ್ನು ದಾಖಲಿಸಿಕೊಳ್ಳುವಂತೆ ಮಾನ್ಯ ನ್ಯಾಯಾಲಯಕ್ಕೆ ಮನವಿ ಮಾಡಲಾಗುತ್ತಿದೆ. ಫರ್ಜೂರಿ ಪ್ರಕರಣ ದಾಖಲಿಸಲು ವಿಫಲರಾದ ಅಭಿಯೋಜಕರನ್ನು ಜವಾಬ್ದಾರರನ್ನಾಗಿಸಲು ಕ್ರಮ ಕೈಗೊಳ್ಳಲಾಗುವುದು. ಅಭಿಯೋಜನಾ ಪ್ರಕರಣಗಳನ್ನು ನಡೆಸುವಾಗ Witness protection Scheme 2018<br>ರಲ್ಲಿರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗಿರುತ್ತದೆ. |

| | | |
|---|---|---|
| | (Witness Protection Act) ಕಾಯ್ದೆ ಜಾರಿಯಾಗಬೇಕು. | |
| 43. | ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಯುವ ದೌರ್ಜನ್ಯಗಳು, ಶೋಷಣೆ, ಅತ್ಯಾಚಾರ, ಇನ್ನಿತರ ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆ ಪ್ರಮಾಣ ರಾಜ್ಯದಲ್ಲೂ ಮತ್ತು ರಾಷ್ಟ್ರದಲ್ಲೂ ಅತ್ಯಂತ ಕಡಿಮೆ ಅಂದರೆ 3% ಇರುತ್ತದೆ. ಬಹುತೇಕ ಪ್ರಕರಣಗಳಲ್ಲಿ ಶಿಕ್ಷೆಯಾದರೆ ಜನರಿಗೆ ಭಯವುಂಟಾಗುತ್ತದೆ. ತಪ್ಪಿತಸ್ಥರಿಗೆ ಬಹುತೇಕ ಪ್ರಕರಣಗಳಲ್ಲಿ ಶಿಕ್ಷೆ ಆಗುವಂತೆ ತನಿಖಾಧಿಕಾರಿಗಳು, ಪ್ರಾಸಿಕ್ಯೂಟರ್ ಹಾಗೂ ಸಂಬಂಧಪಟ್ಟ ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ಡೆಪ್ಯೂಟಿ ಕಮೀಷನರ್ ಆಫ್ ಪೊಲೀಸ್ ಜವಾಬ್ದಾರರಾಗಲು ಕಾನೂನು ರೂಪಿಸಬೇಕು. ಶಿಕ್ಷೆ ಕನಿಷ್ಠ 50% ಪ್ರಕರಣಗಳಿಗಿಂತ ಕಡಿಮೆ ಆದಲ್ಲಿ ಆರೋಪಿಗಳ ಬಿಡುಗಡೆ 50% ಹೆಚ್ಚಾದರೆ, ಅದರ ಪೂರ್ಣ ಹೊಣೆ ತನಿಖಾಧಿಕಾರಿ, ಪ್ರಾಸಿಕ್ಯೂಟರ್ ಮತ್ತು ಸಂಬಂಧಪಟ್ಟ ಪೊಲೀಸ್ ಸೂಪರಿಂಟೆಂಡೆಂಟ್, ಡೆಪ್ಯೂಟಿ ಕಮೀಷನರ್ ಆಫ್ ಪೊಲೀಸ್ ಜವಾಬ್ದಾರರು ಎಂದು ಪರಿಗಣಿಸಿ | **ಪೊಲೀಸ್ ಇಲಾಖೆ:**<br>• ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ (ಅತ್ಯಾಚಾರ & ಪೋಕ್ಸೊ) ಪ್ರಕರಣಗಳನ್ನು ಆದ್ಯತೆಯ ಮೇರೆಗೆ ಪರಿಗಣಿಸಿ, ಪ್ರಕರಣ ದಾಖಲಿಸಿ, ತ್ವರಿತವಾಗಿ ತನಿಖೆ ಕೈಕೊಳ್ಳಲಾಗುತ್ತಿದೆ.<br>• ಪ್ರಕರಣಗಳಲ್ಲಿ ಗುಣಮಟ್ಟದ ತನಿಖೆ ನಡೆಸಿ, ಕಡ್ಡಾಯವಾಗಿ 60 ದಿನಗಳ ಒಳಗಡೆ ತನಿಖೆಯನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗುತ್ತಿದೆ.<br>• ನ್ಯಾಯಾಲಯದಲ್ಲಿ ಪ್ರಕರಣಗಳ ವಿಚಾರಣೆಯು ಸರಿಯಾದ ರೀತಿಯಲ್ಲಿ ನಡೆಯುತ್ತಿದೆ ಎಂಬುದರ ಬಗ್ಗೆ ಖಾತ್ರಿಪಡಿಸಿಕೊಳ್ಳಲು ಪ್ರತಿ ಠಾಣೆಯಲ್ಲಿಯು ಕೋರ್ಟ್ ಮಾನಿಟರಿಂಗ್ ಸೆಲ್ ಕಾರ್ಯನಿರ್ವಹಿಸುತ್ತಿದೆ.<br>• ನ್ಯಾಯಾಲಯದ ಪ್ರಕರಣಗಳ ಶಿಕ್ಷೆಯ ಪ್ರಮಾಣ ಉನ್ನತಿಗೊಳಿಸುವ ನಿಟ್ಟಿನಲ್ಲಿ ಪ್ರತಿ ಜಿಲ್ಲೆ/ ವಲಯ/ ರಾಜ್ಯ ಮಟ್ಟದ "Acquittal Review Committee" ರಚಿಸಿದ್ದು ಕಾರ್ಯನಿರ್ವಹಿಸುತ್ತಿದೆ. |

| | | |
|---|---|---|
| | ಕ್ರಮ ಜರುಗಿಸಲು ಕಾನೂನು ರೂಪಿಸುವುದು. | |
| 44. | ಆರೋಪಿಗಳು ಬಿಡುಗಡೆಯಾದ ಪ್ರಕರಣಗಳಲ್ಲಿ ಕಡ್ಡಾಯವಾಗಿ ಮೇಲ್ಮನವಿ (ಅಪೀಲ್) ದಾಖಲು ಮಾಡುವಂತಹ ಕ್ರಮ ಕೈಗೊಳ್ಳುವುದು. ವ್ಯತಿರಿಕ್ತವಾಗಿ ನಡೆದುಕೊಂಡ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ವ್ಯವಸ್ಥೆ ಕಲ್ಪಿಸುವುದು. | **ಪೊಲೀಸ್ ಇಲಾಖೆ:**<br><br>ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ (ಅತ್ಯಾಚಾರ & ಪೋಕ್ಸೊ) ಪ್ರಕರಣಗಳಲ್ಲಿ ಆರೋಪಿತರು ಬಿಡುಗಡೆಯಾದಾಗ ಹಿರಿಯ ಸರ್ಕಾರಿ ಅಭಿಯೋಜಕರ ಮುಖಾಂತರ ಮೇಲ್ಮನವಿ ಸಲ್ಲಿಸಲಾಗುತ್ತಿದೆ. |
| 45. | ಮಕ್ಕಳು ಮತ್ತು ಅಪ್ರಾಪ್ತರ ಮೇಲೆ ನಡೆಯುವ ಅತ್ಯಾಚಾರ, ದೌರ್ಜನ್ಯ, ಮುಂತಾದ ಪ್ರಕರಣಗಳಲ್ಲಿ ಆರೋಪಿಗಳಿಗೆ ಜಾಮೀನು ದೊರೆಯದಂತೆ ಪ್ರಾಸಿಕ್ಯೂಷನ್ ಇಲಾಖೆಯವರು ಹಾಗೂ ಪೊಲೀಸ್ ಇಲಾಖೆಯವರು ಕ್ರಮ ಜರುಗಿಸುವುದು. ಅಷ್ಟೇ ಅಲ್ಲದೆ ಜಾಮೀನು ಮೇಲೆ ಬಂದ ಆರೋಪಿಗಳು ಸಂತ್ರಸ್ತ ಅಥವಾ ಸಾಕ್ಷಿಗಳ ಮೇಲೆ ಒತ್ತಡ ತರುವುದನ್ನು ಗಮನಿಸಿ, ಅಂತಹವರ ಜಾಮೀನು ರದ್ದುಪಡಿಸಲು ಕ್ರಮ ಜರುಗಿಸುವಂತೆ ಸಂಬಂಧಿಸಿದ ಪೊಲೀಸರು ಕಡ್ಡಾಯವಾಗಿ ಕ್ರಮ ಜರುಗಿಸುವಂತೆ ಆಗಬೇಕು. ತಪ್ಪಿದಲ್ಲಿ ಶಿಕ್ಷೆಗೆ ಒಳಪಡುವಂತೆ ಕ್ರಮ ಕೈಗೊಳ್ಳಬೇಕು. | **ಪೊಲೀಸ್ ಇಲಾಖೆ:**<br><br>• ಮಹಿಳೆ ಮತ್ತು ಅಪ್ರಾಪ್ತರ ಮೇಲೆ ನಡೆಯುವ ಅತ್ಯಾಚಾರ ಪೋಕ್ಸೊ ಪ್ರಕರಣಗಳಲ್ಲಿ ಆರೋಪಿತರಿಗೆ ಜಾಮೀನು ದೊರೆಯದಂತೆ, ತನಿಖೆಯ ಕಾಲಕ್ಕೆ ವೈಜ್ಞಾನಿಕ ಕ್ರಮಗಳನ್ನು ಅನುಸರಿಸಿ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ, ಅವುಗಳ ಆಧಾರದ ಮೇಲೆ ಸರ್ಕಾರಿ ಅಭಿಯೋಜಕರ ಮುಖಾಂತರ ಮಾನ್ಯ ನ್ಯಾಯಾಲಯಕ್ಕೆ ಆಕ್ಷೇಪಣೆ ಸಲ್ಲಿಸಲಾಗುತ್ತಿದೆ.<br>• ಆರೋಪಿತರು ಜಾಮೀನು ಪಡೆದು ಬಂದ ಮೇಲೆ ಸಂತ್ರಸ್ಥರ ಅಥವಾ ಸಾಕ್ಷಿದಾರರನ್ನು ಹೆದರಿಸುವುದು ಅಥವಾ ಅವರ ಮೇಲೆ ಒತ್ತಡ ಹೇರುವುದು ಕಂಡುಬಂದಲ್ಲಿ ಅಂತಹವರ ಜಾಮೀನು ರದ್ದುಪಡಿಸಲು ಸೂಕ್ತ ಕಾನೂನಿನಡಿ ಕ್ರಮ ಕೈಕೊಳ್ಳಲಾಗುತ್ತಿದೆ.<br><br>**ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ:**<br><br>ಮಕ್ಕಳು ಮತ್ತು ಅಪ್ರಾಪ್ತರ ಮೇಲೆ ನಡೆಯುವ ಅತ್ಯಾಚಾರ, ದೌರ್ಜನ್ಯ ಮುಂತಾಧ ಪ್ರಕರಣಗಳಲ್ಲಿ ಆರೋಪಿಗಳಿಗೆ ಜಾಮೀನು ದೊರೆಯದಂತೆ ಪೊಲೀಸ್ ಅಧಿಕಾರಿಗಳಿಂದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಪಡೆದುಕೊಂಡು ಸೂಕ್ತ ತಕರಾರನ್ನು ಸಲ್ಲಿಸಿ, ಪರಿಣಾಮಕಾರಿಯಾಗಿ ವಾದವನ್ನು ಮಂಡಿಸಲಾಗುತ್ತಿದೆ. ಆರೋಪಿಗಳು ಸಾಕ್ಷಿಗಳ ಅಥವಾ ಸಂತ್ರಸ್ಥರ ಮೇಲೆ ಒತ್ತಡ ತರುವಂತಹ ಪ್ರಕರಣಗಳು ಗಮನಕ್ಕೆ ಬಂದ ತಕ್ಷಣದಲ್ಲಿ ಆರೋಪಿಗಳ ಜಾಮೀನು ಅರ್ಜಿಯನ್ನು ವಜಾಗೊಳಿಸಲು ಕ್ರಮ ಕೈಗೊಳ್ಳಲಾಗುವುದು. |

| | | |
|---|---|---|
| 46. | ಸಿಆರ್‌ಪಿಸಿ ಕಲಂ 357-ಎ ಅಡಿ ಸಂತ್ರಸ್ತೆಗೆ ನ್ಯಾಯಾಲಯವು ನೀಡುವ ಪರಿಹಾರ ನ್ಯಾಯಾಲಯಗಳು ತೀರ್ಪು ನೀಡುವ ಸಂದರ್ಭದಲ್ಲಿ ಪ್ರಕಟಿಸುವುದನ್ನು ಮುಂದುವರಿಸಬೇಕು. ಜೊತೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ವಿಶೇಷವಾಗಿ ಸಂತ್ರಸ್ತರ ಪರಿಹಾರ ನಿಧಿ ಯೋಜನೆಗಳ ಅಡಿಯಲ್ಲಿ ಸ್ಥಾಪಿಸಲಾಗಿರುವ ಕೇಂದ್ರದ ನಿರ್ಭಯ ನಿಧಿ. ರಾಜ್ಯದ ಸ್ಥೈರ್ಯ ನಿಧಿ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ದೌರ್ಜನ್ಯಗಳ ಪರಿಹಾರ ಮುಂತಾದ ಯೋಜನೆಗಳ ಅಡಿಯಲ್ಲಿ ನಿಗದಿ ಮಾಡಿರುವ ಪರಿಹಾರ ನೀಡುವಂತಹ ಅಧಿಕಾರವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಬದಲು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿ, ಆ ಸಮಿತಿಯ ಸದಸ್ಯರಾಗಿ ಸಂಬಂಧಿಸಿದ ಪೊಲೀಸ್ ಸೂಪರಿಂಟೆಂಡೆಂಟ್. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಆರೋಗ್ಯಾಧಿಕಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**<br><br>ಸ್ಥೈರ್ಯ ನಿಧಿ ಯೋಜನೆಯನ್ನು ಸ್ಥಗಿತಗೊಳಿಸಲಾಗಿದ್ದು, ದೌರ್ಜನ್ಯಗೊಳಗಾದ ಮಹಿಳೆ ಮತ್ತು ಮಕ್ಕಳಿಗೆ ಎಲ್ಲಾ ಆರ್ಥಿಕ ಪರಿಹಾರವನ್ನು Victim Compensation scheme (ಸಂತ್ರಸ್ತ ಪರಿಹಾರ ನಿಧಿ) ಯೋಜನೆಯ ಕಾನೂನು ಸೇವಾಪ್ರಾಧಿಕಾರದ ವತಿಯಿಂದ ಪಾವತಿಸಲಾಗುತ್ತಿದೆ.<br><br>ಸಿಆರ್ ಪಿಸಿ ಕಲಂ357-ಎ ಅಡಿ ಸಂತ್ರಸ್ಥೆಗೆ ಪರಿಹಾರ ನೀಡುವಂತಹ ಅಧಿಕಾರವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಬದಲು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲು, ಕಾನೂನಿನಲ್ಲಿ ಬದಲಾವಣೆ ತರಬಹುದಾಗಿದೆ.<br><br>**ಸಮಾಜ ಕಲ್ಯಾಣ ಇಲಾಖೆ :**<br><br>ದೌರ್ಜನ್ಯ ಸಂತ್ರಸ್ತರಿಗೆ ಪ್ರಕರಣ ದಾಖಲಾದ 7 ದಿನದೊಳಗಾಗಿ ಪರಿಹಾರಧನವನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ:ಸಕಇ 503 ಎಸ್‌ಪಿಎ 22 ದಿನಾಂಕ:13-09-2022 ರ ಆದೇಶದಂತೆ ದೌರ್ಜನ್ಯ ಸಂತ್ರಸ್ತರಿಗೆ ವೈದ್ಯಕೀಯ ವೆಚ್ಚವನ್ನು ಮಂಜೂರು ಮಾಡಲಾಗುತ್ತಿದೆ.<br><br>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೇಲೆ ದೌರ್ಜನ್ಯಗಳಾಗುವುದನ್ನು ತಡೆಗಟ್ಟಲು ಮತ್ತು ಸಂತ್ರಸ್ತರಿಗೆ ನಿಯಮಾನುಸಾರ ಪರಿಹಾರ ಇತ್ಯಾದಿ ಕ್ರಮಗಳನ್ನು ಕೈಗೆತ್ತಿಕೊಳ್ಳಲು ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಜಾಗೃತಿ ಮತ್ತು ಮೇಲುಸ್ತುವಾರಿ ಸಮಿತಿಗಳು ಕಾರ್ಯನಿರ್ವಹಿಸುತ್ತಿವೆ.<br><br>ಅದಲ್ಲದೇ, ರಾಜ್ಯಮಟ್ಟದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿ ಇರುತ್ತದೆ. ಸದರಿ ಸಮಿತಿಯು ಪ್ರತಿ 6 ತಿಂಗಳಿಗೊಮ್ಮೆ ಸಭೆ ನಡೆಸಿ, ಅನುಷ್ಠಾನಾಧಿಕಾರಿಗಳಿಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಗುತ್ತಿದೆ. |

| | | |
|---|---|---|
| | ಇಲಾಖೆಯ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು, ಇವರುಗಳನ್ನು ಸದಸ್ಯರುಗಳನ್ನಾಗಿ ಮಾಡುವುದು. ಅವರುಗಳು ಸಂತ್ರಸ್ತೆಗೆ ವೈದ್ಯಕೀಯ ವೆಚ್ಚವನ್ನು ಪ್ರಕರಣ ನಡೆದು, ಮೊಕದ್ದಮೆ ದಾಖಲಾದ 24 ಗಂಟೆಗಳಲ್ಲಿ ನೀಡುವುದು, ಆ ನಂತರ ಪ್ರಕರಣ ದಾಖಲಾದ ಒಂದು ವಾರದಲ್ಲಿ 25% ಪರಿಹಾರ ನೀಡುವುದು, ಚಾರ್ಜ್ ಶೀಟ್ ಸಲ್ಲಿಸಿದ ಮೇಲೆ 25% ಮತ್ತು ಪ್ರಕರಣ ಇತ್ಯರ್ಥವಾದ ಮೇಲೆ ಉಳಿದ 50% ಪರಿಹಾರವನ್ನು ಸಂತ್ರಸ್ತೆಗೆ ಆ ಸಮಿತಿ ನೀಡುವಂತೆ ಕಾನೂನಿಗೆ ಬದಲಾವಣೆ ತರುವುದು. | |
| 47. | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಯುವ ದೌರ್ಜನ್ಯ, ಶೋಷಣೆ, ಅತ್ಯಾಚಾರ, ಮುಂತಾದ ಪ್ರಕರಣಗಳಲ್ಲಿ ಶೀಘ್ರಗತಿಯಲ್ಲಿ ತನಿಖೆ ಮಾಡಿ. ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ಕ್ರಮ ಕೈಗೊಳ್ಳಬೇಕು. ಅದರಲ್ಲಿ ವಿಳಂಬ ಮಾಡುವ ಅಥವಾ ಅಸಡ್ಡೆ ತೋರುವ ಅಧಿಕಾರಿಗಳ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಬೇಕು. | **ಪೊಲೀಸ್ ಇಲಾಖೆ**:<br>• ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ (ಅತ್ಯಾಚಾರ & ಪೋಕ್ಸೊ) ಪ್ರಕರಣಗಳನ್ನು ಆದ್ಯತೆಯ ಮೇರೆಗೆ ಪರಿಗಣಿಸಿ, ಪ್ರಕರಣ ದಾಖಲಿಸಿ, ತ್ವರಿತವಾಗಿ ತನಿಖೆ ಕೈಕೊಳ್ಳಲಾಗುತ್ತಿದೆ.<br>• ಪ್ರಕರಣಗಳಲ್ಲಿ ಗುಣಮಟ್ಟದ ತನಿಖೆ ನಡೆಸಿ, ಕಡ್ಡಾಯವಾಗಿ 60 ದಿನಗಳ ಒಳಗಡೆ ತನಿಖೆಯನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗುತ್ತಿದೆ.<br>• ನ್ಯಾಯಾಲಯದಲ್ಲಿ ಪ್ರಕರಣಗಳ ವಿಚಾರಣೆಯು ಸರಿಯಾದ ರೀತಿಯಲ್ಲಿ ನಡೆಯುತ್ತಿದೆ ಎಂಬುದರ ಬಗ್ಗೆ ಖಾತ್ರಿಪಡಿಸಿಕೊಳ್ಳಲು ಪ್ರತಿ ಠಾಣೆಯಲ್ಲಿಯು ಕೋರ್ಟ್ ಮಾನಿಟರಿಂಗ್ ಸೆಲ್ ಕಾರ್ಯನಿರ್ವಹಿಸುತ್ತಿದೆ.<br>• ಇಂತಹ ಪ್ರಕರಣಗಳ ತನಿಖೆಯಲ್ಲಿ ಅನಗತ್ಯ ವಿಳಂಬ ಮಾಡುವ ತನಿಖಾಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಕೈಕೊಳ್ಳಲಾಗುತ್ತಿದೆ.<br>• ಮಹಿಳಾ ಮತ್ತು ಮಕ್ಕಳ ಮೇಲಿನ ದೌರ್ಜನ್ಯ/ ಅತ್ಯಾಚಾರ ಪ್ರಕರಣಗಳಲ್ಲಿ ಭಾಗಿಯಾಗಿ ಶಿಕ್ಷೆಗೊಳಗಾದ ಬಾಲ ಅಪರಾಧಿಗಳು ಶಿಕ್ಷೆಯ ಅವಧಿ ಮುಗಿದ ನಂತರ ಅವರ ಮೇಲೆ ನಿಗಾ |

| | | |
|---|---|---|
| | | ವಹಿಸಬೇಕಾಗಿರುತ್ತದೆ. ಅವರು ಮತ್ತೊಮ್ಮೆ ಮಾಡಿದ ತಪ್ಪುಗಳನ್ನು ಮರುಕಳಿಸದಂತೆ ನೋಡಿಕೊಳ್ಳುವ ಕುರಿತು ಕ್ರಮ ಕೈಗೊಳ್ಳುವ ಬಗ್ಗೆ ಸಮಿತಿಯ ಮುಂದೆ ತರಬಯಸಲಾಗಿದೆ. |
| 48. | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರ ಮೇಲೆ ನಡೆಯುವ ದೌರ್ಜನ್ಯ ಪ್ರಕರಣಗಳಲ್ಲಿ ಪರಿಹಾರವನ್ನು ಪ್ರಾರಂಭದಲ್ಲಿ 25%, ಚಾರ್ಜ್ ಶೀಟ್ ದಾಖಲಾದಾಗ 50% ಮತ್ತು ಪ್ರಕರಣ ಇತ್ಯರ್ಥವಾದಾಗ 25% ರಷ್ಟು ಪರಿಹಾರ ನೀಡುವ ಬಗ್ಗೆ ಕ್ರಮ ಕೈಗೊಳ್ಳಬೇಕು. | **ಸಮಾಜ ಕಲ್ಯಾಣ ಇಲಾಖೆ**<br>ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯಪ್ರತಿಬಂಧ) ನಿಯಮಗಳನ್ವಯ ದೌರ್ಜನ್ಯ ಸಂತ್ರಸ್ತರಿಗೆ ಅಪರಾಧದ ಸ್ವರೂಪದ ಅನುಗುಣವಾಗಿ ರೂ.85,000/- ದಿಂದ ರೂ.8,25,000/- ಗಳ ಪರಿಹಾರಧನವನ್ನು ಮಂಜೂರು ಮಾಡಲಾಗುತ್ತಿದೆ.<br><br>FIR ಹಂತ – 25%<br><br>Charge Sheet ಹಂತ - 50%<br><br>ಮಾನ್ಯ ನ್ಯಾಯಾಲಯವು ಆರೋಪಿಯನ್ನು ಅಪರಾಧಿಯೆಂದು ನಿರ್ಣಯಿಸಿದಾಗ – ಶೇ 25% |
| 49. | ಸಾಧ್ಯವಾದಷ್ಟು ಮಟ್ಟಿಗೆ ಪರಿಹಾರವನ್ನು ನಗದಾಗಿ ನೀಡುವ ಬದಲು ಸಂತ್ರಸ್ತೆಗೆ ಉದ್ಯೋಗ, ಮನೆ, ಜಮೀನು ಅಥವಾ ಸ್ವಯಂ ಉದ್ಯೋಗ, ಇನ್ನಿತರ ರೂಪಗಳಲ್ಲಿ ನೀಡುವಂತಹ ವ್ಯವಸ್ಥೆ ರೂಪಿಸಲು ಸರ್ಕಾರ ಕ್ರಮ ಜರುಗಿಸುವುದು. ಶಿಕ್ಷಣ ಪಡೆಯುವವರು ವಯಸ್ಕರಾಗಿದ್ದರೆ ಅವರಿಗೆ ಉಚಿತ ಶಿಕ್ಷಣದ ವ್ಯವಸ್ಥೆ ಮಾಡಬೇಕು. | **ಕೌಶಲ್ಯಾಭಿವೃದ್ಧಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಅಧೀನ ಕಛೇರಿಗಳಲ್ಲಿ ಸಂತ್ರಸ್ಥ ಮಹಿಳೆಯರಿಗಾಗಿ ಕೈಗೊಳ್ಳಬಹುದಾದ ಕ್ರಮದ ವಿವರ:**<br><br>**ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ):** ಸರ್ಕಾರದ ಅಧಿಕಾರಯುಕ್ತ ಸಮಿತಿ ಸಭೆಯ 21 ನೇ ಸಭೆಯ ನಡವಳಿಯ ಕ್ರಮ ಸಂಖ್ಯೆ:14ರಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ತೃತೀಯ ಲಿಂಗಿಗಳಿಗೆ ಬೇಡಿಕೆ ಆಧಾರಿತ ಆಹಾರ ತಯಾರಿಕೆಯಲ್ಲಿ ತರಬೇತಿ, ಬುಡಕಟ್ಟು ಜನರ ಜೀವನೋಪಾಯ ವೃದ್ಧಿಸಲು ಲಂಟನಾ ಕರಕುಶಲ ತರಬೇತಿಯನ್ನು ಮತ್ತು ಬೇಡಗಂಪನ ಜನರಿಗೆ ಜೇನು ಪಟ್ಟಿಗೆ ತಯಾರಿಕೆ, ಜೇನುಸಾಕಣೆ ಮತ್ತು ಸಿರಿಧಾನ್ಯ ಆಧಾರಿತ ಆಹಾರ ಉತ್ಪನ್ನಗಳ ತಯಾರಿಕೆಯಲ್ಲಿ ಜಿಲ್ಲಾಡಳಿತ ಚಾಮರಾಜನಗರ ಅವರು ಪ್ರಸ್ತಾಪಿಸಿರುವ ತರಬೇತಿ ಕಾರ್ಯಕ್ರಮವನ್ನು ಇತರೆ ಇಲಾಖೆಗಳ ಅನುದಾನದಡಿ ಕೈಗೊಳ್ಳುವಂತೆ ನಿರ್ಣಯಿಸಲಾಗಿತ್ತು.<br><br>ಆದರಂತೆ, ನಿಗಮದಿಂದ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳು, ಚಾಮರಾಜನಗರ ರವರಿಗೆ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳೊಂದಿಗೆ ಚರ್ಚಿಸಿ ವರದಿ ನೀಡಲು ಸೂಚಿಸಿದ್ದು, ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯನ್ವಯ ಕೈಗೊಳ್ಳಲು ಇತರೆ ಇಲಾಖೆಗಳ |

ಅನುದಾನ ಲಭ್ಯತೆಯ ಮಾಹಿತಿಯು ಇಲ್ಲದಿರುವ ಹಿನ್ನಲೆಯಲ್ಲಿ, ಕಾರ್ಯಕ್ರಮವನ್ನು ಮುಂದುವರೆಸಲಾಗಿರುವುದಿಲ್ಲ.

ಮುಂದುವರೆದು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಜಾರಿಗೊಳಿಸಲಾಗುತ್ತಿರುವ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ಸದರಿ ತೃತೀಯ ಲಿಂಗಿಗಳು ಸಹ ಫಲಾನುಭವಿಗಳಾಗಬಹುದಾಗಿದ್ದು, ಆಸಕ್ತ ತೃತೀಯ ಲಿಂಗಿಗಳು www.kaushalkar.com ನಡಿ ನೋಂದಣಿಗೊಳ್ಳುವ ಮುಖೇನ ಉಚಿತ ಕೌಶಲ್ಯಾಧಾರಿತ ಅಲ್ಪಾವಧಿ ತರಬೇತಿಯನ್ನು ಪಡೆಯಬಹುದಾಗಿರುತ್ತದೆ.

**<u>ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ:</u>**

ಡೇ-ನಲ್ಮ್ ಅಭಿಯಾನದಡಿ ಸ್ವಯಂ ಕಾರ್ಯಕ್ರಮ ಉಪಘಟಕದಡಿ ಬ್ಯಾಂಕಿನಿಂದ ದೊರೆಯುವ ವೈಯಕ್ತಿಕ ಮತ್ತು /ಗುಂಪು ಕಿರು ಉದ್ದಿಮೆ ಹಾಗೂ ಎಸ್.ಹೆಚ್.ಜಿ ಬ್ಯಾಂಕ್ ಲಿಂಕೇಜ್, ಸ್ವ-ಸಾಹಯ ಗುಂಪುಗಳ ರಚನೆ, ಆವರ್ತಕ ನಿಧಿ, ಪಿಎಂ ಸ್ವ-ನಿಧಿ ಯೋಜನೆಯಡಿ ಬ್ಯಾಂಕಿನಿಂದ ಸಾಲ ಸೌಲಭ್ಯ ಬೀದಿ ವ್ಯಾಪಾರ ಮಾಡಲು ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣ ಪತ್ರ ಹಾಗೂ ಉದ್ಯಮಶೀಲತಾ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲು ಹಾಗೂ ಅಭಿಯಾನದಡಿ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಮಂಗಳಮುಖಿಯರಿಗೆ ಒದಗಿಸಲು ಕ್ರಮ ಕೈಗೊಳ್ಳುವಂತೆ ಜಿಲ್ಲಾ ಮತ್ತು ನಗರ ಸ್ಥಳೀಯ ಸಂಸ್ಥೆಯ ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳಿಗೆ ತಿಳಿಸಲಾಗಿದೆ.

ಮುಂದುವರೆದು, ದೀನ್ ದಯಾಳ್ ಜನ್ ಅಜೀವಿಕ ಯೋಜನೆ ಶಹರಿ (ಪ್ರಾಯೋಗಿಕ) ಪ್ರಾಯೋಗಿಕ ಯೋಜನೆಯು ದಿನಾಂಕ:31-01-2025ರವರೆಗೆ ಮಾತ್ರ ಮುಂದುವರೆಸಲು ಪುನಃ ಯೋಜನೆಯು ಮುಂದುವರೆದ ಆದೇಶ ಸ್ವೀಕೃತವಾದ ನಂತರ ಹೊಸ ಯೋಜನೆಯಡಿ ಎಲ್ಲಾ ಸೌಲಭ್ಯಗಳನ್ನು ಮಂಗಳಮುಖಿಯರಿಗೆ ಒದಗಿಸಲು ಕ್ರಮವಹಿಸಲಾಗುವುದು.

**<u>ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ:</u>**

ಮಂಗಳಮುಖಿಯರನ್ನು ರಾಷ್ಟ್ರೀಯ ಜೀವನೋಪಾಯ ಅಭಿಯಾನದಡಿ ಸ್ವ-ಸಹಾಯ ಗುಂಪುಗಳನ್ನು ಸಂಘಟಿಸಿ ಅವರು ಜೀವನೋಪಾಯ ಚಟುವಟಿಕೆ ಕೈಗೊಳ್ಳಲು ಅವಶ್ಯಕ ತರಬೇತಿ ಹಾಗೂ ಸಾಲ-ಸೌಲಭ್ಯಗಳನ್ನು ಒದಗಿಸಿ ಪೂರಕ ವಾತಾವರಣ ನಿರ್ಮಿಸಿ ಅವಕಾಶ ಕಲ್ಪಿಸಲು ಜಿಲ್ಲಾ ಅಭಿಯಾನ ನಿರ್ವಹಣಾ ಘಟಕಗಳಿಗೆ ನಿರ್ದೇಶನ ನೀಡಿ ಅನುಸರಣೆ ಮಾಡಲಾಗುತ್ತಿದೆ.

| | | |
|---|---|---|
| | | ರಾಷ್ಟ್ರೀಯ ಜೀವನೋಪಾಯ ಅಭಿಯಾನದಡಿ ಹಾವೇರಿ ಜಿಲ್ಲೆಯ ಜಿಲ್ಲಾ ಪಂಚಾಯತ್ ಆವರಣದಲ್ಲಿ ಸರ್ಕಾರದ ಹಾಗೂ ಇಲಾಖೆಯ ಮಹಾತ್ವಕಾಂಕ್ಷೆಯ ಪ್ರೀಮಿಯಂ ಅಕ್ಕ ಕೆಫೆಯನ್ನು ರೂ.15.00 ಲಕ್ಷಗಳ ಅನುದಾನದಡಿ ಜಿಲ್ಲಾ ಪಂಚಾಯತ್ ಹಾವೇರಿ ಇವರ ಮೂಲಕ ಸ್ಥಾಪಿಸಲಾಗಿದ್ದು, ಸದರಿ ಅಕ್ಕ ಕೆಫೆಯನ್ನು ನಿರ್ವಹಿಸಲು ಜಿಲ್ಲೆಯ 10 ಮಂಗಳಮುಖಿಯರಿಗೆ ಕ್ಯಾಂಟೀನ್ ಸೇವೆ ಕುರಿತು ಕುಡುಂಬ ಶ್ರೀ ಸಂಸ್ಥೆಯ ಮೂಲಕ ಸೂಕ್ತ ತರಬೇತಿಯನ್ನು ಒದಗಿಸಲಾಗಿದ್ದು, ಯಶಸ್ವಿಯಾಗಿ ಅಕ್ಕ ಕೆಫೆ ಚಟುವಟಿಕೆಯನ್ನು ನಿರ್ವಹಿಸುತ್ತಿದ್ದಾರೆ.<br><br>ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಕೇಂದ್ರಗಳಡಿ 2014-15ರಿಂದ 2024-25ರವರೆಗೆ ಒಟ್ಟು 2528 ಮಂಗಳಮುಖಿಯರಿಗೆ ವಿವಿಧ ತರಬೇತಿಗಳನ್ನು ಒದಗಿಸಲಾಗಿರುತ್ತದೆ. ತರಬೇತಿ ಪಡೆದಿರುವ 2045 ಮಂಗಳಮುಖಿಯರು ಸ್ವಯಂ ಉದ್ಯೋಗ (Settled) ನಿರ್ವಹಿಸುತ್ತಿದ್ದಾರೆ.<br><br>ಮುಂದುವರೆದು, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಕೇಂದ್ರಗಳಲ್ಲಿ ನಡೆಸಲಾಗುತ್ತಿರುವ ವಿವಿಧ ತರಬೇತಿ ಕಾರ್ಯಕ್ರಮಗಳ ಬಗ್ಗೆ, ಮಂಗಳಮುಖಿಯರಿಗೆ ಮಾಹಿತಿ ನೀಡಿ ಅವರೊಂದಿಗೆ ಸಂಬಂಧಿತ ತರಬೇತಿ ಕೇಂದ್ರಗಳ ಮೂಲಕ ಸಮಾಲೋಚನೆ ಕೈಗೊಂಡು ಆದ್ಯತೆಯೊಂದಿಗೆ ಅವರು ಆಸಕ್ತಿ ವಹಿಸುವ ವಿಷಯದಲ್ಲಿ ತರಬೇತಿ ನೀಡಿ ಸ್ವಯಂ ಉದ್ಯೋಗ ಕೈಗೊಳ್ಳಲು ಸೂಕ್ತ ಬೆಂಬಲ ಒದಗಿಸಿ ಅನುಷ್ಠಾಗೊಳಿಸಲು ಕ್ರಮವಹಿಸಲಾಗುವುದು.<br><br>**ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್):**<br><br>2025-26ನೇ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರ ಸಹಯೋಗದಲ್ಲಿ (ಪ್ರಾಯೋಜಕತ್ವ ನೀಡಿದ್ದಲ್ಲಿ) ಮಂಗಳಮುಖಿಯರಿಗೆ ಸ್ವಯಂ ಉದ್ಯೋಗ ಪ್ರಾರಂಭಿಸುವ ಕುರಿತಂತೆ ಈ ಕೆಳಗಿನ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.<br><br>1. ಉದ್ಯಮಶೀಲತಾ ಪ್ರೇರಣಾ ಶಿಬಿರ.<br>2. ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ.<br><br>**ವಸತಿ ಇಲಾಖೆ** :-<br><br>**ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ :-** |

| | | |
|---|---|---|
| | | ದೇವರಾಜು ಅರಸು ವಸತಿ ಯೋಜನೆಯಡಿ ವಿಶೇಷ (ಒಟ್ಟು 14 ಗುಂಪುಗಳು) ವರ್ಗದ ಫಲಾನುಭವಿಗಳಿಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯ ಮೂಲಕ ಆಯ್ಕೆಗೊಳಿಸಿ, ವಸತಿ ಸೌಕರ್ಯ ಕಲ್ಪಿಸಲಾಗುತ್ತಿದೆ. ಸದರಿ ಯೋಜನೆಯಡಿ "ದೌರ್ಜನ್ಯಕ್ಕೊಳಗಾದವರು ವರ್ಗದಡಿ ಆಸಿಡ್ ಧಾಳಿಗೆ ಒಳಗಾದ ಮಹಿಳೆ/ಹೆಣ್ಣುಮಕ್ಕಳುಗಳಿಗೆ" ವಸತಿ ಸೌಕರ್ಯ ಕಲ್ಪಿಸಲಾಗುತ್ತಿದ್ದು, **ಈ ವರ್ಗದಡಿ rape victims** ಅನ್ನು ಪರಿಗಣಿಸಿ, ವಸತಿ ಸೌಕರ್ಯ ಕಲ್ಪಿಸಲು ಕ್ರಮ ವಹಿಸಲಾಗುತ್ತಿದೆ.<br><br>**ಕರ್ನಾಟಕ ಗೃಹ ಮಂಡಳಿ** :-<br><br>ಸದರಿ ಅಂತಿಮ ವರದಿಯ ಕ್ರಮ ಸಂಖ್ಯೆ: 60 ರಂತೆ ಕರ್ನಾಟಕ ಗೃಹ ಮಂಡಳಿಯೂ ಸಹ ಕೆಲಸದ ಸ್ಥಳದಲ್ಲಿ, ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ(ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ), 2013 ರ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಆಂತರಿಕ ದೂರು ನಿರ್ಹವಣಾ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯು ಸಭೆಗಳನ್ನು ನಡೆಸುತ್ತಿದೆ. ಇದುವರೆಗೂ ಮಂಡಳಿಯಲ್ಲಿ ಯಾವುದೇ ಮಹಿಳೆಯ ಮೇಲಿನ ಶೋಷಣೆ, ದೌರ್ಜನ್ಯ ಅತ್ಯಾಚಾರದಂತಹ ಯಾವುದೇ ಪ್ರಕರಣಗಳೂ ದಾಖಲಾಗಿರುವುದಿಲ್ಲ.<br><br>**ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ** :-<br><br>ಕೆಲಸದ ಸ್ಥಳದಲ್ಲಿ, ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ), 2013 ರ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಆಂತರಿಕ ದೂರು ನಿರ್ಹವಣಾ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯು ಸಭೆಗಳನ್ನು ನಡೆಸುತ್ತಿದೆ. ಇದುವರೆಗೂ ಮಂಡಳಿಯಲ್ಲಿ ಯಾವುದೇ ಮಹಿಳೆಯ ಮೇಲಿನ ಶೋಷಣೆ, ದೌರ್ಜನ್ಯ ಅತ್ಯಾಚಾರದಂತಹ ಯಾವು ಪ್ರಕರಣಗಳೂ ದಾಖಲಾಗಿರುವುದಿಲ್ಲ.<br><br>**ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ** :-<br>ಕೆಲಸದ ಸ್ಥಳದಲ್ಲಿ, ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ(ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ), 2013 ರ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಆಂತರಿಕ ದೂರು ನಿರ್ಹವಣಾ ಸಮಿತಿಯನ್ನು ರಚಿಸಲಾಗಿದೆ. |
| 50. | ಸಂತ್ರಸ್ತ ಪರಿಹಾರ ಪಡೆಯಲು ಪ್ರಕರಣ ದಾಖಲಾದ | **ಪೊಲೀಸ್ ಇಲಾಖೆ;** |

| | | |
|---|---|---|
| | ಸಂದರ್ಭದಲ್ಲಿ ಠಾಣಾಧಿಕಾರಿಗಳು ಸಂತ್ರಸ್ತೆಯಿಂದ ಪರಿಹಾರಕ್ಕೆ ಅರ್ಜಿ ತೆಗೆದುಕೊಂಡು, ಎಲ್ಲಾ ಮಾಹಿತಿಗಳೊಡನೆ ಪ್ರಥಮ ವರ್ತಮಾನ ವರದಿ (ಎಫ್.ಐ.ಆರ್) ಸಮೇತವಾಗಿ ಪರಿಹಾರ ವಿತರಣಾ ಸಮಿತಿಗೆ ಕೂಡಲೇ ಕಳುಹಿಸುವಂತೆ ಕ್ರಮ ಜರುಗಿಸಲು ಕಾನೂನಿನಲ್ಲಿ ಬದಲಾವಣೆ ತರುವುದು. ವಿಳಂಬವಾದಲ್ಲಿ ಸಂಬಂಧಿಸಿದವರ ಮೇಲೆ ಸೂಕ್ತ ಕ್ರಮ ಜರುಗಿಸಬೇಕು. | ಮಹಿಳೆ ಮತ್ತು ಮಕ್ಕಳ ಮೇಲಿನ ಅತ್ಯಾಚಾರ & ಪೋಕ್ಸೊ, ಹಾಗೂ ಇತರೆ ದೌರ್ಜನ್ಯ ಪ್ರಕರಣಗಳಲ್ಲಿ ಪ್ರಕರಣ ದಾಖಲಾದ ತಕ್ಷಣ ಸಂತ್ರಸ್ತರ ಎಲ್ಲ ವಿವರಗಳು, ಎಫ್.ಐ.ಆರ್ ಹಾಗೂ ಇತರೆ ದಾಖಲಾತಿಗಳನ್ನು ಒಳಗೊಂಡ ವರದಿಯನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಕೂಡಲೇ ಸಲ್ಲಿಸಲಾಗುತ್ತಿದೆ.<br><br>**ಸಮಾಜ ಕಲ್ಯಾಣ ಇಲಾಖೆ:**<br>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ದೌರ್ಜನ್ಯ ಸಂತ್ರಸ್ತರಿಗೆ ನಿಯಮಾನುಸಾರ ಪರಿಹಾರ ಪರಿಹಾರಧನ ಮಂಜೂರು ಮಾಡಲು ಕ್ರಮವಹಿಸಲಾಗುತ್ತಿದೆ.<br><br>**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**<br>ಸಂತ್ರಸ್ಥರು ಮಕ್ಕಳಾಗಿದ್ದಲ್ಲಿ ಅವರಿಗೆ ಪಾಲನೇ ಮತ್ತು ಪೋಷಣೆಯ ಅವಶ್ಯಕತೆ ಇದ್ದಲ್ಲಿ ಅದನ್ನು ಒದಗಿಸಲು ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ ) ಕಾಯ್ದೆಯಡಿ ಅವಕಾಶ ವಿರುತ್ತದೆ. ಉಳಿದಂತೆ, ಸಿಆರ್‌ಪಿಸಿ ಕಲಂ ನಲ್ಲಿಯೇ ಬದಲಾವಣೆ ಮಾಡಬೇಕಾಗಿರುತ್ತದೆ. |
| 51. | ಯಾರಾದರೂ ಸುಳ್ಳು ಪ್ರಕರಣ ದಾಖಲು ಮಾಡಿ, ಪರಿಹಾರ ಪಡೆದರೆ, ಅಂತಹ ಪರಿಹಾರದ ಹಣವನ್ನು ಬಡ್ಡಿಸಹಿತ ಹಿಂಪಡೆಯಲು ಜಿಲ್ಲಾಧಿಕಾರಿಗಳ ನೇತೃತ್ವದ ಸಮಿತಿ ಕ್ರಮ ಜರುಗಿಸಲು ಸೂಕ್ತ ಕಾನೂನು ಸರ್ಕಾರ ರೂಪಿಸುವುದು. | ಪ್ರಸ್ತಾವನೆ ಇರುವುದಿಲ್ಲ. |
| 52. | ಅತ್ಯಾಚಾರ, ಪೋಕ್ಸೋ, ವರದಕ್ಷಿಣೆ ಕಿರುಕುಳ ಹಾಗೂ ಇನ್ನಿತರ ಪ್ರಕರಣಗಳಲ್ಲಿ ರಾಜಿಸಂಧಾನ | **ಪೊಲೀಸ್ ಇಲಾಖೆ:**<br>ಮಹಿಳೆ ಮತ್ತು ಮಕ್ಕಳ ಮೇಲಿನ ಅತ್ಯಾಚಾರ & ಪೋಕ್ಸೊ, ಹಾಗೂ ಇತರೆ ದೌರ್ಜನ್ಯದಂತಹ ಪ್ರಕರಣಗಳಲ್ಲಿ ಪೊಲೀಸ್ ಅಧಿಕಾರಿಗಳಿಂದ ಯಾವುದೇ ರಾಜಿ ಸಂಧಾನ ಮಾಡಲಾಗುತ್ತಿಲ್ಲ. |

| | | |
|---|---|---|
| | ಮಾಡಲು ಪೊಲೀಸ್ ಅಧಿಕಾರಿಗಳಾಗಲೀ, ಪ್ರಾಸಿಕ್ಯೂಟರ್ ಅಗಲೀ, ಮಹಿಳಾ ಮತ್ತು ಮಕ್ಕಳ (ಕಲ್ಯಾಣ) ಇಲಾಖೆಯ ಅಧಿಕಾರಿಗಳಾಗಲೀ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಾಗಲೀ ಅಥವಾ ಸಂಬಂಧಪಟ್ಟ ವೈದ್ಯಾಧಿಕಾರಿಗಳಾಗಲೀ ಹಾಗೂ ಇತರೇ ಯಾರೂ ಪ್ರಯತ್ನಿಸುವಂತಿಲ್ಲ. ಯಾರಾದರೂ ರಾಜಿಸಂಧಾನ ಮಾಡಲು ಪ್ರಯತ್ನಿಸಿದರೆ ಅಂತಹವರ ಮೇಲೆ ಕಡ್ಡಾಯವಾಗಿ ಕಾನೂನು ರೀತ್ಯಾ ಅಪರಾಧದ ಪ್ರಚೋದಕರು (ಅಬೇಟರ್) ಎಂದು ಪರಿಗಣಿಸಿ ಅವರ ಮೇಲೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಜರುಗಿಸುವಂತೆ ಕಡ್ಡಾಯ ಮಾಡುವುದು. | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**<br><br>ಪೋಕ್ಸೋ ಹಾಗೂ ಇನ್ನಿತರ ಮಕ್ಕಳ ರಕ್ಷಣೆಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಮಕ್ಕಳ ರಕ್ಷಣಾ ನಿರ್ದೇಶನಾಲಯ ಅಥವಾ ಅಧೀನ ಅಧಿಕಾರಿ / ಸಿಬ್ಬಂದಿಗಳು ಯಾವುದೇ ರಾಜಿ ಸಂಧಾನ ನಡೆಸುವುದಾಗಲೀ ಅಥವಾ ಅದರಲ್ಲಿ ಭಾಗಿಯಾಗುವುದಾಗಲೀ ಮಾಡಿದ್ದಲ್ಲಿ ಅಂತಹ ಅಧಿಕಾರಿ / ಸಿಬ್ಬಂದಿಗಳ ಮೇಲೆ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು.<br><br>**ಸಮಾಜ ಕಲ್ಯಾಣ ಇಲಾಖೆ ಮಾಹಿತಿ :**<br><br>ರಾಜಿ ಸಂಧಾನ ಮಾಡಲು ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮಗಳ ಅಡಿಯಲ್ಲಿ ಅವಕಾಶವಿರುವುದಿಲ್ಲ. |
| 53. | ಅಪರಾಧ ಪ್ರಕರಣಗಳಲ್ಲಿ ನ್ಯಾಯ ವಿಜ್ಞಾನ ಪ್ರಯೋಗಾಲಯದ (ಎಫ್.ಎಸ್.ಎಲ್.) ವರದಿಗಳನ್ನು ಕಾಲ ಕಾಲಕ್ಕೆ ವಿಳಂಬ ಮಾಡದೆ ನೀಡಬೇಕಾಗಿರುವ ಕಾರಣ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸುಸಜ್ಜಿತ ನ್ಯಾಯ ವಿಜ್ಞಾನ ಪ್ರಯೋಗಾಲಯಗಳನ್ನು (ಎಫ್.ಎಸ್.ಎಲ್.) ತೆರೆಯಲು | **ಪೊಲೀಸ್ ಇಲಾಖೆ:**<br><br>• ರಾಜ್ಯದಲ್ಲಿ ಎಫ್.ಎಸ್.ಎಲ್ ಘಟಕವನ್ನು ವಿಸ್ತರಿಸಿ ವಲಯವಾರು ಆರ್.ಎಫ್.ಎಸ್.ಎಲ್ ಪ್ರಯೋಗಾಲಯಗಳನ್ನು ಪ್ರಾರಂಭಿಸಿದ್ದು ಕಾರ್ಯನಿರ್ವಹಿಸುತ್ತಿದೆ.<br>• ವರದಿಗಳನ್ನು ತ್ವರಿತವಾಗಿ ಪಡೆಯಲು ಕ್ರಮ ಕೈಗೊಳ್ಳಲಾಗುತ್ತದೆ.<br><br>**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ :** |

| | | |
|---|---|---|
| | ಸರ್ಕಾರ ಕ್ರಮ ಕೈಗೊಳ್ಳುವುದು. ವಿಳಂಬ ಮಾಡದೆ ಶೀಘ್ರಗತಿಯಲ್ಲಿ ಎಲ್ಲಾ ಅಪರಾಧ ಪ್ರಕರಣಗಳಲ್ಲಿ ವೈದ್ಯಕೀಯ ವರದಿಗಳನ್ನು ನೀಡಿ, ಅಪರಾಧಿಗಳಿಗೆ ಶಿಕ್ಷೆಯಾಗುವಂತೆ ಕ್ರಮ ಜರುಗಿಸುವುದು. | 2024-25 ನೇ ಸಾಲಿನಲ್ಲಿ ಪೋಕ್ಸೋ ಕಾಯ್ದೆ ಬಗ್ಗೆ Gynaecologists, Casualty Medical Officers, Medical Officers of Primary Health Care facilities ಮತ್ತು Staff Nurse ಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಎಲ್ಲಾ ಜಿಲ್ಲೆಗಳಲ್ಲಿಯೂ ಹಮ್ಮಿಕೊಳ್ಳಲಾಗುತ್ತಿದೆ.<br><br>ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ವೈದ್ಯಕೀಯ ಅಭಿಪ್ರಾಯ (Medical Opinion/ Medical Report) ನೀಡುವಲ್ಲಿ ವೈದ್ಯಾಧಿಕಾರಿಗಳು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಈಗಾಗಲೆ ಸುತ್ತೋಲೆ ಹೊರಡಿಸಲಾಗಿದೆ. (JD-MEDICAL)<br><br>ಹತ್ಯೆಯಾದ ಸಂದರ್ಭದಲ್ಲಿ ಪೋಲೀಸರ ಸಹಾಯದಿಂದ ವಿಧಿವಿಜ್ಞಾನದ ಪ್ರಯೋಗಾಲಯಕ್ಕೆ ಕಳಿಸಲಾಗುತ್ತದೆ ಅದರಂತೆ ಬಂದ ವರದಿಯ ಪ್ರಕಾರ ಆಸ್ಪತ್ರೆಯಲ್ಲಿ ದೊರೆತ ಆಧಾರದ ಮೇಲೆ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದೆ. ಇನ್ನು ಕೆಲವು ಪ್ರಕರಣಗಳಲ್ಲಿ ಅಜ್ಞಾತ ಪ್ರದೇಶದಲ್ಲಿ ದೊರಕಿದ ಭ್ರೂಣ ಗಳನ್ನು ಪೋಲೀಸರ ಮುಖಾಂತರ ವಿಧಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದು ಪೋಲೀಸರ ಮುಖಾಂತರ ತನಿಖೆ ನಡೆಯುತ್ತಿದೆ. (DD-PC&PNDT) |
| 54. | ರಾಜ್ಯದ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಮಹಿಳೆಯರ ಮತ್ತು ಮಕ್ಕಳ ಸಮೀಕ್ಷೆಯನ್ನು ಪ್ರತಿ ವರ್ಷ ನಡೆಸಬೇಕು. ಆ ಸಮೀಕ್ಷೆಯಲ್ಲಿ ಲಭ್ಯವಾಗುವ ಮಹಿಳಾ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳ ಬಗ್ಗೆ (ಹೆಸರು ಹೊರತುಪಡಿಸಿ) ಮಾಹಿತಿಗಳನ್ನು ಗ್ರಾಮೀಣ ಭಾಗದಲ್ಲಿ ಪ್ರತಿ ಗ್ರಾಮ ಪಂಚಾಯ್ತಿ ಕಛೇರಿಗಳಲ್ಲಿ ಹಾಗೂ ನಗರ ಪ್ರದೇಶದಲ್ಲಿ ಪ್ರತೀ ವಾರ್ಡ್ ಕಛೇರಿಗಳಲ್ಲಿ ಮತ್ತು ಸಂಬಂಧಪಟ್ಟ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಬಹಿರಂಗಪಡಿಸಬೇಕು. | **ಪೊಲೀಸ್ ಇಲಾಖೆ;**<br>• ಪೊಲೀಸ್ ಠಾಣೆಗಳಲ್ಲಿ ಮಕ್ಕಳ ಮೇಲೆ ನಡೆಯುವ ದೌರ್ಜನ್ಯ ಪ್ರಕರಣಗಳ ಕುರಿತು ಸಂಪೂರ್ಣ ಮಾಹಿತಿ ಲಭ್ಯವಿರುತ್ತದೆ.<br>• ಮಹಿಳಾ ಮತ್ತು ಮಕ್ಕಳ ದೌರ್ಜನ್ಯ ಪ್ರಕರಣಗಳಲ್ಲಿ ಮಾಹಿತಿದಾರರು ಲಭ್ಯವಿಲ್ಲದಿದ್ದಲ್ಲಿ ಅಥವಾ ದೂರು ದಾಖಲಿಸಲು ಹಿಂದೇಟು ಹಾಕಿದಲ್ಲಿ ಸ್ವಯಂ ಪ್ರೇರಿತ ದೂರು ದಾಖಲಿಸಿ ಕಾನೂನು ಕ್ರಮ ಕೈಕೊಳ್ಳಲಾಗುತ್ತಿದೆ.<br><br>**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,**<br>• ಮಹಿಳಾ ಸಶಕ್ತೀಕರಣ ಹಾಗೂ ಸ್ಥಳೀಯ ಆಡಳಿತದಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಗಾಗಿ ಮಾರ್ಚ್ 8 ರಿಂದ ಜೂನ್ 30 ರವರೆಗೆ ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನವನ್ನು ಮತ್ತು ಅಭಿಯಾನದಲ್ಲಿ ಮಹಿಳಾ ಗ್ರಾಮಸಭೆಗಳನ್ನು ಪ್ರತಿ ಸಾಲಿನಲ್ಲಿ ಆಯೋಜಿಸಲಾಗುತ್ತಿದೆ. ಮಹಿಳೆಯರ ಸ್ಥಿತಿ ಕುರಿತು ಗ್ರಾಮವಾರು ಅಂಕಿ ಅಂಶಗಳನ್ನು ಆರೋಗ್ಯ, ಶಿಕ್ಷಣ, ಮಹಿಳೆಯರ ಆರ್ಥಿಕ ಸಬಲೀಕರಣ ಮತ್ತು ಸಾಮಾಜಿಕ |

| | | |
|---|---|---|
| | ಲಭ್ಯ ಮಾಹಿತಿ ಆಧಾರದ ಮೇಲೆ ತಪ್ಪಿತಸ್ಥರ ಮೇಲೆ ಸ್ವಯಂಪ್ರೇರಿತ ಅಥವಾ ಸಂಬಂಧಿಸಿದವರ ಪಿರ್ಯಾದಿನ ಮೇಲೆ ಕ್ರಮ ತೆಗೆದುಕೊಳ್ಳುವ ಪದ್ಧತಿ ಜಾರಿಯಾಗಲಿ. | ಭದ್ರತಾ ಕಾರ್ಯಕ್ರಮಗಳ ಕುರಿತು ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ. ಮಹಿಳೆಯರು ಮತ್ತು ಬಾಲಕಿಯರ ಮೇಲಿನ ದೌರ್ಜನ್ಯ ಪ್ರಕರಣಗಳ ಅಂಕಿ ಅಂಶಗಳ ಮಾಹಿತಿಯನ್ನು ಸಂಗ್ರಹಿಸಲು ತಿಳಿಸಲಾಗಿರುತ್ತದೆ.<br>• ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಪ್ರತಿ ಸಾಲಿನಲ್ಲಿ ನವೆಂಬರ್ 14 ರಿಂದ ಮುಂದಿನ ಜನವರಿ 24 (ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ) ರವರೆಗೆ ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನವನ್ನು ಮತ್ತು ಗ್ರಾಮ ಪಂಚಾಯಿತಿಯಲ್ಲಿ ಒಂದು ದಿನದ ಮಕ್ಕಳ ವಿಶೇಷ ಗ್ರಾಮ ಸಭೆಯನ್ನು ಹಮ್ಮಿಕೊಳ್ಳಲಾಗುತ್ತಿದೆ. ಇದರ ಅಂಗವಾಗಿ ಮಕ್ಕಳ ಸ್ಥಿತಿ ಕುರಿತಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಪೋಲಿಸ್ ಇಲಾಖೆಗಳಿಂದ ವಾರ್ಡ್ ಮಟ್ಟದಲ್ಲಿ ಅಂಕಿ ಅಂಶಗಳನ್ನು ಸಂಗ್ರಹಿಸಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕ್ರೂಢೀಕರಿಸಲಾಗುವುದು. ಪೋಲಿಸ್ ಇಲಾಖೆಯಿಂದ ದೌರ್ಜನ್ಯ ಪ್ರಕರಣ ಅಂಕಿ ಅಂಶಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗುವುದು.<br>• ದೌರ್ಜನ್ಯ ಪ್ರಕರಣಗಳ ಮಾಹಿತಿಯನ್ನು ಗ್ರಾಮ ಪಂಚಾಯತಿ ಸಾಮಾನ್ಯ ಸಭೆಯ ಮುಂದೆ ಮಂಡಿಸಿ ಗ್ರಾಮ ಪಂಚಾಯತಿ ಕಛೇರಿಗಳಲ್ಲಿ (ಹೆಸರು ಹೊರತುಪಡಿಸಿ) ಮಾಹಿತಿಗಳನ್ನು ಬಹಿರಂಗ ಪಡಿಸಲು ಸುತ್ತೋಲೆ ಹೊರಡಿಸಲು ಕ್ರಮ ವಹಿಸಲಾಗುತ್ತಿದೆ. |
| 55. | ಪ್ರತಿ ಗ್ರಾಮ ಪಂಚಾಯಿತಿ ಹಾಗೂ ವಾರ್ಡ್ ಮಟ್ಟದಲ್ಲಿ ತಿಂಗಳಿಗೆ ಒಮ್ಮೆಯಾದರೂ ಮಹಿಳಾ ಮತ್ತು ಮಕ್ಕಳ ಮೇಲಿನ ವಿಚಾರಗಳ ಬಗ್ಗೆ ಜನಜಾಗೃತಿ ಸಭೆಗಳನ್ನು ನಡೆಸಬೇಕು. ಅಂತಹ ಸಭೆಗಳಲ್ಲಿ ಮಹಿಳೆ ಮತ್ತು ಮಕ್ಕಳಿಗೆ ಸಂಬಂಧಪಟ್ಟ ಎಲ್ಲಾ ವಿಚಾರಗಳ ಬಗ್ಗೆ ತಜ್ಞರಿಂದ ಉಪನ್ಯಾಸಗಳನ್ನು ಏರ್ಪಡಿಸಿ, ಆ ಮೂಲಕ ಜನರಲ್ಲಿ ಜಾಗೃತಿಯನ್ನು ಉಂಟು ಮಾಡಲು ತಪ್ಪಿತಸ್ಥರಿಗೆ ಕಾನೂನಿನಲ್ಲಿ ಇರುವ ಶಿಕ್ಷೆಯ ಕುರಿತು ಮಾಹಿತಿ | **ಪೊಲೀಸ್ ಇಲಾಖೆ:**<br>• ಪ್ರಧಾನ ಕಛೇರಿಯ ಸುತ್ತೋಲೆದನ್ವಯ "ತೆರೆದ ಮನೆ" ಕಾರ್ಯಕ್ರಮ, ಬೀಟ್ ಮೀಟಿಂಗ್ ಮತ್ತು ಜನ ಸಂಪರ್ಕ ಸಭೆಗಳನ್ನು ನಡೆಸಲಾಗಿರುತ್ತದೆ.<br>• ಎಲ್ಲ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಎಲ್ಲ ಗ್ರಾಮಗಳಲ್ಲಿ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಯವರಿಂದ ಮಹಿಳೆ ಮತ್ತು ಮಕ್ಕಳ ದೌರ್ಜನ್ಯ ತಡೆ ಕುರಿತಾದ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br>• ಪೊಲೀಸ್ ಅಧಿಕಾರಿ ಹಾಗೂ ಬೀಟ್ ಸಿಬ್ಬಂದಿಯವರಿಂದ ಜನಸಂಪರ್ಕ ಸಭೆ ನಡೆಸುವ ಕಾಲಕ್ಕೆ ವಿಶೇಷವಾಗಿ ಮಹಿಳೆಯರ ಸಭೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br>**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ:**<br>• ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿಯನ್ನು ರಚಿಸಲಾಗಿರುತ್ತದೆ. ಪ್ರತಿ 3 ತಿಂಗಳಿಗೊಮ್ಮೆ ಸಮಿತಿಯ ಸಭೆಯನ್ನು |

| | | |
|---|---|---|
| | ನೀಡುವಂತೆ ಕ್ರಮ ಜರುಗಿಸಲು ಸರ್ಕಾರ ಯೋಜನೆ ರೂಪಿಸಬೇಕು. | ನಡೆಸಬೇಕು. ತಜ್ಞರ ಸಮಿತಿಯ ಶಿಫಾರಸ್ಸಿನಂತೆ ಮಹಿಳೆ ಮತ್ತು ಮಕ್ಕಳ ಮೇಲಿನ ವಿಚಾರಗಳ ಬಗ್ಗೆ ಜನಜಾಗೃತಿ ಸಭೆಗಳನ್ನು ಏರ್ಪಡಿಸಿ ತಜ್ಞರಿಂದ ಉಪನ್ಯಾಸಗಳನ್ನು ಆಯೋಜಿಸುವುದರ ಮೂಲಕ ಜನರಲ್ಲಿ ಜಾಗೃತಿ ಮೂಡಿಸಲು ಈಗಾಗಲೇ ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ ಹಾಗೂ ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನಗಳಲ್ಲಿ ಕ್ರಮ ವಹಿಸಲಾಗುತ್ತಿದೆ. ಪ್ರತಿ ಸಾಲಿನಲ್ಲಿ ಒಂದು ಮಹಿಳಾ ಗ್ರಾಮ ಸಭೆ ಹಾಗೂ ಒಂದು ಮಕ್ಕಳ ಗ್ರಾಮ ಸಭೆಯನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರಂತೆ ಏರ್ಪಡಿಸಲಾಗುತ್ತಿದೆ.<br>• ಮಹಿಳೆ ಮತ್ತು ಮಕ್ಕಳ ಮೇಲಿನ ವಿಚಾರಗಳ ಬಗ್ಗೆ ಜನಜಾಗೃತಿ ಸಭೆಗಳನ್ನು ಏರ್ಪಡಿಸಿ ತಜ್ಞರಿಂದ ಉಪನ್ಯಾಸಗಳನ್ನು ಆಯೋಜಿಸುವುದರ ಮೂಲಕ ಜನರಲ್ಲಿ ಜಾಗೃತಿ ಮೂಡಿಸಲು ಸುತ್ತೋಲೆ ಹೊರಡಿಸಲು ಕ್ರಮ ವಹಿಸಲಾಗುತ್ತಿದೆ.<br>**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**<br>ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿ ರಚಿಸಲಾಗಿರುತ್ತದೆ. ಪ್ರತಿ ಮೂರು ತಿಂಗಳಿಗೊಮ್ಮೆ ಸಮಿತಿಯ ಸಭೆ ನಡೆಸಲಾಗುತ್ತಿದ್ದು, ಸದರಿ ಸಭೆಗಳಲ್ಲಿ ಮಕ್ಕಳಿಗೆ ಸಂಬAಧಪಟ್ಟ ವಿಷಯಗಳ ಕುರಿತು ಚರ್ಚಿಸಿ, ಅವಶ್ಯಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>ಅಲ್ಲದೆ, ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಕಡ್ಡಾಯವಾಗಿ ವರ್ಷಕ್ಕೆ ಒಂದು ಮಕ್ಕಳ ಗ್ರಾಮ ಸಭೆಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಸದರಿ ಸಭೆಯಲ್ಲಿ ಮಕ್ಕಳಿಗೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚಿಸಿ, ನಿರ್ಣಯಗಳನ್ನು ಕೈಗೊಳ್ಳಲಾಗುತ್ತಿದೆ.<br>**ನಗರಾಭಿವೃದ್ಧಿ ಇಲಾಖೆ:**<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಈಗಾಗಲೇ ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ) ಅಧಿನಿಯಮ 2013ರ ಸೆಕ್ಷನ್ 4 ರಡಿಯಲ್ಲಿ ಹಾಗೂ ಅದರಲ್ಲಿನ ಮಾರ್ಗ ಸೂಚಿಗಳಂತೆ, ಆಂತರೀಕ ದೂರು ನಿವಾರಣಾ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಗೆ ಬರುವ ದೂರುಗಳನ್ನು ಸ್ವೀಕರಿಸಿ ದೂರಿಗೆ ಸಂಬಂಧಿಸಿದಂತೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿರುತ್ತದೆ. |
| 56. | ಸುಪ್ರೀಂ ಕೋರ್ಟ್‌ನ ಆದೇಶದನ್ವಯ ಚುಡಾಯಿಸುವಿಕೆ (ಈವ್ ಟೀಸಿಂಗ್) | **ಪೊಲೀಸ್ ಇಲಾಖೆ:** |

| | | |
|---|---|---|
| | ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. | • ಈಗಾಗಲೇ ರಾಜ್ಯದ ಎಲ್ಲ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ "Public Safaty Act" ಮತ್ತು "ನಿಭರ್ಯ ಯೋಜನೆ" ಅಡಿಯಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ.<br>• ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಈವ್-ಟೀಸಿಂಗ್ ತಡೆಯಲು ಶಾಲಾ/ ಕಾಲೇಜುಗಳ ಹತ್ತಿರ, ಮಹಿಳಾ ವಸತಿ ನಿಲಯ ಹಾಗೂ ಮಹಿಳೆಯರು ಕೆಲಸ ಮಾಡುವ ಸ್ಥಳಗಳಲ್ಲಿ ಬೆಳಿಗ್ಗೆ ಹಾಗೂ ಸಂಜೆ ವಿಶೇಷ ಗಸ್ತು ಕರ್ತವ್ಯಕ್ಕೆ ಸಿಬ್ಬಂದಿಯವರನ್ನು ನಿಯೋಜಿಸಲಾಗುತ್ತಿದೆ.<br>• ರಾಜ್ಯದಲ್ಲಿ ನ್ಯೂ ಬೀಟ್ ಸಿಸ್ಟಮ್ ಜಾರಿಗೊಳಿಸಿ, ಬೀಟ್ ಮೀಟಿಂಗ್ ವೇಳೆಯಲ್ಲಿ ಮಹಿಳೆಯರ ದೌರ್ಜನ್ಯ ಮತ್ತು ಈವ್-ಟೀಸಿಂಗ್‌ಗಳಿಗೆ ಹೆಚ್ಚಿನ ಒತ್ತುನೀಡಿ ಮಾಹಿತಿ ನೀಡಲಾಗುತ್ತಿದೆ.<br>• ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಶಾಲಾ/ ಕಾಲೇಜುಗಳ ಹತ್ತಿರ, ಮಹಿಳಾ ವಸತಿ ನಿಲಯ ಹಾಗೂ ಮಹಿಳೆಯರು ಕೆಲಸ ಮಾಡುವ ಸ್ಥಳಗಳಲ್ಲಿ ಬೆಳಿಗ್ಗೆ ಹಾಗೂ ಸಂಜೆ ವಿಶೇಷ ಗಸ್ತು ಕರ್ತವ್ಯಕ್ಕೆ ಸಿಬ್ಬಂದಿಯವರನ್ನು ನಿಯೋಜಿಸಲಾಗುತ್ತಿದೆ. |
| 57. | ಮಹಿಳಾ ಮತ್ತು ಮಕ್ಕಳ ಮೇಲಿನ ಶೋಷಣೆ, ದೌರ್ಜನ್ಯ, ಅತ್ಯಾಚಾರ, ಮುಂತಾದ ವಿಚಾರಗಳ ಬಗ್ಗೆ ನಿಗದಿತ ಅವಧಿಯಲ್ಲಿ ಪ್ರತಿದಿನ ಸ್ವಯಂ ಇಚ್ಛೆಯಿಂದ ಎಲ್ಲಾ ಟಿ.ವಿ. ಚಾನಲ್ ಗಳಲ್ಲಿ, ರೇಡಿಯೋ ಮುಂತಾದ ಪ್ರಸಾರ ಮಾಧ್ಯಮದಲ್ಲಿ ಜಾಗೃತಿ ಉಂಟುಮಾಡಲು ತಜ್ಞರಿಂದ ಮಾಹಿತಿಗಳನ್ನು ಪ್ರಚಾರಪಡಿಸಲು ಸರ್ಕಾರ ಸೂಕ್ತ ಕ್ರಮ ರೂಪಿಸಬೇಕು. ವಾರ್ತಾ ಇಲಾಖೆ ಅಂಗ ಸಂವೇದನೆಯನ್ನು ಮೂಡಿಸುವ ಚಲನಚಿತ್ರಗಳನ್ನು ಸಿದ್ಧಪಡಿಸಬೇಕು ಮತ್ತು ಅದನ್ನು ವ್ಯಾಪಕವಾಗಿ ಶಾಲಾ, ಕಾಲೇಜು, ಮಾಧ್ಯಮಗಳಲ್ಲಿ ಪ್ರಚಾರ ಮಾಡಬೇಕು. | **ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**:<br><br>ಬೆಂಗಳೂರು ಆಕಾಶವಾಣಿ ಕೇಂದ್ರದ ಮೂಲಕ ವಾತ್ಸಲ್ಯ ವಾಣಿ ಶೀರ್ಷಿಕೆಯಡಿ ಮಕ್ಕಳ ರಕ್ಷಣಾ ನಿರ್ದೇಶನಾಲಯದ ಕಾರ್ಯಕ್ರಮಗಳು ಸಾಪ್ತಾಹಿಕವಾಗಿ ಪ್ರಸಾರವಾಗುತ್ತಿದೆ.<br><br>ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಗ್ರಾಮ ಸಂಪರ್ಕ ಕಾರ್ಯಕ್ರಮದಡಿ ಜನಪದ ಸಂಗೀತ, ಬೀದಿ ನಾಟಕಗಳ ಮೂಲಕ ಈ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ.<br><br>ಸಂಬಂಧಪಟ್ಟ ಇಲಾಖೆಯು ಮಹಿಳಾ ಮತ್ತು ಮಕ್ಕಳ ಮೇಲಿನ ಶೋಷನೆ ದೌರ್ಜನ್ಯ ಕುರಿತ ರೇಡಿಯೋ ಜಿಂಗಲ್ಸ್ ಹಾಗೂ ಟಿವಿ ಸ್ಪಾಟ್ ಗಳನ್ನು ಒದಗಿಸಿದ್ದಲ್ಲಿ ಹಾಗೂ ಇದಕ್ಕೆ ಉಂಟಾಗುವ ವೆಚ್ಚವನ್ನು ಭರಿಸಿದ್ದಲ್ಲಿ ಖಾಸಗಿ ರೇಡಿಯೋ ಮತ್ತು ಟಿವಿ ವಾಹಿನಿಗಳಲ್ಲಿ ಪ್ರಚಾರ ಮಾಡಲು ಕ್ರಮ ವಹಿಸಲಾಗುವುದು. |

| | | |
|---|---|---|
| 58. | ಸರ್ಕಾರ ಮತ್ತು ಸರ್ಕಾರೇತರ ವಿವಿಧ ಕಛೇರಿಗಳಲ್ಲಿ, ಶಾಲಾ ಕಾಲೇಜುಗಳ, ಸ್ಥಳೀಯ ಸಂಸ್ಥೆಗಳ ಕಛೇರಿಗಳ ಹಾಗೂ ಇನ್ನಿತರೆ ಸಾರ್ವಜನಿಕ ಸ್ಥಳಗಳ ಮುಂಭಾಗದಲ್ಲಿ ವಿಶಾಖಾ ಮತ್ತು ಇನ್ನಿತರ ಮಾರ್ಗದರ್ಶಿ ಸೂತ್ರಗಳನುಸಾರ ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ವಿವರಗಳನ್ನು ಹಾಗೂ ದೌರ್ಜನ್ಯಗಳ ದುಷ್ಪರಿಣಾಮಗಳ ಬಗ್ಗೆ ವಿವರಗಳನ್ನು ಬಹಿರಂಗವಾಗಿ ಬಿತ್ತರಿಸಲು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**<br>• ಮಿಷನ್ ಶಕ್ತಿ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಸಬಲೀಕರಣ ಘಟಕ ಮೂಲಕ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಮಟ್ಟದಲ್ಲಿ ಶಾಲಾ-ಕಾಲೇಜುಗಳಲ್ಲಿ ಅರಿವು ಮತ್ತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ.<br>• ಮಹಿಳಾ ರಕ್ಷಣೆ ಮತ್ತು ಸಬಲೀಕರಣ ಅಭಿಯಾನದಡಿ ವೀಡಿಯೋ ಆನ್ ವೀಲ್ಸ್ ಕಾರ್ಯಕ್ರಮದ ಮೂಲಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯಕ್ರಮಗಳ ಕುರಿತು ಹಾಗೂ ಮಹಿಳೆಯರ ಸಾಗಾಣಿಕೆ ತಡೆಗಟ್ಟುವುದು, ಬಾಲ್ಯ ವಿವಾಹ ತಡೆಗಟ್ಟುವ ಕ್ರಮ, ಮಹಿಳೆಯರ ಮತ್ತು ಮಕ್ಕಳ ದೌರ್ಜನ್ಯವನ್ನು ತಡೆಗಟ್ಟುವ ಕುರಿತಾದ ಕಿರು ವಿಡಿಯೋಗಳನ್ನು ಸಾರ್ವಜನಿಕರಿಗೆ ಪ್ರದರ್ಶಿಸುವ ಕಾರ್ಯಕ್ರಮಕ್ಕೆ ದಿನಾಂಕ:08.03.2025 ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಂದು ರಾಜ್ಯದಾದ್ಯಂತ ವೀಡಿಯೋ ಆನ್ ವ್ಹೀಲ್ ಕಾರ್ಯಕ್ರಮಕ್ಕೆ ಮಾನ್ಯ ಇಲಾಖಾ ಸಚಿವರಿಂದ ಚಾಲನೆಗೊಳಿಸಲಾಗಿದೆ.<br>• 30 ಜಿಲ್ಲೆಗಳ ಜಿಲ್ಲಾ/ತಾಲ್ಲೂಕು/ಗ್ರಾಮ ಮಟ್ಟದಲ್ಲಿ 1180 ಪ್ರದರ್ಶನಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br>• ಮಕ್ಕಳ ರಕ್ಷಣಾ ನಿರ್ದೇಶನಾಲಯ ಅಧೀನದಲ್ಲಿರುವ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳಾದ ಬಾಲಕರ ಬಾಲಮಂದಿರ, ಬಾಲಕಿಯರ ಬಾಲಮಂದಿರ, ಸರ್ಕಾರಿ ವೀಕ್ಷಣಾಲಯ, ಮನೋವಿಕಲ ಬಾಲಕರ/ ಬಾಲಕಿಯರ ಬಾಲಮಂದಿರ ಸಂಸ್ಥೆ ಗಳಲ್ಲಿ ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ಹಾಗೂ ದೌರ್ಜನ್ಯಗಳ ದುಷ್ಪರಿಣಾಮಗಳ ಬಗ್ಗೆ Digital wall painting ಮುಖಾಂತರ ಅರಿವು ಮೂಡಿಸಲು ಕ್ರಮಕೈಗೊಳ್ಳಲಾಗುತ್ತಿದೆ.<br>• ಅಲ್ಲದೇ ಸರ್ಕಾರಿ ಕಛೇರಿಗಳಲ್ಲಿಯೂ ಸಹ ಮಕ್ಕಳ ರಕ್ಷಣೆಗೆ ಸಂಬಂಧಿಸಿದ ಪೋಸ್ಟರ್ ಹಾಗೂ ಗೋಡೆ ಬರಹಗಳನ್ನು ಅಳವಡಿಸಲಾಗಿದೆ<br><br>**ಕಾರ್ಮಿಕ ಇಲಾಖೆ:**<br>ಕಾರ್ಮಿಕ ಆಯುಕ್ತಾಲಯ ಹಾಗೂ ಅಧೀನದಲ್ಲಿ ಬರುವ ಮಂಡಳಿಗಳಲ್ಲಿ ವರ್ಷಕ್ಕೆ ಒಂದು ಬಾರಿಯಾದರೂ ಲೈಂಗಿಕ ವಿಚಾರಗಳ ಪರಿಣಾಮ ಹಾಗೂ ದುಷ್ಪರಿಣಾಮಗಳ ಬಗ್ಗೆ ವಿಚಾರ-ಸಂಕಿರಣ ಮುಂತಾದ ಜಾಗೃತಿ ಕಾರ್ಯಕ್ರಮಗಳನ್ನು ಏರ್ಪಡಿಸುವ ಕುರಿತು ಕ್ರಮಕೈಗೊಳ್ಳಲಾಗುವುದು. ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ |

| | | |
|---|---|---|
| | | ಮಂಡಳಿಯಲ್ಲಿ ಮಹಿಳೆಯವರ ಸುರಕ್ಷತೆಗಾಗಿ ಇರುವ ಕಾಯ್ದೆಗಳ ಕುರಿತು ಎರಡು ಕಾನೂನು ಅರಿವು ಕಾರ್ಯಕ್ರಮ ಏರ್ಪಡಿಸಲಾಗಿರುತ್ತದೆ.<br><br>ಕಾರ್ಮಿಕ ಆಯುಕ್ತಾಲಯಕ್ಕೆ ಸಂಬಂಧಿಸಿದಂತೆ, ಶ್ರೀಮತಿ ವಿನುತ ಎನ್., ಸಹಾಯಕ ಕಾರ್ಮಿಕ ಆಯುಕ್ತರು, ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ, ಬೆಂಗಳೂರು ಇವರನ್ನು ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ ಮತ್ತು ನಿವಾರಿಸುವಿಕೆ) ಕಾಯ್ದೆಯಡಿ SHE Box Portal ಅನ್ನು ಅನುಷ್ಠಾನಗೊಳಿಸುವ ಬಗ್ಗೆ "ರಾಜ್ಯ ನೋಡಲ್ ಅಧಿಕಾರಿ (SNO)" ಯನ್ನಾಗಿ ನೇಮಕ ಮಾಡಲಾಗಿರುತ್ತದೆ . ಸದರಿ ಸಮಿತಿಗೆ ಇದುವರೆವಿಗೂ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. ದೂರುಗಳು ಸ್ವೀಕೃತವಾದ್ದಲ್ಲಿ ಸದರಿ ದೂರುಗಳ ಬಗ್ಗೆ ನಿಯಮಾನುಸಾರ ಪರಿಶೀಲಿಸಿ, ಕಾನೂನು ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ಶಿಫಾರಸ್ಸು ಮಾಡಲಾಗುವುದು.<br><br>ಮಂಡಳಿಯಲ್ಲಿ 15 ಮಹಿಳಾ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಈ ಸಿಬ್ಬಂದಿಗಳ ಸುರಕ್ಷತೆಯ ದೃಷ್ಟಿಯಿಂದ ಹಾಗೂ ಅವರಿಗೆ ಕರ್ತವ್ಯ ನಿರ್ವಹಿಸಲು ಮುಕ್ತವಾದ ವಾತಾವರಣ ಕಲ್ಪಿಸುವ ದೃಷ್ಟಿಯಿಂದ ಅವರ ಕುಂದು ಕೊರತೆಗಳನ್ನು ನಿವಾರಿಸಲುThe Sexual Harassment of Women at Workplace (Prevention Prohibition and Redressal) Act, 2013 ರನ್ವಯ ಆಂತರಿಕ ದೂರು ಸಮಿತಿ(ICC)/ಸ್ಥಳೀಯದೂರುಸಮಿತಿ(LCC)ಯನ್ನುರಚಿಸಲಾಗಿರುತ್ತದೆ.<br><br>ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟುವ ಕುರಿತು ಲಭ್ಯವಿರುವ ದೊಡ್ಡ ಸ್ಟಿಕ್ಕರ್ಸ್ ಮತ್ತು ಬ್ರೋಚರ್ಸ್ ಅನ್ನು ಒದಗಿಸುವ ಕುರಿತು ದಿನಾಂಕ:12-09-2024 ರಂದು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಹುಮಹಡಿ ಕಟ್ಟಡ, ಅಂಬೇಡ್ಕರ್ ವೀಧಿ, ಬೆಂಗಳೂರು-1 ರವರಿಗೆ ಪತ್ರ ಬರೆಯಲಾಗಿರುತ್ತದೆ.<br><br>ಮುಂದುವರೆದು, ಕಾರ್ಮಿಕ ಇಲಾಖೆಯ ಕಾರ್ಯವ್ಯಾಪ್ತಿ/ಅಧಿಕಾರವ್ಯಾಪ್ತಿಗೆ ಸಂಬಂಧಿಸಿದಂತೆ, ಎಲ್ಲಾ ಅಧೀನ ಕಛೇರಿಗಳಿಗೆ ತಪಾಸಣಾ ಸಂದರ್ಭದಲ್ಲಿ ಕಾರ್ಯವ್ಯಾಪ್ತಿಯಲ್ಲಿನ ಕೈಗಾರಿಕೆಗಳಿಗೆ ವರ್ಷಕ್ಕೆ ಒಂದು ಬಾರಿಯಾದರೂ ಲೈಂಗಿಕ ವಿಚಾರಗಳ ಪರಿಣಾಮ ಹಾಗೂ ದುಷ್ಪರಿಣಾಮಗಳ ಬಗ್ಗೆ ವಿಚಾರ-ಸಂಕಿರಣ ಮುಂತಾದ ಜಾಗೃತಿ ಕಾರ್ಯಕ್ರಮಗಳನ್ನು ಏರ್ಪಡಿಸುವಂತೆ ಹಾಗೂ ಕೈಗಾರಿಕೆಗಳಲ್ಲಿ ವಿಶಾಖಾ ಮತ್ತು ಇನ್ನಿತರೆ ಮಾರ್ಗದರ್ಶಿ ಸೂತ್ರಗಳನುಸಾರ ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ವಿವರಗಳನ್ನು ಹಾಗೂ ದೌರ್ಜನ್ಯಗಳ ದುಷ್ಪರಿಣಾಮಗಳ ಬಗ್ಗೆ ವಿವರಗಳನ್ನು ಬಹಿರಂಗವಾಗಿ ಬಿತ್ತರಿಸುವ ಕುರಿತು ಮತ್ತು ವಿಶಾಖಾ ಮಾರ್ಗಸೂಚಿ ಹಾಗೂ ದುಡಿಯುವ |

| | | |
|---|---|---|
| | | ಸ್ಥಳಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳ ತಡೆ ಕಾಯ್ದೆ, 2013 ರನ್ವಯ 10 ಜನಕ್ಕೂ ಹೆಚ್ಚು ಜನ ಕೆಲಸ ಮಾಡುತ್ತಾರೋ ಅಂತಹ ಕಛೇರಿ ಮತ್ತು ಸಂಸ್ಥೆಗಳಲ್ಲಿ ಲೈಂಗಿಕ ತಡೆ, ಆಂತರಿಕ ದೂರು ಸಮಿತಿಗಳನ್ನು ಕಡ್ಡಾಯವಾಗಿ ರಚಿಸುವಂತೆ ಆಡಳಿತ ಮಂಡಳಿಗೆ ತಿಳಿಸುವಂತೆ ಹಾಗೂ ಸದರಿ ವಿಷಯದ ಕುರಿತು ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ತಿಳಿಸಲಾಗಿರುತ್ತದೆ.<br><br>**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ:** ಭಾರತದ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದ ಮೇರೆಗೆ ಹೊರಡಿಸಿರುವ ವಿಶಾಖಾ ಮಾರ್ಗಸೂಚಿಗಳ ಅನುಸಾರ ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಇಲಾಖೆಯ ಕೇಂದ್ರ ಕಚೇರಿಯಲ್ಲಿ ಸಮಿತಿ ರಚಿಸಲಾಗಿದೆ. ದೌರ್ಜನ್ಯಗಳ ದುಷ್ಪರಿಣಾಮಗಳ ಬಗ್ಗೆ ಸರ್ಕಾರದ ವಿವಿಧ ಇಲಾಖೆಗಳು ಆಯೋಜಿಸುವ ಜಾಗೃತಿ ಕಾರ್ಯಕ್ರಮಗಳ ಕುರಿತು ಸುದ್ದಿ, ಲೇಖನಗಳನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಲಾಗುತ್ತಿದೆ. ಇಲಾಖೆಯ ಪ್ರಕಟಣೆಗಳಲ್ಲಿ ಲೇಖನಗಳನ್ನು ಪ್ರಕಟಿಸಲಾಗುತ್ತಿದೆ.<br><br>**ಪೊಲೀಸ್ ಇಲಾಖೆ:**<br>• ರಾಜ್ಯದ ಎಲ್ಲ ಪೊಲೀಸ್ ಠಾಣೆಗಳಲ್ಲಿ ಸಾರ್ವಜನಿಕರಿಗೆ ಎದ್ದು ಕಾಣುವಂತೆ ಮಹಿಳೆ ಮತ್ತು ಮಕ್ಕಳ ದೌರ್ಜನ್ಯ ತಡೆ ಕುರಿತಾದ ಕಾನೂನುಗಳ ಮಾಹಿತಿ ಇರುವ ಭಿತ್ತಿ ಫಲಕಗಳನ್ನು ಅಳವಡಿಸಲಾಗಿದೆ.<br>• ಅಲ್ಲದೇ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮಾರ್ಗಸೂಚಿಗಳ ಮಾಹಿತಿ ಇರುವ ಭಿತ್ತಿ ಫಲಕಗಳನ್ನು ಅಳವಡಿಸಲಾಗಿದೆ.<br>**ಶಿಕ್ಷಣ ಇಲಾಖೆ.**<br><br>• ಶಾಲೆಗಳಲ್ಲಿ ಎಲ್ಲಾ ಶಿಕ್ಷಕರಿಗೂ POCSO ಬಗ್ಗೆ ಮಾಹಿತಿ ನೀಡಲಾಗಿದೆ. 2024-25 ರ ವಾರ್ಷಿಕ ಶೈಕ್ಷಣಿಕ ಮಾರ್ಗದರ್ಶಿಯಲ್ಲಿಯೂ ನಮೂದಿಸಲಾಗಿದೆ.<br>• ಮಕ್ಕಳ ಸಹಾಯವಾಣಿ ಸಂಖ್ಯೆ 1098 ಪ್ರತಿ ಶಾಲೆಗಳಲ್ಲೂ ಬರೆಸಲಾಗಿದೆ.<br>• ಕಛೇರಿಗಳಲ್ಲಿ ವಿಶಾಖಾ ಮತ್ತು ಇನ್ನಿತರ ಮಾರ್ಗದರ್ಶಿ ಸೂತ್ರಗಳನುಸಾರ ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಸಮಿತಿಗಳನ್ನು ಪ್ರತಿ ಕಛೇರಿಗಳಲ್ಲೂ ರಚಿಸಲಾಗಿದೆ. ಎಲ್ಲಾ ಸಂಸ್ಥೆಗಳಲ್ಲೂ ಈ ಬಗ್ಗೆ ಪ್ರದರ್ಶನ ಫಲಕದಲ್ಲಿ ಬರೆಸಲು ಕ್ರಮವಹಿಸಲಾಗುವುದು.<br>• ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ವಿವರಗಳನ್ನು ಹಾಗೂ ದೌರ್ಜನ್ಯಗಳ ದುಷ್ಪರಿಣಾಮಗಳ ಬಗ್ಗೆ ವಿವರಗಳನ್ನು ಬಹಿರಂಗವಾಗಿ |

| | | |
|---|---|---|
| | | ಬಿತ್ತರಿಸಲು ವಿಜ್ಞಾನ ಮತ್ತು ಸಮಾಜ ವಿಜ್ಞಾನ ಪಠ್ಯ ಪುಸ್ತಕಗಳ ರಕ್ಷಾ ಪುಟದ ಒಳ ಪುಟಗಳಲ್ಲಿ ಮುದ್ರಿಸಲಾಗಿದೆ.<br>• ವಿದ್ಯಾರ್ಥಿಗಳಿಗೆ ಪೋಷಕರ ಸಭೆಗಳಲ್ಲಿ ತಾಯಂದಿರ ಸಭೆಗಳಲ್ಲಿ ಸಮುದಾಯದತ್ತ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳಿಗೆ ಪೋಷಕರ ಸಭೆಗಳಲ್ಲಿ ಹಾಗೂ ಶಾಲಾ ಆವರಣದಲ್ಲಿ, ಶಾಲಾ ಸಭಾಂಗಣದಲ್ಲಿ ಸಾರ್ವಜನಿಕ ಸ್ಥಳಗಳ ಪೋಲಿಸ್ ಇಲಾಖೆಯ ಸಹಯೋಗದೊಂದಿಗೆ "ತೆರೆದ ಮನ" ಕಾರ್ಯಕ್ರಮದಡಿ ಶಾಲಾ ವಿದ್ಯಾರ್ಥಿಗಳು,ಶಿಕ್ಷಕರು,ಪೋಷಕರು ಸೇರಿದಂತೆ ಎಲ್ಲಾ ಪಾಲುದಾರರಿಗೆ /ಭಾಗೀದಾರರಿಗೆ ಜಾಗೃತಿ ಮೂಡಿಸಲು ಶಾಲೆಯ ಮುಖ್ಯ ಶಿಕ್ಷಕರಿಗೆ ತಿಳಿಸಲಾಗಿದೆ. |
| 59. | ವಿಶಾಖಾ ಮಾರ್ಗಸೂಚಿ ರೀತ್ಯಾ ಶಾಲೆ, ಕಾಲೇಜುಗಳಲ್ಲಿ ಕನಿಷ್ಠ ತಿಂಗಳಿಗೆ ಒಮ್ಮೆಯಾದರೂ ವಿದ್ಯಾರ್ಥಿಗಳ ಮತ್ತು ಅವರ ಪಾಲಕರ/ಪೋಷಕರ ಸಭೆ ನಡೆಸಿ, ಮಕ್ಕಳ ಮೇಲಿನ ದೌರ್ಜನ್ಯಗಳ ಬಗ್ಗೆ ಮಾಹಿತಿಗಳನ್ನು ನೀಡಿ ಜಾಗೃತಿಗೊಳಿಸಬೇಕು. ಅಂತಹ ಸಭೆಗಳಲ್ಲಿ ಸಂಬಂಧಿಸಿದ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ಹಾಗೂ ಇತರೆ ಸಂಬಂಧಪಟ್ಟ ಅಧಿಕಾರಿಗಳು ಭಾಗವಹಿಸುವಂತೆ ಮಾರ್ಗಸೂಚಿಗಳನ್ನು ಸರ್ಕಾರ ರೂಪಿಸಬೇಕು. ಕಿರುಚಿತ್ರ, ಕಾರ್ಟೂನ್ಸ್, ಹಾಡು, ಕಥೆ, ಮತ್ತಿತರ ದೃಶ್ಯ ಮಾಧ್ಯಮವನ್ನು ಸೂಕ್ತವಾಗಿ ಬಳಸಿ ತಿಳುವಳಿಕೆ ನೀಡುವುದನ್ನು ರೂಢಿಸಿಕೊಳ್ಳಬೇಕು. | **ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ:** ವಿಶಾಖಾ ಮಾರ್ಗಸೂಚಿಗಳ ಅನುಸಾರ ಕಿರುಚಿತ್ರ, ಕಾರ್ಟೂನ್ಸ್, ಹಾಡು, ಕಥೆ ಮತ್ತಿತರ ದೃಶ್ಯ ಮಾಧ್ಯಮಗಳನ್ನು ಬಳಸಿ ತಿಳುವಳಿಕೆ ನೀಡಲು ಕ್ರಮವಹಿಸಲಾಗುವುದು.<br><br>**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,**<br>• ರಾಷ್ಟ್ರೀಯ ಜನಸಂಖ್ಯಾ ಯೋಜನ (NPEP)/ ಶಾಲಾ ಆರೋಗ್ಯ ಕಾರ್ಯಕ್ರಮದಡಿ NCERT & DSERT ಯಿಂದ ಸಿದ್ಧಪಡಿಸಲಾಗಿರುವ IEC material (brochure, videos, posters) ಗಳನ್ನು ಶಾಲೆಗಳಿಗೆ ವಿತರಿಸಲಾಗಿದೆ. DSERT website ನಲ್ಲಿ ಅಳವಡಿಸಲಾಗಿದೆ. ಇವುಗಳನ್ನು ಪೋಷಕರ ಸಭೆ ಮತ್ತು ಶಾಲಾ ಕಾರ್ಯಕ್ರಮಗಳು ನಡೆಯುವ ದಿನದಂದು ಬಳಸಿ ಮಾಹಿತಿ ನೀಡಲಾಗುತ್ತಿದೆ.<br>• ಪೋಷಕರ ಸಭೆ ಮತ್ತು ಸಮುದಾಯದತ್ತ ಶಾಲಾ ಕಾರ್ಯಕ್ರಮಗಳು ನಡೆಯು ದಿನದಂದು ಎಲ್ಲಾ ಪೋಷಕರೂ ಸಭೆ ಸೇರುವುದರಿಂದ ಅಂದು ಮಕ್ಕಳ ಮೇಲಿನ ದೌರ್ಜನ್ಯಗಳ ಬಗ್ಗೆ, ಮಾಹಿತಿಗಳನ್ನು ನೀಡಿ ಜಾಗೃತಿಗೊಳಿಸಲು ಈ ಸಭೆಗಳಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳು,ಪೊಲೀಸ್ ಅಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ಹಾಗೂ ಇತರೆ ಸಂಬಂಧಪಟ್ಟ ಅಧಿಕಾರಿಗಳು ಭಾಗವಹಿಸುವಂತೆ ಸುತ್ತೋಲೆ ಹೊರಡಿಸಲು ಕ್ರಮವಹಿಸಲಾಗುವುದು. |

| | | |
|---|---|---|
| 60. | ವಿಶಾಖಾ ಮಾರ್ಗಸೂಚಿ ಹಾಗೂ ದುಡಿಯುವ ಸ್ಥಳಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳ ತಡೆ ಕಾಯ್ದೆ, 2013 ರ ರೀತ್ಯಾ ಲೈಂಗಿಕ ತಡೆ, ಆಂತರಿಕ ದೂರು ಸಮಿತಿಗಳನ್ನು ಕಡ್ಡಾಯವಾಗಿ ಸರ್ಕಾರಿ ಕಛೇರಿಗಳಲ್ಲಿ, ಸರ್ಕಾರೇತರ ಸಂಸ್ಥೆಗಳಲ್ಲಿ ಎಲ್ಲ 10 ಜನಕ್ಕೂ ಹೆಚ್ಚು ಜನ ಕೆಲಸ ಮಾಡುತ್ತಾರೋ ಅಂತಹ ಕಛೇರಿ ಮತ್ತು ಸಂಸ್ಥೆಗಳಲ್ಲಿ ಸಮಿತಿಗಳನ್ನು ನೇಮಕ ಮಾಡಲು ಕ್ರಮ ಜರುಗಿಸುವುದು. ಅಂತಹ ಸಮಿತಿಗಳು ಕಾಲಬದ್ಧವಾಗಿ ಸಭೆಗಳನ್ನು ನಡೆಸಿ. ಜನರಲ್ಲಿ ಜಾಗೃತಿ ಉಂಟುಮಾಡುವುದು. ಸ್ವೀಕೃತ ದೂರುಗಳ ಬಗ್ಗೆ ಕಾನೂನಿನ ರೀತ್ಯಾ ಪರಿಶೀಲಿಸಿ, ಕಾನೂನು ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ಶಿಫಾರಸ್ಸು ಮಾಡುವುದು. ಯಾವ ಕಛೇರಿಗಳಲ್ಲಿ ಅಥವಾ ಸಂಸ್ಥೆಗಳಲ್ಲಿ ಅಂತಹ ಸಮಿತಿಗಳನ್ನು ರಚನೆ ಮಾಡದೆ. ಮಹಿಳೆಯರ ರಕ್ಷಣೆ ಬಗ್ಗೆ ಅಸಡ್ಡೆ ತೋರುತ್ತಾರೋ, ಅಂತಹ ಕಛೇರಿ/ಸಂಸ್ಥೆಯ ಅಧಿಕಾರಿಗಳ ಮೇಲೆ ಕಡ್ಡಾಯವಾಗಿ ಕಾನೂನಿನ ರೀತ್ಯಾ ಸರ್ಕಾರ ಕ್ರಮ | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮಾಹಿತಿ (ಮಹಿಳಾ ಆಯೋಗ):**<br>• ಕರ್ನಾಟಕ ರಾಜ್ಯಾದ್ಯಂತ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳ ತಡೆಯಲು (ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ)2013ರ ಅಧಿನಿಯಮದಂತೆ Sexual Harassment of Women at Workplace (Prevention, Prohibition and Redressal) Act 2013ರ ಕಾಯ್ದೆಯನ್ನು ಜಾರಿಗೆ ತರಲಾಗಿದೆ. 10 ಮತ್ತು 10ಕ್ಕಿಂತ ಹೆಚ್ಚು ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ/ಖಾಸಗಿ ಕಛೇರಿಗಳು, ಕಾರ್ಖಾನೆಗಳು/ಗಾರ್ಮೆಂಟ್ಸ್ ಫ್ಯಾಕ್ಟರಿಗಳು, ವಿಶ್ವವಿದ್ಯಾಲಯಗಳು, ಸಂಘ-ಸಂಸ್ಥೆಗಳು ಇತ್ಯಾದಿಗಳಲ್ಲಿ ಆಂತರಿಕ ದೂರು ಸಮಿತಿಯನ್ನು ರಚಿಸುವುದು ಕಡ್ಡಾಯವಾಗಿರುತ್ತದೆ. ಕಾಯ್ದೆಯ ಸೆಕ್ಷನ್ 23 ಮತ್ತು 24ರನ್ವಯ ಈ ಅಧಿನಿಯಮವನ್ನು ಅನುಷ್ಠಾನಗೊಳಸುತ್ತಿರುವ ಬಗ್ಗೆ ಮೇಲ್ವಿಚಾರಣೆ ಮಾಡಲು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಸಕ್ಷಮ ಪ್ರಾಧಿಕಾರ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಲಾಗಿದೆ.<br>• ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳ ತಡೆಯಲು (ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ)2013ರ ಅಧಿನಿಯಮದ ಸೆಕ್ಷನ್ 5, 20, 21(1)(2)ರ ಅನ್ವಯ ಸರ್ಕಾರದ ಆದೇಶ ಸಂಖ್ಯೆ:ಮಮಇ/28/ರಾಮಆ/2015, ಬೆಂಗಳೂರು, ದಿನಾಂಕ:18-11-2015ರಂತೆ ಅಧಿಕಾರ ಚಲಾಯಿಸಿ, ಆಯಾ ಜಿಲ್ಲೆಯ ಜಿಲ್ಲಾಧಿಕಾರಿಯನ್ನು ಈ ಅಧಿನಿಯಮದ ಮೇರೆಗೆ ಅಧಿಕಾರಗಳನ್ನು ಚಲಾಯಿಸಲು ಅಥವಾ ಪ್ರಕಾರ್ಯಗಳನ್ನು ನಿರ್ವಹಿಸಲು ಪ್ರತಿಯೊಂದು ಜಿಲ್ಲೆಗೆ ಜಿಲ್ಲಾ ಅಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ.<br>• ಕಾಯ್ದೆ ಅನ್ವಯ 10 ಮತ್ತು 10ಕ್ಕಿಂತ ಹೆಚ್ಚು ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ/ಖಾಸಗಿ ಕಛೇರಿಗಳು, ಕಾರ್ಖಾನೆಗಳು/ಗಾರ್ಮೆಂಟ್ಸ್ ಫ್ಯಾಕ್ಟರಿಗಳು, ವಿಶ್ವವಿದ್ಯಾಲಯಗಳು, ಸಂಘ-ಸಂಸ್ಥೆಗಳು ಇತ್ಯಾದಿಗಳಲ್ಲಿ ಆಂತರಿಕ ದೂರು ಸಮಿತಿಯನ್ನು ರಚಿಸುವಂತೆ ಸರ್ಕಾರದಿಂದ ಹಾಗೂ ಕರ್ನಾಟಕ ರಾಜ್ಯ ಮಹಿಳಾ ಆಯೋಗದಿಂದ ಎಲ್ಲಾ 31 ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಸೂಚಿಸಲಾಗಿದ್ದು, ಅದರಂತೆ ರಾಜ್ಯದಲ್ಲಿ 22,516 ಸರ್ಕಾರಿ ಕಛೇರಿಗಳಲ್ಲಿ ಹಾಗೂ 37,991 ಖಾಸಗಿ ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿ ರಚಿಸಿರುವ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳು ಮಾಹಿತಿಯನ್ನು ಸಲ್ಲಿಸಿರುತ್ತಾರೆ. 10ಕ್ಕಿಂತ ಕಡಿಮೆ ಸಿಬ್ಬಂದಿ ಇರುವ ಸಂಸ್ಥೆಗಳ ದೂರರ್ಜಿಗಳನ್ನು ಇತ್ಯರ್ಥಪಡಿಸಲು, ಸ್ಥಳೀಯ ದೂರು ಸಮಿತಿಯನ್ನು ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ಈಗಾಗಲೇ ರಚಿಸಿರುತ್ತಾರೆ. |

| | | |
|---|---|---|
| | ಜರುಗಿಸಬೇಕು. ಅದಕ್ಕೆ ಅಗತ್ಯವಿರುವ ಎಂದರೆ ಸಮಿತಿಯ ವಿವರ ಮತ್ತು ಕಾರ್ಯನಿರ್ವಹಣೆಯ ವರದಿಗಳನ್ನು ಕಾಲಕಾಲಕ್ಕೆ ಸರ್ಕಾರಕ್ಕೆ ಸಲ್ಲಿಸಬೇಕು. | • ಎಲ್ಲಾ ಸರ್ಕಾರಿ/ಖಾಸಗಿ ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿ ರಚಿಸಿರುವ ಬಗ್ಗೆ ಜಿಲ್ಲಾಧಿಕಾರಿಗಳು ಸರ್ವೆ ಕಾರ್ಯ ಕೈಗೊಂಡಿದ್ದು, ಆಂತರಿಕ ದೂರು ಸಮಿತಿ ರಚನೆಯಾಗದಿದ್ದಲ್ಲಿ, ಅಂತಹ ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿ ರಚಿಸಲು ಕ್ರಮವಹಿಸುತ್ತಿರುತ್ತಾರೆ.<br>• ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ, ನವ ದೆಹಲಿ, ಇವರು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ರಾಜ್ಯಾದ್ಯಂತ ಈ ಕಾಯ್ದೆಯ ಅನುಷ್ಠಾನವನ್ನು ಪರಿಶೀಲಿಸುತ್ತಿದ್ದು, ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳದ ಬಗ್ಗೆ ದೂರು ಸಲ್ಲಿಸಲು "SHe-Box Portal" ಎಂಬ online portal ಅನ್ನು ಪ್ರಾರಂಭಿಸಲಾಗಿದೆ.<br><br>**ಕಾರ್ಮಿಕ ಇಲಾಖೆ:**<br><br>ಕಾರ್ಮಿಕ ಆಯುಕ್ತಾಲಯ ಹಾಗೂ ಅಧೀನದಲ್ಲಿ ಬರುವ ಮಂಡಳಿಗಳಲ್ಲಿ ವರ್ಷಕ್ಕೆ ಒಂದು ಬಾರಿಯಾದರೂ ಲೈಂಗಿಕ ವಿಚಾರಗಳ ಪರಿಣಾಮ ಹಾಗೂ ದುಷ್ಪರಿಣಾಮಗಳ ಬಗ್ಗೆ ವಿಚಾರ-ಸಂಕಿರಣ ಮುಂತಾದ ಜಾಗೃತಿ ಕಾರ್ಯಕ್ರಮಗಳನ್ನು ಏರ್ಪಡಿಸುವ ಕುರಿತು ಕ್ರಮಕೈಗೊಳ್ಳಲಾಗುವುದು. ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಲ್ಲಿ ಮಹಿಳೆಯವರ ಸುರಕ್ಷತೆಗಾಗಿ ಇರುವ ಕಾಯ್ದೆಗಳ ಕುರಿತು ಎರಡು ಕಾನೂನು ಅರಿವು ಕಾರ್ಯಕ್ರಮ ಏರ್ಪಡಿಸಲಾಗಿರುತ್ತದೆ.<br><br>ಕಾರ್ಮಿಕ ಆಯುಕ್ತಾಲಯಕ್ಕೆ ಸಂಬಂಧಿಸಿ , ಶ್ರೀಮತಿ ವಿನುತ ಎನ್., ಸಹಾಯಕ ಕಾರ್ಮಿಕ ಆಯುಕ್ತರು, ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ, ಬೆಂಗಳೂರು ಇವರನ್ನು ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ ಮತ್ತು ನಿವಾರಿಸುವಿಕೆ) ಕಾಯ್ದೆಯಡಿ SHE Box Portal ಅನ್ನು ಅನುಷ್ಠಾನಗೊಳಿಸುವ ಬಗ್ಗೆ "ರಾಜ್ಯ ನೋಡಲ್ ಅಧಿಕಾರಿ (SNO)" ಯನ್ನಾಗಿ ನೇಮಕ ಮಾಡಲಾಗಿರುತ್ತದೆ. ಸದರಿ ಸಮಿತಿಗೆ ಇದುವರೆವಿಗೂ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. ದೂರುಗಳು ಸ್ವೀಕೃತವಾದಲ್ಲಿ ಸದರಿ ದೂರುಗಳ ಬಗ್ಗೆ ನಿಯಮಾನುಸಾರ ಪರಿಶೀಲಿಸಿ, ಕಾನೂನು ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ಶಿಫಾರಸ್ಸು ಮಾಡಲಾಗುವುದು.<br><br>ಮಂಡಳಿಯಲ್ಲಿ 15 ಮಹಿಳಾ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಈ ಸಿಬ್ಬಂದಿಗಳ ಸುರಕ್ಷತೆಯ ದೃಷ್ಟಿಯಿಂದ ಹಾಗೂ ಅವರಿಗೆ ಕರ್ತವ್ಯ ನಿರ್ವಹಿಸಲು ಮುಕ್ತವಾದ ವಾತಾವರಣ ಕಲ್ಪಿಸುವ ದೃಷ್ಟಿಯಿಂದ ಅವರ ಕುಂದು ಕೊರತೆಗಳನ್ನು ನಿವಾರಿಸಲುThe Sexual Harassment of |

| | | |
|---|---|---|
| | | Women at Workplace (Prevention Prohibition and Redressal) Act, 2013 ರನ್ವಯ ಆಂತರಿಕ ದೂರು ಸಮಿತಿ(ICC)/ಸ್ಥಳೀಯದೂರುಸಮಿತಿ(LCC)ಯನ್ನುರಚಿಸಲಾಗಿರುತ್ತದೆ.<br><br>ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟುವ ಕುರಿತು ಲಭ್ಯವಿರುವ ದೊಡ್ಡ ಸ್ಟಿಕ್ಕರ್ಸ್ ಮತ್ತು ಬ್ರೋಚರ್ಸ್ ಅನ್ನು ಒದಗಿಸುವ ಕುರಿತು ದಿನಾಂಕ:12-09-2024 ರಂದು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಹುಮಹಡಿ ಕಟ್ಟಡ, ಅಂಬೇಡ್ಕರ್ ವೀಧಿ, ಬೆಂಗಳೂರು-1 ರವರಿಗೆ ಪತ್ರ ಬರೆಯಲಾಗಿರುತ್ತದೆ.<br><br>ಮುಂದುವರೆದು, ಕಾರ್ಮಿಕ ಇಲಾಖೆಯ ಕಾರ್ಯವ್ಯಾಪ್ತಿ/ಅಧಿಕಾರವ್ಯಾಪ್ತಿಗೆ ಸಂಬಂಧಿಸಿದಂತೆ, ಎಲ್ಲಾ ಅಧೀನ ಕಛೇರಿಗಳಿಗೆ ತಪಾಸಣಾ ಸಂದರ್ಭದಲ್ಲಿ ಕಾರ್ಯವ್ಯಾಪ್ತಿಯಲ್ಲಿನ ಕೈಗಾರಿಕೆಗಳಿಗೆ ವರ್ಷಕ್ಕೆ ಒಂದು ಬಾರಿಯಾದರೂ ಲೈಂಗಿಕ ವಿಚಾರಗಳ ಪರಿಣಾಮ ಹಾಗೂ ದುಷ್ಪರಿಣಾಮಗಳ ಬಗ್ಗೆ ವಿಚಾರ-ಸಂಕಿರಣ ಮುಂತಾದ ಜಾಗೃತಿ ಕಾರ್ಯಕ್ರಮಗಳನ್ನು ಏರ್ಪಡಿಸುವಂತೆ ಹಾಗೂ ಕೈಗಾರಿಕೆಗಳಲ್ಲಿ ವಿಶಾಖಾ ಮತ್ತು ಇನ್ನಿತರೆ ಮಾರ್ಗದರ್ಶಿ ಸೂತ್ರಗಳನುಸಾರ ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ವಿವರಗಳನ್ನು ಹಾಗೂ ದೌರ್ಜನ್ಯಗಳ ದುಷ್ಪರಿಣಾಮಗಳ ಬಗ್ಗೆ ವಿವರಗಳನ್ನು ಬಹಿರಂಗವಾಗಿ ಬಿತ್ತರಿಸುವ ಕುರಿತು ಮತ್ತು ವಿಶಾಖಾ ಮಾರ್ಗಸೂಚಿ ಹಾಗೂ ದುಡಿಯುವ ಸ್ಥಳಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳ ತಡೆ ಕಾಯ್ದೆ, 2013 ರನ್ವಯ 10 ಜನಕ್ಕೂ ಹೆಚ್ಚು ಜನ ಕೆಲಸ ಮಾಡುತ್ತಾರೋ ಅಂತಹ ಕಛೇರಿ ಮತ್ತು ಸಂಸ್ಥೆಗಳಲ್ಲಿ ಲೈಂಗಿಕ ತಡೆ, ಆಂತರಿಕ ದೂರು ಸಮಿತಿಗಳನ್ನು ಕಡ್ಡಾಯವಾಗಿ ರಚಿಸುವಂತೆ ಆಡಳಿತ ಮಂಡಳಿಗೆ ತಿಳಿಸುವಂತೆ ಹಾಗೂ ಸದರಿ ವಿಷಯದ ಕುರಿತು ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ತಿಳಿಸಲಾಗಿರುತ್ತದೆ. |
| 61. | ಗ್ರಾಮೀಣ ಪ್ರದೇಶಗಳಲ್ಲಿ ದುಡಿಯುವ ಕೃಷಿ ಕೂಲಿಕಾರ ಮತ್ತು ನಗರಗಳಲ್ಲಿ ಇರುವ ಕಟ್ಟಡ ಕಾರ್ಮಿಕ, ವಲಸಿಗ ಮತ್ತು ಮನೆಗೆಲಸದ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ತಡೆಗೆ ಜಿಲ್ಲಾ ಮಟ್ಟದ ಸ್ಥಳೀಯ ದೂರು ಸಮಿತಿಗಳ ರಚನೆ, ಸಮರ್ಪಕ ಕಾರ್ಯನಿರ್ವಹಣೆಗಾಗಿ ಕ್ರಮ ವಹಿಸುವುದು. | **ಕಾರ್ಮಿಕ ಇಲಾಖೆ:**<br><br>ಗ್ರಾಮೀಣ ಪ್ರದೇಶಗಳಲ್ಲಿ ದುಡಿಯುವ ಕೃಷಿ ಕೂಲಿಕಾರ ಮತ್ತು ನಗರಗಳಲ್ಲಿ ಇರುವ ಕಟ್ಟಡ ಕಾರ್ಮಿಕ, ವಲಸಿಗ ಮತ್ತು ಮನೆಗೆಲಸದ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ತಡೆಗೆ ಜಿಲ್ಲಾ ಮಟ್ಟದ ಸ್ಥಳೀಯ ದೂರು ಸಮಿತಿಗಳನ್ನು ಕಾರ್ಮಿಕ ಇಲಾಖೆಯು ರಚಿಸಿರುವುದಿಲ್ಲ.<br><br>**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ಮಹಿಳಾ ಆಯೋಗ):** |

| | | |
|---|---|---|
| | | ಗ್ರಾಮೀಣ ಪ್ರದೇಶಗಳಲ್ಲಿ ದುಡಿಯುವ ಕೃಷಿ ಕೂಲಿಕಾರ ಮತ್ತು ನಗರಗಳಲ್ಲಿ ಇರುವ ಕಟ್ಟಡ ಕಾರ್ಮಿಕ, ವಲಸಿಗ ಮತ್ತು ಮನೆಗೆಲಸದ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯಗಳ ಬಗ್ಗೆ ದೂರು ದಾಖಲಿಸಲು ರಾಜ್ಯದ ಜಿಲ್ಲಾಧಿಕಾರಿಗಳು ಎಲ್ಲಾ ಜಿಲ್ಲೆಗಳಲ್ಲಿ ಸ್ಥಳೀಯ ದೂರು ಸಮಿತಿಗಳನ್ನು ಈಗಾಗಲೇ ರಚಿಸಿದ್ದು, ಸಮರ್ಪಕ ಕಾರ್ಯನಿರ್ವಹಣೆ ಮಾಡಲು ಕ್ರಮವಹಿಸಿರುತ್ತಾರೆ. |
| 62. | ರಾಜ್ಯದಲ್ಲಿ ಒಟ್ಟಾರೆ ಜನಸಂಖ್ಯೆಯಲ್ಲಿ ಸುಮಾರು 50% ರಷ್ಟು ಮಹಿಳೆಯರಿದ್ದಾರೆ. 0-18 ವರ್ಷ ವಯಸ್ಸಿನ ಅಪ್ರಾಪ್ತರು 38%, ಈ ಸಂಖ್ಯೆಯನ್ನು ನೋಡಿದರೆ ಮಹಿಳೆಯರು ಮತ್ತು ಮಕ್ಕಳು ಸಮಾಜದಲ್ಲಿ ಬಹುಸಂಖ್ಯಾತರಾಗಿರುತ್ತಾರೆ. ಅವರುಗಳ ಸಮಸ್ಯೆಗಳು ಪರಿಹಾರವಾಗಿ, ಅವರ ಸಬಲೀಕರಣವಾದಲ್ಲಿ ಮಾತ್ರ ನಾಗರಿಕ ಸಮಾಜವಾಗಲು ಸಾಧ್ಯ ಎಂಬುದನ್ನು ಮನಗಾಣಬೇಕಾಗಿರುತ್ತದೆ. | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**<br>• ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಮಹತ್ವಾಕಾಂಕ್ಷಿ ಮಹಿಳಾ ಸಬಲೀಕರಣ ಯೋಜನೆಯಾದ ಗೃಹ ಲಕ್ಷ್ಮಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ.<br>• ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಭಾಗ್ಯ ಲಕ್ಷ್ಮಿ ಯೋಜನೆ, ಹಾಗೂ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>• ಮಹಿಳಾ ಸಬಲೀಕರಣಕ್ಕಾಗಿ ಜಿಲ್ಲೆಗಳಲ್ಲಿ 31 ಜಿಲ್ಲಾ ಸಬಲೀಕರಣ ಘಟಕಗಳನ್ನು ಸ್ಥಾಪಿಸಲಾಗಿದ್ದು, ಮಹಿಳಾ ಸಬಲೀಕರಣ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವ ಜಿಲ್ಲಾ ಮಟ್ಟದ ಇತರೆ ಇಲಾಖೆಗಳ ಸಹಯೋಗದೊಂದಿಗೆ ಕಾರ್ಯನಿರ್ವಹಿಸುತ್ತಿದೆ. |
| 63. | ರಾಜ್ಯದಲ್ಲಿ 1000 ಗಂಡು ಮಕ್ಕಳಿಗೆ 930 ಹೆಣ್ಣು ಮಕ್ಕಳ ಲಿಂಗಾನುಪಾತವಿರುತ್ತದೆ. ಇದು ಒಂದು ಆಘಾತಕಾರಿಯಾದ ವಿಚಾರವಾಗಿರುತ್ತದೆ. ರಾಜ್ಯವ್ಯಾಪಿ ಇರುವ ಲಿಂಗಾನುಪಾತದ ಸಮಸ್ಯೆ ಬಗ್ಗೆ ಸರ್ಕಾರ, ಸ್ಥಳೀಯ ಸಂಸ್ಥೆಗಳು, ಸಂಘ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಜನಜಾಗೃತಿ ಮೂಡಿಸಲು ಕ್ರಮ ಜರುಗಿಸಿ, | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**<br>ಹೆಣ್ಣು ಮಕ್ಕಳ ಲಿಂಗಾನುಪಾತವನ್ನು ಹೆಚ್ಚಿಸಲು ಹಾಗೂ ಹೆಣ್ಣು ಭ್ರೂಣ ಹತ್ಯೆ ಮತ್ತು ಮಕ್ಕಳ ರಕ್ಷಣೆಯನ್ನು ಹೆಚ್ಚಿಸಲು ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆಯಡಿ ಜಿಲ್ಲಾ ಮಟ್ಟದಲ್ಲಿ ತರಬೇತಿ ಕಾರ್ಯಕ್ರಮಗಳು, ವಿವಿಧ ಮಾಧ್ಯಮಗಳ ಮೂಲಕ ಪ್ರಚಾರ ಕಾರ್ಯಕ್ರಮಗಳು (ಆಕಾಶವಾಣಿಯಲ್ಲಿ Radio Jingles ಹಾಗೂ ದೂರದರ್ಶನದಲ್ಲಿ Time Check Before News) ಮತ್ತು ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ, Steet Plays, ಹೆಣ್ಣು ಮಕ್ಕಳ ರಕ್ಷಣೆ, ಶಿಕ್ಷಣ ಹಾಗೂ ಹೆಣ್ಣು ಮಕ್ಕಳಿಗೆ ಲಭ್ಯವಿರುವ ಸೌಲಭ್ಯಗಳು ಹಾಗೂ PC&PNDT ಕಾಯ್ದೆಯ ಬಗ್ಗೆ ಹಾಗೂ ಇನ್ನಿತರೆ ವಿಷಯಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.<br>BBBP ಯೋಜನೆಯಡಿ ರಾಜ್ಯಾದ್ಯಂತ 584 ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಒಟ್ಟು 610860 ಸಾರ್ವಜನಿಕರು ಅರಿವು ಕಾರ್ಯಕ್ರಮದಲ್ಲಿ ಭಾಗವಹಿಸಿರುತ್ತಾರೆ.. |

| | | |
|---|---|---|
| | ಲಿಂಗಾನುಪಾತವನ್ನು ಸರಿಸಮನಾಗಿ ಇರುವಂತೆ ಮಾಡಲು ಸರ್ಕಾರ ಕ್ರಮ ಜರುಗಿಸುವುದು, ಲಿಂಗ ಪತ್ತೆ ನಿಷೇಧ ಕಾಯ್ದೆಯನ್ವಯ (ಪಿಸಿ & ಪಿಎನ್ ಡಿಟಿ ಕಾಯ್ದೆ, 1994) ರಚಿಸುವ ಸಮಿತಿಗಳು ಕ್ರಿಯಾಶೀಲವಾಗಿ ಕೆಲಸ ನಿರ್ವಹಿಸುವಂತೆ ಕ್ರಮ ವಹಿಸಬೇಕು. | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ :**<br>ದಿನಾಂಕ: 11-12-2024 ರಂದು ನಡೆದ ರಾಜ್ಯ ಮೇಲ್ವಿಚಾರಣಾ ಮಂಡಳಿಯ ಸಭೆಯಲ್ಲಿ ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ ಮಾಡುವಂತಹ ಸ್ಕ್ಯಾನಿಂಗ್ ಸೆಂಟರ್ / ಆಸ್ಪತ್ರೆ/ ವೈದ್ಯರು / ದಲ್ಲಾಳಿಗಳು / ಗರ್ಭಿಣಿಯರ ಸಂಬಂಧಿಕರ ವಿರುದ್ಧ ಮಾಹಿತಿ ನೀಡಿ, ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಸಹಕರಿಸುವ ಮಾಹಿತಿದಾರರಿಗೆ ಕರ್ನಾಟಕ ಸರ್ಕಾರದಿಂದ ರೂ. 50,000/- ಕ್ಕೆ ಇದ್ದ ಬಹುಮಾನವನ್ನು ರೂ.1,00,000/- ಗಳಿಗೆ ಏರಿಸಲಾಗಿದೆ.<br>ಸರ್ಕಾರಿ ಆದೇಶ ಸಂಖ್ಯೆ: ಆಕುಕ 01 ಎಫ್.ಪಿ.ಇ. 2024, ಬೆಂಗಳೂರು, ದಿನಾಂಕ: 03.01.2024 ರಂದು ಪಿ.ಸಿ&ಪಿ.ಎನ್.ಡಿ.ಟಿ. ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಾಜ್ಯ ಕಾರ್ಯಪಡೆಯನ್ನು ರಚಿಸಲಾಗಿದೆ.<br><br>ಎಂ.ಬಿ.ಬಿ.ಎಸ್ ಪದವಿ ಹೊಂದಿ ಸ್ಕ್ಯಾನಿಂಗ್ ಸೆಂಟರ್ ನಡೆಸುತ್ತಿರುವ ವೈದ್ಯರಿಗೆ ಸಾಮರ್ಥ್ಯ ಆಧಾರಿತ ಪರೀಕ್ಷೆ (Competency Based Test) ಮತ್ತು ಸ್ಕ್ಯಾನಿಂಗ್ ಮಾಡಲು ಅರ್ಹ ತರಬೇತಿಯನ್ನು ಇಲಾಖೆ ವತಿಯಿಂದ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ನಡೆಸಲಾಗುತ್ತಿದೆ.<br><br>ರಾಜ್ಯ ಮಟ್ಟದಿಂದ ಕೆಳಕಾಣಿಸಿದಂತೆ ಜಿಲ್ಲೆಗಳಲ್ಲಿ ಯಶಸ್ವಿಗೊಂಡ ಗುಪ್ತಕಾರ್ಯಚಾರಣೆಯನ್ನು ಕೈಗೊಳ್ಳಲಾಗಿದೆ.<br>ಜಿಲ್ಲೆಯ ಹೆಸರು:- ಬೆಂಗಳೂರು ಗ್ರಾಮಾಂತರ, ಆಸ್ಪತ್ರೆಯ ಹೆಸರು:- ಎಸ್.ಪಿ.ಜಿ ಆಸ್ಪತ್ರೆ, ಗುಪ್ತಕಾರ್ಯಚಾರಣೆ ನಡೆಸಿದ ದಿನಾಂಕ:13-12-2023.<br><br>ಜಿಲ್ಲೆಯ ಹೆಸರು:-ಬೆಳಗಾವಿ , ಆಸ್ಪತ್ರೆಯ ಹೆಸರು:- ಇಕ್ರಾ ಆಸ್ಪತ್ರೆ, ಗೋಕಾಕ, ಗುಪ್ತಕಾರ್ಯಚಾರಣೆ ನಡೆಸಿದ ದಿನಾಂಕ:15-07-2024<br><br>ಜಿಲ್ಲೆಯ ಹೆಸರು:- ಮಂಡ್ಯ, ಆಸ್ಪತ್ರೆಯ ಹೆಸರು:- ಖಾಸಗಿ ಮನೆ, ನಾಗಮಂಗಲ, ಗುಪ್ತಕಾರ್ಯಚಾರಣೆ ನಡೆಸಿದ ದಿನಾಂಕ:15-08-2024<br><br>ಜಿಲ್ಲೆಯ ಹೆಸರು:-ಕೋಲಾರ, ಆಸ್ಪತ್ರೆಯ ಹೆಸರು:- ದೀಪಕ್ ನರ್ಸಿಂಗ್ ಹೋಂ, ಗುಪ್ತಕಾರ್ಯಚಾರಣೆ ನಡೆಸಿದ ದಿನಾಂಕ:29-10-2024 |

| | | |
|---|---|---|
| | | ಪಿ.ಸಿ&ಪಿ.ಎನ್.ಡಿ.ಟಿ. ಕಾಯ್ದೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕೆಳಕಾಣಿಸಿದಂತೆ ಅರಿವು ಮೂಡಿಸಲಾಗುತ್ತಿದೆ.<br>2023-24 ನೇ ಸಾಲಿನಲ್ಲಿ ಬಸ್ ಬ್ರ್ಯಾಡಿಂಗ್, ಟ್ರೈನ್ ಬ್ರ್ಯಾಡಿಂಗ್, ಹೋರ್ಡಿಂಗ್ಸ್, ಗೋಡೆ ಬರಹ, ರೇಡಿಯೋ ಜಿಂಗಲ್ಸ್, ಟಿ.ವಿ. ಸ್ಪಾಟ್ಸ್ ಮುಖಾಂತರ ಸಾರ್ವಜನಿಕರಿಗೆ ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆಯ ಕುರಿತು ಅರಿವು ಮೂಡಿಸಲಾಗುತ್ತಿದೆ.<br><br>ಪ್ರತಿ ವರ್ಷ ಜನವರಿ 24 ರಂದು ಜಿಲ್ಲೆಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಆಸ್ಪತ್ರೆ ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಸದರಿ ದಿನದಂದು ಜನನವಾಗಿರುವ ಹೆಣ್ಣು ಮಗುವಿನ ತಾಯಂದಿರಿಗೆ ಸಿಹಿ ಹಂಚುವುದರ ಮೂಲಕ ಅಥವಾ ಹೆಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ಅಥವಾ ಬಹುಮಾನದ ಮೂಲಕ ಅಥವಾ ಜಾಥಾಗಳ ಮೂಲಕ ಹೆಣ್ಣು ಮಕ್ಕಳ ಪ್ರಾಮುಖ್ಯತೆಯ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.<br><br>ದಿನಾಂಕ: 18-02-2024 ರಂದು ಜೀ ಕನ್ನಡ ಚಾನೆಲ್‌ನ ಡ್ರಾಮಾ ಜೂನಿಯರ್ಸ್ ಕಾರ್ಯಕ್ರಮದಲ್ಲಿ "ಹೆಣ್ಣು ಭ್ರೂಣ ಹತ್ಯೆ ಮಾಡದಂತೆ" ಸಾರ್ವಜನಿಕರಲ್ಲಿ ಜನಜಾಗೃತಿ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮವನ್ನು ನಡೆಸಲಾಯಿತು.<br><br>ಪಿ.ಸಿ&ಪಿ.ಎನ್.ಡಿ.ಟಿ. ಕಾಯ್ದೆಯ ಬಗ್ಗೆ ರಾಜ್ಯ ಮಟ್ಟದಿಂದ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಕಾಲಾನುಕಾಲಕ್ಕೆ ಅರಿವು ಮೂಡಿಸುವ ಕಾರ್ಯಗಾರವನ್ನು ನಡೆಸಲಾಗುತ್ತಿದೆ. (DD-PC&PNDT). |
| 64. | ಲಿಂಗಾನುಪಾತ ಶೀಘ್ರಗತಿಯಲ್ಲಿ ವ್ಯತ್ಯಾಸವಾಗುತ್ತಿರಲು ಕೆಲವರಲ್ಲಿ ಗಂಡುಮಕ್ಕಳ ಮೇಲಿರುವ ವ್ಯಾಮೋಹ, ಇನ್ನೂ ಕೆಲವು ಸಂದರ್ಭಗಳಲ್ಲಿ ಬೇರೆಬೇರೆ ಕಾರಣಗಳಿಂದ ಉಂಟಾಗುವ ಲಿಂಗಪತ್ತೆ, ಭ್ರೂಣಹತ್ಯೆ ಮತ್ತು ಗರ್ಭಪಾತಕ್ಕೆ ಸಂಬಂಧಪಟ್ಟಂತೆ ವೈದ್ಯರು ಹಾಗೂ ಇನ್ನೂ ಇತರರು ನೀಡುತ್ತಿರುವ ಕಾನೂನುಬಾಹಿರ | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ** : ಪಿ.ಸಿ&ಪಿ.ಎನ್.ಡಿ.ಟಿ. ಕಾಯ್ದೆಯಡಿ ಈಗಾಗಲೇ ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಮಿತಿಗಳಲ್ಲಿ ಸರ್ಕಾರ ಮತ್ತು ಸರ್ಕಾರೇತರ ಪ್ರತಿನಿಧಿಗಳನ್ನು ನಿಯೋಜಿಸಿದ್ದು, ಸದರಿ ಸಮಿತಿಯಲ್ಲಿರುವ ಎಲ್ಲಾ ಪ್ರತಿನಿಧಿಗಳಿಗೆ ಪಿ.ಸಿ&ಪಿ.ಎನ್.ಡಿ.ಟಿ. ಕಾಯ್ದೆಯ ಕುರಿತು ಹಾಗೂ ಆಯಾ ಸಮಿತಿಯ ಕಾರ್ಯವೈಖರಿಯ ಕುರಿತು ಕಾರ್ಯಗಾರಗಳ ಮುಖಾಂತರ ಅರಿವು ಮೂಡಿಸಲಾಗಿದೆ. (DD-PC&PNDT) |

| | | |
|---|---|---|
| | ಸಹಕಾರ ಪ್ರಧಾನ ಕಾರಣವಾಗಿರುತ್ತದೆ. ಅಂತಹ ಕಾನೂನುಬಾಹಿರ ಚಟುವಟಿಕೆಗಳನ್ನು ನಡೆಸುವಂತಹವರನ್ನು ಪತ್ತೆಹಚ್ಚಲು ಭ್ರೂಣ ಲಿಂಗ ಪತ್ತೆ ನಿಷೇಧ ಕಾನೂನು (ಪಿಸಿ & ಪಿಎನ್ ಡಿಟಿ ಕಾಯ್ದೆ, 1994) ಅನ್ವಯ ಪ್ರತಿ ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ಸರ್ಕಾರ ಮತ್ತು ಸರ್ಕಾರೇತರ ಪ್ರತಿನಿಧಿಗಳನ್ನು ಒಳಗೊಂಡಂತಹ ವಿಜಿಲೆನ್ಸ್ ಸಮಿತಿಗಳನ್ನು ಸರ್ಕಾರ ರಚಿಸಬೇಕು. ಆ ಸಮಿತಿಯಲ್ಲಿ ಈ ವಿಚಾರಗಳ ಬಗ್ಗೆ ತಿಳಿದ ತಜ್ಞರನ್ನು ಸದಸ್ಯರನ್ನಾಗಿ ನೇಮಕ ಮಾಡಬೇಕು ಮತ್ತು ಅದು ಕಾನೂನಿನ ಪ್ರಕಾರ ಆಯಾ ಪ್ರದೇಶಗಳಲ್ಲಿರುವ ಅಲ್ಟ್ರಾ ಸೌಂಡ್ ಮತ್ತು ಎಕ್ಸ್-ರೇ ಕೇಂದ್ರಗಳಿಗೆ ಭೇಟಿ ನೀಡಿ, ಮಾಹಿತಿಯನ್ನು ಸಂಗ್ರಹಿಸಿ, ಸಂಬಂಧಿಸಿದ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಆರೋಗ್ಯಾಧಿಕಾರಿಗಳು ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳಿಗೆ ವರದಿಗಳನ್ನು ನೀಡಲು ಸರ್ಕಾರ ಕಾನೂನು ರೂಪಿಸಬೇಕು. | |

| | | |
|---|---|---|
| 65. | ಕಾನೂನುಬಾಹಿರವಾಗಿ ಲಿಂಗ ಪತ್ತೆ ಮತ್ತು ಗರ್ಭಪಾತಕ್ಕೆ ಸಹಕರಿಸುವಂತಹ ವೈದ್ಯರು, ಅಲ್ಟ್ರಾ ಸೌಂಡ್ ಹಾಗೂ ಎಕ್ಸ್-ರೇ ಕೇಂದ್ರಗಳ ತಂತ್ರಜ್ಞರು, ಆಸ್ಪತ್ರೆಗಳು, ನರ್ಸಿಂಗ್ ಹೋಂಗಳ ಬಗ್ಗೆ ನಿಗಾವಹಿಸಿ ತಪ್ಪಿತಸ್ಥರ ಮೇಲೆ ಕಾನೂನಿನ ರೀತ್ಯಾ ಕ್ರಮ ಕೈಗೊಳ್ಳುವ ಬಗ್ಗೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಲು ಉಸ್ತುವಾರಿ ಸಮಿತಿಗಳನ್ನು ಪ್ರತಿ ತಾಲ್ಲೂಕಿನಲ್ಲಿ ನೇಮಕ ಮಾಡಿ. ಇಂತಹ ಕೃತ್ಯ ತಡೆಯಲು ಸರ್ಕಾರ ಕ್ರಮ ವಹಿಸಬೇಕು. | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ :** ಮೇಲ್ವಿಚಾರಣಾ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯು ಎಲ್ಲಾ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ತಪಾಸಣೆಯನ್ನು ನಡೆಸಲಾಗುತ್ತಿದೆ ಹಾಗೂ ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ ಮಾಡುವಂತಹ ಸ್ಕ್ಯಾನಿಂಗ್ ಸೆಂಟರ್ / ಆಸ್ಪತ್ರೆ/ ವೈದ್ಯರು / ದಲ್ಲಾಳಿಗಳು / ಗರ್ಭಿಣಿಯರ ಸಂಬಂಧಿಕರ ವಿರುದ್ಧ ಮಾಹಿತಿ ನೀಡಿ, ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಸಹಕರಿಸುವ ಮಾಹಿತಿದಾರರಿಗೆ ಕರ್ನಾಟಕ ಸರ್ಕಾರದಿಂದ ರೂ. 50,000/- ಕ್ಕೆ ಇದ್ದ ಬಹುಮಾನವನ್ನು ರೂ.1,00,000/- ಗಳಿಗೆ ದಿನಾಂಕ: 11-12-2023 ರಂದು ನಡೆದ ರಾಜ್ಯ ಮೇಲ್ವಿಚಾರಣಾ ಮಂಡಳಿಯ ಸಭೆಯಲ್ಲಿ ಏರಿಸಲಾಗಿದೆ. (DD-PC&PNDT) |
| 66. | ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಆರೋಗ್ಯಾಧಿಕಾರಿಗಳ ನೇತೃತ್ವದ ಸಮಿತಿಯು ಅಲ್ಟ್ರಾ ಸೌಂಡ್ ಮತ್ತು ಎಕ್ಸ್-ರೇ ಕೇಂದ್ರಗಳಿಗೆ ಕನಿಷ್ಠ ಮೂರು ತಿಂಗಳಿಗೆ ಒಮ್ಮೆಯಾದರೂ ಭೇಟಿ ನೀಡಿ, ಪರಿಶೀಲಿಸಿ, ದೋಷಗಳು ಕಂಡುಬಂದಲ್ಲಿ ಕಾನೂನಿನ ರೀತ್ಯಾ ಸಂಬಂಧಪಟ್ಟವರ ಮೇಲೆ ಕಟ್ಟುನಿಟ್ಟಿನ ಕ್ರಮಕ್ಕೆ ಸರ್ಕಾರ ಮುಂದಾಗಬೇಕು. | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ :** ಪಿ.ಸಿ&ಪಿ.ಎನ್.ಡಿ.ಟಿ. ಕಾಯ್ದೆಯಡಿ ಜಿಲ್ಲಾ ತಪಾಸಣಾ ಮತ್ತು ಮೇಲ್ವಿಚಾರಣಾ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯು ಎಲ್ಲಾ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ತಪಾಸಣೆಯನ್ನು ನಡೆಸಲಾಗುತ್ತಿದೆ. ಕಾನೂನು ರೀತ್ಯಾ ದೋಷಗಳು ಕಂಡುಬಂದ ಸ್ಕ್ಯಾನಿಂಗ್ ಸೆಂಟರ್‌ಗಳ ವಿರುದ್ಧ ಒಟ್ಟು 138 ಪ್ರಕರಣಗಳ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದೆ. ಇವುಗಳಲ್ಲಿ 78 ಪ್ರಕರಣಗಳು ಖುಲಾಸೆಗೊಂಡಿದ್ದು, ಉಳಿದ 60 ಪ್ರಕರಣಗಳು ನ್ಯಾಯಾಲಯದ ವಿವಿಧ ಹಂತದಲ್ಲಿ ಬಾಕಿಯಿರುತ್ತವೆ. (DD-PC&PNDT) |
| 67. | ಪ್ರತಿವರ್ಷ ರಾಜ್ಯದಲ್ಲಿರುವ ಮಾಜಿ ಹಾಗೂ ಹಾಲಿ ದೇವದಾಸಿಯರ, ಹೆಚ್.ಐ.ವಿ., ಏಡ್ಸ್ ಪೀಡಿತರ ಹಾಗೂ ಅವರ ಮಕ್ಕಳ ಬಗ್ಗೆ ಸಮೀಕ್ಷೆ | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ(ಮ.ಅ.ನಿ)**<br>• 2024-25ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ 156 ರನ್ವಯ ಮಾಜಿ ದೇವದಾಸಿ ಕುಟುಂಬಗಳ ಮರು ಸಮೀಕ್ಷೆಯನ್ನು ನಡೆಸಲು ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿರುತ್ತದೆ. ಈ ಕುರಿತು, ಸರ್ಕಾರದ ಕಾರ್ಯದರ್ಶಿಗಳ ಮಟ್ಟದಲ್ಲಿ ಸಭೆಗಳನ್ನು ನಡೆಸಲಾಗುತ್ತಿದೆ. |

| | | |
|---|---|---|
| | ನಡೆಸಬೇಕು. ಹೆಸರುಗಳನ್ನು ಸಾರ್ವಜನಿಕವಾಗಿ ಬಹಿರಂಗಪಡಿಸದೇ ಸದರಿ ಸಮೀಕ್ಷೆಯ ಮಾಹಿತಿಗಳನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳ ಕಛೇರಿಗಳಲ್ಲಿ, ಪೊಲೀಸ್ ಠಾಣೆಗಳಲ್ಲಿ ಹಾಗೂ ಮಹಿಳಾ ಮತ್ತು ಮಕ್ಕಳ ಇಲಾಖೆ, ಆರೋಗ್ಯ ಇಲಾಖೆಯ ಆಸ್ಪತ್ರೆಗಳಲ್ಲಿ, ಬಹಿರಂಗಪಡಿಸಬೇಕು.<br>ಇಂತಹವುಗಳನ್ನು ತಡೆಯಲು ಪ್ರತಿ ತಾಲ್ಲೂಕಿನಲ್ಲಿ ಉಸ್ತುವಾರಿ ಸಮಿತಿಗಳನ್ನು ನೇಮಕ ಮಾಡಬೇಕು. ಪೀಡಿತರಿಗೆ ಔಷಧೋಪಚಾರ ಮತ್ತು ಇತರೆ ಸೌಲಭ್ಯಗಳನ್ನು ಸರ್ಕಾರ ಕಾಲಕಾಲಕ್ಕೆ ಒದಗಿಸಬೇಕು. ಹೆಚ್ ಐವಿ, ಏಡ್ಸ್ ಪೀಡಿತರಿಗೆ ಅಗತ್ಯವಿದ್ದಲ್ಲಿ ಪುನರ್ವಸತಿ ಕಲ್ಪಿಸಲು ವ್ಯವಸ್ಥೆ ಮಾಡುವುದು. | • ಸಮೀಕ್ಷೆಯ ಮಾಹಿತಿಗಳನ್ನು ಗೌಪ್ಯತೆ ಕಾಪಾಡುವ ನಿಟ್ಟಿನಲ್ಲಿ ಸೂಕ್ತ ಕ್ರಮವಹಿಸಲಾಗಿದೆ.<br>• ತಾಲ್ಲೂಕು ಉಸ್ತುವಾರಿ ಸಮಿತಿ ನೇಮಕಗಳ ಬಗ್ಗೆ ಪರಿಶೀಲಿಸಿ ಕ್ರಮವಹಿಸಲಾಗುವುದು.<br>• ಹೆಚ್ಐವಿ ಪೀಡಿತರ ಸ್ವಯಂ ಉದ್ಯೋಗಕ್ಕಾಗಿ ನಿಗಮದಿಂದ ಧನಶ್ರೀ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಅರ್ಹ ಫಲಾನುಭವಿಗಳಿಗೆ ಆದ್ಯತೆಯ ಮೇರೆಗೆ ಪರಿಗಣಿಸಿ ಸೌಲಭ್ಯವನ್ನು ನೀಡಲಾಗುತ್ತಿದೆ.<br><br>**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ :**<br><br>ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿಯಿಂದ ನಡೆಸಲ್ಪಡುವ ಹೆಚ್ಐವಿ ಸೋಂಕಿಗೆ ಅಪಾಯದಂಚಿನಲ್ಲಿರುವ ಸಮುದಾಯಗಳಿಗೆ ಹೆಚ್.ಐ.ವಿ ತಡೆಗಟ್ಟುವ ಕಾರ್ಯಕ್ರಮವನ್ನು ನ್ಯಾಕೋ ಸಂಸ್ಥೆಯ ಅನುದಾನದೊಂದಿಗೆ ಅನುಷ್ಠಾನಗೊಳಿಸುತ್ತಿದೆ. ಈ ಕಾರ್ಯಕ್ರಮದಲ್ಲಿ ಲೈಂಗಿಕ ಕಾರ್ಯಕರ್ತೆಯರನ್ನು, ಪ್ರತಿ 2 ವರ್ಷಗಳಿಗೊಮ್ಮೆ ಸಮುದಾಯದ ಸಮೀಕ್ಷೆ ಮಾಡಲಾಗುತ್ತದೆ. ಸದರಿ ಸಮೀಕ್ಷೆಯ ಮಾಹಿತಿಯನ್ನು ಗೌಪ್ಯವಾಗಿಟ್ಟು ಕೇವಲ ಹೆಚ್ಐವಿ ಹಾಗೂ ಇತರೆ ಲೈಂಗಿಕ ಸಂಬಂಧಿತ ರೋಗಗಳ ಪರೀಕ್ಷೆ ಮತ್ತು ಚಿಕಿತ್ಸೆ ಹಾಗೂ ಗುರಿ ನರಾಧಾರಿತ ಸೌಲಭ್ಯಗಳನ್ನು ಒದಗಿಸಲು ಮಾತ್ರ ಬಳಸಲಾಗುತ್ತದೆ.<br>ಈ ಕಾರ್ಯಕ್ರಮದಲ್ಲಿ ರಾಜ್ಯದ 123227 ಲೈಂಗಿಕ ವೃತ್ತಿನಿರತ ಮಹಿಳೆಯರು ಫಲಾನುಭವಿಗಳಾಗಿ ಗುರುತಿಸಲಾಗಿದೆ. ಗುರಿ ನಿರ್ಧಾರಿತ ಕಾರ್ಯಕ್ರಮಗಳಡಿಯಲ್ಲಿ ನೊಂದಾಯಿತರಾದ ಸಮುದಾಯಗಳಿಗೆ ಹೆಚ್.ಐ.ವಿ ಸೋಂಕಿನ ಬಗ್ಗೆ ತಿಳಿವಳಿಕೆ, ನಿಯಮಿತವಾದ ಭೇಟಿ 3 ತಿಂಗಳಿಗೊಮ್ಮೆ ವೈದ್ಯಕೀಯ ತಪಾಸಣೆ, 6 ತಿಂಗಳಿಗೊಮ್ಮೆ ಹೆಚ್.ಐ.ವಿ ಸೋಂಕಿನ ಪತ್ತೆ ಪರೀಕ್ಷೆ, ಉಚಿತ ಕಾಂಡೋಮ್ ವಿತರಣೆ ಮತ್ತು ಹೆಚ್.ಐ.ವಿ ಸೋಂಕು ಪತ್ತೆಯಾದ ವ್ಯಕ್ತಿಗಳನ್ನು ಉಚಿತ ಎ.ಆರ್.ಟಿ ಚಿಕಿತ್ಸಾ ಕೇಂದ್ರಗಳಿಗೆ ನೊಂದಾಯಿಸುವುದು ಇವೇ ಮುಂತಾದ ಕಾರ್ಯಕ್ರಮಗಳನ್ನು ರಾಜ್ಯದಲ್ಲಿ ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡಿರುವ ವಿವಿಧ ಸ್ವಯಂ ಸೇವಾ ಸಂಸ್ಥೆಗಳು ಮತ್ತು ಸಮುದಾಯ ಸಂಘಟನೆಗಳ ಸಹಭಾಗಿತ್ವದೊಂದಿಗೆ ಅನುಷ್ಠಾನಗೊಳಿಸುತ್ತಿದೆ.<br><br>ಅನ್ನ ಅಂತ್ಯೋದಯ ಯೋಜನೆ, ಬಿಪಿಎಲ್ ರೇಷನ್ ಕಾರ್ಡ್, ಕಾಬಾ (CABA - ಏಡ್ಸ್ ಮೂಲಕ ಪ್ರಭಾವಿತ ಮಕ್ಕಳಿಗೆ) ಯೋಜನೆ, ರಾಜೀವ್ ಗಾಂಧಿ ಗೃಹ ಯೋಜನೆ, ಎಆರ್‌ಟಿ ಜನರಿಗೆ ಪ್ರಯಾಣ ವೆಚ್ಚ, ಶಿಕ್ಷಣದ ಹಕ್ಕು ಕಾಯ್ದೆ (ಆರ್‌ಟಿಇ), ಚೇತನಾ ಯೋಜನೆ, ಧನಶ್ರೀ ಯೋಜನೆ, ತಾಂತ್ರಿಕ ಶಿಕ್ಷಣ, ಉಚಿತ ಕಾನೂನು ಸೇವೆಗಳು ಇತ್ಯಾದಿ<br>Schemes, Benefited till Dec-24 |

| | | |
|---|---|---|
| | | Anna Anthyodaya Yojane, ಅನ್ನ ಅಂತ್ಯೋದಯ ಯೋಜನೆ-40032<br>CABA (Children affected by AIDS),ಕಾಬಾ (ಏಡ್ಸ್ ಮೂಲಕ ಪ್ರಭಾವಿತ ಮಕ್ಕಳಿಗೆ)-16090<br>Rajiv Gandhi housing scheme ರಾಜೀವ್ ಗಾಂಧಿ ಗೃಹ ಯೋಜನೆ -3006<br>Travel reimbursement for ART People ಎಆರ್‌ಟಿ ಜನರಿಗೆ ಪ್ರಯಾಣ ವೆಚ್ಚ-92532<br>Right to Education Act (RTE) ಶಿಕ್ಷಣದ ಹಕ್ಕು ಕಾಯ್ದೆ (ಆರ್‌ಟಿಇ)-376<br>Cethana Scheme ಚೇತನಾ ಯೋಜನೆ-5349<br>Dhanashree Scheme ಧನಶ್ರೀ ಯೋಜನೆ-3525<br>Technical Education ತಾಂತ್ರಿಕ ಶಿಕ್ಷಣ -53<br>Free Legal Services ಉಚಿತ ಕಾನೂನು ಸೇವೆಗಳು-2227 (DD-KSAPS) |
| 68. | ರಾಜ್ಯದಲ್ಲಿರುವ ಮಾಜಿ ಹಾಗೂ ಹಾಲಿ ದೇವದಾಸಿಯರ, ಹೆಚ್.ಐ.ವಿ., ಏಡ್ಸ್ ಪೀಡಿತರ ಹಾಗೂ ಅವರ ಮಕ್ಕಳಿಗೆ ಸರ್ಕಾರದಿಂದ ಲಭ್ಯವಾಗುವ ಎಲ್ಲಾ ಸೌಲಭ್ಯಗಳನ್ನು ಆದ್ಯತೆ ಮೇರೆಗೆ ನೀಡಲು ಸ್ಥಳೀಯ ಸಂಸ್ಥೆಗಳಾದ ಪಂಚಾಯಿತಿ, ನಗರ ಪಾಲಿಕೆ, ಮುಂತಾದವುಗಳಿಗೆ ವಹಿಸುವುದು, ಅವರುಗಳಿಗೆ ಕಾಲಬದ್ಧವಾಗಿ ವೈದ್ಯಕೀಯ ತಪಾಸಣೆ ಮತ್ತು ಔಷಧೋಪಚಾರಗಳನ್ನು ಹಾಗೂ ಇನ್ನಿತರೆ ಸೌಲಭ್ಯಗಳನ್ನು ನೀಡಬೇಕು. ಹೆಚ್‌ಐವಿ, ಏಡ್ಸ್ ಪೀಡಿತರನ್ನು ಅನಾದಾರ. ಅಸಡ್ಡೆಯಿಂದ ನೋಡದಂತೆ ಜಾಗೃತಿ ಕಾರ್ಯಕ್ರಮ ರೂಪಿಸುವುದು. ಹಾಗೆ ಮಾಡುವವರ ಮೇಲೆ ಕಾನೂನು ಕ್ರಮ ಕೈಗೊಳ್ಳುವುದು. | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ(ಮ.ಅ.ನಿ)**<br>• ದೇವದಾಸಿ ಪುನರ್ವಸತಿ ಯೋಜನೆಯಡಿ ಸ್ಥಳೀಯ ಆರೋಗ್ಯ ಕೇಂದ್ರಗಳ ಮುಖಾಂತರ ಮಾಸಿಕ ಆರೋಗ್ಯ ಶಿಬಿರಗಳನ್ನು ಏರ್ಪಡಿಸಿ ಮಾಜಿ ದೇವದಾಸಿಯರ ಆರೋಗ್ಯ ತಪಾಸಣೆಯನ್ನು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ನಡೆಸಲಾಗುತ್ತಿದೆ.<br>• ಜಾಗೃತಿ ಕಾರ್ಯಕ್ರಮಗಳನ್ನು ಜನಸಂದಣಿ ಇರುವಂತಹ ಪ್ರದೇಶಗಳಲ್ಲಿ ನಡೆಸಲಾಗುತ್ತಿದೆ.<br><br>**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ :**<br>• ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿಯು ರಾಜ್ಯದಲ್ಲಿರುವ ಎಲ್ಲಾ ಹೆಚ್.ಐ.ವಿ ಏಡ್ಸ್ ಬಾಧಿತರಿಗೆ ಎ.ಆರ್.ಟಿ ಚಿಕಿತ್ಸೆಯನ್ನು ಉಚಿತವಾಗಿ ನೀಡಲಾಗುತ್ತದೆ. ಹೆಚ್.ಐ.ವಿ ಎಲ್ಲಾ ವೈದ್ಯಕೀಯ ಪರೀಕ್ಷೆಗಳು ಉಚಿತವಾಗಿ ಮಾಡಲಾಗುತ್ತದೆ. ಹಾಗೂ ಅವರ ಮಕ್ಕಳಿಗೆ ಸರ್ಕಾರದಿಂದ ಲಭ್ಯವಾಗುವ ವಿದ್ಯಾರ್ಥಿ ವೇತನ, ಐಖಿಇ ಅಡಿಯಲ್ಲಿ ಶಿಕ್ಷಣ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.<br>• ಹೆಚ್.ಐ.ವಿ ಏಡ್ಸ್ ಪೀಡಿತರಿಗೆ ಅಸಡ್ಡೆಯಿಂದ ನೋಡದಂತೆ ಶಾಲಾ ಕಾಲೇಜುಗಳಲ್ಲಿ ಕಿರು ನಾಟಕಗಳು, ರಸಪ್ರಶ್ನೆ ಸ್ಪರ್ಧೆಯನ್ನು ಮುಂತಾದ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.<br>• Youtube, facebook, Instagram and X ನಂತಹ ವಿವಿಧ ಸಾಮಾಜಿಕ ಮಾಧ್ಯಮಗಳ ಮೂಲಕ ಹೆಚ್‌ಐವಿ/ಏಡ್ಸ್ ಕುರಿತು ಜಾಗೃತಿ ಮೂಡಿಸುವುದು.<br>• ಹೆಚ್‌ಐವಿ/ಏಡ್ಸ್ ಗೆ ಸಂಬಂಧಿಸಿದಂತೆ ವಿಡಿಯೋ ಸ್ಪಾಟ್ಸ್‌ಳನ್ನು ದೂರದರ್ಶನದ ಮೂಲಕ ಪ್ರಸಾರ ಮಾಡಲಾಯಿತು.<br>• ಗ್ರಾಮ ಪಂಚಾಯತ್ ಸದಸ್ಯರುಗಳಿಗೆ ಹೆಚ್‌ಐವಿ/ಏಡ್ಸ್ ಬಗ್ಗೆ ತರಬೇತಿಯನ್ನು ಆಯೋಜಿಸಲಾಗುತ್ತದೆ |

| | | |
|---|---|---|
| | | • ಜಿಲ್ಲಾ ಮಟ್ಟದ ರಸಪ್ರಶ್ನೆ ಸ್ಪರ್ಧೆಯನ್ನು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಆಯೋಜಿಸಲಾಗುತ್ತದೆ<br>• ಅನ್ನ ಅಂತ್ಯೋದಯ ಯೋಜನೆ, ಬಿಪಿಎಲ್ ರೇಷನ್ ಕಾರ್ಡ್ ಕಾಬಾ (ಏಡ್ಸ್ ಮೂಲಕ ಪ್ರಭಾವಿತ ಮಕ್ಕಳಿಗೆ), ರಾಜೀವ್ ಗಾಂಧಿ ಗೃಹ ಯೋಜನೆ, ಎಆರ್‌ಟಿ ಜನರಿಗೆ ಪ್ರಯಾಣ ವೆಚ್ಚ ಪೂರಕ, ಶಿಕ್ಷಣದ ಹಕ್ಕು ಕಾಯ್ದೆ (ಆರ್‌ಟಿಇ), ಚೇತನಾ ಯೋಜನೆ, ಧನಶ್ರೀ ಯೋಜನೆ, ತಾಂತ್ರಿಕ ಶಿಕ್ಷಣ, ಉಚಿತ ಕಾನೂನು ಸೇವೆಗಳು. ಇನ್ನಿತರ ಸರ್ಕಾರಿ ಸೌಲಭ್ಯಗಳನ್ನು ಒದಗಿಸಲಾಗಿದೆ. (DD-KSAPS) |
| 69. | ದೇವದಾಸಿ ಪದ್ಧತಿಯನ್ನು ತಡೆಯಲು ಸ್ಥಳೀಯ ಮಟ್ಟದಲ್ಲಿ ಜನಜಾಗೃತಿ ಉಂಟು ಮಾಡಲು ಜನಾಂದೋಲನಗಳನ್ನು, ಜನಜಾಗೃತಿ ಸಭೆಗಳನ್ನು ಅವಶ್ಯವಿರುವ ಸ್ಥಳಗಳಲ್ಲಿ ಮಾಡತಕ್ಕದ್ದು. ದೇವದಾಸಿ ಪದ್ಧತಿಯನ್ನು ತಡೆಯಲು ಪ್ರತಿ ಜಿಲ್ಲಾ ಮಟ್ಟದಲ್ಲಿ ಜಾಗೃತಿ ಸಮಿತಿಯನ್ನು ನೇಮಕ ಮಾಡಬೇಕು. ಹಾಲಿ ಇರುವ ದೇವದಾಸಿಯರನ್ನು ಮರುಸಮೀಕ್ಷೆ ಮಾಡಿ. ಅವರಿಗೆ ಸಾಗುವಳಿ ಭೂಮಿ. ವಸತಿ, ಮುಂತಾದ ಸೌಲಭ್ಯ ನೀಡುವ ಕ್ರಮಕ್ಕೆ ಮುಂದಾಗಬೇಕು. | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ(ಮ.ಅ.ನಿ):**<br>• ದೇವದಾಸಿ ಪದ್ಧತಿಯನ್ನು ತಡೆಯಲು ಸ್ಥಳೀಯ ಮಟ್ಟದಲ್ಲಿ, ಜಾತ್ರಾ ಕಾರ್ಯಕ್ರಮಗಳಲ್ಲಿ ಮತ್ತು ಮೇಳಗಳಲ್ಲಿ ಜನಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.<br>• ಜಿಲ್ಲಾ ಮಟ್ಟದಲ್ಲಿ ಜಾಗೃತಿ ಸಮಿತಿ ನೇಮಕ ಮಾಡುವ ಬಗ್ಗೆ ಪರಿಶೀಲಿಸಿ ಕ್ರಮವಹಿಸಲಾಗುವುದು.<br>• ರಾಜೀವ್ ಗಾಂಧಿ ವಸತಿ ನಿಗಮ ಮತ್ತು ಮಹಿಳಾ ಅಭಿವೃದ್ಧಿ ನಿಗಮದ ಸಹಯೋಗದಲ್ಲಿ ವಸತಿ ಸೌಲಭ್ಯಗಳನ್ನು ನಿವೇಶನ ಹೊಂದಿರುವವರಿಗೆ ಒದಗಿಸಲಾಗುತ್ತಿದೆ. |
| 70. | ರಾಜ್ಯದಲ್ಲಿರುವ ದೇವದಾಸಿ ಪದ್ಧತಿ, ಹೆಚ್.ಐ.ವಿ. ಏಡ್ಸ್ ನಂತಹ ರೋಗಗಳು ಮುಂತಾದ ಕಾರಣಗಳಿಂದ ಸಮಾಜದ ಮೇಲೆ ಆಗುವ ದುಷ್ಪರಿಣಾಮಗಳ ಬಗ್ಗೆ ಜನಜಾಗೃತಿ ಉಂಟು ಮಾಡಲು ಎಲ್ಲಾ ಹಂತಗಳಲ್ಲಿ ಸಭೆಗಳನ್ನು | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ(ಮ.ಅ.ನಿ):**<br>ದೇವದಾಸಿ ಪದ್ಧತಿ ತಡೆಗಟ್ಟಲು ತಾಲ್ಲೂಕು ಮಟ್ಟದಲ್ಲಿ ಜಾತ್ರಾ ಜಾಗೃತಿ ಆರೋಗ್ಯ ಶಿಬಿರ ಹಾಗೂ ಜಿಲ್ಲಾ ಮಟ್ಟದಲ್ಲಿ ಆರೋಗ್ಯ ಶಿಬಿರ, ಕಾನೂನು ಶಿಬಿರಗಳನ್ನು ಆಯೋಜಿಸಲಾಗುತ್ತಿದೆ.<br><br>**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ** :<br><br>ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ, ತಾಲೂಕು ಹಾಗೂ ಗ್ರಾಮ ಪಂಚಾಯತಿಗಳಲ್ಲಿ ಹಾಗೂ ಹೋಬಳಿ ಮಟ್ಟದಲ್ಲಿ ಗುರಿ ನಿರ್ಧಾರಿತ (ಟಿಐ) ಮತ್ತು ಲಿಂಕ್ ವರ್ಕರ್ ಕಾರ್ಯಕ್ರಮದ ಮುಖಾಂತರ |

| | | |
|---|---|---|
| | ವಿಚಾರ ಸಂಕಿರಣಗಳನ್ನು, ವೈದ್ಯಕೀಯ ಶಿಬಿರಗಳನ್ನು ತಾಲ್ಲೂಕು ಮಟ್ಟಗಳಲ್ಲಿ ವರ್ಷಕ್ಕೆ ಒಮ್ಮೆಯಾದರೂ ಯೋಜಿಸಲು ಸರ್ಕಾರ ಕ್ರಮ ಜರುಗಿಸಬೇಕು. | ಸಾಮಾಜಿಕ ಜಾಲತಾಣಗಳ, ಭಿತ್ತಿ ಪತ್ರಗಳು, ಬೀದಿ ನಾಟಕಗಳು, ಗೋಡೆ ಬರಹ, ಮುಂತಾದವುಗಳ ಮುಖಾಂತರ ಹೆಚ್.ಐ.ವಿ ಹರಡದಂತೆ ಹಾಗೂ ಹೆಚ್.ಐ.ವಿ ಬಾಧಿತರಿಗೆ ಕಳಂಕ ಮತ್ತು ತಾರತಮ್ಯ ಮಾಡದಂತೆ ಹಲವಾರು ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ನಿಯಮಿತವಾಗಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ನಡೆಸಲಾಗುತ್ತದೆ.<br><br>ನಿಯಮಿತವಾಗಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಇತರ ಆರೋಗ್ಯ ಇಲಾಖೆಗಳೊಂದಿಗೆ ಸಮಗ್ರ ವೈದ್ಯಕೀಯ ಶಿಬಿರಗಳನ್ನು ಹಮ್ಮಿಕೊಂಡು ಜಾಗೃತಿ ಮೂಡಿಸುವ ಮುಖಾಂತರ ಉಚಿತವಾಗಿ ತಪಾಸಣೆ ಹಾಗೂ ಚಿಕಿತ್ಸೆಗಳನ್ನು ಮಾಡಲಾಗುತ್ತದೆ.<br>ಮಾಹಿತಿ ಶಿಕ್ಷಣ ಸಂವಹನ ವಿಭಾಗದಿಂದ ಹೆಚ್‌ಐವಿ/ಏಡ್ಸ್ ಕುರಿತು ವಿವಿಧ ಮಾಧ್ಯಮಗಳ ಮೂಲಕ ಸಮೂಹ ಮಾಧ್ಯಮ, ಜನಪದ ಮಾಧ್ಯಮಗಳು, ಹೊರಾಂಗಣ ಮಾಧ್ಯಮ, ತರಬೇತಿ, ರೆಡ್ ರಿಬ್ಬನ್ ಕ್ಲಬ್‌ಗಳ ಮೂಲಕ ಹೆಚ್‌ಐವಿ/ಏಡ್ಸ್ ತಡೆ, ಲಭ್ಯವಿರುವ ಸೇವೆಗಳು, ಹೆಚ್‌ಐವಿ ಸೋಂಕಿತರಿಗೆ ಸರ್ಕಾರದ ಸವಲತ್ತುಗಳು, ಹೆಚ್‌ಐವಿ ಮತ್ತು ಏಡ್ಸ್ (ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆ ೨೦೧೭, ಆರೈಕೆ ಮತ್ತು ಬೆಂಬಲ ಹಾಗೂ ಕಳಂಕ ತಾರತಮ್ಯತೆಯ ನಿರ್ಮೂಲನೆಗೆ ಸಂಬAಧಿಸಿದ ಸಂದೇಶಗಳು ಯುವ ಜನತೆ, ಮಹಿಳೆಯರು ಒಳಗೊಂಡಂತೆ ಜನಸಾಮಾನ್ಯರಲ್ಲಿ ಅರಿವು ಮೂಡಿಸಲಾಗುತ್ತಿದೆ. (DD-KSAPS). |
| 71. | ಮನೆಗೆಲಸದ ಮಹಿಳೆಯರಿಗೆ ಘನತೆಯ ಬದುಕು ಪಡೆಯಲು, ಹಲವು ರೀತಿಯ ಶೋಷಣೆಗಳಿಂದ ಮುಕ್ತರಾಗಲು ಅನುಕೂಲವಾಗುವಂತೆ ಕಾರ್ಮಿಕ ಇಲಾಖೆಯಡಿಯಲ್ಲಿ ಅವರ ನೊಂದಣಿ ಕಡ್ಡಾಯವಾಗುವಂತೆ ಕ್ರಮ ಕೈಗೊಳ್ಳಬೇಕು. | **ಕಾರ್ಮಿಕ ಇಲಾಖೆ:**<br><br>ಮಂಡಳಿಯಲ್ಲಿ ಈಗಾಗಲೇ ಜಾರಿಯಲ್ಲಿದ್ದ, ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ಗೃಹ ಕಾರ್ಮಿಕರನ್ನು ನೋಂದಾಯಿಸಿ ಗುರುತಿನಚೀಟಿ ವಿತರಿಸಲಾಗುತ್ತಿದ್ದು, ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.<br><br>**(ಅ) ಅಪಘಾತ ಪರಿಹಾರ ಸೌಲಭ್ಯ:**<br><br>1. ಮರಣ ಪ್ರಕರಣ_ ರೂ. 1.00ಲಕ್ಷ ದವರೆಗೆಅಪಘಾತ ಪರಿಹಾರ<br>2. ಅಪಘಾತದಿಂದುಟಾಗುವ ಸಂಪೂರ್ಣಶಾಶ್ವತ/ ಭಾಗಶಃ ದುರ್ಬಲತೆ ಪರಿಹಾರ (ಶೇಕಡವಾರು ದುರ್ಬಲತೆ ಆಧಾರದ ಮೇಲೆ) - ರೂ. 1.00 ಲಕ್ಷದವರೆಗೆ ಪರಿಹಾರ.<br>3. ಆಸ್ಪತ್ರೆ ವೆಚ್ಚ ಮರುಪಾವತಿ - ರೂ. 50,000/-ದವರೆಗೆ.<br><br>**(ಆ) ಸಹಜಮರಣಪರಿಹಾರ (ಅಂತ್ಯಕ್ರಿಯೆ ಧನಸಹಾಯ)** |

| | | |
|---|---|---|
| | | ನೋಂದಾಯಿತ ಫಲಾನುಭವಿಯು ವಯೋಸಹಜ/ ಖಾಯಿಲೆ/ ಕಾಲಿಕ ಅಥವಾ ಇನ್ನಿತರ ಕಾರಣಗಳಿಂದ ಮರಣ ಹೊಂದಿದಲ್ಲಿ ಫಲಾನುಭವಿಯ ಕುಟುಂಬದವರಿಗೆ ಅಂತ್ಯಕ್ರಿಯೆ ವೆಚ್ಚಕ್ಕಾಗಿ ರೂ. 10,000/-ಗಳ ಧನಸಹಾಯ ಸೌಲಭ್ಯ. |
| 72. | ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ, ಸರ್ಕಾರೇತರ, ಶಾಲಾ ಕಾಲೇಜುಗಳಲ್ಲಿ ಉಪನ್ಯಾಸಕರು, ಪೋಷಕರು, ವಿದ್ಯಾರ್ಥಿಗಳು ಹಾಗೂ ಶಿಕ್ಷಣ, ಪೊಲೀಸ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೊಂಡಂತಹ ಸಮಿತಿಗಳನ್ನು ರಚಿಸುವುದು. ಅಂತಹ ಸಮಿತಿ ಕನಿಷ್ಟ ಮೂರು ತಿಂಗಳಿಗೆ ಒಮ್ಮೆಯಾದರೂ ಆಯಾ ಶಾಲಾ, ಕಾಲೇಜುಗಳಲ್ಲಿ ಸಭೆ ಸೇರಿ, ಅಲ್ಲಿರುವ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡುವುದು ಮತ್ತು ಲೈಂಗಿಕ ಹಾಗೂ ಇತರೆ ದೌರ್ಜನ್ಯಗಳನ್ನು ತಡೆಯಲು ಜನಜಾಗೃತಿ ಉಂಟುಮಾಡಿಸಲು ಕ್ರಮ ಜರುಗಿಸುವುದು. | **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,**<br><br>• ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಮತ್ತು ಸರ್ಕಾರೇತರ ಪ್ರೌಢಶಾಲೆಗಳಲ್ಲಿ ಈ ಬಗ್ಗೆ ಸಮಿತಿ ರಚಿಸಿ ಆಪ್ತ ಸಮಾಲೋಚನೆ ನಡೆಸಲಾಗುತ್ತಿದೆ.<br>▪ ಮಕ್ಕಳ ಸಮಸ್ಯೆಯನ್ನು ಹೇಳಿಕೊಳ್ಳಲು ಪ್ರಶ್ನಾ ಪೆಟ್ಟಿಗೆಯನ್ನು ಇರಿಸಲು ಕ್ರಮವಹಿಸಲಾಗಿದೆ. ಪ್ರೌಢಶಾಲೆಗಳಲ್ಲಿ ಆಪ್ತ ಸಮಾಲೋಚನಾ ಕೇಂದ್ರಗಳನ್ನು ತೆರೆದು ಅದರ ಮೂಲಕ ಲೈಂಗಿಕ ಹಾಗೂ ಇತರೆ ದೌರ್ಜನ್ಯಗಳನ್ನು ತಡೆಯಲು ಜನಜಾಗೃತಿ ಉಂಟುಮಾಡಿಸಲು ಕ್ರಮವಹಿಸಲಾಗುತ್ತಿದೆ.<br>▪ 2024-25 ರ ವಾರ್ಷಿಕ ಶೈಕ್ಷಣಿಕ ಮಾರ್ಗದರ್ಶಿಯಲ್ಲಿ ಮಾರ್ಗದರ್ಶಿಸಿದೆ.<br>▪ ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಈ ಕಛೇರಿಯ ಸುತ್ತೋಲೆ ಸಂಖ್ಯೆ: ಎಡಿಎಂ2(2) ಪ್ರೋ.ಕಾ.ಅ-01/2022-23 ದಿನಾಂಕ: 08-11-2022 ರ ಸುತ್ತೋಲೆಯಲ್ಲಿ ಎಲ್ಲಾ ಶಾಲೆಗಳಲ್ಲಿ ದೂರು ಮತ್ತು ಸಲಹಾ ಪೆಟ್ಟಿಗೆಯನ್ನು ಮಕ್ಕಳಿಗೆ ನಿಲುಕವಂತಹ ಎತ್ತರದಲ್ಲಿ ದೂರು/ಸಲಹಾ ಪೆಟ್ಟಿಗೆಯನ್ನು ಹಾಕುವುದು,ಬೀಗ ಹಾಕಿ ಅಳವಡಿಸಿ, ಕನಿಷ್ಠ ವಾರಕ್ಕೊಮ್ಮೆ ಸಮಿತಿಯ ಸಮ್ಮುಖದಲ್ಲಿ ತೆರೆಯುವುದು , ಮತ್ತು ದೂರು ಸ್ವೀಕೃತ ಅರ್ಜಿಗಳಿಗೆ ನಿಯಮಾನುಸಾರ ಇತ್ಯರ್ಥಗೊಳಿಸಲು ಕ್ರಮವಹಿಸಲು ತಿಳಿಸಲಾಗಿದೆ .<br><br>**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**<br>ಕರ್ನಾಟಕ ರಾಜ್ಯ ಮಕ್ಕಳ ನೀತಿ-2016 ರನ್ನು ಶಾಲಾ ಮಕ್ಕಳಿಗಾಗಿ ರಚಿಸಲಾಗಿದ್ದು. ಅದರಂತೆ, ಉಪನ್ಯಾಸಕರು, ಪೋಷಕರು, ವಿದ್ಯಾರ್ಥಿಗಳು, ಪೋಲೀಸ್ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಸ್ಥಳಿಯ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡಂತೆ ಸಮಿತಿಯನ್ನು (ಮಕ್ಕಳ ಸುರಕ್ಷಾ ಸಮಿತಿ) ರಚಿಸಿ, ಆಯಾ ಸಂಸ್ಥೆಗಳಲ್ಲಿನ ಸಮಸ್ಯೆಗಳ ಬಗ್ಗೆ. ಹಾಗೂ ಲೈಂಗಿಕ ಮತ್ತು ಇತರ ದೌರ್ಜನ್ಯಗಳನ್ನು ತಡೆಯಲು ಜಾಗೃತಿಯನ್ನು ಮೂಡಿಸಲು ಶಿಕ್ಷಣ ಇಲಾಖೆಗೆ ಪತ್ರವ್ಯವಹರಿಸಲಾಗಿದೆ.<br>ಮುಂದುವರೆದು ದಿನಾಂಕ:08/10/2024ರಂದು ನಡೆದ ಮಕ್ಕಳ ಕಲ್ಯಾಣ ಸಮಿತಿ ಸಭೆಯಲ್ಲಿ ಮಕ್ಕಳ ಸುರಕ್ಷಾ ಸಮಿತಿಗಳು ನಿಯಮಿತವಾಗಿ ಸಭೆ ಸೇರುತ್ತಿರುವ ಬಗ್ಗೆ ಹಾಗೂ ಮಕ್ಕಳ ರಕ್ಷಣಾ |

| | | |
|---|---|---|
| | | ನೀತಿಯನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಲು ಶಿಕ್ಷಣ ಇಲಾಖೆಗೆ ಸೂಚಿಸಲಾಗಿದೆ.<br>ಶಾಲಾ ಕಾಲೇಜು ವಿದ್ಯಾರ್ಥಿಗಳ ಸಹಯೋಗದೊಂದಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ರಾಜ್ಯ ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ಮೂಲಕ ಹಮ್ಮಿಕೊಳ್ಳಲಾಗುತ್ತಿದೆ. ಈ ಸಂಬಂಧ ಮಕ್ಕಳ ರಕ್ಷಣಾ ನಿರ್ದೇಶನಾಲಯದ ವತಿಯಿಂದ 2024-25ನೇ ಸಾಲಿನಲ್ಲಿ ರಾಜ್ಯಾದ್ಯಂತ 697 ಅರಿವು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಸದರಿ ಕಾರ್ಯಕ್ರಮದಲ್ಲಿ ಒಟ್ಟು 5,75,349 ಜನರು ಭಾಗವಹಿಸಿರುತ್ತಾರೆ. |
| 73. | ರಾಜ್ಯದ ಎಲ್ಲಾ ಶಾಲಾಕಾಲೇಜು, ಹಾಸ್ಟೆಲ್‌ಗಳು ಮತ್ತು ಸಾರ್ವಜನಿಕ ಉದ್ಯಾನವನಗಳಿಗೆ ಸಂಬಂಧಪಟ್ಟ ಪೊಲೀಸ್ ಠಾಣೆಯವರು ರಾತ್ರಿ ಹಗಲು ಬೀಟ್ ವ್ಯವಸ್ಥೆ ರೂಪಿಸುವುದು. ಪ್ರತಿ ಠಾಣೆಯ ಮತ್ತು ಒಟ್ಟು ಇಲಾಖೆಯ ಅಗತ್ಯಕ್ಕನುಗುಣವಾಗಿ ಸಿಬ್ಬಂದಿ ನೇಮಕಾತಿಗೆ ಆದ್ಯತೆ ನೀಡಬೇಕು. | **ಪೊಲೀಸ್ ಇಲಾಖೆ:**<br>• ರಾಜ್ಯದ ಎಲ್ಲ ಪೊಲೀಸ್ ಠಾಣೆಗಳಲ್ಲಿ ಶಾಲಾ ಕಾಲೇಜು, ಹಾಸ್ಟೆಲ್, ಮಹಿಳೆಯರು ಕರ್ತವ್ಯ ನಿರ್ವಹಿಸುವ ಸ್ಥಳಗಳ ಹತ್ತಿರ ಹಗಲು ಹಾಗೂ ರಾತ್ರಿ ಬೀಟ್ ಗಸ್ತು ಕರ್ತವ್ಯಕ್ಕೆ ಸಿಬ್ಬಂದಿಯವರನ್ನು ನಿಯೋಜಿಸಲಾಗುತ್ತಿದೆ.<br>• ನಗರ ವ್ಯಾಪ್ತಿಗಳಲ್ಲಿ ಸಂತ್ರಸ್ತ ಮಹಿಳೆ ಮತ್ತು ಮಕ್ಕಳ ಸುರಕ್ಷತೆಗೆ ತ್ವರಿತವಾಗಿ ಸ್ಪಂದಿಸುವ ಸಲುವಾಗಿ "ನೆರವು" ಎಂಬ ಯೋಜನೆಯನ್ನು ಜಾರಿಗೊಳಿಸಿ ಜನನಿಬೀಡ ಪ್ರದೇಶದಲ್ಲಿ 60 ಪೋರ್ಟಬಲ್ ಕ್ಯಾಬಿನ್‌ಗಳ (Safe City Project) ವ್ಯವಸ್ಥೆಗೊಳಿಸಿ ಅಳವಡಿಸಲಾಗಿದೆ. |
| 74. | ರಾಜ್ಯದಲ್ಲಿ ಅನುಮತಿಯಿಲ್ಲದೆ ಅನೇಕ ಸರ್ಕಾರೇತರ ವಸತಿ ಶಾಲೆಗಳು ನಡೆಯುತ್ತಿದ್ದು, ಅಂತಹ ಶಾಲೆಗಳಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಉಪನ್ಯಾಸಕರು ಹಾಗೂ ಸಿಬ್ಬಂದಿಗಳ ಮೇಲೆ ಅನೇಕ ರೀತಿಯ ದೌರ್ಜನ್ಯಗಳು, ಶೋಷಣೆ ನಡೆಯುತ್ತಿದ್ದು, ಅಂತಹ ದೌರ್ಜನ್ಯ/ಶೋಷಣೆ ತಡೆಯುವ ಸಲುವಾಗಿ, ಸುಸಜ್ಜಿತ ವಸತಿ ಶಾಲೆಗಳನ್ನು ತೆರೆಯಲು ಮತ್ತು | ***<u>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ</u>***<br>▪ ಮಕ್ಕಳ ರಕ್ಷಣೆ ಮಾಡಲು ಸಹಾಯವಾಣಿ ಸಂಖ್ಯೆ 1098 ನ್ನು ಎಲ್ಲಾ ಶಾಲೆಗಳಲ್ಲಿ ಬರೆಸಲಾಗಿದೆ. ಹಾಗೂ ಪಠ್ಯಪುಸ್ತಕಗಳಲ್ಲಿ ಕೂಡ ಈ ಬಗ್ಗೆ ಉಲ್ಲೇಖಿಸಲಾಗಿದೆ.<br>▪ ಸುಸಜ್ಜಿತ ಸರ್ಕಾರೇತರ ವಸತಿ ಶಾಲೆಗಳನ್ನು ತೆರೆಯಲು ಮತ್ತು ಅವುಗಳ ನಿಯಂತ್ರಣಕ್ಕೆ ಸರ್ಕಾರದ ಹಂತದಲ್ಲಿ ಕಾನೂನು ರಚಿಸುವ ಅಗತ್ಯವಿರುತ್ತದೆ |

| | | |
|---|---|---|
| | ಅವುಗಳ ನಿಯಂತ್ರಣಕ್ಕೆ ಸರ್ಕಾರ ಕಾನೂನು ರೂಪಿಸಬೇಕು. | |
| 75. | ವಸತಿ ಶಾಲೆಗಳಲ್ಲಿ ಶುಲ್ಕ ನಿಗದಿ ಮಾಡಲು ರಾಜ್ಯ ಮಟ್ಟದಲ್ಲಿ ನಿವೃತ್ತ ಹೈಕೋರ್ಟಿನ ನ್ಯಾಯಾಧೀಶರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿ, ಶುಲ್ಕವನ್ನು ವೈಜ್ಞಾನಿಕವಾಗಿ ನಿಗದಿಪಡಿಸಲು ಸರ್ಕಾರ ಕಾನೂನು ರೂಪಿಸಬೇಕು. | ಪ್ರಸ್ತಾವನೆ ಇರುವುದಿಲ್ಲ. |
| 76. | ಶಾಲಾ, ಕಾಲೇಜು, ಸರ್ಕಾರಿ ಕಛೇರಿಗಳಲ್ಲಿ, ವೈದ್ಯಕೀಯ ತಪಾಸಣೆಯನ್ನು ಕನಿಷ್ಠ ವರ್ಷಕ್ಕೆ ಒಮ್ಮೆಯಾದರೂ ಮಾಡಿಸತಕ್ಕದ್ದು. ಖಿನ್ನತೆಗೆ ಒಳಗಾಗುವ ವಿದ್ಯಾರ್ಥಿಗಳಿಗೆ, ಮಹಿಳೆ ಮತ್ತು ಇತರೆ ನೌಕರರಿಗೆ ಔಷಧೋಪಚಾರ, ಕೌನ್ಸೆಲಿಂಗ್ ಕೊಡಿಸಲು ಕ್ರಮ ಜರುಗಿಸುವುದು. ಚಿನ್ನತೆಯಿಂದ ಅಕಾಲಿಕ ಮರಣಕ್ಕೆ ತುತ್ತಾಗುವ ವಿಚಾರವಾಗಿ ಶಾಲಾ, ಕಾಲೇಜು, ಸರ್ಕಾರಿ ಮತ್ತು ಸರ್ಕಾರೇತರ ಕಛೇರಿ. ಸಂಸ್ಥೆಗಳಲ್ಲಿ ಕನಿಷ್ಠ ವರ್ಷಕ್ಕೆ ಒಂದು ಬಾರಿಯಾದರೂ ಜನಜಾಗೃತಿ ಸಭೆಗಳನ್ನು ನಡೆಸಿ, ಮನುಷ್ಯರ ಬದುಕಿನ ಪ್ರಾಮುಖ್ಯತೆಯನ್ನು ವಿವರಿಸಲು ಸರ್ಕಾರ ಕ್ರಮ ಜರುಗಿಸಬೇಕು. ಕೌಟುಂಬಿಕ ಮತ್ತು ಸಾರ್ವಜನಿಕ ಒತ್ತಡಗಳಿಂದಾಗಿ ಮಹಿಳೆಯರು | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ :**<br><br>ಈಗಾಗಲೇ ಕ್ರಮ ವಹಿಸಲಾಗಿದೆ:<br>2013-14ನೇ ಸಾಲಿನಲ್ಲಿ ರಾಜ್ಯದಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ಸದರಿ ಕಾರ್ಯಕ್ರಮದಡಿಯಲ್ಲಿ 6 ವರ್ಷದೊಳಗಿನ ಅಂಗನವಾಡಿ ಕೇಂದ್ರಗಳಲ್ಲಿನ ಮಕ್ಕಳಿಗೆ ಹಾಗೂ 1 ರಿಂದ 12 ನೇ ತರಗತಿಯಲ್ಲಿ ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶಾಲಾ-ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ (ಶಾಲಾ-ಕಾಲೇಜುಗಳಲ್ಲಿ ಮಕ್ಕಳಿಗೆ ವರ್ಷಕ್ಕೆ 01 ಬಾರಿ ಹಾಗೂ ಅಂಗನವಾಡಿ ಕೇಂದ್ರಗಳಿಗೆ ವರ್ಷಕ್ಕೆ 02 ಬಾರಿ) ಆರೋಗ್ಯ ತಪಾಸಣೆಯನ್ನು ನಡೆಸಲಾಗುತ್ತದೆ.<br>ಕಾರ್ಯಕ್ರಮದಡಿಯಲ್ಲಿ ಗುರುತಿಸಲಾಗಿರುವ ಒಟ್ಟು 40 ತರಹದ ಆರೋಗ್ಯ ಸಮಸ್ಯೆಗಳಿಗೆ(4'D's – Defect at birth, Deficiencies, Diseases, Developmental delay) ಉಚಿತವಾಗಿ ಆರೋಗ್ಯ ತಪಾಸಣೆ ನಡೆಸಲು ಮತ್ತು ಚಿಕಿತ್ಸಾತ್ಮಕ ಸೇವೆಗಳನ್ನು ಒದಗಿಸಲು ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಒಟ್ಟು 430 ಮೊಬೈಲ್ ಹೆಲ್ತ್ ತಂಡಗಳನ್ನು(02 ವೈದ್ಯರು, 01 ಶುಶ್ರೂಷಕರು, 01 ನೇತ್ರ ಸಹಾಯಕರು) ರಚಿಸಲಾಗಿರುತ್ತದೆ.<br>2024-25ನೇ ಸಾಲಿನ ಪ್ರಗತಿಯ ವಿವರ:<br>(ಡಿಸೆಂಬರ್-24 ರ ಅಂತ್ಯದವರೆಗೆ)<br>ಮಕ್ಕಳ ಆರೋಗ್ಯ ತಪಾಸಣೆಯ ಗುರಿ (ವಾರ್ಷಿಕ)-56,77,783<br>ಸಾಧನೆ - 52,31,738, 92 %, 4'D's ನ್ಯೂನ್ಯತೆ ಗುರುತಿಸಲ್ಪಟ್ಟ ಒಟ್ಟು ಮಕ್ಕಳ ಸಂಖ್ಯೆ- 23,56,533 (DD-RBSK & RKSK). |

| | | |
|---|---|---|
| | ದೊಡ್ಡ ಸಂಖ್ಯೆಯಲ್ಲಿ ಮಾನಸಿಕ ಖಿನ್ನತೆಗೆ ಒಳಗಾಗುತ್ತಿದ್ದು, ರಾಜ್ಯದ ಎಲ್ಲಾ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಮಾನಸಿಕ ತಜ್ಞರನ್ನು ನೇಮಕ ಮಾಡಿ, ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಕ್ರಮವಹಿಸಬೇಕು. | **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.**<br>• ಪ್ರೌಢಶಾಲೆಗಳಲ್ಲಿ ಆಪ್ತ ಸಮಾಲೋಚನಾ ಕೇಂದ್ರಗಳನ್ನು ತೆರೆಯಲಾಗಿದೆ. ವರ್ಷಕ್ಕೆ ಎರಡುಬಾರಿ RBSK (ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ) ಅಡಿಯಲ್ಲಿ ವೈದ್ಯಕೀಯ ತಪಾಸಣೆ ಮಾಡಿಸಲಾಗುತ್ತಿದೆ. ಆಪ್ತ ಸಮಾಲೋಚನೆ ಸಮಿತಿ, ಸಲಹಾ ಪೆಟ್ಟಿಗೆ, NPEP (National Population Education Project) ಚಟುವಟಿಕೆಗಳು, ಪ್ರಶ್ನಾ ಪೆಟ್ಟಿಗೆಗಳ ಮೂಲಕ ಜಾಗೃತಿ ಮೂಡಿಸಲು ಕ್ರಮವಹಿಸಲಾಗಿದೆ.<br>▪ safe touch ಮತ್ತು unsafe touch ಬ್ರೋಷರ್‌ಗಳನ್ನು ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಕೊಪ್ಪಳ, ಹಾವೇರಿ, ರಾಯಚೂರು ಮತ್ತು ಯಾದಗಿರಿಯ 6670 ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರೌಢಶಾಲೆಗಳಿಗೆ ನೀಡಲಾಗಿದೆ ಹಾಗೂ ಡಿಎಸ್‌ಇಆರ್‌ಟಿ ವೆಬ್ ಸೈಟಿನಲ್ಲೂ ಅಳವಡಿಸಲಾಗಿದೆ.<br>▪ ರಾಜ್ಯದ ಎಲ್ಲಾ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಮಾನಸಿಕ ತಜ್ಞರನ್ನು ನೇಮಕ ಮಾಡಲು ಸರ್ಕಾರದ ಹಂತದಲ್ಲಿ ಆರೋಗ್ಯ ಇಲಾಖೆ ವತಿಯಿಂದ ಪ್ರಸ್ತಾವನೆ ಸಲ್ಲಿಸಬಹುದಾಗಿದೆ. |
| 77. | ವರದಕ್ಷಿಣೆ, ಅಪ್ರಾಪ್ತರ ಮದುವೆ, ಒಂದಕ್ಕಿಂತಲೂ ಹೆಚ್ಚಿನ ವಿವಾಹ ಮಾಡಿಕೊಳ್ಳುವುದು ಮುಂತಾದ ಸಮಸ್ಯೆಗಳಿಂದ ಅನೇಕ ಮಹಿಳೆಯರಿಗೆ, ಮಕ್ಕಳಿಗೆ ರಾಜ್ಯವ್ಯಾಪಿ ತೊಂದರೆಯಾಗುತ್ತಿರುವುದು ಸಮಿತಿಯ ಗಮನಕ್ಕೆ ಬಂದಿರುತ್ತದೆ. ಆ ಕಾರಣದಿಂದ ವರದಕ್ಷಿಣೆ. ಅಪ್ರಾಪ್ತರ ಮದುವೆ. ಒಂದಕ್ಕಿಂತಲೂ ಹೆಚು ಮದುವೆ ಮಾಡಿಕೊಳ್ಳುವುದು, ಮುಂತಾದವುಗಳನ್ನು ತಡೆಯಲು ಎಲ್ಲಾ ಮದುವೆಗಳನ್ನು ನೊಂದಣಿ ಮಾಡುವುದನ್ನು ಕಡ್ಡಾಯಪಡಿಸಬೇಕು ಮತ್ತು ಅಂತಹ ನೊಂದಣಿಯನ್ನು | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ(ಮ.ಮ.ಅ.ನಿರ್ದೇಶನಾಲಯ)**<br>• ಕರ್ನಾಟಕ ವಿವಾಹ (ನೋಂದಣಿ ಮತ್ತು ಇತರೆ ಉಪಬಂಧಗಳು) ಕಾಯ್ದೆ,1976 ರಂತೆ, ಕಂದಾಯ ಇಲಾಖೆಯ ಮುದ್ರಾಂಕ ಮತ್ತು ನೋಂದಣಿ ಇಲಾಖೆಯ ಉಪ ನೋಂದಣಾಧಿಕಾರಿಗಳನ್ನು ಅವರ ಕಾರ್ಯವ್ಯಾಪ್ತಿಯ ಕ್ಷೇತ್ರದಲ್ಲಿ 'ವಿವಾಹ ನೋಂದಣಿ ಪ್ರಾಧಿಕಾರ' ಎಂದು ನೇಮಕ ಮಾಡಲಾಗಿದೆ.<br>• ಸರ್ಕಾರದ ಅಧಿಸೂಚನೆ ದಿನಾಂಕ:04.071966 ರಲ್ಲಿ ತಾಲ್ಲೂಕು ಮಟ್ಟದಲ್ಲಿ ಸಬ್ ರಜಿಸ್ಟ್ರಾರ್ ರನ್ನು ವಿವಾಹ ನೋಂದಣಾಧಿಕಾರಿಯನ್ನಾಗಿ ನೇಮಿಸಲಾಗಿದೆ.<br>• ಸರ್ಕಾರದ ಅಧಿಸೂಚನೆ ದಿ: 16.04.2022 ರಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಯ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯನ್ನು ಗ್ರಾಮ ಪಂಚಾಯತ್ ಹಂತದ ವಿವಾಹ ನೋಂದಣಾಧಿಕಾರಿಗಳನ್ನಾಗಿ ನೇಮಿಸಲಾಗಿದೆ.<br>ಗ್ರಾಮಾಂತರ ಪ್ರದೇಶಗಳಲ್ಲಿ ಈಗಾಗಲೇ ಗ್ರಾಮ ಲೆಕ್ಕಾಧಿಕಾರಿಯನ್ನು ವಿವಾಹ ನೋಂದಣಿ ಅಧಿಕಾರಿಯನ್ನಾಗಿ ನೇಮಿಸಲಾಗಿದೆ (ಸುತ್ತೋಲೆ ಸಂ: ಅಡಿ54 ಡಿಎಸ್ಪಿ2011 ದಿನಾಂಕ: 27/07/2011). ಬಾಲ್ಯ ವಿವಾಹಗಳನ್ನು ತಡೆಯಲು ತಾಲ್ಲೂಕು ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಯನ್ನು ರಚಿಸಿ ಸಮಿತಿಯ ಕರ್ತವ್ಯಗಳನ್ನು ನಿಗದಿಪಡಿಸಲಾಗಿರುತ್ತದೆ. |

| | | |
|---|---|---|
| | ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಾಮ ಪಂಚಾಯಿತಿ ಹಂತದಲ್ಲಿ ನಿರ್ವಹಣೆಗೆ ಅವಕಾಶ ಮಾಡುವುದು, ಪಟ್ಟಣ ಪ್ರದೇಶಗಳಲ್ಲಿ, ವಾರ್ಡ್ ಹಂತದಲ್ಲಿ ಕಛೇರಿ ಮಾಡುವುದು, ನಗರದಲ್ಲಿ ವಿಭಾಗೀಯವಾರು ಮದುವೆ ಕಡ್ಡಾಯ ನೊಂದಾವಣೆಗೆ ಕಛೇರಿಗಳನ್ನು ತೆರೆಯುವುದು. ವರದಕ್ಷಿಣೆ, ವಯಸ್ಸು, ಮುಂತಾದ ವಿಚಾರಗಳ ಬಗ್ಗೆ ಪ್ರಮಾಣ ಪತ್ರದ ಮೂಲಕ ಘೋಷಿಸಿಕೊಳ್ಳಲು ಕಾನೂನು ರೂಪಿಸಬೇಕು. ಇವುಗಳ ಉಸ್ತುವಾರಿ ನೋಡಲು ಪ್ರತಿ ತಾಲ್ಲೂಕಿಗೆ ಒಂದರಂತೆ ಜಾಗೃತಿ ಸಮಿತಿಗಳ ನೇಮಕಕ್ಕೆ ನಿಯಮಾವಳಿಗಳನ್ನು ಸರ್ಕಾರ ರೂಪಿಸಬೇಕು. ಅವುಗಳ ಕಾರ್ಯವಿಧಾನ. ಕಾಲ ಕಾಲಕ್ಕೆ ಪರಿಶೀಲನೆಗೆ ಒಳಪಡುವಂತೆ ಕ್ರಮ ವಹಿಸುವುದು | ಸದರಿ ಸಮಿತಿಯು ಕನಿಷ್ಠ ಮೂರು ತಿಂಗಳಿಗೊಮ್ಮೆ ಅಥವಾ ಅಗತ್ಯವಿದ್ದಾಗಲೆಲ್ಲಾ ಸಭೆ ಸೇರಿ ತಾಲ್ಲೂಕಿನಲ್ಲಿನ ಬಾಲ್ಯ ವಿವಾಹ ತಡೆಗೆ ಸಂಬಂಧಿಸಿದಂತೆ ಪರಿಶೀಲನೆ ನಡೆಸುತ್ತಿದೆ |
| 78. | ವರದಕ್ಷಿಣೆ ಪಿಡುಗನ್ನು ನಿವಾರಿಸಲು ಎಲ್ಲಾ ಗ್ರಾಮ, ಪಟ್ಟಣಗಳಲ್ಲಿ ಹಾಗೂ ಎಲ್ಲಾ ಶಾಲಾ-ಕಾಲೇಜುಗಳಲ್ಲಿ, ಕನಿಷ್ಠ ವರ್ಷಕ್ಕೆ ಒಮ್ಮೆಯಾದರೂ ಜನಜಾಗೃತಿ ಸಭೆಗಳನ್ನು ಮಹಿಳಾ ಮತ್ತು ಮಕ್ಕಳ | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ(ಮ.ಮ.ಅ.ನಿರ್ದೇಶನಾಲಯ)**<br>• ವರದಕ್ಷಿಣೆ ಪಿಡುಗನ್ನು ತೊಲಗಿಸಲು ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ "ವರದಕ್ಷಿಣೆ ನಿಷೇಧ ಸಮಿತಿ"ಯನ್ನು ರಚಿಸಲಾಗಿರುತ್ತದೆ. ಪ್ರತಿ ವರ್ಷ ನವೆಂಬರ್ 26 ರಂದು "ವರದಕ್ಷಿಣೆ ನಿಷೇಧ ದಿನ" ವನ್ನು ಶಾಲಾ ಕಾಲೇಜುಗಳಲ್ಲಿ, ಗ್ರಾಮ/ ತಾಲ್ಲೂಕು/ ಜಿಲ್ಲಾ ಮಟ್ಟದಲ್ಲಿ ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದೊಂದಿಗೆ |

| | | |
|---|---|---|
| | ಕಲ್ಯಾಣ ಇಲಾಖೆ ಹಾಗೂ ಶಿಕ್ಷಣ ಇಲಾಖೆ ರೂಪಿಸಲು ಸರ್ಕಾರ ಕ್ರಮವಹಿಸಬೇಕು. ವರದಕ್ಷಿಣೆ ನಿಷೇಧ ಕಾಯ್ದೆಯನ್ವಯ ರಚನೆಯಾಗುವ ಸಮಿತಿಗಳು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುವಂತೆ ಕ್ರಮವಹಿಸಬೇಕು. | ರಾಜ್ಯಾದ್ಯಂತ ಪ್ರೌಢಶಾಲೆ ಹಾಗೂ ಕಾಲೇಜುಗಳಲ್ಲಿ ಆಚರಿಸಲಾಗುತ್ತಿದ್ದು, ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ("ವರದಕ್ಷಿಣೆ ತೆಗೆದುಕೊಳ್ಳುವುದಿಲ್ಲ ಹಾಗೂ ಕೊಡುವುದಿಲ್ಲ ಎಂಬ ಬಗ್ಗೆ ಪ್ರಮಾಣ ವಚನವನ್ನು ಬೋಧಿಸಲಾಗುತ್ತಿದೆ).<br>• "ವಿಧಾನ್ ಸೇ ಸಮಾಧಾನ್" ಕಾರ್ಯಕ್ರಮವನ್ನು ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ, ರಾಷ್ಟ್ರೀಯ ಮಹಿಳಾ ಆಯೋಗ, ನವದೆಹಲಿ ಇವರ ನಿರ್ದೇಶನದಂತೆ ರಾಜ್ಯದಲ್ಲಿ ದಿನಾಂಕ:01.10.2024 ರಿಂದ 31.03.2025 ರವರೆಗೆ ಎಲ್ಲಾ 31 ಜಿಲ್ಲೆಗಳಲ್ಲಿ ಬ್ಲಾಕ್ ಮಟ್ಟದ ಮಹಿಳೆಯರಿಗಾಗಿ ಕಾನೂನು ಸೇವೆಗಳ ಪ್ರಾಧಿಕಾರ, ಸಹಯೋಗದೊಂದಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಗ್ರಾಮಮಟ್ಟ ಹಾಗೂ ತಾಲ್ಲೂಕು ಮಟ್ಟದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br>• ಲಿಂಗಾಧಾರಿತ ದೌರ್ಜನ್ಯ ತಡೆಗಟ್ಟುವ ಅಭಿಯಾನ ಆಯೋಜಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ರಾಷ್ಟ್ರೀಯ ಜೀವನೋಪಾಯ ಅಭಿಯಾನ್ ಇವರಿಂದ ಜಂಟಿ ಸುತ್ತೋಲೆಯನ್ನು ದಿನಾಂಕ:30.11.2024 ರಂದು ಹೊರಡಿಸಲಾಗಿದ್ದು, 25ನೇ ನವೆಂಬರ್ 2024 ರಿಂದ 23ನೇ ಡಿಸೆಂಬರ್ 2024 ರವರೆಗೆ ಮಾಸಚಾರಣೆಯನ್ನು ಹಮ್ಮಿಕೊಳ್ಳಲು ಸೂಚಿಸಲಾಗಿದೆ. ಇದರಂತೆ ಹಲವಾರು ಅರಿವು ಕಾರ್ಯಕ್ರಮವನ್ನು ಕೌಶಲ್ಯಾಭಿವೃದ್ಧಿ ಇಲಾಖೆಯ ಸಹಯೊಗದೊಂದಿಗೆ ಶಾಲಾ ಮತ್ತು ಕಾಲೇಜುಗಳಲ್ಲಿ ಹಮ್ಮಿಕೊಳ್ಳಲಾಗಿದೆ.<br>• ಅರಿವು ಮೂಡಿಸುವ ಕಾರ್ಯಕ್ರಮವನ್ನು ಮಿಷನ್ ಶಕ್ತಿ ಯೋಜನೆಗಳಾದ ಮಹಿಳಾ ಸಬಲೀಕರಣ ಕೇಂದ್ರದ ಮೂಲಕ ನೀಡಲಾಗಿದೆ. ಪ್ರತಿ ಮಾಹೆಯಲ್ಲಿ ಜಿಲ್ಲಾ ಮಹಿಳಾ ಸಬಲೀಕರಣ ಘಟಕದಿಂದ ಶಾಲಾ, ಕಾಲೇಜು ತಾಲ್ಲೂಕು ಹಾಗೂ ಗ್ರಾಮಮಟ್ಟದಲ್ಲಿ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ.<br>• ಮಿಷನ್ ಶಕ್ತಿ ಡಾಷ್ ಬೋರ್ಡ್ ನಲ್ಲಿ ಅಳವಡಿಸಿರುವಂತೆ ರಾಜ್ಯಾದಂತ 230 ತರಬೇತಿ ಕಾರ್ಯಕ್ರಮಗಳು, 791 ಅರಿವು ಕಾರ್ಯಕ್ರಮಗಳನ್ನು ಜಿಲ್ಲಾ ಸಬಲೀಕರಣ ಘಟಕದ ಮೂಲಕ ಕೈಗೊಳ್ಳಲಾಗಿದೆ.<br><br>***ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ:***<br>ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕಾನೂನು ಸೇವಾ ಪ್ರಾಧಿಕಾರ ಮತ್ತು ಪೋಲೀಸ್ ಇಲಾಖೆಗಳ ಸಹಕಾರದೊಂದಿಗೆ ಈ ಬಗ್ಗೆ ಕ್ರಮವಹಿಸಲಾಗುವುದು. |

| | | |
|---|---|---|
| 79. | ಎಲ್ಲಾ ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಶಾರೀರಿಕ ಮತ್ತು ಮಾನಸಿಕ ಸಮತೋಲನವನ್ನು ಕಾಪಾಡಿಕೊಳ್ಳುವ ಹಾಗೂ ಶಾರೀರಿಕ ದೇಹದಾರ್ಢ್ಯ ವೃದ್ಧಿಸಿಕೊಳ್ಳಲು ಪ್ರತಿದಿನ ಕನಿಷ್ಠ ಒಂದು ತಾಸು ಯೋಗ, ಕರಾಟೆ, ವ್ಯಾಯಾಮ, ಮುಂತಾದವುಗಳನ್ನು ಜಾರಿ ಮಾಡಬೇಕು. ಅವುಗಳನ್ನು ಹೇಳಿಕೊಡಲು ಶಿಕ್ಷಕರನ್ನು ನೇಮಕ ಮಾಡಬೇಕು. ಎಲ್ಲಾ ಕಾಲೇಜುಗಳಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಕಡ್ಡಾಯಗೊಳಿಸಬೇಕು. | **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,**<br>• 9ನೇ ತರಗತಿಯ ಹೆಣ್ಣುಮಕ್ಕಳಿಗೆ ಕರಾಟೆ ತರಬೇತಿಯನ್ನು ನೀಡಲಾಗುತ್ತಿದೆ.<br>• ಎಲ್ಲಾ ಶಾಲೆಗಳಲ್ಲಿ ದೈಹಿಕ ಶಿಕ್ಷಣ ಪಠ್ಯದಲ್ಲಿ ಯೋಗ ಶಿಕ್ಷಣವನ್ನು ಕಲಿಸಲು ದೈಹಿಕ ಶಿಕ್ಷಕರ ಮೂಲಕ ಕ್ರಮವಹಿಸಲಾಗಿದೆ.<br>• ಪ್ರತಿ ಶನಿವಾರ ದೈಹಿಕ ಶಿಕ್ಷಕರು ಇರಲಿ ಇಲ್ಲದಿರಲಿ ಎಲ್ಲಾ ಶಾಲೆಗಳಲ್ಲೂ ಸಾಮೂಹಿಕ ಯೋಗ ಹಾಗೂ ಸಾಮೂಹಿಕ ವ್ಯಾಯಾಮ ಮಾಡಿಸಲು ಕ್ರಮವಹಿಸಲಾಗಿದೆ.<br>• ಮಕ್ಕಳು ಯೋಗ ಒಲಂಪಿಯಾಡ್‌ನಲ್ಲಿ ಭಾಗವಹಿಸುವಂತೆ ಪ್ರೇರೇಪಿಸಲಾಗುತ್ತಿದೆ.<br>• ಶಿಕ್ಷಕರನ್ನು ನೇಮಕ ಮಾಡುವ ಕಾರ್ಯ ಸರ್ಕಾರದ ಹಂತದಲ್ಲಿ ಆಗಬೇಕಿರುತ್ತದೆ. |
| 80. | ಲೈಂಗಿಕ ಅಲ್ಪಸಂಖ್ಯಾತರ ಸಮೀಕ್ಷೆಯನ್ನು ಪ್ರತಿವರ್ಷ ನಡೆಸಬೇಕು. ಅವರುಗಳಿಗೆ ವೈದ್ಯಕೀಯ ಸೌಲಭ್ಯಗಳನ್ನು ಕಾಲಕಾಲಕ್ಕೆ ನೀಡಬೇಕು. ಅವರುಗಳು ತಮ್ಮ ಕಾಲ ಮೇಲೆ ಬದುಕನ್ನು ರೂಪಿಸಿಕೊಳ್ಳಲು ಸರ್ಕಾರವು ವಿಶೇಷ ಯೋಜನೆಯನ್ನು ರೂಪಿಸಿ ಅವರುಗಳಿಗೆ ವಿಶೇಷ ಅನುದಾನವನ್ನು ನೀಡಿ ಅಂತಹವರನ್ನು ಸಮಾಜದ | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ(ಮ.ಅ.ನಿ)**<br>• ಲೈಂಗಿಕ ಅಲ್ಪಸಂಖ್ಯಾತರು ಸ್ವಯಂ ಉದ್ಯೋಗ ಕೈಗೊಳ್ಳಲು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ **ಚೇತನ** ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>• ಈ ಯೋಜನೆಯಡಿ ಪ್ರತಿ ಅರ್ಹ ಅಭ್ಯರ್ಥಿಗೆ ರೂ.30,000/-ಗಳ ಸಹಾಯಧನ ಒದಗಿಸಲಾಗುತ್ತಿದೆ.<br>• ಲೈಂಗಿಕ ಅಲ್ಪಸಂಖ್ಯಾತರ ಸಮೀಕ್ಷೆಯನ್ನು ಆರೋಗ್ಯ ಇಲಾಖೆ ಮತ್ತು ಸರ್ಕಾರದೊಂದಿಗೆ ಚರ್ಚಿಸಿ ಕ್ರಮವಹಿಸಲಾಗುವುದು.<br>• ಲಿಂಗತ್ವ ಅಲ್ಪಸಂಖ್ಯಾತರ ಮೂಲಹಂತದ ಸಮೀಕ್ಷೆಯ ಭಾಗವಾಗಿ ಪ್ರಾಯೋಗಿಕವಾಗಿ ವಿಜಯಪುರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಸಮೀಕ್ಷೆ ಈಗಾಗಲೆ ನಡೆಸಿದ್ದು, ಪ್ರಸ್ತುತ ರಾಜ್ಯದ ಇನ್ನಿತರ 29 ಜಿಲ್ಲೆಗಳಲ್ಲಿ ಸಮೀಕ್ಷೆ ಕೈಗೊಳ್ಳಲು ಪೂರ್ವ ತಯಾರಿ ನಡೆಸಲಾಗುತ್ತಿದೆ. ಸದರಿ ಸಮೀಕ್ಷೆಯ ಮೂಲಕ ಸಾಮಾಜಿಕ, ಶೈಕ್ಷಣಿಕ ಹಾಗೂ ಆರೋಗ್ಯಕ್ಕೆ ಸಂಬಂಧಿಸಿದ ಮಾಹಿತಿ ಪಡೆದ ನಂತರದಲ್ಲಿ ವಿಶೇಷ ಯೋಜನೆಗಳನ್ನು ರೂಪಿಸಲು ಕ್ರಮವಹಿಸಲಾಗುವುದು. |

<table>
<tr><td></td><td>ಮುಖ್ಯವಾಹಿನಿಗೆ ತರಲು ಸರ್ಕಾರ ಕ್ರಮ ವಹಿಸಬೇಕು.</td><td></td></tr>
<tr><td>81.</td><td>ಸಮಾಜದಲ್ಲಿ ಮೂರು ವಿಧದ ಮಂಗಳಮುಖಿಯರು ಇದ್ದಾರೆ, ಅವರಲ್ಲಿ,<br>(ಅ) ಹುಟ್ಟುವಾಗಲೇ ಪುರುಷತ್ವ ಮತ್ತು ಸ್ತ್ರೀತ್ವದಿಂದ ವಂಚಿತರಾಗಿರುವುದು,<br>(ಆ) ಪುರುಷರಾಗಿದ್ದು, ಕಾರಣಾಂತರದಿಂದ ಪುರುಷತ್ವದ ಕೊರತೆ ಇರುವ ಕಾರಣ ಸ್ತ್ರೀತ್ವವನ್ನು ಪಡೆಯಬೇಕೆಂದು ಬಯಸುವಂತಹುದು ಅಥವಾ ಒತ್ತಾಯದಿಂದ "ದಾಯಮ್ಮ ಪದ್ಧತಿ" ಮೂಲಕ ತಮ್ಮ ಮರ್ಮಾಂಗವನ್ನು ನುರಿತ ಮಂಗಳಮುಖಿಯರ ಮೂಲಕ ಚಾಕುವಿನಿಂದ ಕತ್ತರಿಸಿಕೊಂಡು, ಸಾಂಪ್ರದಾಯಿಕ ಪದ್ಧತಿಯ ಚಿಕಿತ್ಸೆಯನ್ನು ಮಾಡಿಕೊಂಡು ಮಂಗಳಮುಖಿಯರಾಗಿ ಆಗುವಂತಹವರು.<br>(ಇ) ವೈದ್ಯರಿಂದ ತಮ್ಮ ಶಿಶ್ನಾಂಗವನ್ನು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಮಂಗಳಮುಖಿ ಆಗುವುದು.</td><td>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ(ಮ.ಅ.ನಿ)<br><br>• ಮಂಗಳಮುಖಿಯರನ್ನು ಗುರುತಿಸಿ ಕೇಂದ್ರ ಸರ್ಕಾರದ ವತಿಯಿಂದ ಗುರುತಿನ ಚೀಟಿಯನ್ನು ವಿತರಿಸಿ ಸರ್ಕಾರದ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.<br>• ಲಿಂಗತ್ವ ಅಲ್ಪಸಂಖ್ಯಾತರನ್ನು ಗುರುತಿಸುವ ನಿಟ್ಟಿನಲ್ಲಿ ಸಮೀಕ್ಷೆ ನಡೆಸಲು ಕ್ರಮವಹಿಸಲಾಗಿರುತ್ತದೆ.<br>• ಲಿಂಗತ್ವ ಅಲ್ಪಸಂಖ್ಯಾತರನ್ನು (ಮಂಗಳ ಮುಖಿಯರು) ಸಮಾಜದ ಮುಖ್ಯವಾಹಿನಿಗೆ ತರುವ ಮತ್ತು ಸ್ವಯಂ ಉದ್ಯೋಗಕ್ಕಾಗಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆಯಡಿ ಪ್ರತಿ ಅರ್ಹ ಅಭ್ಯರ್ಥಿಗೆ ರೂ.30,000/-ಗಳ ಸಹಾಯಧನ ಒದಗಿಸಲಾಗುತ್ತಿದ್ದು, ಈ ವರೆಗೆ 9435 ಫಲಾನುಭವಿಗಳಿಗೆ ಸೌಲಭ್ಯ ನೀಡಲಾಗಿದೆ.<br>• ಲಿಂಗತ್ವ ಅಲ್ಪಸಂಖ್ಯಾತರು ತಯಾರಿಸಿದಂತಹ ವಸ್ತುಗಳಿಗೆ ಮಾರಾಟ ವ್ಯವಸ್ಥೆ ಕಲ್ಪಿಸಲು ಮಾರುಕಟ್ಟೆ ಯೋಜನೆಯಡಿ ಆದ್ಯತೆ ಮೇರೆಗೆ ಪರಿಗಣಿಸಿ ಸೌಲಭ್ಯ ಒದಗಿಸಲಾಗುವುದು. 2025-26ನೇ ಸಾಲಿಗೆ ಮಾರುಕಟ್ಟೆ ಯೋಜನೆಯಡಿ ಅನುದಾನ ಒದಗಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.<br>• ಆಸಕ್ತಿಯಿಂದ ಕಾರ್ಯ ನಿರ್ವಹಿಸುವಂತಹ ಮಂಗಳಮುಖಿಯರನ್ನು ಗುರುತಿಸಿ ಗುಂಪು ಸಾಲಗಳನ್ನು ಒದಗಿಸಲಾಗಿದೆ ಇದರಿಂದ ಪ್ರಾಜೆಕ್ಟ್ ಗಳನ್ನು ನಿರ್ವಹಿಸಿ ಆರ್ಥಿಕ ಅಭಿವೃದ್ಧಿ ಹೊಂದಿರುತ್ತಾರೆ.<br>• ಗೃಹಲಕ್ಷ್ಮೀ ಯೋಜನೆಯಡಿ ಮಾಸಿಕ ರೂ.2,000/-ಗಳ ಆರ್ಥಿಕ ಸೌಲಭ್ಯ ಒದಗಿಸಲಾಗುತ್ತಿದೆ.<br>• ರಾಜೀವ್ ಗಾಂಧಿ ನಿಗಮ ಮತ್ತು ಜಿಲ್ಲಾಧಿಕಾರಿಗಳ ಮುಖಾಂತರ ವಸತಿ ಸೌಲಭ್ಯಒದಗಿಸಲು ಕ್ರಮವಹಿಸಲಾಗುತ್ತಿದೆ.<br>• ಸರ್ಕಾರದ ಉದ್ಯೋಗಗಳಲ್ಲಿ ಶೇಕಡ 1 ರಷ್ಟು ಸಮತಲ ಮೀಸಲಾತಿಯನ್ನು ಲಿಂಗತ್ವ ಅಲ್ಪಸಂಖ್ಯಾತರಿಗೆ ದೊರಕಿಸಲಾಗಿರುತ್ತದೆ.</td></tr>
<tr><td>82.</td><td>ಮೇಲ್ಕಂಡ ಪದ್ಧತಿಗಳು ಸಮಿತಿ ಅಧ್ಯಯನ ನಡೆಸಿದಾಗ ಕಂಡುಬಂದಿದ್ದು, ಇವರು ಭಿಕ್ಷೆ</td><td>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ(ಮ.ಅ.ನಿ)</td></tr>
</table>

| | | |
|---|---|---|
| | ಬೇಡುವುದು, ಅಡ್ಡೆಗಳಲ್ಲಿ ಸೇವೆ ಮಾಡುವುದನ್ನು ಮೈಗೂಡಿಸಿಕೊಂಡಿರುತ್ತಾರೆ. ಇಂತಹವರನ್ನು ಸಮಾಜದ ಮುಖ್ಯ ವಾಹಿನಿಗೆ ತರುವುದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಇವರಿಗೆ ವಸತಿ ವ್ಯವಸ್ಥೆ ಇರುವುದಿಲ್ಲ. ಇವರಿಗೆ ಮನೆಯನ್ನು ಬಾಡಿಗೆಗೆ ಕೊಡಲು ಅನೇಕರು ಹಿಂಜರಿಯುತ್ತಾರೆ. ಆದುದರಿಂದ. ಪ್ರತಿವರ್ಷ ಇವರ ಸಮೀಕ್ಷೆ ಆಗಬೇಕು. ಇವರಿಗೆ ವಸತಿ ಸೌಲಭ್ಯ ನಿರ್ಮಿಸಿಕೊಡಬೇಕು. ಇವರು ಸ್ವಯಂಉದ್ಯೋಗ ಮಾಡಲು ಸರ್ಕಾರದಿಂದ ಸಾಲ ಹಾಗೂ ಅನುದಾನ ನೀಡುವಂತಹ ಯೋಜನೆ ರೂಪಿಸಬೇಕು. ಇವರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡಬೇಕು. ಇವರು ಸ್ವಯಂ ಉದ್ಯೋಗದಿಂದ ತಯಾರಿಸುವ ಪದಾರ್ಥಗಳಿಗೆ ಮಾರುಕಟ್ಟೆ ದೊರಕಿಸುವ ವ್ಯವಸ್ಥೆಯನ್ನು ಸರ್ಕಾರ ರೂಪಿಸತಕ್ಕದ್ದು. | • ಮಾಜಿ ದೇವದಾಸಿ ಮಹಿಳೆಯರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗೆ ಸಂಬಂಧಿಸಿದಂತೆ ನಿಖರ ಮಾಹಿತಿ ಸಂಗ್ರಹಿಸಿ ಪುನರ್ವಸತಿ ಕಲ್ಪಿಸಲು ಮರುಸಮೀಕ್ಷೆ ನಡೆಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>• ಲಿಂಗತ್ವ ಅಲ್ಪಸಂಖ್ಯಾತರ ಮೂಲಹಂತದ ಸಮೀಕ್ಷೆಯನ್ನು 29 ಜಿಲ್ಲೆಗಳಲ್ಲಿ ನಡೆಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಮಂಗಳಮುಖಿಯರು ಲಿಂಗತ್ವ ಅಲ್ಪಸಂಖ್ಯಾತರ ಸಮುದಾಯದವರಾಗಿದ್ದು, ಅವರನ್ನು ಭಿಕ್ಷೆ ಬೇಡುವುದು ಮತ್ತು ಅನೌಪಚಾರಿಕ ಕೆಲಸಗಳಲ್ಲಿ ತೊಡಗಿಸಿಕೊಂಡವರನ್ನು ಸಮಾಜದ ಮುಖ್ಯ ವಾಹಿನಿಗೆ ಕರೆತಂದು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುವ ಸಲುವಾಗಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ.<br>• ನೇರ ನೇಮಕಾತಿ ತೃತೀಯ ಲಿಂಗದ ಅಭ್ಯರ್ಥಿಗಳಿಗೆ ಶೇ.1 ರಷ್ಟು ಸಮತಳ ಮೀಸಲಾತಿಯನ್ನು ಕಲ್ಪಿಸಿ ಸರ್ಕಾರ ಆದೇಶ ಹೊರಡಿಸಿರುತ್ತದೆ.<br>• Ministry Of Social Justice And Empowerment ರವರ National Portal For Transgenders ಮೂಲಕ ಲಿಂಗತ್ವ ಅಲ್ಪಸಂಖ್ಯಾತರಿಗೆ ಜಿಲ್ಲಾಧಿಕಾರಿಗಳ ಮೂಲಕ ಗುರುತಿನ ಚೀಟಿ ವಿತರಣಾ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br>• ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯದ ಮೂಲಕ ಲಿಂಗತ್ವ ಅಲ್ಪಸಂಖ್ಯಾತರಿಗೆ ಮೈತ್ರಿ ಯೋಜನೆಯಡಿ ರೂ.1200/- ಗಳ ಮಾಸಾಶನ ಒದಗಿಸಲಾಗುತ್ತಿದೆ.<br>• ಲಿಂಗತ್ವ ಅಲ್ಪಸಂಖ್ಯಾತರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ 2012-13ನೇ ಸಾಲಿನಿಂದ ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಸ್ವಯಂ ಉದ್ಯೋಗ ಕೈಗೊಳ್ಳಲು ರೂ.30,000/-ಗಳ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. 2012-13 ರಿಂದ 2024-25ನೇ ಸಾಲಿನ ವರೆಗೆ ಒಟ್ಟು 10093 ಲಿಂಗತ್ವ ಅಲ್ಪಸಂಖ್ಯಾತರಿಗೆ ಆರ್ಥಿಕ ಸೌಲಭ್ಯ ಕಲ್ಪಿಸಲಾಗಿದೆ.<br>• 2022-23ನೇ ಸಾಲಿನಲ್ಲಿ ಉಡುಪಿ ಜಿಲ್ಲೆಯಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೆ ಸ್ವ-ಉದ್ಯೋಗ ಕೈಗೊಳ್ಳಲು ಅಡಿಕೆ ಹಾಳೆ ತಟ್ಟೆ ತಯಾರಿಕಾ ಘಟಕವನ್ನು ರೂ.9.54 ಲಕ್ಷಗಳಲ್ಲಿ ಗುಂಪು ಚಟುವಟಿಕೆಯಡಿ ಸ್ಥಾಪಿಸಲಾಗಿದೆ.<br>• 2023-24ನೇ ಸಾಲಿನಲ್ಲಿ ಗುಂಪು ಚಟುವಟಿಕೆಯಡಿ ಲಿಂಗತ್ವ ಅಲ್ಪಸಂಖ್ಯಾತರು ಸ್ವ-ಉದ್ಯೋಗ ಕೈಗೊಳ್ಳಲು ಚಿತ್ರದುರ್ಗ ಜಿಲ್ಲೆ ಭರಮಸಾಗರದಲ್ಲಿ ರೂ.21.23 ಲಕ್ಷಗಳ ಅನುದಾನದಲ್ಲಿ ಕುರಿ, ಮೇಕೆ ಮತ್ತು ಕೋಳಿ ಸಾಕಾಣಿಕೆಗೆ ಕೇಂದ್ರವನ್ನು ಸ್ಥಾಪಿಸಲಾಗಿದೆ.<br>• ಲಿಂಗತ್ವ ಅಲ್ಪಸಂಖ್ಯಾತರಿಗೆ 2024-25ರ ಸಾಲಿನಲ್ಲಿ ಸಂಚಾರಿ ಕ್ಯಾಂಟೀನ್ ಅನ್ನು ನೀಡಲಾಗಿದೆ. |

| | | |
|---|---|---|
| | | • ಲಿಂಗತ್ವ ಅಲ್ಪಸಂಖ್ಯಾತರನ್ನು ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ರಾಜೀವ್ ಗಾಂಧಿ ವಸತಿ ನಿಗಮ ಮೂಲಕ ಒಟ್ಟು 2903 ಫಲಾನುಭವಿಗಳಿಗೆ ನಿವೇಶನ ನೀಡಿ ವಸತಿ ಸೌಲಭ್ಯ ಕಲ್ಪಿಸಲು ಕ್ರಮವಹಿಸಲಾಗುತ್ತಿದೆ.<br>• ಬೆಂಗಳೂರು ನಗರ ಜಿಲ್ಲೆಯ 179 ಲಿಂಗತ್ವ ಅಲ್ಪಸಂಖ್ಯಾತರಿಗೆ ವಸತಿ ಸೌಲಭ್ಯ ಕಲ್ಪಿಸಿ ಕೊಡಲು ರೂ.805.50 ಲಕ್ಷಗಳನ್ನು ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ಬೆಂಗಳೂರು ನಗರ ಇವರಿಗೆ ಬಿಡುಗಡೆಮಾಡಲಾಗಿದೆ.<br>• ವಿಜಯಪುರ ಜಿಲ್ಲೆಯ 50 ಲಿಂಗತ್ವ ಅಲ್ಪಸಂಖ್ಯಾತರಿಗೆ ವಸತಿ ಸೌಲಭ್ಯ ಕಲ್ಪಿಸಿ ಕೊಡಲು ರೂ.1,58,50,000/-ಗಳ ಅನುದಾನವನ್ನು ಮಹಾನಗರ ಪಾಲಿಕೆ ವಿಜಯಪುರ ಇವರಿಗೆ ಬಿಡುಗಡೆ ಮಾಡಲಾಗಿದೆ.<br>• ಟ್ರಾನ್ಸ್ ಜೆಂಡರ್ಸ್ ರವರ ಬಗ್ಗೆ ಇಲಾಖೆ ಅಧಿಕಾರಿ ಸಿಬ್ಬಂದಿಗಳಿಗೆ ಸಂವೇದನಾ ಕಾರ್ಯಗಾರವನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ಇವರಿಂದ ಆಯೋಜಿಸಲಾಗಿದೆ.<br>• 2020-21ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 130ರಲ್ಲಿನ ಘೋಷಣೆಯಂತೆ ರಾಜ್ಯಾದ್ಯಂತ ಟ್ರಾನ್ಸ್ ಜೆಂಡರ್ಸ್ ರವರ ಮೂಲ ಹಂತದ ಸಮೀಕ್ಷೆ ನಡೆಸಲು ಕ್ರಮವಹಿಸಲಾಗುತ್ತಿದೆ. |
| 83. | ಅಪೌಷ್ಠಿಕತೆಯಿಂದ ನರಳುತ್ತಿರುವ ಮಕ್ಕಳ, ಗರ್ಭಿಣಿ ಸ್ತ್ರೀಯರ ಮತ್ತು ಬಾಣಂತಿಯರ ಆರೋಗ್ಯದ ದೃಷ್ಟಿಯಿಂದ, ಅಂಗನವಾಡಿ ಮತ್ತು ಮಾತೃಪೂರ್ಣ ಯೋಜನೆಗಳ ಮೂಲಕ ಪೌಷ್ಠಿಕ ಆಹಾರವನ್ನು ಪೂರೈಸುತ್ತಿರುವುದು ಅತ್ಯಂತ ಮಾನವೀಯತೆಯ ಹಾಗೂ ಶ್ಲಾಘನೀಯ ಕಾರ್ಯಕ್ರಮವಾಗಿರುತ್ತದೆ. ಈ ಕಾರ್ಯಕ್ರಮದ ಅಡಿಯಲ್ಲಿ ಪೂರೈಕೆಯಾಗುತ್ತಿರುವ ಆಹಾರ ಮತ್ತು ಇತರೆ ಪದಾರ್ಥಗಳು ಉತ್ಕೃಷ್ಟಮಟ್ಟದ ಪದಾರ್ಥಗಳಾಗಿರುವಂತೆ ನೋಡಿಕೊಳ್ಳಲು ಪ್ರತಿ ತಾಲ್ಲೂಕು ಹಂತದಲ್ಲಿ ಸರ್ಕಾರಿ ಮತ್ತು | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ(ಮ.ಮ.ಅ.ನಿರ್ದೇಶನಾಲಯ):**<br>• ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ಪೂರಕ ಪೌಷ್ಠಿಕ ಆಹಾರ ಒದಗಿಸುವ ಸೇವೆಯನ್ನು ಉತ್ತಮಪಡಿಸಿ ಬಲಪಡಿಸುವ ಮತ್ತು ಮೇಲ್ವಿಚಾರಣೆ ಕುರಿತಂತೆ ಕಾರ್ಯವಿಧಾನವನ್ನು ಖಚಿತಪಡಿಸುವ ನಿಟ್ಟಿನಲ್ಲಿ ಸರ್ಕಾರವು ದಿನಾಂಕ: 22-01-2018 ರಲ್ಲಿ ಪ್ರತಿ ಅಂಗನವಾಡಿ ಕೇಂದ್ರಗಳಲ್ಲಿ ಬಾಲ ವಿಕಾಸ ಸಮಿತಿಯನ್ನು ರಚಿಸಲಾಗಿದೆ.<br>• ಬ್ಲಾಕ್/ತಾಲ್ಲೂಕು ಮಟ್ಟದಲ್ಲಿ ಸಮನ್ವಯ ಸಮಿತಿಯನ್ನು ದಿನಾಂಕ: 19-07-2019ರಲ್ಲಿ ರಚಿಸಲಾಗಿದೆ.<br>• ದಿನಾಂಕ: 24-01-2025 ರಲ್ಲಿ ಅಂಗನವಾಡಿ ಫಲಾನುಭವಿಗಳ ಪೌಷ್ಠಿಕಾಂಶತೆ ಮತ್ತು ಗುಣಮಟ್ಟದ ಬಗ್ಗೆ ಖಾತರಿಪಡಿಸಿಕೊಳ್ಳಲು ಮತ್ತು ಮೇಲ್ವಿಚಾರಣೆ ಮಾಡಲು ಅನುವಾಗುವಂತೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಮಿತಿಯನ್ನು ರಚಿಸಲಾಗಿದೆ.<br>**ಸಮಾಜ ಕಲ್ಯಾಣ ಇಲಾಖೆ(ಆಯುಕ್ತರು):**<br>• ಸಮಾಜ ಕಲ್ಯಾಣ ಇಲಾಖೆಯ ಸರ್ಕಾರಿ ವಸತಿ ಶಾಲೆ ಮತ್ತು ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಊಟೋಪಚಾರವನ್ನು ನೀಡಲು ಮೂರು ವಿಭಾಗವಾರು (ಕರಾವಳಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ) ಪರಿಷ್ಕೃತ ಮೆನು ಚಾರ್ಟ್ ನಂತೆ ವಿದ್ಯಾರ್ಥಿಗಳಿಗೆ ಊಟೋಪಚಾರವನ್ನು ನೀಡಲಾಗುತ್ತಿದೆ. |

| | | |
|---|---|---|
| | ಸರ್ಕಾರೇತರ ಸದಸ್ಯರನ್ನೊಳಗೊಂಡ ವಿಜಿಲೆನ್ಸ್ ಸಮಿತಿಗಳನ್ನು (ಜಾಗೃತ ಸಮಿತಿ) ನೇಮಿಸಬೇಕು. ಪೂರೈಕೆಯಲ್ಲಿ ಕಳಪೆ ಮತ್ತು ವ್ಯತ್ಯಾಸ ಮುಂತಾದ ವಿಚಾರಗಳ ಮೇಲೆ ವಿಜಿಲೆನ್ಸ್ ಸಮಿತಿಗಳು ನಿಗಾ ಇಟ್ಟು, ವಿವರಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಮೂರು ತಿಂಗಳಿಗೊಮ್ಮೆ ವರದಿ ನೀಡಲು ಸರ್ಕಾರ ಕ್ರಮವಹಿಸುವುದು. | • ಸರ್ಕಾರದ ಆದೇಶ ಸಂಖ್ಯೆ: ಸಕಇ 738 ಪಕವಿ 2024, ದಿನಾಂಕ: 30-10-2024ರಲ್ಲಿ ಇಲಾಖೆಯ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಸತಿ ಶಾಲೆ ಹಾಗೂ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಆಹಾರ ಪದಾರ್ಥ ಮತ್ತು ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡಲು 2024-25ನೇ ಸಾಲಿನಿಂದ ಜಿಲ್ಲಾಮಟ್ಟದಲ್ಲಿ ಪ್ರತಿ ಜಿಲ್ಲೆಯನ್ನು ಘಟಕವನ್ನಾಗಿಸಿ ಪ್ರತಿ 02 ತಿಂಗಳಿಗೊಮ್ಮೆ ಕಡ್ಡಾಯವಾಗಿ ಟೆಂಡರ್ ಕರೆಯುವಂತೆ ಪರಿಷ್ಕೃತ ಮಾರ್ಗಸೂಚಿಯನ್ನು ಹೊರಡಿಸಿ ಆದೇಶಿಸಿದೆ.<br>• ಈ ಕಛೇರಿ ಸುತ್ತೋಲೆ ಸಂಖ್ಯೆ:SWD/EDU/ED7/ 20/2023/1065640, ದಿನಾಂಕ :07-10-2023ರಲ್ಲಿ Freak Rate ನಮೂದಿಸುವ ಬಿಡ್‌ದಾರರನ್ನು ತಿರಸ್ಕರಿಸಲು ಮಾರ್ಗಸೂಚಿಯನ್ನು ಹಾಗೂ ಗುತ್ತಿಗೆದಾರರು ಸರಬರಾಜು ಮಾಡುವ ಆಹಾರ ಪದಾರ್ಥಗಳ ಮಾದರಿಗಳನ್ನು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕಛೇರಿಗಳಲ್ಲಿ ಪ್ರದರ್ಶಿಸಲು ಸುತ್ತೋಲೆ ಹೊರಡಿಸಿದೆ.<br>• ಈ ಕಛೇರಿ ಸುತ್ತೋಲೆ ಸಂಖ್ಯೆ: SWD/ SCHC/ SC/ 23/ 2023/ 1184131) ದಿನಾಂಕ: 19-09-2023 ರಲ್ಲಿ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಸಿದ್ಧಪಡಿಸಲಾಗುತ್ತಿರುವ ಆಹಾರದ ಗುಣಮಟ್ಟ ಕಾಯ್ದುಕೊಳ್ಳುವ ಸಂಬಂಧ Taste Register (ರುಚಿ ಪರಿಶೀಲನಾ ವಹಿ)ಯನ್ನು ನಿರ್ವಹಿಸುವಂತೆ ಸೂಚಿಸಿದೆ.<br>• ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: SWD 198 RI 2022, ದಿನಾಂಕ: 18-02-2025 ರನ್ವಯ ಪ್ರತಿ ಜಿಲ್ಲೆಗೆ ರಾಜ್ಯ ಮಟ್ಟದ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನಿಯೋಜನೆ ಆದೇಶಿಸಿದೆ.<br>• ಸರ್ಕಾರದ ಆದೇಶ ಸಂಖ್ಯೆ SWD/EDU/ED4/80/2023 C-1161067 ದಿನಾಂಕ:15-09-2023 ರಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ವಿದ್ಯಾರ್ಥಿ ನಿಲಯಗಳಿಗೆ ಉಪ ವಿಭಾಗಾಧಿಕಾರಿಗಳು ಪ್ರತಿ ಮಾಹೆಯಲ್ಲಿ ಕನಿಷ್ಠ ಒಂದು ಬಾರಿ ಹಾಗೂ ತಾಲ್ಲೂಕಿನ ತಹಶಿಲ್ದಾರ್‌ರು ಪ್ರತಿ ಮಾಹೆಯಲ್ಲಿ ಕನಿಷ್ಠ 2 ಬಾರಿ ಅನಿರೀಕ್ಷಿತ ಬೇಟಿ ನೀಡಿ ವರದಿ ಮಾಡುವಂತೆ ಆದೇಶಿಸಿದೆ.<br>• ಈ ಕಛೇರಿ ಆದೇಶ ಸಂಖ್ಯೆ:ಸಕನಿ/ಇಡಿ-4/2022-23, ದಿನಾಂಕ:08-01-2024ರಲ್ಲಿ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಾರ್ಡನ್, ಅಡುಗೆಯವರು ಮತ್ತು ಅಡುಗೆ ಸಹಾಯಕರು ಹಾಗೂ ರಾತ್ರಿ ಕಾವಲುಗಾರರು |

| | | |
|---|---|---|
| | | (ಹೊರಸಂಪನ್ಮೂಲ ನೌಕರರು ಸೇರಿದಂತೆ) ಗಳಿಗೆ ಸ್ವಚ್ಛತೆ ಹಾಗೂ ರುಚಿಯಾದ ಅಡುಗೆ ತಯಾರಿಸುವ ಕುರಿತಂತೆ ತರಬೇತಿ ಕಾರ್ಯಾಗಾರವನ್ನು ಏರ್ಪಡಿಸಲಾಗಿರುತ್ತದೆ. |
| 84. | ಶಾಲೆಗಳಲ್ಲಿ ಮಕ್ಕಳಿಗೆ ಬಿಸಿಯೂಟದ ಕಾರ್ಯಕ್ರಮ ರೂಪಿಸಿರುವುದು ಶ್ಲಾಘನೀಯ. ಸದರಿ ಕಾರ್ಯಕ್ರಮಕ್ಕೆ ಪ್ರತಿವರ್ಷ ನೂರಾರು ಕೋಟಿ ರೂಪಾಯಿಗಳನ್ನು ಸರ್ಕಾರ ವೆಚ್ಚ ಮಾಡುತ್ತಿದೆ. ಆದರೆ, ಕಳಪೆ ಆಹಾರ ಪದಾರ್ಥಗಳನ್ನು ಮತ್ತು ತೂಕದಲ್ಲಿ ವ್ಯತ್ಯಾಸ ಮಾಡಿ ಸರಬರಾಜು ಮಾಡುತ್ತಿರುವುದು. ಬಿಸಿಯೂಟದ ತಯಾರಿಕೆಯಲ್ಲಿ ಕೆಲವು ಕಳಪೆ ಮಟ್ಟದ ಊಟವನ್ನು ನೀಡುತ್ತಿರುವುದು ಸಮಿತಿಯ ಗಮನಕ್ಕೆ ಬಂದಿದ್ದು. ಇದನ್ನು ತಡೆಯುವುದು ಮತ್ತು ಉತ್ತಮ ಗುಣಮಟ್ಟದ, ಪೂರ್ಣ ಪ್ರಮಾಣದ ಪೌಷ್ಠಿಕ ಆಹಾರ ಪೂರೈಕೆ ಮತ್ತು ತಯಾರಿಕೆ ತಪಾಸಣೆ ಮಾಡಲು ಪ್ರತಿ ತಾಲ್ಲೂಕಿನಲ್ಲೂ ವಿಜಿಲೆನ್ಸ್ (ಜಾಗೃತ) ಸಮಿತಿಗಳನ್ನು ರಚಿಸಲು ಸರ್ಕಾರ ಕ್ರಮ ಜರುಗಿಸಬೇಕು. | **<u>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ</u>**<br><br>• ಜಿಲ್ಲೆಗಳಿಗೆ E-Auction ಮೂಲಕ ಖರೀದಿಸಿ ಸರಬರಾಜುಗೊಳಿಸುವ ಆಹಾರ ಧಾನ್ಯಗಳಾದ ತೊಗರಿಬೇಳೆ, ಅಕ್ಕಿ ಹಾಗೂ ಸೂರ್ಯಕಾಂತಿ ಎಣ್ಣೆ ಈ ಪದಾರ್ಥಗಳ ಗುಣಮಟ್ಟವನ್ನು ಭೌತಿಕವಾಗಿ ಪರಿಶೀಲಿಸಿ ಉತ್ತಮ ಗುಣಮಟ್ಟವಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಲು ಜಿಲ್ಲಾ ಹಂತದಲ್ಲಿ ಆಹಾರ ಪರಿಶೀಲನಾ ಗುಣಮಟ್ಟ ಮತ್ತು ಖಾತ್ರಿಪಡಿಸಿಕೊಳ್ಳುವ 6 ಜನರ ಜಿಲ್ಲಾ ಸಮಿತಿ ರಚಿತವಾಗಿದ್ದು ಕಾರ್ಯನಿರ್ವಹಿಸುತ್ತಿದೆ.<br>• ಜಿಲ್ಲೆಗಳಿಗೆ ಮತ್ತು ತಾಲ್ಲೂಕುಗಳಿಗೆ E-Auction ಮೂಲಕ ಖರೀದಿಸಿ ಸರಬರಾಜುಗೊಳಿಸುವ ಆಹಾರ ಪದಾರ್ಥಗಳ ಗುಣಮಟ್ಟವನ್ನು ಚಾಲ್ತಿಯಲ್ಲಿರುವ FSSAI ಮಾನದಂಡಗಳಂತೆ ಪರಿಶೀಲಿಸಿ ಖಚಿತಪಡಿಸಿ ವರದಿ ಮಾಡಲು Third party Assayer (ಅಸ್ಸೆಯರ್)/ಮೂರನೇ ವ್ಯಕ್ತಿ -ಗುಣಮಟ್ಟ ಪರೀಕ್ಷಕ ಅಥವಾ ಮೌಲ್ಯಮಾಪಕರ ಸೇವೆಯನ್ನು ಬಳಸಲಾಗುತ್ತಿದೆ. ಇಲಾಖೆಯಿಂದ ಇ-ಟೆಂಡರ್ ಮೂಲಕ ಆಯ್ಕೆ ಮಾಡಿದ ಏಜೆನ್ಸಿಯ ಅಸ್ಸೆಯರ್ (ASSAYER) ಮೌಲ್ಯಮಾಪಕರು ಪ್ರತಿ ಜಿಲ್ಲೆಯ ತಾಲ್ಲೂಕಿನ KFCSC ಗೋದಾಮುಗಳಿಗೆ ಭೇಟಿ ನೀಡಿ ಸರಬರಾಜುದಾರರು ಸರಬರಾಜುಗೊಳಿಸಿರುವ ಆಹಾರ ಧಾನ್ಯಗಳ ಗುಣಮಟ್ಟವನ್ನು ಭೌತಿಕವಾಗಿ ಪರಿಶೀಲಿಸಿ ವರದಿ ನೀಡುತ್ತಾರೆ. ವರದಿಯಲ್ಲಿ ಮಾನದಂಡಗಳಂತೆ ಗುಣಮಟ್ಟ ತೃಪ್ತಿಕರವಾಗಿದ್ದಲ್ಲಿ ಮಾತ್ರವೇ ಆಹಾರಧಾನ್ಯಗಳನ್ನು ಗೋದಾಮುಗಳಲ್ಲಿ ದಾಸ್ತಾನುಗೊಳಿಸುವುದು ಹಾಗೂ ಶಾಲೆಗಳಿಗೆ ಎತ್ತುವಳಿ ಮಾಡುವ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ. ಒಂದು ವೇಳೆ ಗುಣಮಟ್ಟ ಕಳಪೆಯಾಗಿದ್ದಲ್ಲಿ ತಿರಸ್ಕರಿಸಲಾಗುತ್ತದೆ.<br>• 3.ಶಾಲೆಗಳಿಗೆ ಸರಬರಾಜುಗೊಳಿಸುವ ಅಹಾರ ಪದಾರ್ಥಗಳಾದ ಅಕ್ಕಿ, ಗೋಧಿ, ತೊಗರಿಬೇಳೆ, ಅಡುಗೆ ಎಣ್ಣೆ, ಪೂರಕ ಪೌಷ್ಠಿಕ ಪದಾರ್ಥಗಳಾದ ಮೊಟ್ಟೆ, ಬಾಳೇಹಣ್ಣು, ಚಿಕ್ಕಿ ಇವುಗಳ ಗುಣಮಟ್ಟ ಹಾಗೂ ಆಹಾರ ಸುರಕ್ಷತೆಯನ್ನು ಶಾಲಾ ಮುಖ್ಯ ಶಿಕ್ಷಕರು. ಮುಖ್ಯ ಅಡುಗೆಯವರು, ನೋಡಲ್ ಶಿಕ್ಷಕರು ಹಾಗೂ ಎಸ್.ಡಿ.ಎಂ.ಸಿ. ಮತ್ತು ಖರೀದಿ ಸಮಿತಿ ಇಲಾಖೆ ನೀಡಿದ ಮಾರ್ಗಸೂಚಿ ಮತ್ತು SOP ಯಂತೆ ಪರಿಶೀಲಿಸಿ ಖಾತ್ರಿಪಡಿಸಿಕೊಳ್ಳುತ್ತಾರೆ. ಪ್ರತಿನಿತ್ಯ ಸಿದ್ಧಪಡಿಸುವ ಬಿಸಿಯೂಟವನ್ನು ಶಾಲಾ ಮಕ್ಕಳಿಗೆ ವಿತರಿಸುವ ಪೂರ್ವದಲ್ಲಿ ಮುಖ್ಯ ಅಡುಗೆಯವರು/ಸಹಾಯದ ಅಡುಗೆಯವರು. ಮುಖ್ಯ ಶಿಕ್ಷಕರು/ನೋಡಲ್ ಶಿಕ್ಷಕರು ಶುಚಿರುಚಿಯನ್ನು ಪರಿಶೀಲಿಸಿ ಆಹಾರ ಗುಣಮಟ್ಟ ಮತ್ತು ಸುರಕ್ಷತೆಯ ಬಗ್ಗೆ |

| | | |
|---|---|---|
| | | ಖಾತ್ರಿಪಡಿಸಿಕೊಂಡ ನಂತರವೇ ಶಾಲಾ ಮಕ್ಕಳಿಗೆ ವಿತರಿಸಲಾಗುತ್ತದೆ. ಬಿಸಿಯೂಟ ಸಿದ್ಧತೆ, ವಿತರಣೆಯಲ್ಲಿ SOP ಅನುಪಾಲನೆ ಕೈಗೊಳ್ಳಲಾಗುತ್ತಿದ<br>• 4.ಇದಲ್ಲದೇ ಶಾಲೆಯಲ್ಲಿ ಆಹಾರ ಪದಾರ್ಥಗಳ ಗುಣಮಟ್ಟ ಸ್ವಚ್ಛತೆ. ಸುರಕ್ಷತೆ. ದಾಸ್ತಾನು. ಇತ್ಯಾದಿ ವಿಷಯಗಳ ಬಗ್ಗೆ ತಾಲ್ಲೂಕು ಮಟ್ಟದಲ್ಲಿ ಪರಿಶೀಲಿಸಿ ಮೇಲ್ವಿಚಾರಣೆ ಕೈಗೊಳ್ಳಲು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ, ಸಹಾಯಕ ನಿರ್ದೇಶಕರು ಪಿಎಂ ಪೋಷಣ್, ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರೊಂದಿಗೆ ಬಿ.ಆರ್.ಪಿ, ಬಿ.ಆರ್.ಸಿ. ಇ.ಸಿ.ಓ. ಹಾಗೂ ಕ್ಲಸ್ಟರ್ ಹಂತದ ಸಿ.ಆರ್.ಪಿ ಸಿಬ್ಬಂದಿಗಳು ಶಾಲೆಗೆ ಆಗಾಗ್ಗೆ ಭೇಟಿ ನೀಡಿ ಇಲಾಖೆಯ ಮಾರ್ಗಸೂಚಿಯಂತೆ ಹಾಗೂ SOP ಯಂತೆ ಪರಿಶೀಲಿಸಿ ಮೇಲ್ವಿಚಾರಣೆ ಕ್ರಮಗಳನ್ನು ನಿರ್ವಹಿಸುತ್ತಾರೆ.<br>• 5.ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪನಿರ್ದೇಶಕರು(ಆಡಳಿತ) ಹಾಗೂ ಜಿಲ್ಲಾ ಪಂಚಾಯತ್ ಪಿ.ಎಂ ಪೋಷಣ ಶಿಕ್ಷಣಾಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡಿ ಕಾರ್ಯಕ್ರಮದ ಅನುಷ್ಠಾನದ ಪ್ರಗತಿಯ ಬಗ್ಗೆ ಪರಿಶೀಲನೆ ಮತ್ತು ಮೇಲ್ವಿಚಾರಣೆ ನಡೆಸುತ್ತಾರೆ. |
| 85. | ಎಲ್ಲಾ ಸರ್ಕಾರಿ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ನೀಡುವ ಆಹಾರ, ಇತರೆ ಎಲ್ಲಾ ಸೌಲಭ್ಯಗಳ ಪಟ್ಟಿಯನ್ನು ಎಲ್ಲಾ ಹಾಸ್ಟೆಲ್‌ಗಳ ಮುಂಭಾಗದಲ್ಲಿ ಎಲ್ಲರಿಗೂ ಕಾಣುವಂತೆ ಬಹಿರಂಗಪಡಿಸಬೇಕು. ಹಾಗೆಯೇ ವಿದ್ಯಾರ್ಥಿಗಳಿಗೆ ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಂಜೆ ವೇಳೆ ನೀಡುವ ಆಹಾರಗಳ ಬಗ್ಗೆ ವಿವರಗಳನ್ನು ಪ್ರಕಟಿಸಲು ಕ್ರಮ ಜರುಗಿಸಬೇಕು. ಪ್ರಕಟಣೆ ಮಾಡದಿರುವ ಅಧಿಕಾರಿಗಳ ಮೇಲೆ ಕಡ್ಡಾಯವಾಗಿ ಸರ್ಕಾರ ಕ್ರಮ ಜರುಗಿಸಲು ನಿಯಮಾವಳಿಗಳನ್ನು ರೂಪಿಸಬೇಕು. | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ(ICPS)**<br><br>ಎಲ್ಲಾ ಜಿಲ್ಲೆಗಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳೂ ತಮ್ಮಮ ಅಧೀನದಲ್ಲಿನ ಪಾಲನಾ ಸಂಸ್ಥೆಗಳ ಮುಖ್ಯಸ್ಥರಾದ ಅಧೀಕ್ಷಕರುಗಳಿಗೆ ತಮ್ಮ ಸಂಸ್ಥೆಗಳಲ್ಲಿ ಮಕ್ಕಳಿಗೆ ಪ್ರತಿದಿನ ನೀಡುವ ಆಹಾರದ ಚಾರ್ಟ್‌ನ್ನು ಎಲ್ಲರಿಗೂ ಕಾಣುವಂತೆ ಬಹಿರಂಗವಾಗಿ ಪಾಲನಾ ಸಂಸ್ಥೆಗಳ ಮುಂಭಾಗದಲ್ಲಿ ಅಳವಡಿಸಲಾಗಿದೆ ಹಾಗೂ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಮಕ್ಕಳಿಗೆ ವಾರದಲ್ಲಿ ಮಕ್ಕಳಿಗೆ ಯಾವಯಾವ ಆಹಾರವನ್ನು ಎಷ್ಟು ಗ್ರಾಂಗಳಿಗೆ ನೀಡಬೇಕೆನ್ನುವ ಬಗ್ಗೆ ಸರ್ಕಾರದ ಆದೇಶ ದಿ:03/09/2024ರಲ್ಲಿ ಪರಿಷ್ಕರಣೆಗೊಂಡಿದ್ದು, ಅದರನ್ವಯ ಕ್ರಮವಹಿಸಲಾಗುತ್ತಿದೆ.<br><br>**ಸಮಾಜ ಕಲ್ಯಾಣ ಇಲಾಖೆ(ಆಯುಕ್ತರು):**<br>• ಸಮಾಜ ಕಲ್ಯಾಣ ಇಲಾಖೆಯ ಸರ್ಕಾರಿ ವಸತಿ ಶಾಲೆ ಮತ್ತು ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಊಟೋಪಚಾರವನ್ನು ನೀಡಲು ಮೂರು ವಿಭಾಗವಾರು (ಕರಾವಳಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ) ಪರಿಷ್ಕೃತ ಮೆನು ಚಾರ್ಟ್ ನಂತೆ ವಿದ್ಯಾರ್ಥಿಗಳಿಗೆ ಊಟೋಪಚಾರವನ್ನು ನೀಡಲಾಗುತ್ತಿದೆ. |

| | | |
|---|---|---|
| | | • ಸರ್ಕಾರದ ಆದೇಶ ಸಂಖ್ಯೆ: ಸಕಇ 738 ಪಕವಿ 2024, ದಿನಾಂಕ: 30-10-2024ರಲ್ಲಿ ಇಲಾಖೆಯ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಸತಿ ಶಾಲೆ ಹಾಗೂ ಮೆಟ್ರಿ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಆಹಾರ ಪದಾರ್ಥ ಮತ್ತು ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡಲು 2024-25ನೇ ಸಾಲಿನಿಂದ ಜಿಲ್ಲಾಮಟ್ಟದಲ್ಲಿ ಪ್ರತಿ ಜಿಲ್ಲೆಯನ್ನು ಘಟಕವನ್ನಾಗಿಸಿ ಪ್ರತಿ 02 ತಿಂಗಳಿಗೊಮ್ಮೆ ಕಡ್ಡಾಯವಾಗಿ ಟೆಂಡರ್ ಕರೆಯುವಂತೆ ಪರಿಷ್ಕೃತ ಮಾರ್ಗಸೂಚಿಯನ್ನು ಹೊರಡಿಸಿ ಆದೇಶಿಸಿದೆ.<br>• ಈ ಕಛೇರಿ ಸುತ್ತೋಲೆ ಸಂಖ್ಯೆ:SWD/EDU/ED7/ 20/2023/1065640, ದಿನಾಂಕ :07-10-2023ರಲ್ಲಿ Freak Rate ನಮೂದಿಸುವ ಬಿಡ್‌ದಾರರನ್ನು ತಿರಸ್ಕರಿಸಲು ಮಾರ್ಗಸೂಚಿಯನ್ನು ಹಾಗೂ ಗುತ್ತಿಗೆದಾರರು ಸರಬರಾಜು ಮಾಡುವ ಆಹಾರ ಪದಾರ್ಥಗಳ ಮಾದರಿಗಳನ್ನು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕಛೇರಿಗಳಲ್ಲಿ ಪ್ರದರ್ಶಿಸಲು ಸುತ್ತೋಲೆ ಹೊರಡಿಸಿದೆ.<br>• ಈ ಕಛೇರಿ ಸುತ್ತೋಲೆ ಸಂಖ್ಯೆ: SWD/ SCHC/ SC/ 23/ 2023/ 1184131) ದಿನಾಂಕ: 19-09-2023 ರಲ್ಲಿ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಸಿದ್ಧಪಡಿಸಲಾಗುತ್ತಿರುವ ಆಹಾರದ ಗುಣಮಟ್ಟ ಕಾಯ್ದುಕೊಳ್ಳುವ ಸಂಬಂಧ Taste Register (ರುಚಿ ಪರಿಶೀಲನಾ ವಹಿ)ಯನ್ನು ನಿರ್ವಹಿಸುವಂತೆ ಸೂಚಿಸಿದೆ.<br>• ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: SWD 198 RI 2022, ದಿನಾಂಕ: 18-02-2025 ರನ್ವಯ ಪ್ರತಿ ಜಿಲ್ಲೆಗೆ ರಾಜ್ಯ ಮಟ್ಟದ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನಿಯೋಜನೆ ಆದೇಶಿಸಿದೆ.<br>• ಸರ್ಕಾರದ ಆದೇಶ ಸಂಖ್ಯೆ SWD/EDU/ED4/80/2023 C-1161067 ದಿನಾಂಕ:15-09-2023 ರಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ವಿದ್ಯಾರ್ಥಿ ನಿಲಯಗಳಿಗೆ ಉಪ ವಿಭಾಗಾಧಿಕಾರಿಗಳು ಪ್ರತಿ ಮಾಹೆಯಲ್ಲಿ ಕನಿಷ್ಠ ಒಂದು ಬಾರಿ ಹಾಗೂ ತಾಲ್ಲೂಕಿನ ತಹಶಿಲ್ದಾರ್ ಪ್ರತಿ ಮಾಹೆಯಲ್ಲಿ ಕನಿಷ್ಠ 2 ಬಾರಿ ಅನಿರೀಕ್ಷಿತ ಭೇಟಿ ನೀಡಿ ವರದಿ ಮಾಡುವಂತೆ ಆದೇಶಿಸಿದೆ.<br><br>ಈ ಕಛೇರಿ ಆದೇಶ ಸಂಖ್ಯೆ:ಸಕನಿ/ಇಡಿ-4/2022-23, ದಿನಾಂಕ:08-01-2024ರಲ್ಲಿ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಾರ್ಡನ್, ಅಡುಗೆಯವರು ಮತ್ತು |

| | | |
|---|---|---|
| | | ಅಡುಗೆ ಸಹಾಯಕರು ಹಾಗೂ ರಾತ್ರಿ ಕಾವಲುಗಾರರು (ಹೊರಸಂಪನ್ಮೂಲ ನೌಕರರು ಸೇರಿದಂತೆ) ಗಳಿಗೆ ಸ್ವಚ್ಛತೆ ಹಾಗೂ ರುಚಿಯಾದ ಅಡುಗೆ ತಯಾರಿಸುವ ಕುರಿತಂತೆ ತರಬೇತಿ ಕಾರ್ಯಾಗಾರವನ್ನು ಏರ್ಪಡಿಸಲಾಗಿರುತ್ತದೆ.<br><br>**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ**<br>ಸದರಿ ಶಿಫಾರಸ್ಸಿಗೆ ಸಂಬಂಧಪಟ್ಟಂತೆ ಎಲ್ಲಾ ವಿದ್ಯಾರ್ಥಿನಿಲಯಗಳಲ್ಲಿ ಎಲ್ಲರಿಗೂ ಕಾಣುವಂತೆ ವಿದ್ಯಾರ್ಥಿಗಳಿಗೆ ನೀಡುವ ಆಹಾರ, ಇತರೆ ಎಲ್ಲಾ ಸೌಲಭ್ಯಗಳ ಪಟ್ಟಿಯನ್ನು ಚಾರ್ಟ್ ಮೂಲಕ ಪ್ರದರ್ಶಿಸಲಾಗಿರುತ್ತದೆ. |
| 86. | ಬಾಲಕಿಯರ ಹಾಸ್ಟೆಲ್‌ಗಳಲ್ಲಿ ಇರುವ ಹೆಣ್ಣುಮಕ್ಕಳಿಗೆ ನೀಡಬೇಕಾಗಿರುವ ನ್ಯಾಪ್‌ಕಿನ್, ಎಣ್ಣೆ, ಸೋಪು, ಹಾಸಿಗೆ, ಹೊದಿಕೆ, ದಿಂಬು, ಮುಂತಾದವುಗಳನ್ನು ಉತ್ತಮ ಗುಣಮಟ್ಟದ ಪದಾರ್ಥಗಳನ್ನು ಕಾಲಕಾಲಕ್ಕೆ ನೀಡಬೇಕು. ಇವುಗಳ ಪೂರೈಕೆ ಮಾಡದ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಸರ್ಕಾರ ಮುಂದಾಗಬೇಕು. | **ಸಮಾಜ ಕಲ್ಯಾಣ ಇಲಾಖೆ(ಆಯುಕ್ತರು):**<br>• ಸಮಾಜ ಕಲ್ಯಾಣ ಇಲಾಖೆಯ ಸರ್ಕಾರಿ ವಸತಿ ಶಾಲೆ ಮತ್ತು ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಊಟೋಪಚಾರವನ್ನು ನೀಡಲು ಮೂರು ವಿಭಾಗವಾರು (ಕರಾವಳಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ) ಪರಿಷ್ಕೃತ ಮೆನು ಚಾರ್ಟ್ ನಂತೆ ವಿದ್ಯಾರ್ಥಿಗಳಿಗೆ ಊಟೋಪಚಾರವನ್ನು ನೀಡಲಾಗುತ್ತಿದೆ.<br>• ಸರ್ಕಾರದ ಆದೇಶ ಸಂಖ್ಯೆ: ಸಕಇ 738 ಪಕವಿ 2024, ದಿನಾಂಕ: 30-10-2024ರಲ್ಲಿ ಇಲಾಖೆಯ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಸತಿ ಶಾಲೆ ಹಾಗೂ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಆಹಾರ ಪದಾರ್ಥ ಮತ್ತು ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡಲು 2024-25ನೇ ಸಾಲಿನಿಂದ ಜಿಲ್ಲಾಮಟ್ಟದಲ್ಲಿ ಪ್ರತಿ ಜಿಲ್ಲೆಯನ್ನು ಘಟಕವನ್ನಾಗಿಸಿ ಪ್ರತಿ 02 ತಿಂಗಳಿಗೊಮ್ಮೆ ಕಡ್ಡಾಯವಾಗಿ ಟೆಂಡರ್ ಕರೆಯುವಂತೆ ಪರಿಷ್ಕೃತ ಮಾರ್ಗಸೂಚಿಯನ್ನು ಹೊರಡಿಸಿ ಆದೇಶಿಸಿದೆ.<br>• ಈ ಕಛೇರಿ ಸುತ್ತೋಲೆ ಸಂಖ್ಯೆ:SWD/EDU/ED7/ 20/2023/1065640, ದಿನಾಂಕ :07-10-2023ರಲ್ಲಿ Freak Rate ನಮೂದಿಸುವ ಬಿಡ್‌ದಾರರನ್ನು ತಿರಸ್ಕರಿಸಲು ಮಾರ್ಗಸೂಚಿಯನ್ನು ಹಾಗೂ ಗುತ್ತಿಗೆದಾರರು ಸರಬರಾಜು ಮಾಡುವ ಆಹಾರ ಪದಾರ್ಥಗಳ ಮಾದರಿಗಳನ್ನು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕಛೇರಿಗಳಲ್ಲಿ ಪ್ರದರ್ಶಿಸಲು ಸುತ್ತೋಲೆ ಹೊರಡಿಸಿದೆ. |

| | | |
|---|---|---|
| | | • ಈ ಕಛೇರಿ ಸುತ್ತೋಲೆ ಸಂಖ್ಯೆ: SWD/ SCHC/ SC/ 23/ 2023/ 1184131) ದಿನಾಂಕ: 19-09-2023 ರಲ್ಲಿ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಸಿದ್ಧಪಡಿಸಲಾಗುತ್ತಿರುವ ಆಹಾರದ ಗುಣಮಟ್ಟ ಕಾಯ್ದುಕೊಳ್ಳುವ ಸಂಬಂಧ Taste Register (ರುಚಿ ಪರಿಶೀಲನಾ ವಹಿ)ಯನ್ನು ನಿರ್ವಹಿಸುವಂತೆ ಸೂಚಿಸಿದೆ.<br>• ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: SWD 198 RI 2022, ದಿನಾಂಕ: 18-02-2025 ರನ್ವಯ ಪ್ರತಿ ಜಿಲ್ಲೆಗೆ ರಾಜ್ಯ ಮಟ್ಟದ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನಿಯೋಜನೆ ಆದೇಶಿಸಿದೆ.<br>• ಸರ್ಕಾರದ ಆದೇಶ ಸಂಖ್ಯೆ SWD/EDU/ED4/80/2023 C-1161067 ದಿನಾಂಕ:15-09-2023 ರಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ವಿದ್ಯಾರ್ಥಿ ನಿಲಯಗಳಿಗೆ ಉಪ ವಿಭಾಗಾಧಿಕಾರಿಗಳು ಪ್ರತಿ ಮಾಹೆಯಲ್ಲಿ ಕನಿಷ್ಠ ಒಂದು ಬಾರಿ ಹಾಗೂ ತಾಲ್ಲೂಕಿನ ತಹಶೀಲಾ ಪ್ರತಿ ಮಾಹೆಯಲ್ಲಿ ಕನಿಷ್ಠ 2 ಬಾರಿ ಅನಿರೀಕ್ಷಿತ ಭೇಟಿ ನೀಡಿ ವರದಿ ಮಾಡುವಂತೆ ಆದೇಶಿಸಿದೆ.<br><br>ಈ ಕಛೇರಿ ಆದೇಶ ಸಂಖ್ಯೆ:ಸಕನಿ/ಇಡಿ-4/2022-23, ದಿನಾಂಕ:08-01-2024ರಲ್ಲಿ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಾರ್ಡನ್, ಅಡುಗೆಯವರು ಮತ್ತು ಅಡುಗೆ ಸಹಾಯಕರು ಹಾಗೂ ರಾತ್ರಿ ಕಾವಲುಗಾರರು (ಹೊರಸಂಪನ್ಮೂಲ ನೌಕರರು ಸೇರಿದಂತೆ) ಗಳಿಗೆ ಸ್ವಚ್ಛತೆ ಹಾಗೂ ರುಚಿಯಾದ ಅಡುಗೆ ತಯಾರಿಸುವ ಕುರಿತಂತೆ ತರಬೇತಿ ಕಾರ್ಯಾಗಾರವನ್ನು ಏರ್ಪಡಿಸಲಾಗಿರುತ್ತದೆ.<br><br>**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ**<br><br>ಸದರಿ ಶಿಫಾರಸ್ಸಿಗೆ ಸಂಬಂಧಪಟ್ಟಂತೆ ಮಹಿಳಾ ವಿದ್ಯಾರ್ಥಿನಿಲಯಗಳಿಗೆ ಉತ್ತಮ ಗುಣಮಟ್ಟದ ನ್ಯಾಪ್‌ಕಿನ್, ಎಣ್ಣೆ, ಸೋಪು, ಹಾಸಿಗೆ, ಹೊದಿಕೆ, ದಿಂಬು, ನೀಡಲಾಗಿರುತ್ತದೆ.<br><br>**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**<br><br>ಎಲ್ಲಾ ಜಿಲ್ಲೆಗಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ತಮ್ಮ ಅಧೀನದಲ್ಲಿನ ಪಾಲನಾ ಸಂಸ್ಥೆಗಳಲ್ಲಿ ಅಧೀಕ್ಷಕರುಗಳು ಮಿಷನ್ ವಾತ್ಸಲ್ಯ ಮಾರ್ಗಸೂಚಿಯನ್ವಯ ಪಾಲನಾ ಸಂಸ್ಥೆಗಳಲ್ಲಿ ವಾಸ್ತವ್ಯವಿರುವ ಬಾಲಕಿಯರಿಗೆ ಅವಶ್ಯಕವಾಗಿ ನೀಡಬೇಕಾಗಿರುವ ಸ್ಯಾನಿಟರಿ ನ್ಯಾಪ್‌ಕಿನ್, ಎಣ್ಣೆ, |

| | | |
|---|---|---|
| | | ಸೋಪು, ಹಾಸಿಗೆ, ಹೊದಿಕೆ, ದಿಂಬು ಮುಂತಾದವುಗಳನ್ನು ನೀಡಿ ಪಾಲನಾ ಸಮಸ್ಯೆಗಳಲ್ಲಿ ಬಾಲಕಿಯರು ಆರೋಗ್ಯದಿಂದರಿಲು ಉತ್ತಮ ಗುಣಮಟ್ಟದ ವಸ್ತು/ ಪದಾರ್ಥಗಳನ್ನು ಕಾಲಕಾಲಕ್ಕೆ ನೀಡಲಾಗುತ್ತಿದೆ ಹಾಗೂ ಹೆಣ್ಣು ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ Sanitary Pad Incinerator ಅನ್ನು ಅಳವಡಿಸಲು ಕ್ರಮವಹಿಸಲಾಗಿರುತ್ತದೆ. |
| 87. | ಅದೇ ರೀತಿ ಬಾಲಕರ ಹಾಸ್ಟೆಲ್‌ಗಳಲ್ಲಿ ನೀಡಬೇಕಾಗಿರುವ ಹಾಸಿಗೆ, ಹೊದಿಕೆ, ದಿಂಬು, ಟೇಬಲ್, ಎಣ್ಣೆ, ಸೋಪು, ಹೇರ್ ಕಟ್ಟಿಂಗ್ ಸೌಲಭ್ಯ ಮುಂತಾದವುಗಳ ವಿವರಗಳನ್ನು ಹಾಸ್ಟೆಲ್‌ನ ಮುಂಭಾಗದಲ್ಲಿ ಪ್ರದರ್ಶಿಸತಕ್ಕದ್ದು ಮತ್ತು ಎಲ್ಲಾ ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ನೀಡಬೇಕು. ಅವುಗಳನ್ನು ನೀಡದೆ ಇರುವ ಅಥವಾ ಕಳಪೆ ಗುಣಮಟ್ಟದ ಪದಾರ್ಥಗಳನ್ನು ನೀಡುವ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲು ಸರ್ಕಾರ ನಿಯಮಾವಳಿಗಳನ್ನು ರೂಪಿಸಬೇಕು. | **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ**<br><br>ಸದರಿ ಶಿಫಾರಸ್ಸಿಗೆ ಸಂಬಂಧಪಟ್ಟಂತೆ ಬಾಲಕರ ವಿದ್ಯಾರ್ಥಿನಿಲಯಗಳಲ್ಲಿ ನೀಡಬೇಕಾಗಿರುವ ಹಾಸಿಗೆ, ಹೊದಿಕೆ, ದಿಂಬು, ಟೇಬಲ್, ಎಣ್ಣೆ, ಸೋಪು ಹೇರ್ ಕಟ್ಟಿಂಗ್ ಸೌಲಭ್ಯ, ಮುಂತಾದವುಗಳ ವಿವರಗಳನ್ನು ಎಲ್ಲಾ ವಿದ್ಯಾರ್ಥಿ ನಿಲಯಗಳಲ್ಲಿ ಚಾರ್ಟ್ ಮೂಲಕ ಪ್ರದರ್ಶಿಸಲಾಗಿರುತ್ತದೆ ಹಾಗೂ ಎಲ್ಲಾ ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಗಿರುತ್ತದೆ.<br><br>**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**<br><br>ಎಲ್ಲಾ ಜಿಲ್ಲೆಗಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ತಮ್ಮ ಅಧೀನದಲ್ಲಿನ ಪಾಲನಾ ಸಂಸ್ಥೆಗಳಲ್ಲಿ ಅಧೀಕ್ಷಕರುಗಳು ಮಿಷನ್ ವಾತ್ಸಲ್ಯ ಮಾರ್ಗಸೂಚಿಯನ್ವಯ ಪಾಲನಾ ಸಂಸ್ಥೆಗಳಲ್ಲಿ ವಾಸ್ತವ್ಯವಿರುವ ಬಾಲಕರಿಗೆ ಅವಶ್ಯಕವಾಗಿ ನೀಡಬೇಕಾಗಿರುವ ಎಣ್ಣೆ, ಸೋಪು, ಹಾಸಿಗೆ, ಹೊದಿಕೆ, ದಿಂಬು ಹಾಗೂ ನಿಯಮಿತವಾಗಿ ಹೇರ್ ಕಟ್ಟಿಂಗ್‌ನ್ನು ಮಾಡಿಸಿ, ಪಾಲನಾ ಸಂಸ್ಥೆಗಳಲ್ಲಿನ ಗಂಡು ಮಕ್ಕಳು ಆರೋಗ್ಯದಿಂದರಿಲು ಉತ್ತಮ ಗುಣಮಟ್ಟದ ವಸ್ತು/ ಪದಾರ್ಥಗಳನ್ನು ಕಾಲಕಾಲಕ್ಕೆ ನೀಡಲಾಗುತ್ತಿದೆ. |
| 88. | ಶಾಲೆಗಳಿಗೆ, ಹಾಸ್ಟೆಲ್‌ಗಳಿಗೆ ಕಳಪೆ ಮತ್ತು ಕಡಿಮೆ ಆಹಾರಧಾನ್ಯ ಪೂರೈಕೆ ಮಾಡುವ ಗುತ್ತಿಗೆದಾರ ಮೇಲೆ ನಿಗಾ ವಹಿಸಲು ಪ್ರತಿ ತಾಲ್ಲೂಕು ಮಟ್ಟದಲ್ಲಿ ವಿಜಿಲೆನ್ಸ್ ಸಮಿತಿಗಳನ್ನು ನೇಮಿಸಬೇಕು. ಸಮಿತಿಗಳು ನೀಡಿದ ವರದಿಯ ಮೇಲೆ ಸಂಬಂಧಪಟ್ಟ ಅಧಿಕಾರಿಗಳು ಗುತ್ತಿದಾರರ ಮೇಲೆ | **ಸಮಾಜ ಕಲ್ಯಾಣ ಇಲಾಖೆ(ಆಯುಕ್ತರು).**<br><br>ಸರ್ಕಾರದ ಆದೇಶ ಸಂಖ್ಯೆ:SWD/EDU/ED6/48/2023 (E-1009904), ದಿನಾಂಕ:28-03-2025ರ ಆದೇಶದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಸತಿ ಶಾಲೆ ಹಾಗೂ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಅನಧಿಕೃತ ವ್ಯಕ್ತಿಗಳ ನಿರ್ಬಂಧ ಹಾಗೂ ಕಾನೂನು ಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಮಾರ್ಗಸೂಚಿಗಳನ್ನು ಹೊರಡಿಸಿ ಆದೇಶಿಸಿದೆ. |

| | | |
|---|---|---|
| | ಕ್ರಮಜರುಗಿಸಲು ಸರ್ಕಾರ ನಿಯಮಾವಳಿಗಳನ್ನು ರೂಪಿಸಬೇಕು. | ಸರ್ಕಾರದ ಆದೇಶ ಸಂಖ್ಯೆ:ಸಕಇ 914 ಪಕವಿ 2024, ದಿನಾಂಕ:02-01-2025 ರಲ್ಲಿ ಇಲಾಖೆಯ ವಿದ್ಯಾರ್ಥಿ ನಿಲಯಗಳನ್ನು ಸಮರ್ಪಕ ಕಾರ್ಯ ನಿರ್ವಹಣೆಗೆ ಬೆಂಬಲ ಹಾಗೂ ಮಾರ್ಗದರ್ಶನವನ್ನು ನೀಡುವ ಸಲುವಾಗಿ ತಾಲ್ಲೂಕಿನ ಶಾಲೆಗಳ ಮುಖ್ಯೋಪಾಧ್ಯಾಯರು, ಗ್ರಾಮಪಂಚಾಯತ್ PDO, ಪುರಸಭೆ / ನಗರ ಸಭೆ ಮುಖ್ಯಾಧಿಕಾರಿಗಳು, ಕ್ಲಸ್ಟರ್ ಸಂಪನ್ಮೂಲಾಧಿಕಾರಿ ಮತ್ತು ತಾಲ್ಲೂಕು / ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ ಮತ್ತು ಆಯಾ ವಿದ್ಯಾರ್ಥಿ ನಿಲಯದ 03 ವಿದ್ಯಾರ್ಥಿಗಳ ಪೋಷಕರು ಸೇರಿದಂತೆ ಪ್ರತಿ ವಿದ್ಯಾರ್ಥಿನಿಲಯದಲ್ಲಿ " ವಿದ್ಯಾರ್ಥಿನಿಲಯ ನಿರ್ವಹಣಾ ಸಮಿತಿ "ಯನ್ನು ರಚಿಸಿ ಆದೇಶಿಸಿದೆ.<br><br>**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ**<br><br>ಸದರಿ ಶಿಫಾರಸ್ಸಿಗೆ ಸಂಬಂಧಪಟ್ಟಂತ ಎಲ್ಲಾ ವಿದ್ಯಾರ್ಥಿನಿಲಯಗಳಿಗೆ ಗುಣಮಟ್ಟದ ಆಹಾರ ಧಾನ್ಯ ಪೂರೈಕೆ ಮಾಡಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿರುತ್ತದೆ. |
| 89. | ಆಸ್ಪತ್ರೆಗಳಲ್ಲಿ ಅಸುಗೂಸುಗಳ ಬದಲಾವಣೆ, ಮಾರಾಟ ಹಾಗೂ ಅಸುಗೂಸುಗಳನ್ನು ತೋರಿಸಲು ನಡೆಯುವ ಭ್ರಷ್ಟಾಚಾರ ತಡೆಯಲು ಸರ್ಕಾರ ಕ್ರಮವಹಿಸಬೇಕು. | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ** :<br>ಸದರಿ ವಿಷಯದ ಸಂಬಂಧ ಸುತ್ತೋಲೆ ಹೊರಡಿಸಲಾಗುತ್ತಿದೆ.<br><br>**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**<br><br>ಮಕ್ಕಳ ರಕ್ಷಣಾ ನಿರ್ದೇಶನಾಲಯದ ವತಿಯಿಂದ ಪರಿತ್ಯಕ್ತ ಮಕ್ಕಳನ್ನು ಸ್ವೀಕರಿಸಲು ಅನುವಾಗುವಂತೆ " ಮಮತೆಯ ತೊಟ್ಟಿಲು"ಗಳನ್ನು ಸರ್ಕಾರಿ ಆಸ್ಪತ್ರೆ, ಬಸ್ ನಿಲ್ದಾಣ, ಬಾಲಮಂದಿರ, ಶಿಶುಮಂದಿರ, ವಿಶೇಷ ದತ್ತು ಸಂಸ್ಥೆಗಳು, ದೇವಸ್ಥಾನಗಳ ಮುಂಭಾಗದಲ್ಲಿ ಈ ರೀತಿಯ ಮಕ್ಕಳನ್ನು ಇಲಾಖೆಯಿಂದ ಸ್ಥಾಪಿಸಿರುವ ತೊಟ್ಟಿಲುಗಳಲ್ಲಿ ಮಕ್ಕಳನ್ನು ಸ್ವೀಕೃತಗೊಳ್ಳುವ |

| | | |
|---|---|---|
| | | ಮಕ್ಕಳನ್ನು ಪಡೆದು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸಿ, ನಂತರ ಆ ಮಕ್ಕಳನ್ನು ದತ್ತು ಮುಕ್ತ ಆದೇಶ ಪಡೆದು ದತ್ತು ಪ್ರಕ್ರಿಯೆಗೆ ಕ್ರಮವಹಿಸಲಾಗುತ್ತಿದೆ. |
| 90. | ಇಪ್ಪತ್ತೊಂದನೇ ಶತಮಾನದಲ್ಲೂ ಹೆಣ್ಣು ಮಕ್ಕಳಿಗೆ ಪೂರ್ಣ ಪ್ರಮಾಣದ ಸ್ವಾತಂತ್ರ್ಯ ಲಭ್ಯವಾಗದೆ ಇರುವುದು ಒಂದು ವಿಪರ್ಯಾಸವೇ ಸರಿ. ವಯಸ್ಕ ಯುವಕ-ಯುವತಿಯರು ತಮ್ಮ ಜೀವನ ಸಂಗಾತಿಗಳನ್ನು ಆಯ್ಕೆ ಮಾಡಿಕೊಳ್ಳಲು ಜಾತಿ, ಧರ್ಮಗಳು ಅಡ್ಡವಾಗುತ್ತಿವೆ. ಆ ಕಾರಣದಿಂದ ಕೆಲವು ಪ್ರಕರಣಗಳಲ್ಲಿ ಆತ್ಮಹತ್ಯೆ, ಮರ್ಯಾದೆಯ ಹೆಸರಿನ ಹತ್ಯೆಗಳು ನಡೆಯುತ್ತಿವೆ. ಇಂತಹ ಅನೇಕ ಪ್ರಕರಣಗಳಲ್ಲಿ ಪೊಲೀಸರು ಹಾಗೂ ಸಮಾಜದ ಹಿರಿಯ ಮುಖಂಡರು, ಪೋಷಕರ, ಒತ್ತಾಯದ ಮೇರೆಗೆ ಹೊರ ಹೋಗಿದ್ದ ಯುವಕ-ಯುವತಿಯರನ್ನು ಕೆಲವು ಸಂದರ್ಭಗಳಲ್ಲಿ ವಾಪಸ್ಸು ಕರೆಸಿ, ಯುವತಿಯನ್ನು ಆಕೆಯ ತವರು ಮನೆಗೆ ಹಾಗೂ ಯುವಕನನ್ನು ಆತನ ತಂದೆ-ತಾಯಿಯರ ಮನೆಗೆ ವಾಪಸ್ಸು ಕಳುಹಿಸಿದ ನಂತರ ಅನೇಕ ಪ್ರಕರಣಗಳಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ಅಥವಾ | **ಪೊಲೀಸ್ ಇಲಾಖೆ:**<br>• ಅನ್ಯ ಧರ್ಮೀಯ ಯುವಕ ಯುವತಿಯರು ಸ್ವ-ಇಚ್ಛೆಯಿಂದ ವಿವಾಹವಾಗಿ ಪೋಷಕರ ಹೆದರಿಕೆಯಿಂದ ರಕ್ಷಣೆ ಕುರಿತು ಪೊಲೀಸ್ ಠಾಣೆಗೆ ಬಂದಲ್ಲಿ ಅವರಿಗೆ ಸೂಕ್ತ ರಕ್ಷಣೆ ನೀಡಲಾಗುತ್ತಿದೆ.<br>• ಅವಶ್ಯವಿದ್ದಲ್ಲಿ ಅಂತಹ ಪೋಷಕರನ್ನು ಠಾಣೆಗೆ ಕರೆಯಿಸಿ ಅವರಿಗೆ ತಿಳುವಳಿಕೆ ನೀಡಲಾಗುತ್ತಿದೆ. |

| | | |
|---|---|---|
| | ಮರ್ಯಾದೆಯ ಹೆಸರಿನ ಹತ್ಯೆಗಳಾಗಿರುವ ಪ್ರಸಂಗಗಳು ಇರುತ್ತವೆ. ಇಂತಹ ಕೃತ್ಯಗಳನ್ನು ತಡೆಯಬೇಕಾದರೆ ಅನ್ಯ ಜಾತಿ ಅನ್ಯ ಧರ್ಮಗಳಿಗೆ ಸೇರಿದ ಯುವಕ-ಯುವತಿಯರು ಪ್ರೀತಿಸಿ ಮದುವೆಯಾಗಲು ಮುಂದೆ ಬರುವವರಿಗೆ ಸಂಬಂಧಿಸಿದ ಪೊಲೀಸ್ ಇಲಾಖೆಯವರು ಕಡ್ಡಾಯವಾಗಿ ರಕ್ಷಣೆ ಕೊಡುವಂತಾಗಬೇಕು. ರಕ್ಷಣೆ ಕೊಡಲು ವಿಫಲರಾಗುವ ಪೊಲೀಸರ ಮೇಲೆ ಕ್ರಮ ತೆಗೆದುಕೊಳ್ಳಲು ನಿಯಮಾವಳಿಗಳನ್ನು ರೂಪಿಸಬೇಕು. ವಯಸ್ಕರ ಪ್ರೇಮ ವಿವಾಹವನ್ನು ವಿರೋಧಿಸಿ ಅಡ್ಡಿಪಡಿಸುವ ಪೋಷಕರು ಮತ್ತು ಇನ್ನಿತರರನ್ನು ಶಿಕ್ಷಾರ್ಹರೆಂದು ಪರಿಗಣಿಸಿ, ಶಿಕ್ಷೆಗೆ ಗುರಿಪಡಿಸಲು ಕಾನೂನು ರೂಪಿಸಬೇಕು. | |
| 91. | ಮರ್ಯಾದೆಯ ಹೆಸರಿನಲ್ಲಿ ನಡೆಯುವ ಹತ್ಯೆ ನಿಯಂತ್ರಿಸುವ ಕಾನೂನು ತರಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕು. | ಕರ್ನಾಟಕ ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿನ ಅಪರಾಧಗಳ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ ಇವ ನಮ್ಮವ ) ಅಧಿನಿಯಮ, 2026 ರಚಿಸಲಾಗಿರುತ್ತದೆ. |
| 92. | ಮಹಿಳೆಯರ ಮತ್ತು ಮಕ್ಕಳ ಮೇಲೆ ದೌರ್ಜನ್ಯ, ಅತ್ಯಾಚಾರ ಎಸಗುವವರು ಕುಡಿತ ಹಾಗೂ ಗಾಂಜಾ, ಅಫೀಮು ಮುಂತಾದ | **ಪೊಲೀಸ್ ಇಲಾಖೆ:**<br>• ಮಾದಕ ವಸ್ತುಗಳ ಅಮಲಿನಲ್ಲಿ ಆರೋಪಿತರು ಮಹಿಳೆ ಮತ್ತು ಮಕ್ಕಳ ಮೇಲೆ ದೌರ್ಜನ್ಯ ಎಸಗುತ್ತಿರುವವರ ವಿರುದ್ಧ ರಾಜ್ಯದಲ್ಲಿ ಮಾದಕ ವಸ್ತುಗಳ ಬಳಕೆ, ಸಾಗಣೆ ಹಾಗೂ |

| | | |
|---|---|---|
| | ಮಾದಕ ವಸ್ತುಗಳ ದುಶ್ಚಟಗಳಿಗೆ ಬಹುತೇಕರು ಗುರಿಯಾಗಿರುತ್ತಾರೆ ಎಂಬುದು ಬಹುತೇಕ ಪ್ರಕರಣಗಳಲ್ಲಿ ಕಂಡುಬಂದಿರುತ್ತಿದೆ. ಅಮಲಿನಲ್ಲಿರುವವರು ತಾವು ಏನು ಮಾಡುತ್ತಿದ್ದೇವೆ ಎಂಬ ಅರಿವೇ ಇಲ್ಲದಂತಾಗಿ ಕೆಲವು ಸಂದರ್ಭಗಳಲ್ಲಿ ಇಂತಹ ದುಷ್ಕೃತ್ಯಗಳನ್ನು ಎಸಗುತ್ತಿದ್ದಾರೆ. ಅಂತಹವುಗಳನ್ನು ತಡೆಯುವ ದೃಷ್ಟಿಯಿಂದ ಶಾಲಾ-ಕಾಲೇಜು, ಸರ್ಕಾರ/ಸರ್ಕಾರೇತರ ಕಚೇರಿಗಳು, ಆಸ್ಪತ್ರೆಗಳು, ಕಾರ್ಖಾನೆಗಳು, ದೇವಸ್ಥಾನ, ಚರ್ಚ್, ಮಸೀದಿ ಮುಂತಾದವುಗಳ ಸುತ್ತಮುತ್ತ ಕನಿಷ್ಠ ಅರ್ಧ ಕಿ.ಮೀ. ಆಸು-ಪಾಸಿನಲ್ಲಿ ಹೆಂಡದಂಗಡಿಗಳು ಹಾಗೂ ಮಾದಕ ವಸ್ತುಗಳ ಮಾರಾಟವನ್ನು ನಿಷೇಧಿಸಬೇಕು. ಯಾರಾದರೂ ಹೆಂಡ ಮತ್ತು ಮಾದಕ ವಸ್ತುಗಳನ್ನು ಮಾರಾಟ, ಸಾಗಾಣಿಕೆ ಹಾಗೂ ಸೇವನೆ ಮಾಡಿದರೆ, ಅವರುಗಳ ಮೇಲೆ ಕೇಸ್ ದಾಖಲಿಸಿಕೊಂಡು ಕನಿಷ್ಠ 6 ತಿಂಗಳು ಹಾಗೂ ಗರಿಷ್ಠ ಒಂದು ವರ್ಷದ ಅವಧಿಯೊಳಗೆ ಕೇಸುಗಳ ತನಿಖೆ ಮತ್ತು ವಿಚಾರಣೆ ಮುಕ್ತಾಯಗೊಳಿಸಿ ಶಿಕ್ಷೆ ಆಗುವಂತೆ | ಮಾರಾಟ ಕುರಿತು ಮಾಹಿತಿ ಸಂಗ್ರಹಿಸಿ ದಾಳಿ ಮಾಡಿ ಅಂತಹ ವ್ಯಕ್ತಿಗಳ ಮೇಲೆ ಕಾನೂನು ಕ್ರಮ ಕೈಕೊಳ್ಳಲಾಗುತ್ತಿದೆ.<br>• ಇಂತಹವರ ವಿರುದ್ಧ ಎನ್‌ಡಿಪಿಎಸ್, ಟೊಬ್ಯಾಕೋ ನಿಷೇದ ಕಾಯ್ದೆ ಮತ್ತು ಬಿಎನ್‌ಎಸ್ ಕಾಯ್ದೆಗಳ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.<br><br>**ಆರ್ಥಿಕ ಇಲಾಖೆ (ಅಬಕಾರಿ):**<br><br>ಅಕ್ರಮ ಮದ್ಯ ಉತ್ಪಾದನೆ/ಸಾಗಾಣಿಕೆ/ಹೊಂದುವಿಕೆ ಮಾರಾಟ/ಸೇವನೆ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಅನ್ವಯ ಹಾಗೂ ಎನ್.ಡಿ.ಪಿ.ಎಸ್ ಕಾಯ್ದೆ ಅಡಿ ಮಾದಕ ವಸ್ತುಗಳ ಕುರಿತಾಗಿ ಕಳೆದ ಎರಡು ವರ್ಷಗಳಲ್ಲಿ ಒಟ್ಟು 1,60,827 ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. ವರ್ಷವಾರು ವಿವರ ಈ ಕೆಳಕಂಡಂತೆ.<br><br>(see table below)<br><br>ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವಿಧದ ಸನ್ನದುಗಳು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ-5 ರನ್ವಯ ಉದ್ದೇಶಿತ ಸನ್ನದಿನ 100 ಮೀಟರ್ ಅಂತರದೊಳಗೆ ಯಾವುದೇ ಶೈಕ್ಷಣಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಆಸ್ಪತ್ರೆಗಳು (30 ಬೆಡ್‌ಗಳನ್ನು ಹೊಂದಿರುವ ಆಸ್ಪತ್ರೆಗಳು) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳ ಕಾಲೋನಿಗಳು ಇರುವಂತಿಲ್ಲ. ಯಾವುದೇ ರಾಜ್ಯ ಸರ್ಕಾರದ/ಕೇಂದ್ರ ಸರ್ಕಾರದ ಕಛೇರಿಯಾಗಲೀ ಅಥವಾ ಸ್ಥಳೀಯ ಸಂಸ್ಥೆಗಳ ಕಛೇರಿಯಾಗಲೀ ಅವುಗಳ ಮುಖ್ಯಸ್ಥರು ಗ್ರೂಪ್ "ಎ" |

| ಅಬಕಾರಿ ಸಾಲು (ಜುಲೈ ರಿಂದ ಜೂನ್ ಮಾಹವರೆಗೆ) | ದಾಖಲಿಸಿದ ಪ್ರಕರಣಗಳು | | | | |
|---|---|---|---|---|---|
| | ಕರ್ನಾಟಕ ಅಬಕಾರಿ ಕಾಯ್ದೆಯಡಿ | | | ಎನ್ ಡಿಪಿಎಸ್ ಕಾಯ್ದೆಯಡಿ | ಒಟ್ಟು |
| | ಕಲಂ 32, 34 | ಕಲಂ 15(ಎ) | ಸನ್ನದು ಷರತ್ತು ಉಲ್ಲಂಘನೆ (ಬಿಎಲ್‌ಸಿ) | | |
| 2022-23 | 6678 | 59220 | 15193 | 832 | **81,923** |
| 2023-24 | 5528 | 56274 | 16256 | 846 | **78,904** |
| **ಒಟ್ಟು** | **12,206** | **1,15,494** | **31,449** | **1,678** | **1,60,827** |

| | | |
|---|---|---|
| | ಕಾನೂನು ರೂಪಿಸಬೇಕು. ಇಂತಹ ಪ್ರಕರಣಗಳಲ್ಲಿ ಯಾವುದೇ ಪೊಲೀಸ್ ಅಧಿಕಾರಿ ಕರ್ತವ್ಯ ಲೋಪವೆಸಗಿದರೆ ಅಂತಹವರ ವಿರುದ್ಧ ಅಪರಾಧವೆಂದು ಪರಿಗಣಿಸುವ ಕಾನೂನನ್ನು ರೂಪಿಸಬೇಕು. ಕಾನೂನು ಜಾರಿ ಮಾಡುವ ಹಂತದಲ್ಲಿಯೂ ಯಾವುದೇ ಲೋಪವಾಗದಂತೆ ಎಚ್ಚರಿಕೆ ಮತ್ತು ಸೂಕ್ತ ಕ್ರಮ ಕೈಗೊಳ್ಳಬೇಕು. | ಅಥವಾ ಗ್ರೂಪ್ "ಬಿ" ಅಧಿಕಾರಿಯಾಗಿದ್ದಲ್ಲಿ ಆ ಕಛೇರಿಯು ಆಕ್ಷೇಪಣಾ ಸ್ಥಳವೆಂದು ಪರಿಗಣಿಸಲ್ಪಡುತ್ತದೆ.<br><br>ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5(1) ರನ್ವಯ ಆಕ್ಷೇಪಣಾ ಸ್ಥಳವೆಂದು ಪರಿಗಣಿಸಲ್ಪಡುವ ಸ್ಥಳದಲ್ಲಿ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ:12164-12166/2016 ರ ದಿನಾಂಕ:31-03-2017 ರಲ್ಲಿ ಆದೇಶಿಸಿದಂತೆ 20,000 ಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 500 ಮೀಟರ್ (ಸರ್ವೀಸ್ ರಸ್ತೆಯು ಹಾದು ಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಅಂತರದಲ್ಲಿ ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ. 20,000ಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 220 ಮೀಟರ್ (ಸರ್ವೀಸ್ ರಸ್ತೆಯು ಹಾದು ಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಅಂತರದಲ್ಲಿ ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ.<br><br>ಸರ್ಕಾರದ ಪತ್ರ ಸಂಖ್ಯೆ: ಆಇ 36 ಇಡಬ್ಲ್ಯೂಪಿ 2018, ದಿನಾಂಕ: 18.06.2020 ರಲ್ಲಿ 2011ರ ಜನಗಣತಿಯನ್ವಯ 5000 ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮ ಪಂಚಾಯಿತಿ/ಸ್ಥಳೀಯ ಪ್ರದೇಶಗಳ ವ್ಯಾಪ್ತಿಯಲ್ಲಿ ಹಾದು ಹೋಗುವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಇಕ್ಕೆಲಗಳಲ್ಲಿ ಹೊಸದಾಗಿ ಸಿಎಲ್-6ಎ ಮತ್ತು ಸಿಎಲ್-7 ಸನ್ನದುಗಳಿಗೆ ಮಾತ್ರ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ (5)ರಡಿಯಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ವಿಧಿಸಿರುವ ನಿಬಂಧನೆಗಳನ್ನು ಹೊರತುಪಡಿಸಿ, ಇತರೆ ಷರತ್ತುಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ನಿಯಮಾನುಸಾರ ಪ್ರಾರಂಭಿಸಲು ವಿನಾಯಿತಿಯನ್ನು ನೀಡಲಾಗಿದೆ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ:ಆಇ/09/ಪಿಇಎಸ್/2022, ದಿನಾಂಕ:16-08-2024 ರಲ್ಲಿ ರಾಜ್ಯ ಹೆದ್ದಾರಿಗಳು ಅಥವಾ ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರ ಉಪ ನಿಯಮ(1) ನಲ್ಲಿರುವ ಯಾವುದೂ, 2011ರ ಜನಗಣತಿಯನ್ವಯ 3000 ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಗ್ರಾಮ ಪಂಚಾಯತಿ ಅಥವಾ ಸ್ಥಳೀಯ ಸಂಸ್ಥೆಗಳಲ್ಲಿ ನಮೂನೆ 6A ಮತ್ತು ನಮೂನೆ-7 ನಲ್ಲಿ ಮಂಜೂರು ಮಾಡಲಾಗಿರುವ ಹೊಸ ಸನ್ನದುಗಳಿಗೆ ಅನ್ವಯಿಸತಕ್ಕದ್ದಲ್ಲ ಎಂದು ತಿದ್ದುಪಡಿ ತರಲಾಗಿರುತ್ತದೆ. |

| | | |
|---|---|---|
| | | ಮಹಿಳಾ ಮತ್ತು ಮಕ್ಕಳ ಮೇಲಿನ ಶೋಷಣೆ, ದೌರ್ಜನ್ಯ, ಅತ್ಯಾಚಾರ ನಿಯಂತ್ರಿಸುವ ಮತ್ತು ವರದಿ ನೀಡುವ ತಜ್ಞರ ಸಮಿತಿಯ ವರದಿಯ ಶಿಫಾರಸ್ಸಿನನ್ವಯ ಆಕ್ಷೇಪಣಾ ಸ್ಥಳಗಳಿಂದ ಮದ್ಯ ಮಾರಾಟ ಸನ್ನದುಗಳ ಅಂತರವನ್ನು ಉದ್ದೇಶಿತ ಸನ್ನದಿನ 500 ಮೀಟರ್ ಅಂತರಕ್ಕೆ ಹೆಚ್ಚಿಸುವ ಸಂಬಂಧ ಸಾಧಕ ಬಾಧಕಗಳನ್ನು ಪರಿಶೀಲಿಸಲು ಇಲಾಖಾವತಿಯಿಂದ ಹಿರಿಯ ಅಧಿಕಾರಗಳು ಹಾಗೂ ಸನ್ನದುದಾರರ ಸಂಘದ ಪದಾಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ರಚಿಸಿ, ಇಲಾಖೆಯ ನಿಯಮಗಳಿಗನುಗುಣವಾಗಿ ನಿರ್ಣಯ ತೆಗೆದುಕೊಂಡು ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು.<br><br>**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ :**<br><br>ಕೋಟ್ಪಾ 2003 ಕಾಯ್ದೆಯನ್ವಯ ಸೆಕ್ಷನ್ 4ರಲ್ಲಿ ಸಾರ್ವಜನಿಕ ಸ್ಥಳದಲ್ಲಿ ಧೂಮಪಾನ ನಿಷೇಧಿಸಲಾಗಿದೆ ಹಾಗೂ ಸೆಕ್ಷನ್ 6 'ಬಿ' ರಡಿಯಲ್ಲಿ ಶಾಲಾ/ಕಾಲೇಜುಗಳ 100 ಗಜದ ಅಂತರದಲ್ಲಿ ತಂಬಾಕು ಪದಾರ್ಥಗಳ ಮಾರಾಟವನ್ನು ನಿಷೇಧಿಸಲಾಗಿದೆ.<br><br>ಸದರಿ ಸೆಕ್ಷನ್‌ಗಳ ಉಲ್ಲಂಘನೆ ಪ್ರಕರಣಗಳು - (2024ರ ಏಪ್ರಿಲ್ ರಿಂದ ಡಿಸೆಂಬರ್ 2024ರವರೆಗೆ)<br><br>ಸೆಕ್ಷನ್ 4 - 28947<br><br>ಸೆಕ್ಷನ್ 6 b - 3203 (DD-NTCP) |
| 93. | ರಾಜ್ಯದ ರಾಜಧಾನಿಯಾದ ಬೆಂಗಳೂರು ಮತ್ತು ಇನ್ನಿತರ ನಗರಗಳಲ್ಲಿ ಮೋಜು-ಮಸ್ತಿ ನಡೆಸುವ ಪಬ್/ಘರ್ಜಿ ಕೆಫೆ/ಕಾಫಿ ಬಾರ್/ಐಷಾರಾಮಿ ಹೋಟೆಲ್ ಗಳ ಮೇಲೆ 24 ಗಂಟೆಗಳ ಕಾಲ ಪೊಲೀಸರು ನಿಗಾ ಇಡುವಂತಹ ಕ್ರಮ ಆಗಬೇಕು. ಇವುಗಳ ಕಾಲಾವಧಿ ಪ್ರತಿದಿನ ಬೆಳಿಗ್ಗೆ 10.00 ಗಂಟೆಯಿಂದ ರಾತ್ರಿ 11.00 | **ನಗರಾಭಿವೃದ್ಧಿ ಇಲಾಖೆ ಮಾಹಿತಿ:**<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಣಿಜ್ಯ ಮತ್ತು ವ್ಯಾಪಾರದ ದೃಷ್ಟಿಯಿಂದ ರಾತ್ರಿ ಮೇಲೆ ವ್ಯಾಪಾರ ವಹಿವಾಟಿನ ಮೇಲಿನ ನಿರ್ಬಂಧಕ್ಕೆ ಬೆಳಗಿನ ಜಾವ 1.00 ಗಂಟೆಯವರೆಗೆ ವಿನಾಯಿತಿ ನೀಡಿ, ಸರ್ಕಾರದ ವಿಶೇಷ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ & ಸಮನ್ವಯ), ರವರು ತಿದ್ದುಪಡಿ ಆದೇಶ ಸಂಖ್ಯೆ:ನಅಇ 298 ಎಂಎನ್‌ವೈ 2024, ದಿ: 06-08-2024 ರಂತೆ ಆದೇಶಿಸಿರುತ್ತಾರೆ. ವಾಣಿಜ್ಯ ಮತ್ತು ವ್ಯಾಪಾರದ ವಹಿವಾಟಿನ ಅವಧಿ ನಿರ್ಧಾರ ಮಾಡುವ ಅಧಿಕಾರ ಪಾಲಿಕೆಗೆ ಅನ್ವಯಿಸುವುದಿಲ್ಲ. |

| | | |
|---|---|---|
| | ಗಂಟೆವರೆಗೆ ಮಾತ್ರ ತೆರೆಯಲು ಅವಕಾಶ ಮಾಡುವಂತಹ ನಿಯಮಾವಳಿಗಳನ್ನು ರೂಪಿಸಬೇಕು. ಅಂತಹ ಸ್ಥಳಗಳಿಗೆ ಭೇಟಿ ನೀಡುವ ಜನರ ರಕ್ಷಣೆಯ ಪೂರ್ಣ ಜವಾಬ್ದಾರಿ ಆಯಾ ಕೇಂದ್ರಗಳನ್ನು ನಡೆಸುವ ಮಾಲೀಕರ ಜವಾಬ್ದಾರಿಯೆಂಬ ಷರತ್ತಿನೊಂದಿಗೆ ಪರವಾನಗಿ ನೀಡಬೇಕು. ಅಂತಹ ಷರತ್ತುಗಳನ್ನು ಉಲ್ಲಂಘಿಸಿದ ಮಾರಾಟ ಕೇಂದ್ರಗಳ ಪರವಾನಗಿಯನ್ನು ನಿರ್ದಾಕ್ಷಿಣ್ಯವಾಗಿ ರದ್ದುಪಡಿಸಬೇಕು ಹಾಗೂ ಅಂತಹವರು ಅಪರಾಧ ಎಸಗಿದ್ದಾರೆಂದು ಪರಿಗಣಿಸಿ ಕೇಸನ್ನು ದಾಖಲಿಸಲು ಕಾನೂನಿನಲ್ಲಿ ಬದಲಾವಣೆ ತರಬೇಕು. | |
| 94. | ಐಟಿ-ಬಿಟಿ ಸಂಸ್ಥೆಗಳಲ್ಲಿ ಕೆಲಸ ಮಾಡುವ ಹಾಗೂ ಇನ್ನಿತರ ಕಾರಣಗಳಿಂದ ರಾತ್ರಿ 10.00 ಗಂಟೆಯ ನಂತರ ಹೆಣ್ಣು ಮಕ್ಕಳನ್ನು ಕೊಂಡೊಯ್ಯುವ ಖಾಸಗಿ ಬಾಡಿಗೆ ಕ್ಯಾಬ್‌ಗಳ ತಪಾಸಣೆ ಹಾಗೂ ನಿಗಾವಹಿಸುವ ಪೊಲೀಸ್ ಬೀಟ್ ವ್ಯವಸ್ಥೆ ಜಾರಿಯಾಗಬೇಕು. ಅಂತಹ ವಾಹನಗಳ ಚಾಲಕರು | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ(ಮಹಿಳಾ ಆಯೋಗ):**<br>ಐಟಿ-ಬಿಟಿ ಸಂಸ್ಥೆಗಳಲ್ಲಿ ಕೆಲಸ ಮಾಡುವ ಮಹಿಳಾ ಉದ್ಯೋಗಿಗಳ ಸುರಕ್ಷತೆಗಾಗಿ ಕೆಲಸದ ಸ್ಥಳಗಳಲ್ಲಿ ಲೈಂಗಿಕ ದೌರ್ಜನ್ಯ ತಡೆಯಲು 'POSH' ಕಾಯ್ದೆ 2013ರನ್ವಯ ಆಂತರಿಕ ದೂರು ಸಮಿತಿ ರಚಿಸಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸರ್ಕಾರದಿಂದ ಮತ್ತು ಕರ್ನಾಟಕ ರಾಜ್ಯ ಮಹಿಳಾ ಆಯೋಗದಿಂದ ಪತ್ರ ಬರೆಯಲಾಗಿರುತ್ತದೆ. ಈ ಬಗ್ಗೆ ಸರ್ವೆ ಮಾಡಿ ಸದರಿ ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿ ರಚಿಸಲು ಕ್ರಮವಹಿಸುತ್ತಿರುತ್ತಾರೆ.<br><br>**ಕಾರ್ಮಿಕ ಇಲಾಖೆ:** |

| | | |
|---|---|---|
| | ಇನ್ನಿತರ ಸಿಬ್ಬಂದಿಯಿಂದ ದುಷ್ಕೃತ್ಯಗಳು ನಡೆದರೆ ವಾಹನಗಳ ಮಾಲೀಕರು ಹಾಗೂ ಟ್ರಾವೆಲ್ಸ್ ಕಚೇರಿಯ ಮಾಲೀಕರನ್ನು ಹೊಣೆಗಾರರನ್ನಾಗಿ ಮಾಡಲು ಕಾನೂನು ರೂಪಿಸಬೇಕು. ಐ.ಟಿ., ಬಿ.ಟಿ. ಕಂಪನಿಗಳಲ್ಲಿ ಲೈಂಗಿಕ ದೌರ್ಜನ್ಯ ತಡೆಗಾಗಿ ಆಂತರಿಕ ದೂರು ಸಮಿತಿಗಳನ್ನು ರಚಿಸಿ, ಅವುಗಳ ವರದಿಗಳನ್ನು ಸಂಬಂಧಪಟ್ಟವರಿಗೆ ನಿಗದಿತವಾಗಿ ಕಳುಹಿಸುವಂತೆ ಕ್ರಮ ಕೈಗೊಳ್ಳಬೇಕು. | ಕಾರ್ಮಿಕ ಇಲಾಖೆಯ ಕಾರ್ಯವ್ಯಾಪ್ತಿ/ಅಧಿಕಾರವ್ಯಾಪ್ತಿಗೆ ಸಂಬಂಧಿಸಿದಂತೆ, ಕರ್ನಾಟಕ ಔದ್ಯೋಗಿಕ ಉದ್ಯೋಗಗಳ (ಸ್ಥಾಯೀ ಆದೇಶಗಳು), ಕಾಯ್ದೆ, 1946 ರಲ್ಲಿ, IT/ITes ವಲಯಕ್ಕೆ ಕೆಲವೊಂದು ಷರತ್ತುಗಳಿಗೆ ಒಳಪಟ್ಟು ವಿನಾಯಿತಿಯನ್ನು ನೀಡಿ ದಿನಾಂಕ : 10.06.2024 ರಂದು ಸಂಖ್ಯೆ LD 328 LET 2023 ರಲ್ಲಿ ಕರ್ನಾಟಕ ಸರ್ಕಾರವು ಹೊರಡಿಸಲಾಗಿರುವ ಅಧಿಸೂಚನೆಯಲ್ಲಿ ನಾಲ್ಕು ಷರತ್ತುಗಳನ್ನು ವಿಧಿಸಲಾಗಿದ್ದು, ಅದರಲ್ಲಿ ಮೊದಲನೇ ಷರತ್ತು ಐ.ಟಿ. ಬಿ.ಟಿ ಕಂಪನಿಗಳಲ್ಲಿ ಲೈಂಗಿಕ ದೌರ್ಜನ್ಯ ತಡೆಗಾಗಿ ಆಂತರಿಕ ದೂರು ಸಮಿತಿಗಳನ್ನು ರಚಿಸಿ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ.<br><br>**ಪೊಲೀಸ್ ಇಲಾಖೆ:**<br><br>• ರಾಜ್ಯದಲ್ಲಿ ಮಹಿಳೆಯರು ತಡ ರಾತ್ರಿ ಕರ್ತವ್ಯ ನಿರ್ವಹಿಸಿ ಮನೆಗೆ ತೆರಳುವಾಗ ಯಾವುದೇ ಅಹಿತಕರ ಘಟನೆಗಳು ಜರುಗದಂತೆ ರಾತ್ರಿ ಗಸ್ತು ವ್ಯವಸ್ಥೆ, ವಿಶೇಷ ಬೀಟ್ ಪೆಟ್ರೋಲಿಂಗ್ ಹಾಗೂ ಈ.ಆರ್.ಎಸ್.ಎಸ್./ 112 ವಾಹನಗಳಲ್ಲಿ ಗಸ್ತು ಕರ್ತವ್ಯಕ್ಕೆ ಪೊಲೀಸ್ ಸಿಬ್ಬಂದಿಯವರನ್ನು ನಿಯೋಜಿಸಲಾಗುತ್ತಿದೆ.<br>• ತಡ ರಾತ್ರಿ ಕರ್ತವ್ಯ ನಿರ್ವಹಿಸುವ ಆಟೋ/ ಕ್ಯಾಬ್ ಚಾಲಕರಿಗೆ ಮಹಿಳೆಯರ ಸುರಕ್ಷತೆ ಕುರಿತು ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br>• ಖಾಸಗಿ ಕ್ಷೇತ್ರಗಳಲ್ಲಿ ದುಡಿಯುವ ಮಹಿಳೆಯರ ಸುರಕ್ಷತೆಯ ಸಂಬಂಧವಾಗಿ ಕೇಂದ್ರ ಸರ್ಕಾರದ "ಮಹಿಳೆಯರ ಮೇಲೆ ಲೈಗಿಂಕ ಕಿರುಕುಳ (ತಡೆಗಟ್ಟುವಿಕೆ, ನಿಷೇದ, ನಿಭಂಧಿಸುವಿಕೆ) ಅಧಿನಿಯಮ, 2013" ರೀತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಮತ್ತು ಇದರ ಅನ್ವಯ ಆಂತರಿಕ ದೂರು ಸಮಿತಿ ರಚಿಸಲಾಗಿರುತ್ತದೆ. |
| 95. | ನಗರ ಪ್ರದೇಶಗಳಲ್ಲಿ ಲಕ್ಷಾಂತರ ನೌಕರರು, ವಿದ್ಯಾರ್ಥಿಗಳು ಪೇಯಿಂಗ್ ಗೆಸ್ಟಗಳಾಗಿ ಪಿ.ಜಿ.ಗಳಲ್ಲಿ ವಾಸ ಮಾಡುತ್ತಿದ್ದಾರೆ. ಪಿ.ಜಿ.ಗಳ ಕಟ್ಟಡಗಳ ವಿನ್ಯಾಸ, ಪರವಾನಗಿ ಮುಂತಾದವುಗಳಿಗೆ ನಿಯಮಾವಳಿಗಳಿಲ್ಲದೆ ಮನಬಂದಂತೆ ಕಟ್ಟಡಗಳನ್ನು ನಿರ್ಮಾಣ ಮಾಡಿರುತ್ತಾರೆ. ಅನೇಕ ಕಡೆ ಮೂಲಭೂತ ಸೌಲಭ್ಯಗಳ ಕೊರತೆ ಕಾಣುತ್ತಿದೆ. ಅಂತಹವುಗಳನ್ನು ತಡೆಯಲು | **ಪೊಲೀಸ್ ಇಲಾಖೆ:**<br><br>• ಎಲ್ಲ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಪಿ.ಜಿ ಅಥವಾ ಖಾಸಗಿ ವಿದ್ಯಾರ್ಥಿ ನಿಲಯಗಳ ವಿವರಗಳನ್ನು ಪಡೆಯಲಾಗಿದೆ.<br>• ಮೇಲಿಂದ ಮೇಲೆ ಪಿ.ಜಿ ಅಥವಾ ಖಾಸಗಿ ವಿದ್ಯಾರ್ಥಿ ನಿಲಯಗಳಿಗೆ ಭೇಟಿ ನೀಡಿ ಮಹಿಳೆಯರ/ ವಿದ್ಯಾರ್ಥಿನಿಯರ ಸುರಕ್ಷತಾ ಕ್ರಮಗಳನ್ನು ಕೈಗೊಂಡ ಬಗ್ಗೆ ಪರಿಶೀಲಿಸಲಾಗುತ್ತಿದೆ.<br><br>**ನಗರಾಭಿವೃದ್ಧಿ ಇಲಾಖೆ ಮಾಹಿತಿ:** |

ಪಿ.ಜಿ. ಕಟ್ಟಡಗಳ ನಿರ್ಮಾಣ ಮಾಡಲು ಪರವಾನಗಿ ಮತ್ತು ಪಿ.ಜಿ. ನಡೆಸಲು ವಿನ್ಯಾಸ ಪಡೆಯಲು ನಿಯಮಾವಳಿಗಳನ್ನು ಕೂಡಲೇ ರೂಪಿಸಬೇಕು. ಪ್ರತಿಯೊಂದು ಪಿ.ಜಿ. ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ವಿವರಗಳನ್ನು ನಮೂದಿಸುವುದುನ್ನು ಕಡ್ಡಾಯಗೊಳಿಸಬೇಕು. ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸದ ಕಟ್ಟಡ ಮಾಲೀಕರ ಮೇಲೆ ಕೇಸು ದಾಖಲಿಸಬೇಕು. ಕಾನೂನು ರೀತ್ಯಾ ಶಿಕ್ಷೆಗೆ ಗುರಿಪಡಿಸಲು ಕಾನೂನು ರೂಪಿಸಬೇಕು.

- ಬೆಂಗಳೂರು ನಗರ ಸ್ಥಳೀಯ ಯೋಜನಾ ಪ್ರದೇಶ ವ್ಯಾಪ್ತಿಯ ಪರಿಷ್ಕೃತ ಮಹಾ ಯೋಜನೆ - 2015 ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಯು.ಡಿ.ಡಿ 540 ಬೆಂ.ಆ.ಸೆ 2004, ದಿನಾಂಕ:22-06-2007 ರಂದು ಸರ್ಕಾರ ಅನುಮೋದನೆ ನೀಡಿರುತ್ತದೆ.
- ಪರಿಷ್ಕೃತ ಮಹಾ ಯೋಜನೆ ಭಾಗವಾಗಿ ಭೂ ಉಪಯೋಗದ ನಕ್ಷೆಗಳು ಮತ್ತು ವಲಯ ನಿಯಮಾವಳಿಗಳಿಗೆ ಸಹ ಅನುಮೋದನೆ ನೀಡಲಾಗುತ್ತದೆ.
- ಸರ್ಕಾರದಿಂದ ಅನುಮೋದನೆಯಾದ ಭೂ ಉಪಯೋಗ ನಕ್ಷೆಗಳಲ್ಲಿ ವಿವಿಧ ಭೂ ಉಪಯೋಗಗಳನ್ನು (ವಸತಿ, ವಾಣಿಜ್ಯ, ಕೈಗಾರಿಕೆ, ಸಾರ್ವಜನಿಕ/ ಅರೆ ಸಾರ್ವಜನಿಕ, ಉದ್ಯಾನವನ/ಬಯಲು ಜಾಗ, ವ್ಯವಸಾಯ ವಲಯ, ಬಫರ್ ವಲಯ, ಕೆರೆ, ನಾಲಾ ಸೆನ್ಸಿಟೀವ್ ವಲಯ) ಮತ್ತು ರಸ್ತೆ ಪರಿಚಲನೆಯನ್ನು ಅಳವಡಿಸಲಾಗಿರುತ್ತದೆ.
- ಪಾಲಿಕೆ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಿಸಲು ಅನುಮೋದಿತ ಪರಿಷ್ಕೃತ ಮಹಾಯೋಜನೆ-2015ರ ನಿಯಮಾವಳಿಗಳನ್ವಯ ಅನುಮತಿ/ಪರವಾನಗಿ ನೀಡಲಾಗುತ್ತಿದೆ.
- ಪಿ.ಜಿ ಕಟ್ಟಡವನ್ನು ವಸತಿ ಉಪಯೋಗದ ಅಡಿಯಲ್ಲಿ ಪರಿಗಣಿಸಲಾಗುತ್ತದೆ. ಪಿ.ಜಿ ಕಟ್ಟಡ ಎಂಬ ನಿರ್ಧಿಷ್ಟ ಉಪಯೋಗವನ್ನು ವಲಯ ನಿಯಮಾವಳಿಗಳಲ್ಲಿ ನಮೂದಿಸಿರುವುದಿಲ್ಲ. ಇದನ್ನು ಪ್ರಮುಖವಾಗಿ ಹಾಸ್ಟೆಲ್ ಕಟ್ಟಡದ ವರ್ಗೀಕರಣದಲ್ಲಿ ಪರಿಗಣಿಸಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ವರ್ಗೀಕರಣದಲ್ಲಿಯೂ ಕೂಡ ಕಟ್ಟಡ ನಿರ್ಮಾಣಕ್ಕೆ ಅನುಮತಿ ಪಡೆದಿರುತ್ತಾರೆ.
- ಅನುಮೋದಿತ ಪರಿಷ್ಕೃತ ಮಹಾಯೋಜನೆ-2015ರ ವಲಯ ನಿಯಮಾವಳಿಗಳನ್ವಯ ವಸತಿ ಭೂ-ಉಪಯೋಗ ಹಾಗೂ ವಾಣಿಜ್ಯ ಭೂ ಉಪಯೋಗ ಹೊಂದಿರುವ ಸ್ವತ್ತುಗಳಲ್ಲಿ ಹಾಸ್ಟೆಲ್ ಕಟ್ಟಡ ನಿರ್ಮಾಣಕ್ಕೆ ಅನುಮತಿಸಲು ಅವಕಾಶವಿರುತ್ತದೆ. ಅದರಂತೆ, ಹಾಸ್ಟೆಲ್ ಕಟ್ಟಡ ನಿರ್ಮಿಸಲು ಪರವಾನಗಿಯನ್ನು ನೀಡಲಾಗುತ್ತಿರುತ್ತದೆ.
- ಹಾಸ್ಟೆಲ್ ಕಟ್ಟಡ ನಿರ್ಮಾಣಕ್ಕೆ ಮತ್ತು ಸರ್ವಿಸ್ ಅಪಾರ್ಟ್‌ಮೆಂಟ್ ಕಟ್ಟಡ ನಿರ್ಮಾಣಕ್ಕೆ (ವಸತಿ ಉಪಯೋಗದ ಕಟ್ಟಡ) ಪರಿಗಣಿಸಲಾಗುವ ವಲಯ ನಿಯಮಗಳು ಈ ಕೆಳಕಂಡಂತಿದೆ.

| |
|---|
| ನಡುಜಾಗ ಕೋಸ್ಟಕ - 8 ಮತ್ತು 9 |
| ಎತ್ತರ ಕೋಸ್ಟಕ 9 |
| ಆವರಿಸುವ ಕೋಸ್ಟಕ - 10 |
| ಅನುಪಾತ ಕೋಷ್ಟಕ - 10 |
| ವಾಹನ ನಿಲುಗಡೆ ಕೋಷ್ಟಕ - 23 |

| | | | |
|---|---|---|---|
| | | ಸರ್ವಿಸ್ ಅಪಾರ್ಟ್ಮೆಂಟ್ ಕಟ್ಟಡ ನಿರ್ಮಾಣಕ್ಕೆ, ನಿವೇಶನಕ್ಕೆ ಸಂಪರ್ಕವಿರುವ ಸಾರ್ವಜನಿಕ ರಸ್ತೆ ಇರುವ ನಿಷ್ಟ ಅಗಲ 18.0 ಮೀ ಇರಬೇಕಾಗಿರುತ್ತದೆ (ವಲಯ ನಿಯಮಗಳು ಕೋಸ್ಟಕ - 7ರ ಕ್ರಮ ಸಂಖ್ಯೆ: 10)<br>ಪರಿಷ್ಕೃತ ಮಹಾಯೋಜನೆ-2015 ರ ವಲಯ ನಿಯಮಾವಳಿಗಳ ಉದ್ಧೃತ ಭಾಗವನ್ನು ಸಲ್ಲಿಸಿದೆ. | |
| 96. | ಪಿ.ಜಿ. ಕೇಂದ್ರಗಳನ್ನು ಪ್ರಾರಂಭಿಸಲು, ನಿಯಂತ್ರಿಸಲು, ಶುಲ್ಕ ನಿಗದಿ ಮಾಡಲು ಮತ್ತು ಪರವಾನಗಿ ನೀಡಲು ಕಾನೂನಿನಲ್ಲಿ ಯಾವ ಇಲಾಖೆಗೂ ಹಾಲಿ ಅಧಿಕಾರವಿರುವುದಿಲ್ಲ. ಆದ್ದರಿಂದ ಮನಸೋಇಚ್ಛೆ ಪಿ.ಜಿ. ಕೇಂದ್ರಗಳು ಪ್ರಾರಂಭವಾಗಿ ಸುತ್ತಮುತ್ತ ವಾಸಿಸುವ ಜನರಿಗೆ ಮತ್ತು ಪಿ.ಜಿ. ಕೇಂದ್ರಗಳಲ್ಲಿ ವಾಸಿಸುವ ಮಹಿಳೆಯರು ಮತ್ತು ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ, ಅತ್ಯಾಚಾರಗಳು ಪದೇಪದೇ ನಡೆಯುತ್ತಿವೆ. ಆದುದರಿಂದ ಪಿ.ಜಿ. ಕೇಂದ್ರಗಳಿಗೆ ಪರವಾನಗಿ ನೀಡಲು ಮತ್ತು ಅವುಗಳನ್ನು ನಿಯಂತ್ರಿಸಲು ತಪ್ಪಿತಸ್ಥ ಪಿ.ಜಿ.ಗಳ ಮಾಲೀಕರ ಮೇಲೆ ಕ್ರಮ ಜರುಗಿಸಲು ಕೂಡಲೇ ಸರ್ಕಾರ ಕಾನೂನನ್ನು ರೂಪಿಸಬೇಕು. | **ನಗರಾಭಿವೃದ್ಧಿ ಇಲಾಖೆ ಮಾಹಿತಿ:**<br>• ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಪೇಯಿಂಗ್ ಗೆಸ್ಟ್ ಗಳಿಗೆ ಬಿ.ಬಿ.ಎಂ.ಪಿ. 2020 ರಂತೆ, ವಲಯ ವರ್ಗೀಕರಣದಂತೆ ವಾಣಿಜ್ಯ ಪ್ರದೇಶದಲ್ಲಿನ ಉದ್ದಿಮೆದಾರರು ಪರವಾನಿಗೆಗಾಗಿ, ವಿದ್ಯುತ್ ಬಿಲ್ಲು ಮತ್ತು ಮಾಲೀಕರೊಂದಿಗೆ ಮಾಡಿಕೊಂಡಿರುವ ಬಾಡಿಗೆ / ಗುತ್ತಿಗೆ ಕರಾರು ಪತ್ರಗಳನ್ನು ಅಗತ್ಯ ಶುಲ್ಕದೊಂದಿಗೆ ಪಾವತಿಸಿದ್ದಲ್ಲಿ ಹಾಗೂ ವಲಯ ವರ್ಗೀಕರಣದಂತೆ ವಸತಿ ಪ್ರದೇಶಗಳಲ್ಲಿನ 40 ಅಡಿಗಿಂತ ಅಗಲವಿರುವ ರಸ್ತೆಗಳಲ್ಲಿ ವಿದ್ಯುತ್ ಬಿಲ್ಲು, ಮಾಲೀಕರೊಂದಿಗೆ ಮಾಡಿಕೊಂಡಿರುವ ಬಾಡಿಗೆ / ಗುತ್ತಿಗೆ ಕರಾರು ಪತ್ರ ಮತ್ತು ಅಕ್ಕಪಕ್ಕದವರ ಒಪ್ಪಿಗೆ ಸಲ್ಲಿಸಿದ್ದಲ್ಲಿ ಪ್ರತ್ಯಾಯೋಜನೆಯಂತೆ ಉದ್ದಿಮೆ ಪರವಾನಿಗೆ ಪ್ರಮಾಣ ಪತ್ರವನ್ನು 08 ವಲಯ ಮಟ್ಟದಲ್ಲಿ ಆನ್‌ಲೈನ್ ಮುಖಾಂತರ ಮಂಜೂರು ಮಾಡಲಾಗುತ್ತದೆ.<br>• ಅಲ್ಲದೇ, ಸ್ವಚ್ಛತೆ, ಕಳಪೆ ಆಹಾರ ವಿತರಣೆ, ಶಬ್ದ ಮಾಲಿನ್ಯ ನೆರೆಹೊರೆಯವರಿಗೆ ಅಡಚಣೆ ಉಂಟು ಮಾಡುವುದು ಹಾಗೂ ಇತರ ದೂರುಗಳು ಬಂದಲ್ಲಿ, ಪಾಲಿಕೆ ವತಿಯಿಂದ ನಿಯಮಾನುಸಾರವಾಗಿ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ.<br>• ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ - 2020ರ ಸೆಕ್ಷನ್ 305ರ ಪ್ರಕಾರ ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ "ಪೇಯಿಂಗ್ ಗೆಸ್ಟ್" (PGs) ಗಳಿಗೆ ಉದ್ದಿಮೆ ಪರವಾನಗಿಯನ್ನು ನೀಡುವಾಗ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಮಾನ್ಯ ಮುಖ್ಯ ಆಯುಕ್ತರು, ರವರ ಆದೇಶ ಪತ್ರ ಸಂಖ್ಯೆ : ಮು.ಆ/ಪೀಆರ್/136/2024-25, ದಿನಾಂಕ: 07-08-2024 ರಂತೆ ಹೊರಡಿಸಿರುತ್ತಾರೆ.<br>• ಪಾಲಿಕೆ ವ್ಯಾಪ್ತಿಯಲ್ಲಿರುವ "ಪೇಯಿಂಗ್ ಗೆಸ್ಟ್" (PGs) ಗಳಿಗೆ ಉದ್ದಿಮೆ ಪರವಾನಗಿಯನ್ನು ನೀಡುವಾಗ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ: | |

| | | | |
|---|---|---|---|
| | | 1. ಪೇಯಿಂಗ್ ಗೆಸ್ಟ್ ಗಳ ಪ್ರವೇಶ, ನಿರ್ಗಮನ ಮತ್ತು ಆವರಣಗಳ ಸುತ್ತಮುತ್ತಲೂ ನಡೆಯುವ ಘಟನೆಗಳನ್ನು ಚಿತ್ರೀಕರಿಸುವ ಸಿ.ಸಿ. ಟಿ.ವಿ. ಗಳನ್ನು ಅಳವಡಿಸಿ, ಸಿ.ಸಿ ಟಿ.ವಿ ವೀಡಿಯೋ ಮತ್ತು ಫೋಟೇಜ್‌ಗಳನ್ನು 90 ದಿನಗಳ ಬ್ಯಾಕಪ್ ಇರುವಂತೆ ಅಳವಡಿಸುವುದು. | |
| | | 2. ವಾಸಕ್ಕೆ ಸಂಬಂಧಿತ ಕಟ್ಟಡದ ನಿಯಮಗಳ ಪ್ರಕಾರ, ಪ್ರತಿಯೊಬ್ಬ ನಿವಾಸಿಯು ತಲಾ 70 ಚದರ ಅಡಿಗಳಿಗಿಂತ ಕನಿಷ್ಠ ಜಾಗವನ್ನು ಹೊಂದಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಕಟ್ಟಡದಲ್ಲಿ ಒದಗಿಸಲಾದ /ಲಭ್ಯವಿರುವ ಸೌಕರ್ಯಕ್ಕನುಗುಣವಾಗಿ ನಿರ್ದಿಷ್ಟ ಸಂಖ್ಯೆಯ ನಿವಾಸಿಗಳ ವಾಸಕ್ಕೆ ಮಾತ್ರ ಪರವಾನಿಗೆಯನ್ನು ನೀಡತಕ್ಕದ್ದು. | |
| | | 3. ಪೇಯಿಂಗ್ ಗೆಸ್ಟ್ ಗಳಲ್ಲಿ ವಾಸಿಸುವ ನಿವಾಸಿಗಳಿಗೆ ಸ್ವಚ್ಛ ಹಾಗೂ ನೈರ್ಮಲ್ಯತೆ ಹೊಂದಿರುವ ಸ್ನಾನಗೃಹಗಳು ಮತ್ತು ಶೌಚಾಲಯಗಳ ಸೇವೆಯನ್ನು ಒದಗಿಸಿರತಕ್ಕದ್ದು. | |
| | | 4. ಪೇಯಿಂಗ್ ಗೆಸ್ಟ್ ಗಳಲ್ಲಿ ಕಡ್ಡಾಯವಾಗಿ ಶುದ್ಧ ಕುಡಿಯುವ ನೀರಿನ ಸೌಲಭ್ಯವಿರತಕ್ಕದ್ದು. ಪ್ರತಿಯೊಬ್ಬ ನಿವಾಸಿಗೆ 135 LPCD ನೀರಿನ ಲಭ್ಯತೆ ಇರುವುದನ್ನು ಮಾಲೀಕರು /ಉದ್ದಿಮೆದಾರರು ಖಚಿತಪಡಿಸಿಕೊಳ್ಳತಕ್ಕದ್ದು. | |
| | | 5. ಪೇಯಿಂಗ್ ಗೆಸ್ಟ್ ಗಳಲ್ಲಿ ಉದ್ದಿಮೆದಾರರು ತಮ್ಮದೇ ಆದ ಅಡುಗೆಮನೆ ಹೊಂದಿದ್ದಲ್ಲಿ, ಪಾಲಿಕೆಯಿಂದ ಉದ್ದಿಮೆ ಪರವಾನಗಿ ನೀಡಿದ 03 ತಿಂಗಳ ಅವಧಿಯೊಳಗೆ FSSAI ಇಲಾಖೆಯಿಂದ ಲೈಸನ್ಸ್ ಪಡೆದುಕೊಳ್ಳತಕ್ಕದ್ದು. | |
| | | 6. ಉದ್ಯಮದಾರರು / ಮಾಲೀಕರು. ಪೇಯಿಂಗ್ ಗೆಸ್ಟ್ ಗಳಲ್ಲಿ ವಾಸಿಸುವ ನಿವಾಸಿಗಳ ಸುರಕ್ಷತಾ ದೃಷ್ಟಿಯಿಂದ ಕನಿಷ್ಠ ಪಕ್ಷ 01 ಸಿಬ್ಬಂದಿಯನ್ನಾದರೂ ಕಡ್ಡಾಯವಾಗಿ . 24*7 ಸೇವೆಯಡಿಯಲ್ಲಿ ನಿಯೋಜಿಸಿರತಕ್ಕದ್ದು. | |
| | | 7. ಪೇಯಿಂಗ್ ಗೆಸ್ಟ್ ಉದ್ದಿಮೆಗಳಿಗೆ ಪಾಲಿಕೆಯಿಂದ ವಾಣಿಜ್ಯ ಪರವಾನಿಗೆ ಪತ್ರ ವಿತರಿಸುವ ಮುನ್ನ ಉದ್ದೇಶಿತ ಕಟ್ಟಡದಲ್ಲಿ ಮಾಲೀಕರು ಅಗ್ನಿ ಸುರಕ್ಷತಾ ಕ್ರಮಗಳನ್ನು ಅಳವಡಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಅಧಿಕೃತ ಪ್ರಮಾಣ ಪತ್ರವನ್ನು ಪಡೆದುಕೊಂಡಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. | |
| | | 8. ತುರ್ತು ಸೇವೆಗಳಿಗೆ ಸಂಬಂಧಿಸಿದಂತೆ, ಪೇಯಿಂಗ್ ಗೆಸ್ಟ್ ಕಟ್ಟಡಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯವಾಣಿ ಸಂಖ್ಯೆ : 1533 ಮತ್ತು ಪೋಲೀಸ್ ಇಲಾಖೆಯ ಸಹಾಯವಾಣಿ ಸಂಖ್ಯೆ : 101 ಅನ್ನು ಪ್ರದರ್ಶಿಸುವ ಫಲಕವನ್ನು ಅಳವಡಿಸಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. | |
| | | 9. ಪೇಯಿಂಗ್ ಗೆಸ್ಟ್ ಗಳಲ್ಲಿ ಪ್ರಥಮ ಚಿಕಿತ್ಸಾ ಪೆಟ್ಟಿಗೆ (First Aid Kits) ಗಳನ್ನು ಅಳವಡಿಸಿರತಕ್ಕದ್ದು. | |

| | | |
|---|---|---|
| | | 10. ಪೇಯಿಂಗ್ ಗೆಸ್ಟ್ ನ ಮಾಲೀಕರು ಘನತ್ಯಾಜ್ಯವನ್ನು ಸಮರ್ಪಕವಾಗಿ ವಿಂಗಡಿಸಿ, ವಿಲೇವಾರಿಗೊಳಿಸಲು ಕ್ರಮವಹಿಸತಕ್ಕದ್ದು.<br>ವಲಯ ಆರೋಗ್ಯಾಧಿಕಾರಿಗಳು, ಆರೋಗ್ಯ ವೈದ್ಯಾಧಿಕಾರಿಗಳು ಮತ್ತು ಹಿರಿಯ ಆರೋಗ್ಯ ಪರಿವೀಕ್ಷಕರುಗಳು ತಮ್ಮ ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಮೇಲ್ಕಂಡ ಮಾರ್ಗಸೂಚಿಗಳ ಪಾಲನೆಯಾಗುತ್ತಿರುವ ಕುರಿತು ಪ್ರತೀ ಆರು ತಿಂಗಳಿಗೊಮ್ಮೆ ಖಚಿತಪಡಿಸಿಕೊಳ್ಳಲು ಸೂಚಿಸಲಾಗಿದೆ. ಎಲ್ಲಾ ವಲಯ ಆಯುಕ್ತರುಗಳು ಮೇಲ್ಕಂಡ ಮಾರ್ಗಸೂಚಿಗಳ ಪಾಲನೆಯಾಗುತ್ತಿರುವುದರ ಕುರಿತು ಪರಿಶೀಲಿಸಿ ಖಚಿತಪಡಿಸಕೊಳ್ಳತಕ್ಕದ್ದು ಹಾಗೂ ಮಾರ್ಗಸೂಚಿಗಳನ್ನು ಉಲ್ಲಂಘನೆ ಮಾಡುವ ಉದ್ಯಮದಾರರ ವಿರುದ್ಧ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ-2020 ರ ಕಾಯ್ದೆ ಸೆಕ್ಷನ್ 307 & 308 ರಂತೆ ಅಗತ್ಯ ಕ್ರಮ ಜರುಗಿಸಲು ಸೂಚಿಸಿದೆ. |
| 97. | ಎಲ್ಲಾ ಪಿ.ಜಿ. ಕೇಂದ್ರಗಳಲ್ಲಿ ಭದ್ರತಾ ವ್ಯವಸ್ಥೆ ಕಡ್ಡಾಯಗೊಳಿಸಲು ಹಾಗೂ ದೌರ್ಜನ್ಯ, ಅತ್ಯಾಚಾರ ಮುಂತಾದ ಕೃತ್ಯಗಳು ನಡೆದರೆ ಅದರ ನೇರ ಹೊಣೆಯನ್ನು ಕೃತ್ಯ ಎಸಗಿದವರು ಹಾಗೂ ಪಿ.ಜಿ. ಕೇಂದ್ರಗಳ ಮಾಲೀಕರು ಅಪರಾಧಿಗಳೆಂದು ಪರಿಗಣಿಸಿ ಶಿಕ್ಷೆಗೆ ಗುರಿಪಡಿಸುವ ಕಾನೂನನ್ನು ರೂಪಿಸಬೇಕು. ಸಿ.ಸಿ. ಕ್ಯಾಮೆರಾ ಅಳವಡಿಕೆಯನ್ನು ಕಡ್ಡಾಯಗೊಳಿಸಬೇಕು. | **ನಗರಾಭಿವೃದ್ಧಿ ಇಲಾಖೆ ಮಾಹಿತಿ:**<br>ಪೇಯಿಂಗ್ ಗೆಸ್ಟ್ ಗಳ ಪ್ರವೇಶ, ನಿರ್ಗಮನ ಮತ್ತು ಆವರಣಗಳ ಸುತ್ತಮುತ್ತಲೂ ನಡೆಯುವ ಘಟನೆಗಳನ್ನು ಚಿತ್ರೀಕರಿಸುವ ಸಿ.ಸಿ. ಟಿ.ವಿ. ಗಳನ್ನು ಅಳವಡಿಸಿ, ಸಿ.ಸಿ ಟಿ.ವಿ ವೀಡಿಯೋ ಮತ್ತು ಫೋಟೇಜ್‌ಗಳನ್ನು 30 ದಿನಗಳ ಬ್ಯಾಕಪ್ ಇರುವಂತೆ ಅಳವಡಿಸುವಂತೆ ಮಾನ್ಯ ಮುಖ್ಯ ಆಯುಕ್ತರು, ರವರ ಆದೇಶ ಪತ್ರ ಸಂಖ್ಯೆ : ಮು.ಆ./ಪಿಆರ್/136/2024-25, ದಿನಾಂಕ: 07-08-2024 ರಂತೆ ಸೂಚಿಸಲಾಗಿರುತ್ತದೆ. |
| 98. | ರಾಜ್ಯ ಪ್ರವಾಸ ಮಾಡಿದಾಗ ಸಮಿತಿಯ ಗಮನಕ್ಕೆ ಬಂದಂತೆ, ಮಹಿಳೆ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಕೆಲಸ ಮಾಡುವ ಇಲಾಖೆಯಾದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ತೀವ್ರ ಸಿಬ್ಬಂದಿ ಕೊರತೆಯನ್ನೆದುರಿಸುತ್ತಿದೆ. | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ(ಮ.ಮ.ಅ.ನಿರ್ದೇಶನಾಲಯ):**<br>ಆಡಳಿತ ಶಾಖೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ವಿವಿಧ ವೃಂದಗಳ ಮಂಜೂರು ಭರ್ತಿ ಖಾಲಿ ಹುದ್ದೆಗಳ ಮಾಹಿತಿ ಈ ಕೆಳಕಂಡಂತಿರುತ್ತದೆ.<br>ಮಂಜೂರು: 6307 — ಭರ್ತಿ: 3468 — ಖಾಲಿ: 2839 |

| ಮಂಜೂರು | ಭರ್ತಿ | ಖಾಲಿ |
|---|---|---|
| 6307 | 3468 | 2839 |

| | | |
|---|---|---|
| | ಇದನ್ನು ನಿವಾರಿಸಲು ಅಗತ್ಯವಾದ ಸಿಬ್ಬಂದಿ ನೇಮಕ ಮತ್ತು ಅಂಗ ಸೂಕ್ಷ್ಮತೆಯ ತರಬೇತಿ ನೀಡಲು ಕ್ರಮ ಕೈಗೊಳ್ಳಬೇಕು. | • ಖಾಲಿ ಇರುವ ಮುಂಬಡ್ತಿ ಹುದ್ದೆಗಳನ್ನು ನಿಯಮಾನುಸಾರ ಮುಂಬಡ್ತಿ ಮೂಲಕವೂ ಹಾಗೂ ಅನುಕಂಪದ ಆಧಾರದ ಮೇಲೆ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ.<br>• ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇಲ್ಲಿ ಕೈಗೊಂಡ ಲಿಂಗ ಸೂಕ್ಷ್ಮತೆ ಕುರಿತ ತರಬೇತಿ ಕಾರ್ಯಕ್ರಮದಲ್ಲಿ 136 ಇಲಾಖಾಧಿಕಾರಿಗಳು ತರಬೇತಿ ಪಡೆದಿರುತ್ತಾರೆ. |
| 99. | ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಕ್ರಿಮಿನಲ್ ಪ್ರಕರಣಗಳು ದಾಖಲಾಗುತ್ತಿವೆ. ಆದರೆ ಆಶ್ಚರ್ಯಕರ ಎನ್ನುವ ರೀತಿಯಲ್ಲಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ಪ್ರತಿ ವರ್ಷವೂ ಕನಿಷ್ಠ ನೂರಾರು ಆತ್ಮಹತ್ಯೆಗಳು ಹಾಗೂ ಕೊಲೆಗಳು ನಡೆಯುತ್ತಿರುವುದು ಸಮಿತಿಯ ಗಮನಕ್ಕೆ ಬಂದಿರುತ್ತದೆ. ಬಹುತೇಕ ಪ್ರಕರಣಗಳಲ್ಲಿ ಮಹಿಳೆಯರ ಆತ್ಮಹತ್ಯೆಗಳು ಹಾಗೂ ಕೊಲೆಗಳು ಎಂದು ಸಂಬಂಧಿಸಿದ ಪೊಲೀಸ್ ಇಲಾಖೆಯ ಅಧಿಕಾರಿಗಳು ಸಮಿತಿಯ ಗಮನಕ್ಕೆ ತಂದಿರುತ್ತಾರೆ. ಇಂತಹ ಅಕಾಲಿಕ ಸಾವುಗಳನ್ನು ತಡೆಯಲು ಸರ್ಕಾರ ಜನಜಾಗೃತಿ ಕಾರ್ಯಕ್ರಮಗಳನ್ನು ರೂಪಿಸಬೇಕು. ಹಾಗೆಯೇ ಇಂತಹ ಕೃತ್ಯಗಳನ್ನು ತಡೆಯಲು ವಿಶೇಷ ಪೊಲೀಸ್ ದಳವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರ ನೇಮಕ ಮಾಡಬೇಕು. | **ಪೊಲೀಸ್ ಇಲಾಖೆ:**<br>• ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವ್ಯಾಪ್ತಿಯ ಬೆಳ್ತಂಗಡಿ ತಾಲ್ಲೂಕಿನ ಧಾರ್ಮಿಕ ಕ್ಷೇತ್ರವಾದ ಧರ್ಮಸ್ಥಳಕ್ಕೆ ಭೇಟಿ ನೀಡಿ ನಂತರ ಕೆಲವರು ನೇತ್ರಾವತಿ ನದಿಯಲ್ಲಿ ಮುಳುಗಿ, ತಾವು ಉಳಿದುಕೊಂಡ ಲಾಡ್ಜ್‌ಗಳಲ್ಲಿ ನೇಣಿಗೆ ಶರಣಾಗಿ, ಜನಸಾಂದ್ರತೆ ವಿರಳವಿರುವ ಕಾಡು ಪ್ರದೇಶಗಳಲ್ಲಿ ನೇಣುಬಿಗಿದುಕೊಂಡು, ವಿಷ ಸೇವಿಸಿ ಮೊದಲಾದ ಕಾರಣಗಳಿಂದ ಆತ್ಮಹತ್ಯೆಗೆ ಶರಣಾಗುತ್ತಿರುವುದನ್ನು ಗಮನಿಸಲಾಗಿದ್ದು, ಹೆಣ್ಣುಮಕ್ಕಳ ಕೊಲೆಗಳು ಸಹ ಘಟಿಸಿರುತ್ತವೆ.<br>• ಪ್ರಸ್ತುತ ಧರ್ಮಸ್ಥಳ ಪ್ರದೇಶದಲ್ಲಿ ಧರ್ಮಸ್ಥಳ ಪೊಲೀಸ್ ಠಾಣೆಯು ಕಾರ್ಯಾಚರಿಸುತ್ತಿದ್ದು, ಅಪರಾಧ ಪ್ರಕರಣಗಳನ್ನು ತಡೆಗಟ್ಟುವಲ್ಲಿ ಹಾಗೂ ಇಂತಹ ಅಕಾಲಿಕ ಸಾವುಗಳನ್ನು ತಡೆಯಲು ಜನಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿರುತ್ತದೆ.<br>• ನದಿ ತೀರ ಪ್ರದೇಶಗಳಲ್ಲಿ ಅಗತ್ಯ ಸಿಬ್ಬಂದಿಗಳನ್ನು ನಿಯೋಜಿಸಿ ಅಕಾಲಿಕ ಸಾವುಗಳು ಸಂಭವಿಸದಂತೆ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>• ವಿಶೇಷ ದಿನಗಳಂದು ಹೆಚ್ಚಿನ ನಿಗಾವಹಿಸಿ ಜನ ಸಂಧಣಿ ಸ್ಥಳಗಳಲ್ಲಿ ಧ್ವನಿವರ್ಧಕಗಳ ಮೂಲಕ ತಿಳುವಳಿಕೆ ನೀಡಲಾಗುತ್ತಿದೆ. |

| | | |
|---|---|---|
| 100 | ರಾಷ್ಟ್ರದ ಬೇರೆಬೇರೆ ರಾಜ್ಯಗಳಲ್ಲಿ ಹೆಣ್ಣು ಸಂತತಿಯ ಕೊರತೆಯಿಂದ ರಾಜಸ್ಥಾನ, ಗುಜರಾತ್ ಮುಂತಾದ ರಾಜ್ಯಗಳಿಂದ ಕರ್ನಾಟಕಕ್ಕೆ ಬಂದು ಬಡತನದಲ್ಲಿರುವ ಹೆಣ್ಣುಮಕ್ಕಳ ಪೋಷಕರಿಗೆ ವಧುದಕ್ಷಿಣೆ ನೀಡಿ ಅಪ್ರಾಪ್ತ ಹಾಗೂ ಪ್ರಾಪ್ತ ಹೆಣ್ಣುಮಕ್ಕಳನ್ನು ಮದುವೆಯಾಗಿ ಅವರನ್ನು ಅವರ ಸ್ವಗ್ರಾಮಕ್ಕೆ ಕರೆದುಕೊಂಡು ಹೋಗುವ ಅನೇಕ ಪ್ರಕರಣಗಳು ಸಮಿತಿಯ ಗಮನಕ್ಕೆ ಬಂದಿರುತ್ತದೆ. ಅಂತಹ ಮದುವೆಗಳನ್ನು "ಗುಜ್ಜಾರ್ ಮದುವೆ"ಗಳೆಂದು ಕರೆಯಲಾಗುತ್ತದೆ. ಮದುವೆ ಮಾಡಿಕೊಂಡು ಹೋದ ಮೇಲೆ ಪತ್ನಿಯನ್ನು ತವರಿಗೆ ಕಳುಹಿಸುತ್ತಿಲ್ಲ. ಆ ಹೆಣ್ಣು ಎಲ್ಲಿದ್ದಾಳೆ. ಹೇಗೆ ಜೀವನ ನಡೆಸುತ್ತಿದ್ದಾಳೆ. ಆಕೆಯ ಪರಿಸ್ಥಿತಿ ಏನು ಎಂಬುದರ ಬಗ್ಗೆ ಮಾಹಿತಿಗಳು ಲಭ್ಯವಾಗುತ್ತಿಲ್ಲವೆಂದು ಅನೇಕ ಪೋಷಕರು ಸಮಿತಿಯ ಗಮನಕ್ಕೆ ತಂದಿರುತ್ತಾರೆ. ಈ ರೀತಿ ನಡೆಯುವ ಗುಜ್ಜಾರ್ ಮದುವೆಗಳನ್ನು ನಿಯಂತ್ರಿಸಲು ಹಾಗೂ ಮದುವೆಯಾಗಿ ಹೋದ ಹೆಣ್ಣುಮಗಳ ರಕ್ಷಣೆ ಮಾಡಲು ಸರ್ಕಾರದ ಯಾವುದೇ ಇಲಾಖೆಯು | **ಪೊಲೀಸ್ ಇಲಾಖೆ:**<br><br>ಈ ಕುರಿತು ದೂರುಗಳು ಬಂದಲ್ಲಿ ಅಂತಹವರ ಮೇಲೆ ಸೂಕ್ತ ಕಾನೂನು ಕ್ರಮಕ್ಕೆಗೊಳ್ಳುತ್ತಾ ಬರಲಾಗಿದೆ ಮತ್ತು ಸಂತ್ರಸ್ಥರಿಗೆ ರಕ್ಷಣೆ ನೀಡಲಾಗುವುದು.<br><br>**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**<br>ಗುಜ್ಜಾರ್ ಮದುವೆ / ವಿವಾಹಗಳು ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳನ್ನು ಒಳಗೊಂಡಿದ್ದಲ್ಲಿ ಬಾಲ್ಯ ವಿವಾಹ ನಿಷೇಧ ಕಾಯ್ದೆಯನ್ವಯ ಕ್ರಮವಹಿಸಲಾಗುತ್ತಿದೆ. |

| | | |
|---|---|---|
| | ಯಾವುದೇ ಕ್ರಮಗಳನ್ನು ಜರುಗಿಸಿರುವುದಿಲ್ಲ. ಇದು ಹೆಣ್ಣುಮಗಳ ಮೇಲೆ ನಡೆಯುತ್ತಿರುವ ಅತಿ ಕ್ರೂರ ಶೋಷಣೆಯಾಗಿರುತ್ತದೆ. ಇಂತಹವುಗಳನ್ನು ನಿಯಂತ್ರಿಸಲು ಮತ್ತು ಹೆಣ್ಣುಮಗಳಿಗೆ ರಕ್ಷಣೆ ನೀಡಲು ಸರ್ಕಾರ ಸೂಕ್ತ ಕಾನೂನು ರೂಪಿಸಬೇಕು. | |
| 101 | ಮಹಿಳೆಯರ ಹಕ್ಕುಗಳನ್ನು ಗೌರವಿಸಿ ಮತ್ತು ತಾರತಮ್ಯ ತೋರದೇ ಅವರನ್ನು ಪುರುಷರಷ್ಟೇ ಸಮಾನರಾಗಿ ಕಾಣಬೇಕು. | **ಪೊಲೀಸ್ ಇಲಾಖೆ;**<br>• ಮಹಿಳೆಯರ ಹಕ್ಕು ಹಾಗೂ ಗೌರವ ಕುರಿತು ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br>• ರಾಜ್ಯದಲ್ಲಿ ಪ್ರತಿಯೊಂದು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬೀಟ್ ಮೀಟಿಂಗ್ ಕಾಲಕ್ಕೆ ಸಾರ್ವಜನಿಕರಿಗೆ ಮಹಿಳೆಯರ ಹಕ್ಕುಗಳನ್ನು ಗೌರವಿಸಿ ಮತ್ತು ತಾರತಮ್ಯ ತೋರದೇ ಅವರನ್ನು ಪುರುಷರಷ್ಟೇ ಸಮಾನರಾಗಿ ಕಾಣಬೇಕು ಎಂಬ ಬಗ್ಗೆ ಸೂಕ್ತ ತಿಳುವಳಿಕೆ ನೀಡಲಾಗುತ್ತಿದೆ. |
| 102 | ಲೈಂಗಿಕ ಶೋಷಣೆಗೊಳಗಾದವರ ವೈದ್ಯಕೀಯ ತಪಾಸಣೆ ಮಾಡಲು, ಗೈನಕಾಲಜಿ ಮತ್ತು ಮನಃಶಾಸ್ತ್ರ ವಿಭಾಗದಲ್ಲಿ ಅಂತರರಾಷ್ಟ್ರೀಯ ಮಟ್ಟದ ನುರಿತ ತಜ್ಞರ ಮಾದರಿಯನ್ನನುಸರಿಸಿ ಶಿಷ್ಟಾಚಾರವನ್ನು ಅಳವಡಿಸುವುದು. ನುರಿತ ವೃತ್ತಿಪರ ತಜ್ಞರ ಸಲಹೆಯ ಆಧಾರದ ಮೇಲೆ ವೈದ್ಯಕೀಯ ತಪಾಸಣೆಯನ್ನು ಶಿಸ್ತಾಗಿ ಪಾಲಿಸುವು ಬಹಳ ಮುಖ್ಯ. ಅದನ್ನು ಮಾಡಲು ಸರ್ಕಾರ ಕಾನೂನು ರೂಪಿಸಬೇಕು. | ಜಾರಿಯಲ್ಲಿರುವ ಕಾನೂನು ನಿಯಮಗಳನ್ವಯ ಸೂಕ್ತ ಕ್ರಮವಹಿಸಲಾಗುತ್ತಿದೆ. |

| | | |
|---|---|---|
| 103 | ಅತ್ಯಾಚಾರಕ್ಕೊಳಗಾದ ವ್ಯಕ್ತಿಯೊಂದಿಗೆ ಪೊಲೀಸರ ವರ್ತನೆ ಸೂಕ್ಷ್ಮವಾಗಿರುವಂತೆ ಕಾಯ್ದುಕೊಳ್ಳುವುದು. ಇಂತಹ ಸಂದರ್ಭದಲ್ಲಿ ಅಸಂಬದ್ಧವಾಗಿ ನಡೆದುಕೊಳ್ಳುವ ಪೊಲೀಸ್ ಸಿಬ್ಬಂದಿ ಅಥವಾ ಅಧಿಕಾರಿಗಳ ಮೇಲೆ ಸೇವಾ ನಿಯಮಗಳಡಿ ಮತ್ತು ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳುವುದು. | **ಪೊಲೀಸ್ ಇಲಾಖೆ:**<br>• ಅತ್ಯಾಚಾರದಂತಹ ಪ್ರಕರಣಗಳಲ್ಲಿ ನೊಂದವರ ಅಥವಾ ಸಂತ್ರಸ್ತರ ಜೊತೆ ಸಂವೇದನಾಶೀಲರಾಗಿ ವರ್ತಿಸುವಂತೆ ಪೊಲೀಸ್ ಅಧಿಕಾರಿ/ ಸಿಬ್ಬಂದಿಯವರಿಗೆ ವಿಶೇಷ ತರಬೇತಿ ಹಾಗೂ ಸಂವೇದನಾ ಕಾರ್ಯಾಗಾರಗಳನ್ನು ಆಯೋಜಿಸಲಾಗುತ್ತಿದೆ. |
| 104 | ಅನೇಕ ಸಂದರ್ಭಗಳಲ್ಲಿ ಮಕ್ಕಳು ಬಲವಂತವಾಗಿ ಬಾಲ ಕಾರ್ಮಿಕರಾಗಿ, ಲೈಂಗಿಕ ಕಿರುಕುಳ ಅಥವಾ ಹಲ್ಲೆಗೆ ಅಥವಾ ಬಲವಂತವಾಗಿ ಕಾನೂನುಬಾಹಿರವಾಗಿ ಅಂಗಾಂಗ ದಾನಕ್ಕೆ ದೂಡಲ್ಪಡುತ್ತಾರೆ. ಅಂತಹ ಮಕ್ಕಳ ರಕ್ಷಣೆ ಮಾಡಲು ಆಯಾ ಜಿಲ್ಲೆಯ ಜಿಲ್ಲಾ ಮ್ಯಾಜಿಸ್ಟ್ರೇಟ್‌ಗಳು ಜವಾಬ್ದಾರಿ ತೆಗೆದುಕೊಳ್ಳಬೇಕು. ಪ್ರತಿ ಜಿಲ್ಲೆಯ ಮಕ್ಕಳ ಸಮೀಕ್ಷೆ ಕೈಗೊಳ್ಳುವುದರ ಮುಖಾಂತರ ಇಂತಹ ಅಪರಾಧಗಳನ್ನು ತಡೆಗಟ್ಟುವ ಪ್ರಯತ್ನ ಮಾಡಬೇಕು. | **ಕಾರ್ಮಿಕ ಇಲಾಖೆ:**<br>• ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 ನಿಯಮಗಳು (ಕೇಂದ್ರ/ರಾಜ್ಯ) ಹಾಗೂ ಎಸ್.ಓ.ಪಿ (ಕೇಂದ್ರ/ರಾಜ್ಯ) ಯನ್ನು ಪರಿಣಾಮಕಾರಿ ಅನುಷ್ಠಾನ ಮಾಡಲಾಗುತ್ತಿದೆ.<br>• ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಪಡೆಯನ್ನು ಹಾಗೂ ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್ರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಕಾರ್ಯಪಡೆಯನ್ನು ರಚಿಸಲಾಗಿದೆ.<br>• ಪ್ರತಿ ಜಿಲ್ಲೆಯಲ್ಲಿ ಕಾಲಕಾಲಕ್ಕೆ ನಿರಂತರವಾದ ಯೋಜಿತ ದೂರು ಆದಾರಿತ ಹಾಗೂ ಅನಿರೀಕ್ಷಿತ ದಾಳಿಗಳನ್ನು/ತಪಾಸಣೆಗಳನ್ನು ಇಲಾಖೆಯ ಅಧಿಕಾರಿಗಳು ಮತ್ತು ನಿರೀಕ್ಷಕರು ಮತ್ತು ಕಾಯ್ದೆಯ ಕಲಂ-17ರಡಿ ನೇಮಕಗೊಂಡ ಇತರ ಇಲಾಖೆಗಳ ಅಧಿಕಾರಿಗಳನ್ನೊಳಗೊಂಡ ತಂಡದಿಂದ ಬಾಲಕಾರ್ಮಿಕರನ್ನು ಪತ್ತೆ ಹಚ್ಚಿ, ಅವರನ್ನು ಕೆಲಸದಿಂದ ಬಿಡುಗಡೆಗೊಳಿಸಿ ಲಭ್ಯತೆ ಹಾಗೂ ಅವಶ್ಯಕತೆಗನುಗುಣವಾಗಿ ಮಕ್ಕಳ ಕಲ್ಯಾಣ ಸಮಿತಿ ಹಾಗೂ ಮುಖ್ಯವಾಹಿನಿ ಶಾಲೆಗಳಿಗೆ ದಾಖಲು ಮಾಡಲಾಗುತ್ತಿದೆ.<br>• ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರನ್ವಯ ಪ್ರತಿ ಎರಡು ವರ್ಷಗಳಿಗೊಮ್ಮೆ ಸಮೀಕ್ಷೆಯನ್ನು ನಡೆಸಬೇಕಾಗಿದ್ದು, ಅದರಂತೆ 2020-21 ಮತ್ತು 2021-22ನೇ ಸಾಲಿನಲ್ಲಿ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಗಳ ಮೂಲಕ ಸಮೀಕ್ಷೆಯನ್ನು ನಡೆಸಲಾಗಿದ್ದು, ಸಮೀಕ್ಷೆಯಲ್ಲಿ 5023 ಬಾಲ ಹಾಗೂ ಕಿಶೋರ ಕಾರ್ಮಿಕರು ಕಂಡುಬಂದಿರುತ್ತಾರೆ. |

- 2022-23ನೇ ಸಾಲಿನಿಂದ 2024-25ನೇ ಸಾಲಿನ(ನವೆಂಬರ್-2024)ವರೆಗೆ 38923 ತಪಾಸಣೆಗಳನ್ನು ನಡೆಸಲಾಗಿರುತ್ತದೆ. 769 ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ಪತ್ತೆಹಚ್ಚಿ ಪುನರ್ವಸತಿಗೊಳಿಸಲಾಗಿರುತ್ತದೆ. 244 ಪ್ರಕರಣಗಳನ್ನು ವಿವಿಧ ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಲಾಗಿದ್ದು, 17 ಪ್ರಕರಣಗಳಲ್ಲಿ ಶಿಕ್ಷೆಯಾಗಿರುತ್ತದೆ. ರೂ.17,97,000/-ಗಳ ದಂಡ ವಸೂಲಾತಿಯಾಗಿರುತ್ತದೆ.
- ಸಮೀಕ್ಷೆ / ತಪಾಸಣೆಗಳಲ್ಲಿ ರಕ್ಷಣೆ ಮಾಡಲಾದ ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ನಿಯಮಾನುಸಾರ ಪರಿಶೀಲಿಸಿ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕರೆಂದು ಕಂಡು ಬಂದ ಪ್ರಕರಣಗಳಲ್ಲಿ ಕೆಲಸದಿಂದ ಬಿಡುಗಡೆಗೊಳಿಸಿ ಮಕ್ಕಳ ಕಲ್ಯಾಣ ಸಮಿತಿ (Child Welfare Committee) ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ಶಾಲೆಗಳಲ್ಲಿ ಮತ್ತು ಮುಖ್ಯವಾಹಿನಿ ಶಾಲೆಗಳಲ್ಲಿ ಮಕ್ಕಳ ಅರ್ಹತೆಗನುಗುಣವಾಗಿ ದಾಖಲು ಮಾಡಲಾಗಿರುತ್ತದೆ ಮತ್ತು ಪೋಷಕರ ವಶಕ್ಕೆ/ಸುಪರ್ದಿಗೆ ನೀಡಲಾಗಿರುತ್ತದೆ.

**ಪೊಲೀಸ್ ಇಲಾಖೆ:**

- ಮಕ್ಕಳ ರಕ್ಷಣೆ ಕುರಿತು ಮಹಿಳಾ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಒಳಗೊಂಡ ಜಿಲ್ಲಾ ಮಟ್ಟದಲ್ಲಿ ಒಂದು ಹಾಗೂ ಪ್ರತಿ ಪೊಲೀಸ್ ಠಾಣೆಯ ಮಟ್ಟದಲ್ಲಿ ಪಿ.ಎಸ್.ಐ ನೇತೃತ್ವದ ಎಸ್.ಜೆ.ಪಿ.ಯು (Special Juvenile Police Unit) ಘಟಕಗಳು ಕರ್ತವ್ಯ ನಿರ್ವಹಿಸುತ್ತಿವೆ.
- ರಾಜ್ಯದಲ್ಲಿ ಮಕ್ಕಳು ಬಾಲ ಕಾರ್ಮಿಕ, ಲೈಂಗಿಕ ಅಪರಾಧಗಳಿಗೆ, ಭಿಕ್ಷಾಟನೆಗೆ ಬಳಕೆಯಾಗದಂತೆ ಕ್ರಮ ಕೈಕೊಳ್ಳಲಾಗುತ್ತಿದೆ.

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ :**

ಭಾರತ ಸರ್ಕಾರವು 1994ರಲ್ಲಿ "Transplantation of Human Organs and Tissues Act" (THOTA 1994) ಅನ್ನು ಜಾರಿಗೆ ತಂದಿದ್ದು, ಅಂಗಾಂಗ ಹಾಗೂ ಅಂಗಾಂಶಗಳ ದಾನ ಮತ್ತು ಕಸಿಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ನಿಯಂತ್ರಿಸಲು ಈ ಕಾನೂನು ರೂಪುಗೊಂಡಿದೆ.2014ರ ತಿದ್ದುಪಡಿ ನಿಯಮಗಳ ಅಡಿಯಲ್ಲಿ ನವೀಕೃತ ಮಾರ್ಗಸೂಚಿಗಳು ಜಾರಿಯಾಗಿದ್ದು, ಅಂಗಾಂಗ ದಾನದಲ್ಲಿ ನೈತಿಕತೆ, ಸುರಕ್ಷತೆ ಮತ್ತು ಪಾರದರ್ಶಕತೆ ಕಾಪಾಡುವ ಉದ್ದೇಶ ಹೊಂದಿವೆ.

THOTA 2014 - ನಿಯಮ 5(g) ಪ್ರಕಾರ: 1 ರಿಂದ 18 ವರ್ಷದೊಳಗಿನ ಅಪ್ರಾಪ್ತ ವಯಸ್ಕರು ಜೀವಂತ ಅಂಗಾಂಗ ದಾನ (Live Donation) ಮಾಡಲು ಕಾನೂನುಬದ್ಧ ಅನುಮತಿ ಹೊಂದಿರುವುದಿಲ್ಲ.

ಈ ನಿಯಮವು ಮಕ್ಕಳ ಹಕ್ಕುಗಳನ್ನು ರಕ್ಷಿಸುವಲ್ಲಿ, ಶೋಷಣೆಯನ್ನು ತಡೆಗಟ್ಟುವಲ್ಲಿ ಹಾಗೂ ಯಾವುದೇ ಬಲಾತ್ಕಾರ ಅಥವಾ ದಬ್ಬಾಳಿಕೆಗೆ ಅವಕಾಶ ನೀಡದಂತೆ ರೂಪುಗೊಂಡಿದೆ.

| | | |
|---|---|---|
| | | ಮೆದುಳು ನಿಷ್ಕ್ರಿಯಗೊಂಡ ಮಕ್ಕಳ ಅಂಗಾಂಗ ದಾನದ ಸಂದರ್ಭದಲ್ಲಿ, ತಂದೆತಾಯಿ/ಪೋಷಕರು /ಅಥವಾ ಕಾನೂನು ಬದ್ಧವಾಗಿರುವ ಅಧಿಕಾರವಿರುವ ಹತ್ತಿರದ ಸಂಬಂಧಿಯ ಲಿಖಿತ ಒಪ್ಪಿಗೆ ಕಡ್ಡಾಯವಾಗಿದೆ. (under rules THOA ACT 1994, 2014 5(1)(b),5(4)(b)and 5(4)(d)) |
| 105 | ಮೂಲಭೂತ ಹಕ್ಕುಗಳನ್ನು ಕಾಯುವಲ್ಲಿ ಮತ್ತು ಸ್ವಾಯತ್ತ ಪರಿಹಾರ ಒದಗಿಸುವ ಪ್ರಾಥಮಿಕ ಜವಾಬ್ದಾರಿ ನ್ಯಾಯಾಂಗದ್ದಾಗಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ನ್ಯಾಯಾಂಗ ತನ್ನ ಸ್ವಯಂಪ್ರೇರಿತ ಅಧಿಕಾರವನ್ನು ಚಲಾಯಿಸಲು ಕ್ರಮ ಜರುಗಿಸುವುದು. | **ಕಾನೂನು ಇಲಾಖೆ:**<br><br>ನ್ಯಾಯಾಂಗಕ್ಕೆ ಪ್ರದತ್ತವಾದ ಅಧಿಕಾರದನ್ವಯ ನ್ಯಾಯಾಲಯಗಳು ಕ್ರಮ ಜರುಗಿಸುತ್ತಿವೆ. |
| 106 | ಸ್ಥಳೀಯ ಜನರನ್ನೊಳಗೊಂಡಂತೆ, ಸಮುದಾಯ ಪಾಲ್ಗೊಳ್ಳುಯ ನೀತಿಗಳನ್ನು ಅಭಿವೃದ್ಧಿಗೊಳಿಸುವುದರ ಮೂಲಕ ಪೊಲೀಸ್ ವ್ಯವಸ್ಥೆಯನ್ನು ಮತ್ತಷ್ಟು ಸದೃಢಗೊಳಿಸಬೇಕು. ಇದರಿಂದ ಪೊಲೀಸ್ ವ್ಯವಸ್ಥೆ ಸುಧಾರಣೆಯ ಜೊತೆಜೊತೆಗೆ ಸಾಮಾನ್ಯ ಜನರ ಕರ್ತವ್ಯ ಪ್ರಜ್ಞೆಯೂ ಉತ್ತೇಜಿಸಲ್ಪಡುತ್ತದೆ. | **ಪೊಲೀಸ್ ಇಲಾಖೆ:**<br><br>• ರಾಜ್ಯದಲ್ಲಿ "ಜನ ಸ್ನೇಹಿ ಪೊಲೀಸ್" ವ್ಯವಸ್ಥೆಯು ಜಾರಿಯಲ್ಲಿದ್ದು, ಎಲ್ಲ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಸ್ಥಳೀಯ ಜನರನ್ನೊಳಗೊಂಡಂತೆ, ಸಮುದಾಯ ಪಾಲ್ಗೊಳ್ಳುವಿಕೆಯ ನೀತಿಗಳನ್ನು ಅಭಿವೃದ್ಧಿಗೊಳಿಸುವುದರ ಮೂಲಕ ಪೊಲೀಸ್ ವ್ಯವಸ್ಥೆಯನ್ನು ಸುಧಾರಣೆ ಜೊತೆಗೆ ಸದೃಢಗೊಳಿಸಲು ಕ್ರಮ ಕೈಗೊಳ್ಳುತ್ತಾ ಬರಲಾಗುತ್ತಿದೆ.<br>• ರಾಜ್ಯದ ಎಲ್ಲ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಸ್ಥಳೀಯ ಜನರು ಹಾಗೂ ಸ್ಥಳೀಯ ಸಂಸ್ಥೆಗಳ ಸಹಯೋಗದಲ್ಲಿ "ಮಕ್ಕಳ ಗ್ರಾಮ ಸಭೆ" ಕಾರ್ಯಕ್ರಮ ಆಯೋಜಿಸಿ ಮಕ್ಕಳ ಹಕ್ಕುಗಳ ಹಾಗೂ ರಕ್ಷಣೆ ಕುರಿತು ಅರಿವು ಮೂಡಿಸಲಾಗುತ್ತಿದೆ. |
| 107 | ಅಮೇರಿಕಾದ ಪ್ರಖ್ಯಾತ ನ್ಯಾಯಾಧೀಶರಾದ ಲೂಯಿಸ್ ಬ್ರಾಂಡೀಸ್ ರವರು ಹೇಳುವಂತೆ "ಸೂರ್ಯನ ಬೆಳಕನ್ನು ಹೋಲಿಸುವುದಾದರೆ, ವಿದ್ಯುತ್ ದೀಪವನ್ನು ನಿಷ್ಠಾವಂತ ಆರಕ್ಷಕನಿಗೆ ಹೋಲಿಸಬಹುದು." | **ಇಂಧನ ಇಲಾಖೆ:**<br><br>ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚು ಹೆಚ್ಚು ಬೀದಿ ದೀಪಗಳನ್ನು ಅಳವಡಿಸಬೇಕೆಂದು ತಿಳಿಸಲಾಗಿದೆ. ಈ ಕುರಿತು ಸ್ಥಳೀಯ ಸಂಸ್ಥೆಗಳು ಅಗತ್ಯ ಕ್ರಮ ವಹಿಸಬೇಕಾಗಿರುತ್ತದೆ. |

| | | |
|---|---|---|
| | ಕತ್ತಲ ಪ್ರದೇಶಗಳು ಅಪರಾಧಗಳಿಗೆ ಪ್ರಚೋದನಕಾರಿ ಎಂಬುದು ಸಾಮಾನ್ಯ ವಿಷಯ. ಇದನ್ನು ತಡೆಗಟ್ಟಲು ಸಾರ್ವಜನಿಕ ಸ್ಥಳಗಲ್ಲಿ ಹೆಚ್ಚುಹೆಚ್ಚು ಬೀದಿ ದೀಪಗಳನ್ನು ಅಳವಡಿಸಬೇಕು. ಸ್ಥಳೀಯ ಸಂಸ್ಥೆಗಳು ಈ ವ್ಯವಸ್ಥೆಯ ಬಗ್ಗೆ ಅಧ್ಯಯನ ನಡೆಸಿ, ಅಗತ್ಯವಿರುವೆಡೆ ಅವಶ್ಯ ಸೌಲಭ್ಯಗಳನ್ನೊದಗಿಸಲು ಕ್ರಮ ಕೈಗೊಳ್ಳುವಂತೆ ಕಾನೂನು ರೂಪಿಸಬೇಕು. | |
| 108 | ಶೀಘ್ರ ನ್ಯಾಯ ಹೊರಡಿಸುವಿಕೆ ಎಂದರೆ ಕೇವಲ ಗೌರವಯುತ ಬದುಕನ್ನು ಕಾಪಾಡುವುದು ಎಂಬರ್ಥವಲ್ಲ. ಬದಲಾಗಿ ಅಪರಾಧಗಳ ಮತ್ತು ಕಾನೂನು ಉಲ್ಲಂಘನೆಯನ್ನು ತಡೆಗಟ್ಟಲು ಮತ್ತು ಪರಿಣಾಮಕಾರಿಯಾಗಿ ಕಾನೂನು ಜಾರಿಗೊಳಿಸುವುದು ಅತ್ಯಗತ್ಯವಾಗಿರುತ್ತದೆ. ಅದನ್ನು ಜಾರಿಗೊಳಿಸಲು ಸರ್ಕಾರ ಕ್ರಮವಹಿಸುವುದು. | **ಪೊಲೀಸ್ ಇಲಾಖೆ:** ರಾಜ್ಯದಲ್ಲಿ ಅಪರಾಧಗಳ ಮತ್ತು ಕಾನೂನು ಉಲ್ಲಂಘನೆಯನ್ನು ತಡೆಗಟ್ಟಲು ಮತ್ತು ಪರಿಣಾಮಕಾರಿಯಾಗಿ ಕಾನೂನು ಜಾರಿಗೊಳಿಸುವುದು ಅತ್ಯಗತ್ಯವಾಗಿರುತ್ತದೆ ಈ ನಿಟ್ಟಿನಲ್ಲಿ ಚಾಲ್ತಿಯಲ್ಲಿರುವ ಕಾಯ್ದೆ/ ನಿಯಮಗಳನ್ವಯ ಕ್ರಮ ಜರುಗಿಸಲಾಗಿರುತ್ತದೆ.<br><br>**ಕಾನೂನು ಇಲಾಖೆ:** ಈಗಾಗಲೇ ಪೋಕ್ಸೋ ಕಾಯಿದೆ, ಕೌಟುಂಬಿಕ ಹಿಂಸಚಾರ ತಡೆ ಕಾಯಿದೆ ಜಾರಿಗೊಳಿಸಲಾಗಿರುತ್ತದೆ. |
| 109 | ಅಪರಾಧಕ್ಕೆ ಸಂಬಂಧಿಸಿದಂತೆ ಪೊಲೀಸ್ ಅಧಿಕಾರಿಗಳ ವ್ಯಾಪ್ತಿಯಲ್ಲಿನ ಕೆಲವು ನಿರ್ಬಂಧಗಳ ಕಾರಣದಿಂದಲೂ ಹಲ್ಲೆಗೊಳಗಾದ ವ್ಯಕ್ತಿಯ ವೈದ್ಯಕೀಯ ತಪಾಸಣೆ ತಡವಾಗುತ್ತದೆ. ಹಲ್ಲೆಗೊಳಗಾದ | **ಪೊಲೀಸ್ ಇಲಾಖೆ:**<br><br>• ಹಲ್ಲೆಗೊಳಗಾದ ವ್ಯಕ್ತಿಯನ್ನು ಉಳಿಸಲು ಮತ್ತು ರಕ್ಷಣೆಗೆ ಕೂಡಲೇ 112 ಇ.ಆರ್.ಎಸ್.ಎಸ್ ವಾಹನದ ಮೂಲಕ ಕೂಡಲೇ ಸಮೀಪದ ಆಸ್ಪತ್ರೆಗೆ ದಾಖಲಿಸಿ ಸೂಕ್ತ ಚಿಕಿತ್ಸೆಯನ್ನು ಒದಗಿಸಲು ವೈದ್ಯರಿಗೆ ತಿಳಿಸುತ್ತಾ ಬರಲಾಗುತ್ತಿದೆ.<br>• ಇಂತಹ ಪ್ರಕರಣಗಳ್ಲಿ ನೊಂದವರಿಗೆ ಸಹಕರಿಸಲು ಮತ್ತು ಅವರ ಸಮಸ್ಯೆಗೆ ಸ್ಪಂದಿಸಲು ಸಾರ್ವಜನಿಕ ತಿಳುವಳಿಕೆ ನೀಡಲಾಗುತ್ತಿದೆ. |

| | | |
|---|---|---|
| | ವ್ಯಕ್ತಿ ಕೇವಲ ಸರ್ಕಾರಿ ಆಸ್ಪತ್ರೆಯಲ್ಲಿ ಮಾತ್ರ ವೈದ್ಯಕೀಯ ಚಿಕಿತ್ಸೆಗೆ ಒಳಗಾಗಬೇಕು ಎಂಬ ನಿಯಮಗಳಿಂದಲೂ ಕೂಡ ವ್ಯಕ್ತಿಯ ಚಿಕಿತ್ಸೆಗೆ ತೊಂದರೆಯನ್ನುಂಟು ಮಾಡುತ್ತವೆ. ಬಹುತೇಕ ಸಂದರ್ಭಗಳಲ್ಲಿ ವೈದ್ಯರು (ಖಾಸಗಿ ಆಸ್ಪತ್ರೆಯ ವೈದ್ಯರನ್ನೊಳಗೊಂಡು) ಎಷ್ಟೇ ಪ್ರಾಮಾಣಿಕವಾಗಿ ಚಿಕಿತ್ಸೆ ನೀಡಿದರೂ, ಅದು ಸಮಯಕ್ಕೆ ಸರಿಯಾಗಿ ದೊರೆಯದ ಕಾರಣ ಹಲ್ಲೆಗೊಳಗಾದ ವ್ಯಕ್ತಿಯನ್ನು ಉಳಿಸಲು ಸಾಧ್ಯವಾಗದ ಪರಿಸ್ಥಿತಿ ತಲೆದೋರುತ್ತದೆ. ಹಲ್ಲೆಗೊಳಗಾದ ವ್ಯಕ್ತಿಯ ರಕ್ಷಣೆಗೆ ಸಾಮಾನ್ಯ ಜನರು ಮುಂದೆ ಬರುವುದಿಲ್ಲ. ಇದಕ್ಕೆ ಸಮಾಜದ ಮನಸ್ಥಿತಿ ಮತ್ತು ಇಂತಹ ಸಂದರ್ಭಗಳಲ್ಲಿ ಪೊಲೀಸರ ಅಧಿಕಾರ ವ್ಯಾಪ್ತಿ ಮತ್ತು ಅಸಭ್ಯ ವರ್ತನೆಯೂ ಕಾರಣ ಎನ್ನಬಹುದು. ಇಂತಹ ವಾತಾವರಣವನ್ನು ತಪ್ಪಿಸಿ ನಾಗರಿಕರು ಸಹಾಯ ಮಾಡಲು ಮುಂದಾಗಲು ಉತ್ತೇಜಿಸಲು ಸರ್ಕಾರ ಕ್ರಮವಹಿಸಬೇಕು. | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ :**<br><br>ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ತಿದ್ದುಪಡಿ ಕಾಯ್ದೆ 2017 ಕಲಂ 11(1) ರಲ್ಲಿ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅವಶ್ಯ ಕರ್ತವ್ಯಗಳ ಬಗ್ಗೆ ವಿವರಿಸಲಾಗಿದೆ. ಅದರಂತೆ, ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು ತಮ್ಮ ಸಂಸ್ಥೆಯ ಮುಂದೆ ತಾವಾಗಿಯೇ ಹಾಜರಾದ ಅಥವಾ ಯಾರಾದರೂ ಕರೆತಂದ ರಸ್ತೆ ಅಪಘಾತದ, ಆಕಸ್ಮಿಕ ಅಥವಾ ಉದ್ದೇಶ ಪೂರ್ವಕವಾಗಿ ಮಾಡಿದ ಸುಟ್ಟ ಗಾಯಗಳಾದ ಅಥವಾ ವಿಷ ಸೇವನೆಯ ಅಥವಾ ಕ್ರಿಮಿನಲ್ ಹಲ್ಲೆ ಮುಂತಾದವುಗಳಿಗೆ ಒಳಗಾದ ನೊಂದ ವ್ಯಕ್ತಿಗಳಂಥ ಎಲ್ಲಾ ವೈದ್ಯಕೀಯ-ಕಾನೂನು ಅಥವಾ ಸಂಭವನೀಯ ವೈದ್ಯಕೀಯ-ಕಾನೂನು ಪ್ರಕರಣಗಳಲ್ಲಿ ತುರ್ತುಪರಿಸ್ಥಿತಿಗಳ ಸಂದರ್ಭದಲ್ಲಿ ಮುಂಗಡವನ್ನು ಪಾವತಿಸಲು ಒತ್ತಾಯಪಡಿಸದೆ ಅವಶ್ಯ ಪ್ರಥಮ ಚಿಕಿತ್ಸೆ ನೀಡತಕ್ಕದ್ದು ಮತ್ತು ಇತರ ಪ್ರಾಣ ಉಳಿಸುವ, ದೇಹಸ್ಥಿತಿ ಸ್ಥಿರಗೊಳಿಸುವ ತುರ್ತು ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು ಎಂದು ಉಲ್ಲೇಖಿಸಲಾಗಿದೆ. |
| 110 | ಶಾಲೆಗಳಲ್ಲಿ ಹೆಣ್ಣು ಮಕ್ಕಳ ದೂರು ಕೇಂದ್ರ ಮತ್ತು ಪಠ್ಯ ಕ್ರಮದ ಕಡ್ಡಾಯ ಭಾಗವಾಗಿ 6ನೇ | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ :**<br><br>ಈಗಾಗಲೇ ಕ್ರಮ ವಹಿಸಲಾಗಿದೆ: |

| | | |
|---|---|---|
| | ತರಗತಿಯಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ದೇಹಶಾಸ್ತ್ರ ಶಿಕ್ಷಣವನ್ನು ಜಾರಿಗೊಳಿಸಬೇಕು (ಇದರಿಂದ ವೈಜ್ಞಾನಿಕವಾಗಿ ಲೈಂಗಿಕತೆಗೆ ಒಪ್ಪಿಗೆ ನೀಡಲು, ಆರೋಗ್ಯಕರ ಗರ್ಭಧಾರಣೆ. ಗರ್ಭಧರಿಸುವ ಹಕ್ಕುಗಳ ಬಗ್ಗೆ ತಿಳುವಳಿಕೆ ಮೂಡುವಂತಾಗಲು ಸರ್ಕಾರ ಕ್ರಮವಹಿಸುವುದು). | ರಾಷ್ಟ್ರೀಯ ಆರೋಗ್ಯ ಅಭಿಯಾನದ ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮದಲ್ಲಿನ ಉಪ ಚಟುವಟಿಕೆಯಾದ ಶಾಲಾ ಆರೋಗ್ಯ ಮತ್ತು ಕ್ಷೇಮ ಕಾರ್ಯಕ್ರಮವನ್ನು ರಾಜ್ಯದ 06 ಜಿಲ್ಲೆಗಳಲ್ಲಿ (ಯಾದಗಿರಿ, ರಾಯಚೂರು, ಕೊಪ್ಪಳ, ಹಾವೇರಿ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು) ಅನುಷ್ಠಾನಗೊಳಿಸಲಾಗಿರುತ್ತದೆ. ಸದರಿ ಕಾರ್ಯಕ್ರಮದಡಿಯಲ್ಲಿ ಭಾರತ ಸರ್ಕಾರದ ಮಾರ್ಗಸೂಚಿಯಂತೆ ಮಕ್ಕಳ ಕೇಂದ್ರೀಕೃತ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಮತ್ತು ಸಾಮಾಜಿಕ ವ್ಯವಹಾರವನ್ನು ಒಳಗೊಂಡ ಸಮಗ್ರ ಬೆಳವಣಿಗೆ ಹೊಂದಿದ 11 ತರಹದ ವಿಷಯಗಳ ಮೇಲೆ ಮಕ್ಕಳಿಗೆ ವಿಶೇಷ ಬೋಧನೆ ನೀಡಲಾಗುತ್ತದೆ.<br><br>11 ತರಹದ ವಿಷಯಗಳು:<br>Growing up healthy: Promoting healthy growth and development.<br>Emotional well-being and mental health: Promoting mental health and emotional well-being.<br>Interpersonal relationships: Promoting healthy relationships with others.<br>Values and citizenship: Promoting values and citizenship.<br>Gender equality: Promoting gender equality.<br>Nutrition, health, and sanitation: Promoting healthy eating and sanitation.<br>Prevention and management of substance misuse: Promoting healthy habits and preventing substance misuse.<br>Promotion of healthy lifestyle: Promoting healthy habits and lifestyle.<br>Reproductive health and HIV prevention: Promoting reproductive health and preventing HIV.<br>Safety and security against violence and injuries: Promoting safety and security against violence and injuries.<br>Promotion of safe use of internet and social media behavior: Promoting safe use of the internet and social media (DD-RBSK&RKSK)<br><br>ಪಿ.ಸಿ.ಪಿ.ಎನ್.ಡಿ.ಟಿ ಕಾಯ್ದೆ ಬಗ್ಗೆ ಇಲಾಖೆಯ ಇತರ ಕಾರ್ಯಕ್ರಮಗಳಲ್ಲಿ ಸದಾ ಕೈಜೋಡಿಸುತ್ತಿದ್ದು ಬಾಲಕಿಯರಿಗೆ/ ಮಹಿಳೆಯರಿಗೆ ಹಾಗೂ ಹಿರಿಯ ಮಹಿಳಾ ನಾಗರೀಕರಿಗೆ ಐ.ಇ.ಸಿ ಯ |

| | | |
|---|---|---|
| | | ಸಹಯೋಗದೊಂದಿಗೆ ರಾಜ್ಯಾದಂತ ಜನ ನಿಬೀಡ ಪ್ರದೇಶದಲ್ಲಿ ಮತ್ತು ಸಾರ್ವಜನಿಕ ವಾಹನಗಳಲ್ಲಿ ಜಾಹೀರಾತಿನಿನೊಂದಿಗೆ ಪ್ರಚಾರ ಪಡಿಸುತ್ತಿಇದೆ. (DD-PC&PNDT)<br><br>**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ**<br>• ಪ್ರೌಢಶಾಲೆಗಳಲ್ಲಿ ಆಪ್ತ ಸಮಾಲೋಚನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಬಗ್ಗೆ ಸಮಿತಿಗಳನ್ನು ಶಾಲೆಗಳಲ್ಲಿ ರಚಿಸಲಾಗಿದೆ. ದೂರುಗಳನ್ನು ನೀಡಲು ಪ್ರಶ್ನಾ ಪೆಟ್ಟಿಗೆ, ಸಲಹಾ ಪೆಟ್ಟಿಗೆ ಗಳನ್ನು ಸ್ಥಾಪಿಸಲಾಗಿದೆ.<br>• 6 ನೇ ತರಗತಿಯಿಂದ 10 ನೇ ತರಗತಿಯವರೆಗಿನ ಎಲ್ಲಾ ಸಾಮಾನ್ಯ ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳಲ್ಲಿ ಅನುವಂಶೀಯತೆ, ಸಂತಾನೋತ್ಪತ್ತಿ, ಹದಿಹರೆಯಕ್ಕೆ ಪ್ರವೇಶ ಮತ್ತು ದೇಹಶಾಸ್ತ್ರದ ಬಗ್ಗೆ ವಿಷಯ ಅಳವಡಿಸಲಾಗಿದೆ. |
| 111 | ಮಹಿಳೆಯರ ಮತ್ತು ಮಕ್ಕಳ ಗೌರವ ಕಾಪಾಡುವುದರಲ್ಲಿ ಸೋಲುವ ಸಮಾಜ, ತನ್ನ ನೈತಿಕ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ಇಂತಹ ದುರ್ಘಟನೆಗಳನ್ನು ತಡೆಗಟ್ಟುವುದು ಪೊಲೀಸ್ ಇಲಾಖೆ ಅಥವಾ ಸರ್ಕಾರದ ಜವಾಬ್ದಾರಿ ಮಾತ್ರವಲ್ಲ. ನಮ್ಮ ಸಮಾಜದ ಕರ್ತವ್ಯವೂ ಹೌದು. ಮಹಿಳೆ ಮತ್ತು ಮಕ್ಕಳ ಸಂರಕ್ಷಣೆಗೆ ಸೂಕ್ತ ವಾತಾವರಣ ಸೃಷ್ಟಿಸಬೇಕಾಗಿರುವುದು ನಾಗರಿಕ ಸಮಾಜದ ಹೊಣೆಗಾರಿಕೆಯೂ ಆಗಿರುತ್ತದೆ. ಈ ನಿಟ್ಟಿನಲ್ಲಿ ತೊಂದರೆಗೊಳಗಾದಾಗ ದೂರು ನೀಡುವುದು ಮಹಿಳೆಯರ ಹಕ್ಕು ಎನ್ನುವುದರ ಬಗ್ಗೆ ತಿಳುವಳಿಕೆ ಮೂಡುವಂತಾಗಲು ಸರ್ಕಾರ ಕ್ರಮ ವಹಿಸುವುದು. | **ಪೊಲೀಸ್ ಇಲಾಖೆ:**<br>• ಮಹಿಳೆ ಮತ್ತು ಮಕ್ಕಳನ್ನು ಗೌರವಿಸುವುದು ಹಾಗೂ ಅವರ ಹಕ್ಕುಗಳನ್ನು ರಕ್ಷಿಸುವುದು ಸಮಾಜದ ಎಲ್ಲರ ಕರ್ತವ್ಯ ಎಂಬ ಬಗ್ಗೆ, ಸಾರ್ವಜನಿಕ ಸಭೆ ಹಾಗೂ ಬೀಟ್ ಸಭೆಗಳಲ್ಲಿ ತಿಳುವಳಿಕೆ ನೀಡಲಾಗುತ್ತಿದೆ.<br>• ದೂರು ನೀಡುವುದು ಮಹಿಳೆಯರ ಹಕ್ಕು ಎಂಬ ಬಗ್ಗೆ, ಇಲಾಖೆ ವತಿಯಿಂದ ನಡೆಸುವ ಬೀಟ್ ಮೀಟಿಂಗ್/ ಜನ ಸಂಪರ್ಕ ಸಭೆ/ ಅಪರಾಧ ತಡೆ ಮಾಸ ಕಾರ್ಯಕ್ರಮಗಳಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.<br><br>**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**<br>ಮಕ್ಕಳಿಗೆ ಸಂಬಂಧಿಸಿದಂತೆ, ತೊಂದರೆಗಳಾದಾಗ ದೂರು ನೀಡಲು ಮಕ್ಕಳ ಸಹಾಯವಾಣಿ 1098 ಕ್ಕೆ ಉಚಿತವಾಗಿ ಕರೆ ಮಾಡುವ ಮೂಲಕ ದೂರು / ಮಾಹಿತಿ ನೀಡಬಹುದಾಗಿದೆ. ಮಕ್ಕಳ ಸಹಾಯವಾಣಿ-1098 ಕುರಿತು ಸಾರ್ವಜನಿಕ ಸ್ಥಳಗಳಲ್ಲಿ ಶಾಲಾ ಕಾಲೇಜುಗಳಲ್ಲಿ ಎಲ್ಲರಿಗೂ ಕಾಣುವಂತೆ ಪ್ರಚಾರಪಡಿಸಲಾಗಿದೆ. ಅಲ್ಲದೆ ಈ ಸಹಾಯವಾಣಿಯ ಬಗ್ಗೆ ವಿವಿಧ ಕಾರ್ಯಕ್ರಮಗಳ ಮೂಲಕ ವ್ಯಾಪಕ ಪ್ರಚಾರ ಮಾಡಲಾಗುತ್ತಿದೆ. ಮುಂದುವರಿದು, ಮಕ್ಕಳಿಗೆ ತೊಂದರೆಯಾದಾಗ ಅಂಗನವಾಡಿಗಳ ಮೂಲಕ ಅಥವಾ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಗೆ / ಜಿಲ್ಲಾ |

| | | |
|---|---|---|
| 112 | ಪ್ರತಿ ಪಂಚಾಯಿತಿ ಮತ್ತು ಸ್ಥಳೀಯ ಪ್ರದೇಶಗಳಲ್ಲಿ ಮಹಿಳಾ ದೂರು ಕೇಂದ್ರಗಳನ್ನು ತೆರೆಯಲು ಸರ್ಕಾರ ಕಾನೂನು ರೂಪಿಸಬೇಕು. | ಮಕ್ಕಳ ರಕ್ಷಣಾ ಘಟಕಕ್ಕೆ ನೇರವಾಗಿ ಸಂಪರ್ಕಿಸಬಹುದಾಗಿರುತ್ತದೆ ಹಾಗೂ ಗ್ರಾಮಪಂಚಾಯತ್ ಹಾಗೂ ಸ್ಥಳೀಯ ಆಡಳಿತವನ್ನು ಸಂಪರ್ಕಿಸಿ ದೂರು / ಮಾಹಿತಿಯನ್ನು ನೀಡಬಹುದಾಗಿರುತ್ತದೆ. |
| 113 | ಸಿನಿಮಾ ಪ್ರದರ್ಶನಕ್ಕೂ ಮುನ್ನ, "ಮಹಿಳೆ ಮತ್ತು ಮಕ್ಕಳನ್ನು ಗೌರವಿಸಿ: ದೌರ್ಜನ್ಯದಿಂದ ಮುಕ್ತಗೊಳಿಸಿ" ಎನ್ನುವ ಸಂದೇಶ ನೀಡಲು ಸರ್ಕಾರ ಕಾನೂನು ರೂಪಿಸಬೇಕು | **ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ:**<br>ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಕಾನೂನು ರೂಪಿಸುವ ಅಧಿಕಾರ ವ್ಯಾಪ್ತಿ ಇರುವುದಿಲ್ಲ. ಈ ವಿಷಯಕ್ಕೆ ಸಂಬಂಧಿಸಿದ ಕಾನೂನನ್ನು ಗೃಹ ಇಲಾಖೆ ರೂಪಿಸಬಹುದು.<br><br>**ಒಳಾಡಳಿತ ಇಲಾಖೆ**:<br>ಸಮಿತಿಯ ಶಿಫಾರಸ್ಸಿನಲ್ಲಿ ತಿಳಿಸಿದಂತೆ ಸಿನಿಮಾ ಪ್ರದರ್ಶನಕ್ಕೂ ಮುನ್ನ, "ಮಹಿಳೆ ಮತ್ತು ಮಕ್ಕಳನ್ನು ಗೌರವಿಸಿ: ದೌರ್ಜನ್ಯದಿಂದ ಮುಕ್ತಗೊಳಿಸಿ" ಎನ್ನುವ ಸಂದೇಶವನ್ನು ಸಿನಿಮಾ ಪ್ರದರ್ಶನಕ್ಕೆ ಮೊದಲು ಪ್ರದರ್ಶಿಸುವಂತೆ ರಾಜ್ಯದ ಎಲ್ಲಾ ಚಿತ್ರಮಂದಿರಗಳಿಗಿ ಸೂಚನೆ ನೀಡುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. |
| 114 | ಸಮಾಜದಲ್ಲಿ ಬೇರೂರಿರುವ ಲಿಂಗ ತಾರತಮ್ಯ ಮತ್ತು ಮಹಿಳೆಯರ ವಿರುದ್ಧದ ಪೂರ್ವಾಗ್ರಹಗಳನ್ನು ಹೋಗಲಾಡಿಸಲು ಶಾಲೆಗಳಲ್ಲಿ ಸೂಕ್ತ ಕಾರ್ಯವಿಧಾನ ಅಳವಡಿಸುವ ವ್ಯವಸ್ಥೆಯಾಗಬೇಕು. ಜೀವನಪೂರಕ ಶಿಕ್ಷಣವನ್ನು ಒದಗಿಸಲು ಶಾಲೆಗಳು ಸಜ್ಜಾಗಬೇಕು. ಮಕ್ಕಳಲ್ಲಿ ಸೂಕ್ಷ್ಮತೆಯುಳ್ಳ ಮತ್ತು ಸಂವೇದನಾಶೀಲ ಚಿಂತನೆ, ಅವರ ಶ್ರೇಯೋಭಿವೃದ್ಧಿ, ಸಾಮರ್ಥ್ಯ ಬೆಳವಣಿಗೆ. ಪರಿಣಾಮಕಾರಿ ಸಂವಹನ, ಸ್ವಯಂಕೌಶಲ್ಯ, ಸ್ವಯಂಜಾಗೃತಿ, ಅನುಭೂತಿ, ಒತ್ತಡ ಮತ್ತು ಭಾವನೆಗಳನ್ನು | **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ**<br>• NCF-2005 ರ ಆಶಯದಂತೆ ಪಠ್ಯ ಪುಸ್ತಕ ರಚನಾ ಹಂತದಲ್ಲಿ ಲಿಂಗ ಸಮಾನತೆಯ ಅಂಶಗಳನ್ನು ಅಳವಡಿಸಲಾಗಿದೆ.<br>• ಎಲ್ಲಾ ಶಿಕ್ಷಕರಿಗೂ ಜೀವನ ಕೌಶಲ, ಜೀವನ ಶಿಕ್ಷಣ, ಜೀವನ ವಿಜ್ಞಾನ ತರಬೇತಿಯನ್ನು ನೀಡಲಾಗಿದೆ.<br>• ಶಾಲಾ ಅವಧಿಯಲ್ಲಿ ಜರುಗುವ ಚಟುವಟಿಕೆಗಳಾದ ಶಾಲಾ ಸ್ವಚ್ಛತೆ, ಕ್ರಾಫ್ಟ್ ಚಟುವಟಿಕೆ, ಕಲಿಕಾ ಚಟುವಟಿಕೆಗಳಲ್ಲಿ ಹೆಣ್ಣು ಗಂಡು ಬೇಧಭಾವವಿಲ್ಲದೆ ಗುಂಪುಗಳ ಮೂಲಕ ಕಲಿಕೆಗೆ ಕ್ರಮವಹಿಸಲಾಗುತ್ತಿದೆ.<br>• ಆಯ್ದ ಪ್ರೌಢಶಾಲೆಗಳಲ್ಲಿ NSQF ವೃತ್ತಿ ಶಿಕ್ಷಣವನ್ನು ಜಾರಿ ಮಾಡಲಾಗಿದೆ. ಅದರಂತೆ ಎಲ್ಲಾ ಪ್ರೌಢಶಾಲೆಗಳಲ್ಲಿ ಜಾರಿಗೆ ತರಲು ಸರ್ಕಾರದ ಹಂತದಲ್ಲಿ ಕ್ರಮವಹಿಸಬೇಕಿರುತ್ತದೆ. |

| | | |
|---|---|---|
| | ನಿಭಾಯಿಸುವುದು, ಇತ್ಯಾದಿ ಕಲಿಕೆಗಳು ಶಿಕ್ಷಣ ವ್ಯವಸ್ಥೆಯ ಭಾಗವಾಗಿರಬೇಕು. | |
| 115 | ಸಾಮಾಜಿಕ ವ್ಯವಸ್ಥೆಗೆ ಬುನಾದಿ ಹಾಕುವ ಕಾರ್ಯ ಶಾಲೆಗಳಿಂದಲೇ ಆರಂಭವಾಗುತ್ತದೆ. ಲಿಗಭೇದವಿರದ, ಕ್ರಿಯಾತ್ಮಕ ಮತ್ತು ಸೃಜನಶೀಲ ಲಿಂಗತಟಸ್ಥ ಆದರೂ ಲಿಂಗಸೂಕ್ಷ್ಮ ನೀತಿಗಳ ಪಾಲನೆ ಶಾಲೆಗಳಲ್ಲಿರಬೇಕು. ಉದಾಹರಣೆಗೆ, ಗುಂಪು ಕಲಿಯುವಿಕೆ. ಗುಂಪಿನಲ್ಲಿ ಅಭ್ಯಸಿಸುವುದು. ಇತ್ಯಾದಿ, ಚಟುವಟಿಕೆ, ಇಂತಹವುಗಳನ್ನು ರೂಪಿಸಲು ಸರ್ಕಾರ ಸೂಕ್ತ ನೀತಿ ರೂಪಿಸಬೇಕು. | **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ**<br>• ಪ್ರೌಢಶಾಲೆಗಳಲ್ಲಿ ಗುಂಪು ಕಲಿಕೆಗೆ ಕ್ರಮವಹಿಸಲಾಗಿದೆ. ಉದಾ:ಪ್ರತಿಭಾ ಕಾರಂಜಿ, ಸಾಮೂಹಿಕ ಕವಾಯತು, ಸಾಮೂಹಿಕ ಸಹ ಭೋಜನ, ಸಾಮೂಹಿಕ ತರಗತಿ ನಿರ್ವಹಣೆ, ಇತ್ಯಾದಿ.<br>• ಶಾಲೆಗಳಲ್ಲಿ ಮಕ್ಕಳ ಗುಂಪು ಮಾಡುವಾಗ, ಕಲಿಕಾ ಚಟುವಟಿಕೆಗಳನ್ನು ನಿರ್ವಹಿಸುವಾಗ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವಾಗ ಲಿಂಗ ತಟಸ್ಥ ನೀತಿಯನ್ನು ಅನುಸರಿಸಲಾಗುತ್ತಿದೆ. |
| 116 | ಮಕ್ಕಳ ದೈಹಿಕ, ಸಾಮಾಜಿಕ, ಭಾವನಾತ್ಮಕ ಮತ್ತು ನೈತಿಕ ಬೆಳವಣಿಗೆಯಲ್ಲಿ ದೇಹಶಾಸ್ತ್ರ ಶಿಕ್ಷಣದ ಪಾತ್ರ ಪ್ರಮುಖವಾಗಿರುತ್ತದೆ. ದೇಹಶಾಸ್ತ್ರ ಶಿಕ್ಷಣವು ಯುವಜನರನ್ನು ಭವಿಷ್ಯದಲ್ಲಿ, ಅವರ ವೈವಾಹಿಕ, ಪೋಷಕ ಮತ್ತು ವೃದ್ಧಾಪ್ಯ ಜೀವನಕ್ಕೆ ಸಜ್ಜುಗೊಳಿಸುವ ಮೂಲಕ ಕೌಟುಂಬಿಕ ಮತ್ತು ಸಾಮಾಜಿಕ ಜೀವನಕ್ಕೆ ಬುನಾದಿಯಾಗುತ್ತದೆ. ಅಂತಹ ಶಿಕ್ಷಣಕ್ಕೆ ಸರ್ಕಾರ ಮುಂದಾಗಬೇಕು. | **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ**<br>• ಪ್ರೌಢಶಾಲೆಗಳಲ್ಲಿ ಆಪ್ತ ಸಮಾಲೋಚನಾ ಕೇಂದ್ರಗಳನ್ನು ತೆರೆಯಲಾಗಿದೆ. ವರ್ಷಕ್ಕೆ ಎರಡುಬಾರಿ RBSK (ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ) ಅಡಿಯಲ್ಲಿ ವೈದ್ಯಕೀಯ ತಪಾಸಣೆ ಮಾಡಿಸಲಾಗುತ್ತಿದೆ. ಆಪ್ತ ಸಮಾಲೋಚನೆ ಸಮಿತಿ, ಸಲಹಾ ಪೆಟ್ಟಿಗೆ, NPEP (National Population Education Project) ಚಟುವಟಿಕೆಗಳು, ಪ್ರಶ್ನಾ ಪೆಟ್ಟಿಗೆಗಳ ಮೂಲಕ ಜಾಗೃತಿ ಮೂಡಿಸಲು ಕ್ರಮವಹಿಸಲಾಗಿದೆ.<br>• 6 ನೇ ತರಗತಿಯಿಂದ 10 ನೇ ತರಗತಿಯವರೆಗಿನ ಎಲ್ಲಾ ಸಾಮಾನ್ಯ ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳಲ್ಲಿ ಅನುವಂಶೀಯತೆ, ಸಂತಾನೋತ್ಪತ್ತಿ, ಹದಿಹರೆಯಕ್ಕೆ ಪ್ರವೇಶ ಮತ್ತು ದೇಹಶಾಸ್ತ್ರದ ಬಗ್ಗೆ ವಿಷಯ ಅಳವಡಿಸಲಾಗಿದೆ.<br>• ನಾವು ಮನುಜರು ಶೀರ್ಷಿಕೆಯಡಿಯಲ್ಲಿ ಸಾಮಾಜಿಕ ಸಾಮರಸ್ಯ, ವೈಜ್ಞಾನಿಕ ಮನೋಭಾವ ಮತ್ತು ಸಹಬಾಳ್ವೆಗೆ ಸಂಬಂಧಿಸಿದಂತೆ, ವಿವಿಧ ಚಟುವಟಿಕೆಗಳನ್ನು ಶಾಲಾ ಹಂತದಲ್ಲಿ ನಿರ್ವಹಿಸಲು ಕ್ರಮವಹಿಸಿದೆ. |

| | | |
|---|---|---|
| 117 | ಪುರುಷರು ಮಹಿಳೆಯರನ್ನು ನೋಡುವ ದೃಷ್ಟಿಕೋನ ಬದಲಾಗಬೇಕು. ಪಠ್ಯಕ್ರಮದಲ್ಲ, ದೇಹಶಾಸ್ತ್ರ ಶಿಕ್ಷಣವನ್ನು ಅಳವಡಿಸುವಾಗ, ಕೆಲವು ಸೂಕ್ಷ್ಮತೆಗಳನ್ನು ಕಾಯ್ದುಕೊಳ್ಳಬೇಕಾಗುತ್ತದೆ. ಏಕೆಂದರೆ ಆರೋಗ್ಯಪೂರ್ಣ ದೇಹಶಾಸ್ತ್ರ ಶಿಕ್ಷಣದಿಂದ ಮಾತ್ರ ಅನುಕೂಲ ಸಾಧ್ಯ. ಶಾಲೆಗಳಲ್ಲಿ ಲಿಂಗತಟಸ್ಥ ಚಟುವಟಿಕೆಗಳ ಅಳವಡಿಸುವಿಕೆ, ಗಂಡು ಮತ್ತು ಹೆಣ್ಣು ಮಕ್ಕಳು ಸೇರಿ ಶಾಲೆಯ ಸ್ವಚ್ಛತೆ ಕಾಪಾಡುವುದು, ಮುಂತಾದವು ಮಾಡಲು ಕ್ರಮ ರೂಪಿಸುವುದು. | **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ**<br>ಶಾಲಾ ಸ್ವಚ್ಛತೆ, ಗಿಡಗಳಿಗೆ ನೀರು ಹಾಕುವುದು, ಆಟೋಟಗಳಲ್ಲಿ ಭಾಗವಹಿಸುವುದು, ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸುವುದು, ಮಧ್ಯಾಹ್ನದ ಊಟದ ಸಮಯದಲ್ಲಿ ಒಟ್ಟಾಗಿ ಸಾಲಿನಲ್ಲಿ ಕೂರುವ ಸಂದರ್ಭ ಹಾಗೂ ಇತರೆ ಶೈಕ್ಷಣಿಕ ಚಟುವಟಿಕೆಗಳಲ್ಲಿ ಲಿಂಗತಾರತಮ್ಯವಿಲ್ಲದೆ ಭಾಗವಹಿಸುವಂತೆ ಕ್ರಮವಹಿಸಲಾಗುತ್ತಿದೆ. |
| 118 | ಶಾಲಾ ಮಕ್ಕಳಿಗೆ ದೇಹಶಾಸ್ತ್ರ ಶಿಕ್ಷಣ ನೀಡುವಾಗ ವೈಜ್ಞಾನಿಕ ಮತ್ತು ವೈದ್ಯಕೀಯ ವಿಧಾನದ ಪರಿಪಾಲನೆ ಬಹಳ ಮುಖ್ಯ. ಪ್ರೌಢಾವಸ್ಥೆಯ ಹಂತದಲ್ಲಿ ಮಕ್ಕಳು ಬಹಳ ಸೂಕ್ಷ್ಮವಾದ ಗ್ರಹಿಕೆಯನ್ನು ಹೊಂದಿರುತ್ತಾರೆ. ಬಾಲ್ಯಾವಸ್ಥೆಯಿಂದ ಯೌವನಾವಸ್ಥೆಗೆ ದಾಟುವ ಹಂತದಲ್ಲಿ ಸೂಕ್ಷ್ಮ ತಿಳುವಳಿಕೆ ನೀಡುವುದರಿಂದ ಲೈಂಗಿಕತೆಯ ವಿಷಯದಲ್ಲಿ ಮತ್ತು ಸಂಬಂಧಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ | **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ**<br>• ಕರ್ನಾಟಕ ರಾಜ್ಯ AIDS Prevention Society, ಇವರ ಸಹಭಾಗಿತ್ವದಲ್ಲಿ ರಾಜ್ಯದ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ಹದಿಹರೆಯದ ಶಿಕ್ಷಣ ಕುರಿತು ಅರಿವು ಮೂಡಿಸಲಾಗುತ್ತಿದೆ. ಸಂಬಂಧಿತ IEC (Information Education and Communication) materials ವಿತರಿಸಲಾಗಿದೆ. ರಸಪ್ರಶ್ನೆ, ಚರ್ಚಾ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ.<br>• ಹದಿಹರೆಯದ ಶಿಕ್ಷಣ ತರಬೇತಿ, ಸ್ಥಳೀಯ ಮಹಿಳಾ ಆರೋಗ್ಯ ಕಾರ್ಯ ಕರ್ತೆಯರಿಂದ ಮಾಹಿತಿ, ಮಾಧ್ಯಮಗಳ ಬಗ್ಗೆ ಎಚ್ಚರಿಕೆ, ಲೈಂಗಿಕ ಆಕರ್ಷಣೆ, ಆದರ್ಶ ವ್ಯಕ್ತಿಗಳ ಜೀವನ ರೀತಿ ನೀತಿಗಳು, ಮದುವೆಯ ವಯಸ್ಸು ಮುಂತಾದ ಸೂಕ್ಷ್ಮ ವಿಷಯಗಳ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. |

| | | |
|---|---|---|
| | ಸಂದರ್ಭದಲ್ಲಿ ಅವರು ಜಾಗರೂಕರಾಗಿರಲು ಸಹಾಯವಾಗುತ್ತದೆ. | |
| 119 | ಗೌರವ. ಸ್ವಾತಂತ್ರ್ಯ, ಚಿಂತನೆ, ಅಭಿವ್ಯಕ್ತಿ ಮತ್ತು ಆಯ್ಕೆಯ ಸ್ವಾತಂತ್ರ್ಯ, ಇತ್ಯಾದಿ ಅಂಶಗಳ ಅಳವಡಿಕೆಯಿಂದ ಭಾರತದ ಸಂವಿಧಾನ ವಿಶ್ವ ಮಟ್ಟದಲ್ಲಿ ಮಾದರಿ ಸಂವಿಧಾನ ಎನಿಸಿಕೊಂಡಿದೆ. ಈ ತತ್ವಗಳು ವ್ಯಕ್ತಿಯ ಸ್ವಪರಿಕಲ್ಪನೆಗೆ ಸಲ್ಲಿಸುವ ಪ್ರಾಥಮಿಕ ಗೌರವವಾಗಿದ್ದು, ನಮ್ಮ ಸಂವಿಧಾನವು ಇವುಗಳನ್ನು ಎತ್ತಿಹಿಡಿದೆ. ಮಕ್ಕಳಿಗೆ ನೀಡುವ ಉಚಿತ ಶಿಕ್ಷಣ ವ್ಯವಸ್ಥೆಯಲ್ಲಿ ಜೈವಿಕ, ದೈಹಿಕ, ಸಾಮಾಜಿಕ ಮತ್ತು ನೈತಿಕ ವಿಷಯಗಳ ಅಳವಡಿಕೆ ಬಹಳ ಮುಖ್ಯ. ಆದಾಗ್ಯೂ ತಾರತಮ್ಯವಿರದ ವ್ಯಕ್ತಿತ್ವ ಬೆಳವಣಿಗೆ, ಪರಿವರ್ತನಾ ಸಾಮರ್ಥ. ಕಲಿಯುವಿಕೆ, ಶಿಕ್ಷಣದ ಪ್ರಮುಖ ಭಾಗವಾಗಬೇಕು. | **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ**<br>• ಸಮಾಜ ವಿಜ್ಞಾನ ಪಠ್ಯ ವಿಷಯದಲ್ಲಿ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಮಾಹಿತಿ ನೀಡಲಾಗುತ್ತಿದೆ.<br>• ಶಾಲೆಗಳ ಪ್ರಾರ್ಥನಾ ವೇಳೆಯಲ್ಲಿ ಸಂವಿಧಾನ ಪೀಠಿಕೆ ಓದಿಸುವ ಚಟುವಟಿಕೆ ಹಮ್ಮಿಕೊಳ್ಳಲಾಗಿದೆ ಹಾಗೂ ಪಠ್ಯಪುಸ್ತಕಗಳಲ್ಲಿ ಸಂವಿಧಾನ ಪೀಠಿಕೆ ಹಾಗೂ ಸಾಂವಿಧಾನಿಕ ಮೌಲ್ಯಗಳನ್ನು ಅಳವಡಿಸಿದೆ.<br>• ವಿದ್ಯಾರ್ಥಿಗಳಲ್ಲಿ ಮೌಲ್ಯ ಶಿಕ್ಷಣದ ಅರಿವು ಮೂಡಿಸುವ ಸಂಬಂಧ ಚಟುವಟಿಕೆ ಆಧಾರಿತ ಸಾಹಿತ್ಯ ರಚಿಸಲು ಕ್ರಮವಹಿಸಲಾಗಿದೆ. |
| 120 | ಸಾರ್ವಜನಿಕ ಸಾರಿಗೆ ವಾಹನಗಳ ಚಾಲಕರು, ನಿರ್ವಾಹಕರು, ಸಹಾಯಕರ ಬಗ್ಗೆ ಶೇಕಡ ನೂರರಷ್ಟು ಪರಿಶೀಲನೆ ನಡೆಸಬೇಕು ಮತ್ತು ಪೂರ್ಣ ಮಾಹಿತಿ ಹೊಂದಬೇಕು. ಒಂದು ವೇಳೆ ಈ ವ್ಯಕ್ತಿಗಳ ಬಗ್ಗೆ ದೂರು | **ಸಾರಿಗೆ ಇಲಾಖೆ:**<br>• ಸಾರಿಗೆ ಇಲಾಖೆಯಲ್ಲಿ ಕರ್ನಾಟಕ ಮೋಟಾರು ವಾಹನಗಳ ನಿಯಮಗಳು 1989 ನಿಯಮ 13, 15 ಮತ್ತು 16ರಲ್ಲಿ ಸಾರಿಗೆ ವಾಹನಗಳನ್ನು ಚಾಲನೆ ಮಾಡುವ ಚಾಲಕರ ಕರ್ತವ್ಯ ಹಾಗೂ ನಡವಳಿಕೆಗಳನ್ನು ನಿರ್ದಿಷ್ಟಪಡಿಸಿ ಕಾನೂನನ್ನು ಜಾರಿಗೆ ತರಲಾಗಿದೆ. ಸದರಿ ನಿಯಮಗಳ ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ. |

| | | |
|---|---|---|
| | ಕಂಡುಬಂದಲ್ಲಿ, ವಾಹನದ ಮಾಲೀಕ ಸಂಪೂರ್ಣ ಜವಾಬ್ದಾರನಾಗುವಂತೆ ಕಾನೂನು ರೂಪಿಸಬೇಕು. | • ಕರ್ನಾಟಕ ಮೋಟಾರು ವಾಹನಗಳ ನಿಯಮಗಳು 1989ರ ನಿಯಮ 25ರಲ್ಲಿ ನಿರ್ವಾಹಕರ ಕರ್ತವ್ಯ ಹಾಗೂ ನಡವಳಿಕೆಗಳನ್ನು ನಿರ್ದಿಷ್ಟಪಡಿಸಿ ಕಾನೂನನ್ನು ಜಾರಿಗೆ ತರಲಾಗಿದೆ.<br>• ಸಾರ್ವಜನಿಕ ಸಾರಿಗೆ ವಾಹನಗಳ ಚಾಲಕರು, ನಿರ್ವಾಹಕರುಗಳಿಗೆ ಲೈಸೆನ್ಸ್ ಗಳ ನೀಡಿಕೆ ಸಂಬಂಧ ಪರೀಕ್ಷೆಗೆ ಒಳಪಡಿಸುವ ಸಮಯದಲ್ಲಿ ಸಂಬಂಧಿತ ದಾಖಲೆಗಳೊಂದಿಗೆ ಅವರುಗಳ ಪೂರ್ವಾಪರ ಪರಿಶೀಲನೆ ಕಾರ್ಯವನ್ನು ನಡೆಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ನಿರ್ದಿಷ್ಟ ವ್ಯಕ್ತಿಗಳ ಮೇಲೆ ದೂರುಗಳು ಸ್ವೀಕೃತವಾದಲ್ಲಿ, ಈಗಾಗಲೇ ಮೇಲ್ಕಂಡಂತೆ ಜಾರಿಯಲ್ಲಿರುವ ಕರ್ನಾಟಕ ಮೋಟಾರು ವಾಹನಗಳ ನಿಯಮಗಳು 1989ರ ಪ್ರಕಾರ ಲೈಸೆನ್ಸ್ ಅಮಾನತ್ತು / ರದ್ದುಪಡಿಸುವ ಕ್ರಮ ವಹಿಸಲಾಗುತ್ತಿದೆ.<br>• ಸಾರಿಗೆ ಇಲಾಖೆಯ ರಾಜ್ಯ ರಸ್ತೆ ಸಾರಿಗೆ ನಿಗಮಗಳಾದ ಕ.ರಾ.ರ.ಸಾ.ನಿಗಮ, ಬೆಂ.ಮ.ಸಾ.ಸಂಸ್ಥೆ, ವಾ.ಕ.ರಾ.ರ.ಸಾ.ಸಂಸ್ಥೆ ಹಾಗೂ ಕ.ಕ.ರ.ಸಾ.ನಿಗಮಗಳು ಸದರಿ ನಿಗಮಗಳಲ್ಲಿನ ಎಲ್ಲ ಚಾಲಕರು, ನಿರ್ವಾಹಕರು, ಸಹಾಯಕರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಹೊಂದಲಾಗಿರುತ್ತದೆ. ಸದರಿಯವರ ವಿರುದ್ಧ ದೂರುಗಳು ಬಂದಲ್ಲಿ ದೂರಿನ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ದೂರುದಾರ ಹಾಗೂ ಆರೋಪಿತರನ್ನು ಒಡಗೂಡಿಸಿ ವಿಚಾರಣೆ ಕೈಗೊಂಡು ತಪ್ಪಿತಸ್ಥರ ಮೇಲೆ ಶಿಸ್ತು ಕ್ರಮ ಜರುಗಿಸುವ ಪದ್ಧತಿ ಜಾರಿಯಲ್ಲಿದೆ. |
| 121 | ಸಾಮುದಾಯಿಕ ನೀತಿಗಳನ್ನು ಅಭಿವೃದ್ಧಿಪಡಿಸುವುದರಿಂದ ಪೊಲೀಸ್ ವ್ಯವಸ್ಥೆಯ ಜೊತೆಜೊತೆಗೆ ಸ್ಥಳೀಯ ಜನರ ಕರ್ತವ್ಯ ಪ್ರಜ್ಞೆ, ಸಹಾಯ ಮನೋಭಾವ ಉತ್ತೇಜಿಸಲು ಸೂಕ್ತ ವಾತಾವರಣ ನಿರ್ಮಾಣವಾಗಲು ಸರ್ಕಾರ ಕ್ರಮ ವಹಿಸಬೇಕು. | **ಪೊಲೀಸ್ ಇಲಾಖೆ:**<br>ಮಹಿಳಾ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಗೆ ಪೊಲೀಸ್ ಇಲಾಖೆಗೆ ಸಾರ್ವಜನಿಕರ ಸಹಕಾರ ಅತ್ಯಗತ್ಯ ಎಂಬುವದನ್ನು ಜನಸಂಪರ್ಕ ಸಭೆಗಳಲ್ಲಿ, ಸಾರ್ವಜನಿಕ ಸಭೆಗಳಲ್ಲಿ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಯವರಿಂದ ತಿಳುವಳಿಕೆ ನೀಡಿ ಸಾರ್ವಜನಿಕರನ್ನು ಉತ್ತೇಜಿಸಲಾಗುತ್ತಿದೆ. |
| 122 | ಪೊಲೀಸ್ ಇಲಾಖೆಯಲ್ಲಿ ಅಧಿಕ ಮಹಿಳಾ ಸಿಬ್ಬಂದಿಯ ನೇಮಕ ಮಾಡಿಕೊಳ್ಳಬೇಕು. ಪೊಲೀಸ್ ಕಂಟ್ರೋಲ್ ರೂಮ್ ಗಳಲ್ಲಿ, ಪೊಲೀಸ್ ವಾಹನಗಳಲ್ಲಿ ಹೆಚ್ಚುವರಿ ಮಹಿಳಾ ಸಿಬ್ಬಂದಿಯ ನೇಮಕಾತಿಗೆ | **ಪೊಲೀಸ್ ಇಲಾಖೆ:** ಪೊಲೀಸ್ ಇಲಾಖೆಯಲ್ಲಿ ಈಗಾಗಲೇ ಮಹಿಳಾ ಸಿಬ್ಬಂದಿಯವರು ಹೆಚ್ಚಿನ ಸಂಖ್ಯೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಪೊಲೀಸ್ ಕಂಟ್ರೋಲ್ ರೂಮ್ ಹಾಗೂ ಗಸ್ತು ವಾಹನಗಳಲ್ಲಿ ಮಹಿಳಾ ಅಧಿಕಾರಿ/ಸಿಬ್ಬಂದಿಯವರನ್ನು ನಿಯೋಜಿಸಲಾಗುತ್ತಿದೆ. |

| | | |
|---|---|---|
| | ಸರ್ಕಾರ ಕ್ರಮ ವಹಿಸಬೇಕು. ಕಾಲಕಾಲಕ್ಕೆ ಅವರಿಗೆ ಲಿಂಗ ಸಂವೇದನಾ ಶಿಬಿರಗಳನ್ನು ಕಡ್ಡಾಯವಾಗಿ ನಡೆಸುತ್ತಿರಬೇಕು. | |
| 123 | ಸಿನಿಮಾಗಳಲ್ಲಿ, ದೂರದರ್ಶನ ಕಾರ್ಯಕ್ರಮಗಳಲ್ಲಿ, ಜಾಹಿರಾತುಗಳಲ್ಲಿ ಮಹಿಳೆಯರನ್ನು ಮತ್ತು ಮಕ್ಕಳನ್ನು ನಕಾರಾತ್ಮಕವಾಗಿ, ಅಶ್ಲೀಲವಾಗಿ ಪ್ರದರ್ಶಿಸುವುದನ್ನು ತಡೆಗಟ್ಟಬೇಕು. ಸಾರ್ವಜನಿಕ ಹಿತಾಸಕ್ತಿ ಕಾಪಾಡುವ ಜಾಹಿರಾತುಗಳ ಪ್ರಚಾರವನ್ನು ಮಾಧ್ಯಮಗಳಲ್ಲಿ ಬಿತ್ತರಿಸುವ ಕಾರ್ಯ ನಿರಂತರವಾಗಿ ನಡೆಯಲು ಸರ್ಕಾರ ಕಾನೂನು ರೂಪಿಸಬೇಕು | **ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ:** ದೂರದರ್ಶನ ಕಾರ್ಯಕ್ರಮಗಳಲ್ಲಿ ಮಹಿಳೆಯರನ್ನು ಮತ್ತು ಮಕ್ಕಳನ್ನು ನಕಾರಾತ್ಮವಾಗಿ, ಅಶ್ಲೀಲವಾಗಿ ಪ್ರದರ್ಶಿಸುವುದನ್ನು ತಡೆಗಟ್ಟಲು ಸಾರ್ವಜನಿಕರಿಂದ ದೂರು ಸ್ವೀಕರಿಸಲು ಇಲಾಖೆಯಲ್ಲಿ ಸಹಾಯವಾಣಿ ಸ್ಥಾಪಿಸಲಾಗಿದೆ. ಜಿಲ್ಲಾ ಮಟ್ಟದ ಕಚೇರಿಗಳಲ್ಲಿ ದೂರು ಕೋಶ ಸ್ಥಾಪಿಸಲಾಗಿದೆ. The Cable Television Networks (Regulation) Act, 1995 ಅಡಿಯ ಕಾರ್ಯಕ್ರಮ ಸಂಹಿತೆ (Programme Code) ಗಳನ್ನು ಪಾಲಿಸದ ಟಿ.ವಿ. ವಾಹಿನಿಗಳಿಗೆ ಜಿಲ್ಲಾ ಹಾಗೂ ರಾಜ್ಯಮಟ್ಟದ ಕೇಬಲ್ ಟಿ.ವಿ. ಸಮಿತಿ ಸಭೆಗಳ ಶಿಫಾರಸ್ಸಿನಂತೆ ಮಾಧ್ಯಮ ಸಂಸ್ಥೆಗಳಿಗೆ ಸಲಹೆಗಳನ್ನು ನೀಡಲಾಗುತ್ತಿದೆ. |
| 124 | ಶಾಲೆಗಳಲ್ಲಿ ಮೌಲ್ಯ ಶಿಕ್ಷಣದ ಪ್ರಾಮುಖ್ಯತೆ ಅರಿತು. ಈ ಸಂಬಂಧ ಶಿಕ್ಷಕರಿಗೆ ಸೂಕ್ತ ತರಬೇತಿ ನೀಡಬೇಕು. ಶಾಲಾ ಕಾಲೇಜುಗಳಲ್ಲ. ಶಿಕ್ಷಣದ ಎಲ್ಲಾ ಹಂತಗಳಲ್ಲಿ ಅಂಗಸಮಾನತೆಯ ಬಗ್ಗೆ ಜಾಗೃತ ಶಿಬಿರಗಳು, ಕಾರ್ಯಕ್ರಮಗಳು ನಿರಂತರವಾಗಿ ಅಳವಡಿಕೆಯಾಗುವಂತೆ ಸರ್ಕಾರ ಕ್ರಮ ವಹಿಸಬೇಕು. | **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ**<br>• ಎಲ್ಲಾ ಶಾಲೆಗಳಲ್ಲಿ ಮೌಲ್ಯ ಶಿಕ್ಷಣಕ್ಕೆ ಒಂದು ಅವಧಿಯನ್ನು ಮೀಸಲಿರಿಸಿದೆ.<br>• ನಾವು ಮನುಜರು ಕಾರ್ಯಕ್ರಮದಲ್ಲಿ ಶಾಲೆಗಳನ್ನು ಸಾಮಾಜಿಕ ಸಾಮರಸ್ಯ, ವೈಜ್ಞಾನಿಕ ಮನೋಭಾವದ ಕೇಂದ್ರಗಳನ್ನಾಗಿ ರೂಪಿಸಲು ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ಕ್ರಮವಹಿಸಲಾಗುತ್ತಿದೆ.<br>• ವಿದ್ಯಾರ್ಥಿಗಳಲ್ಲಿ ಮೌಲ್ಯ ಶಿಕ್ಷಣದ ಅರಿವು ಮೂಡಿಸುವ ಸಂಬಂಧ ಚಟುವಟಿಕೆ ಆಧಾರಿತ ಸಾಹಿತ್ಯ ರಚಿಸಲು, ಹಾಗೂ ಶಿಕ್ಷಕರ ಸಾಹಿತ್ಯ ಕೈಪಿಡಿ ರಚನೆಗೆ ಕ್ರಮವಹಿಸಲಾಗಿದೆ ಮತ್ತು 2025-26ನೇ ಸಾಲಿನಲ್ಲಿ ಎಲ್ಲಾ ಶಿಕ್ಷಕರಿಗೆ ತರಬೇತಿ ನೀಡಲು ಯೋಜಿಸಲಾಗಿದೆ.<br>• ಜೀವನ ಶಿಕ್ಷಣ, ಜೀವನ ವಿಜ್ಞಾನ ತರಬೇತಿಗಳನ್ನು ಶಿಕ್ಷಕರಿಗೆ ನೀಡಿ ವಿಷಯಗಳ ಸಮನ್ವಯತೆಯೊಂದಿಗೆ ಮಾಹಿತಿ ನೀಡಲು ಕ್ರಮವಹಿಸಲಾಗಿದೆ |
| 125 | ಸ್ವಯಂ ರಕ್ಷಣೆ/ಮಾರ್ಷಲ್ ಆರ್ಟ್ ನಂತಹ ವಿದ್ಯೆಗಳನ್ನು ಶಾಲಾ | **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ** |

| | | |
|---|---|---|
| | ಕಾಲೇಜುಗಳಲ್ಲಿ ಹೆಣ್ಣುಮಕ್ಕಳಿಗೆ ತರಬೇತಿ ನೀಡುವುದರಿಂದ ಹೆಣ್ಣುಮಕ್ಕಳಿಗೆ ಸ್ವಯಂ ರಕ್ಷಣೆ ಮಾಡಿಕೊಳ್ಳಲು ಧೈರ್ಯ ಮೂಡುವಂತಹ ವ್ಯವಸ್ಥೆ ಸರ್ಕಾರ ರೂಪಿಸಬೇಕು. | • ಸರ್ಕಾರಿ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ತರಬೇತಿಯನ್ನು ನೀಡಲಾಗುತ್ತಿದೆ.<br>• ಪ್ರೌಢಶಾಲೆಗಳಲ್ಲಿ ಮಕ್ಕಳ ಸ್ವಯಂ ರಕ್ಷಣೆಗೆ 'ತೆ ದ ಮನೆ' ಎಂಬ ಕಾರ್ಯಕ್ರಮವನ್ನು ಪೋಲೀಸ್ ಇಲಾಖೆ ಹಮ್ಮಿಕೊಂಡು ಕಾರ್ಯ ನಿರ್ವಹಿಸುತ್ತಿದೆ.<br>• ಕರ್ತವ್ಯ ನಿರತ ದೈಹಿಕ ಶಿಕ್ಷಕರಿಗೆ ಸ್ವಯಂ ರಕ್ಷಣೆ/ಮಾರ್ಷಲ್ ಆರ್ಟ್ ನಂತಹ ವಿದ್ಯೆಗಳ ತರಬೇತಿ ನೀಡಿ ವಾರದಲ್ಲಿ ಒಂದು ಅವಧಿ ಈ ಬಗ್ಗೆ ಮೀಸಲಿರಿಸಬಹುದಾಗಿದೆ. |
| 126 | ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ ಮಹಿಳಾ ಸ್ನೇಹಿ ಸಾರಿಗೆಯನ್ನು ಅಳವಡಿಸಬೇಕು. | **ಸಾರಿಗೆ ಇಲಾಖೆ:**<br>• ಸಾರಿಗೆ ಇಲಾಖೆಯಲ್ಲಿ ಮಹಿಳೆ ಮತ್ತು ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ನಿರ್ಭಯ ಯೋಜನೆಯಡಿ ಸಾರ್ವಜನಿಕ ಸೇವಾ ವಾಹನಗಳು ಅಂದರೆ ಮಜಲು ವಾಹನ, ಶಾಲಾ ವಾಹನ, ಖಾಸಗಿ ಸೇವಾ ವಾಹನ, ಮ್ಯಾಕ್ಸಿ ಕ್ಯಾಬ್ ಒಪ್ಪಂದ ವಾಹನ, ಮೋಟಾರು ಕ್ಯಾಬ್ ಹಾಗೂ ರಾಷ್ಟ್ರೀಯ ರಹದಾರಿ ಹೊಂದಿದ ಸರಕು ಸಾಗಣೆ ವಾಹನಗಳಿಗೆ Vehicle Location Tracking Device ಮತ್ತು Emergency Button ಅಳವಡಿಸುವ ಯೋಜನೆಯನ್ನು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ, ನವದೆಹಲಿ ರವರು ಹೊರಡಿಸಿರುವ ಅಧಿಸೂಚನೆ ಹಾಗೂ ಮಾರ್ಗಸೂಚಿಗಳ ಮೇರೆಗೆ ಕರ್ನಾಟಕ ರಾಜ್ಯದಲ್ಲಿ ಸಾರಿಗೆ ಇಲಾಖೆ ವತಿಯಿಂದ ಜಾರಿಗೊಳಿಸಲಾಗಿದೆ.<br>• ಸದರಿ ವ್ಯವಸ್ಥೆಯಿಂದಾಗಿ, ಮಹಿಳೆಯರು ಮತ್ತು ಮಕ್ಕಳು ಅಥವಾ ಇತರೆ ಪ್ರಯಾಣಿಕರು ತುರ್ತು ಸಂದರ್ಭಗಳಲ್ಲಿ ಪ್ಯಾನಿಕ್ ಬಟನ್ ಅನ್ನು ಉಪಯೋಗಿಸಿದಲ್ಲಿ ಅದರ ಸಂಕೇತವು ನಿಯಂತ್ರಣ ಕೊಠಡಿಗೆ ರವಾನೆಯಾಗುತ್ತದೆ. ಸದರಿ ಸಂಕೇತವನ್ನು ಪೋಲೀಸ್ ಇಲಾಖೆಯ ನಿಯಂತ್ರಣ ಕೊಠಡಿಗೆ ಕೂಡಲೇ ರವಾನಿಸಲಾಗುತ್ತದೆ. ಈ ಮೂಲಕ ಸಂಭವನೀಯ ಅವಘಡಗಳನ್ನು ತಪ್ಪಿಸಲು ಸಹಾಯಕವಾಗುತ್ತದೆ.<br>• ಸಾರಿಗೆ ಇಲಾಖೆಯ ಅಧೀನದಲ್ಲಿನ ನಾಲ್ಕು ಸಾರಿಗೆ ನಿಗಮಗಳಾದ ಕ.ರಾ.ರ.ಸಾ.ನಿಗಮ, ಬೆಂ.ಮ.ಸಾ.ಸಂಸ್ಥೆ, ವಾ.ಕ.ರಾ.ರ.ಸಾ.ಸಂಸ್ಥೆ ಹಾಗೂ ಕ.ಕ.ರ.ಸಾ.ನಿಗಮಗಳಲ್ಲಿ ಪ್ರಸ್ತುತ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಶಕ್ತಿ ಯೋಜನೆ ನಂತರ ಮಹಿಳೆಯರ ಸುರಕ್ಷಾ ಹಿತ ದೃಷ್ಟಿಯಿಂದ ವಾಹನಗಳಲ್ಲಿ ಮಹಿಳೆಯರಿಗೆ 50% ಆಸನಗಳನ್ನು |

| | | |
|---|---|---|
| | | ಮೀಸಲಿರಿಸಲಾಗಿದೆ ಹಾಗೂ ಎಲ್ಲ ವಯೋಮಾನದ ಹೆಣ್ಣುಮಕ್ಕಳು/ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಮಾಡಿಕೊಡಲಾಗಿದೆ.<br>• ಮಹಿಳೆಯರ ಸುರಕ್ಷಿತ ಪ್ರಯಾಣಕ್ಕಾಗಿ ಎಲ್ಲಾ ಬಸ್ಸುಗಳಲ್ಲಿ ಪ್ರತ್ಯೇಕ ಆಸನ ಕೋಟಾ ವ್ಯವಸ್ಥೆ ಕಲ್ಪಿಸಲಾಗಿದೆ.<br>• ಪ್ರತಿಷ್ಠಿತ ಬಸ್ಸುಗಳಲ್ಲಿ ಪ್ರತ್ಯೇಕ ಆಸನ ಕೋಟಾ ಮತ್ತು ಡೈನಾಮಿಕ್ ಮಹಿಳಾ ಸೀಟ್ ಆಯ್ಕೆಯನ್ನು ಕಾಯ್ದಿರಿಸಲಾಗಿದೆ ಮತ್ತು ಈ ಸೌಲಭ್ಯವನ್ನು ಮುಂಗಡ ಆಸನ ಕಾಯ್ದಿರಿಸುವ ವ್ಯವಸ್ಥೆಯಿರುವ ಎಲ್ಲಾ ಪ್ರತಿಷ್ಠಿತ ಸೇವೆಗಳಲ್ಲಿ ಒದಗಿಸಲಾಗಿದೆ. ಮಹಿಳೆಯರ ಸುರಕ್ಷತೆಗಾಗಿ, ಅರೆ-ಸುಖಾಸೀನ ಹಾಗೂ ಮುಂಗಡ ಆಸನ ಕಾಯ್ದಿರಿಸುವ ಸೌಲಭ್ಯ ಹೊಂದಿರುವ ಎಲ್ಲಾ ಪ್ರತಿಷ್ಠಿತ ಸೇವೆಗಳಲ್ಲಿ ಮಹಿಳೆಯರಿಗಾಗಿ (ಒಂಟಿ ಪ್ರಯಾಣಕ್ಕೆ) 2 ಆಸನಗಳನ್ನು ಮೀಸಲಿಡಲಾಗಿದೆ. ಹಾಗೂ ಒಂಟಿ ಮಹಿಳೆ ಆಯ್ಕೆ ವ್ಯವಸ್ಥೆಯನ್ನು ಅವತಾರ್‌ನಲ್ಲಿ ಅಳವಡಿಸಲಾಗಿದೆ.<br>• ಮಹಿಳಾ ಪ್ರಯಾಣಿಕರ ಅನುಕೂಲಕ್ಕಾಗಿ "ಶಕ್ತಿ ಯೋಜನೆ"ಯಡಿ ಮಹಿಳಾ ಪ್ರಯಾಣಿಕರಿಗೆ ನಿಗಮದ ಬುಕಿಂಗ್ ಕೌಂಟರ್‌ಗಳಲ್ಲಿ ಮುಂಗಡ ಆಸನ ಕಾಯ್ದಿರಿಸಲು ಅವಕಾಶ ಮಾಡಿಕೊಡಲಾಗಿದೆ.<br>• ದಿನಾಂಕ 01-04-2020 ರಿಂದ ಈಚೆಗೆ ನಿಗಮಕ್ಕೆ ಸೇರ್ಪಡೆಯಾಗುತ್ತಿರುವ ಎಲ್ಲಾ ಹೊಸ ವಾಹನಗಳಲ್ಲಿ ಮಹಿಳಾ ಪ್ರಯಾಣಿಕರ ಅನುಕೂಲಕ್ಕಾಗಿ ಪ್ಯಾನಿಕ್ ಬಟನ್ ಅಳವಡಿಸಲಾಗಿರುತ್ತದೆ.<br>• ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ನಿರ್ವಾಹಕರ ಹಿತದೃಷ್ಟಿಯಿಂದ ಹಗಲು ಸಾರಿಗೆಗಳಲ್ಲಿ ಕರ್ತವ್ಯ ನಿರ್ವಹಣೆಗೆ ಅನುಕೂಲ ಕಲ್ಪಿಸಲಾಗಿದೆ. |
| 127 | ಸಂಸದರು. ಶಾಸಕರು ಹಾಗೂ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳೂ ಕನಿಷ್ಠ 3 ತಿಂಗಳಿಗೆ ಒಮ್ಮೆಯಾದರೂ ಅವರವರ ಕ್ಷೇತ್ರ ವ್ಯಾಪ್ತಿಯಲ್ಲಿ ಮಹಿಳಾ ಮತ್ತು ಮಕ್ಕಳ ಮೇಲಿನ ದೌರ್ಜನ್ಯಗಳ ತಡೆಗಾಗಿ ಜಾಗೃತಿ ಸಭೆ ಸಮಾರಂಭಗಳನ್ನು ಹಮ್ಮಿಕೊಳ್ಳುವ ಕಾರ್ಯಕ್ರಮ | **ಪೊಲೀಸ್ ಇಲಾಖೆ:**<br>• ಸಂಸದರು. ಶಾಸಕರು ಹಾಗೂ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳೂ ಕನಿಷ್ಠ 3 ತಿಂಗಳಿಗೆ ಒಮ್ಮೆಯಾದರೂ ಜಾಗೃತಿ ಸಭೆ ಸಮಾರಂಭಗಳನ್ನು ಹಮ್ಮಿಕೊಳ್ಳುವ ಕಾರ್ಯಕ್ರಮ ರೂಪಿಸಲು ಸರ್ಕಾರದ ಹಂತದಲ್ಲಿ ಕ್ರಮ ಕೈಗೊಳ್ಳಬೇಕಾಗಿರುತ್ತದೆ<br>• ಎಂಎಲ್ಎ ಫಂಡ್‌ನಿಂದ ಶೇ.20 ರಷ್ಟು ಅನುದಾನವನ್ನು ಮಹಿಳೆ ಮತ್ತು ಮಕ್ಕಳ ದೌರ್ಜನ್ಯಗಳನ್ನು ತಡೆಗಟ್ಟುವ ಕಾರ್ಯಕ್ರಮಗಳಿಗೆ ಮೀಸಲಿಡುವ ಕುರಿತು ಸಮಿತಿಯು ಪರಿಶೀಲಿಸಿ ಕ್ರಮ ಕೈಗೊಳ್ಳಬಹುದಾಗಿದೆ. |

| | | |
|---|---|---|
| | ರೂಪಿಸಲು ಸರ್ಕಾರ ಕ್ರಮ ವಹಿಸಬೇಕು. | |
| 128 | ಕಾನೂನಾತ್ಮಕವಾಗಿ ಬಾಲ್ಯ ವಿವಾಹ ನಿಷಿದ್ಧವಾಗಿದ್ದರೂ ಇಂದಿಗೂ ನಡೆಯುತ್ತಿದೆ. ಅವುಗಳನ್ನು ತಡೆಯಲು, ಜನಜಾಗೃತಿ ಉಂಟು ಮಾಡಲು ಸರ್ಕಾರ ಕ್ರಮಗಳನ್ನು ಜರುಗಿಸಬೇಕು. ಬಾಲ್ಯ ವಿವಾಹವನ್ನು ಪ್ರೋತ್ಸಾಹಿಸುವವರ ಮೇಲೆ ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಂಡು ಅಂತಹವರ ವಿರುದ್ಧ ಕಾನೂನು ರೀತ್ಯಾ ಪ್ರಕರಣ ದಾಖಲಿಸಿಕೊಳ್ಳಬೇಕು. ಅಲ್ಲದೆ ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ನೋಡಿಕೊಂಡರೆ ಬಾಲ್ಯ ವಿವಾಹಗಳನ್ನು ತಡೆಗಟ್ಟಬಹುದು. | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ(ICPS)**<br><br>ಬಾಲ್ಯ ವಿವಾಹಗಳನ್ನು ತಡೆಯಲು ರಾಜ್ಯ ದಲ್ಲಿ ಗ್ರಾಮಮಟ್ಟದಿಂದ ರಾಜ್ಯ ಮಟ್ಟದವರಗೆ ಎಲ್ಲಾ ಹಂತಗಳಲ್ಲಿ ವಿವಿಧ ಇಲಾಖೆಗಳ ಅಧಿಕಾರಿ / ಸಿಬ್ಬಂದಿಗಳನ್ನು ಬಾಲ್ಯ ವಿವಾಹ ನಿಷೇಧಾಕಾರಿಗಳನ್ನಾಗಿ ನೇಮಿಸಲಾಗಿದ್ದು, ಅವರ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ನಿಗದಿಪಡಿಸಲಾಗಿದೆ.<br><br>ಪ್ರತಿ ತಿಂಗಳು ಬಾಲ್ಯ ವಿವಾಹ ಕುರಿತ ಮಾಹಿತಿಯನ್ನು (ಸ್ವೀಕೃತ ದೂರುಗಳು, ತಡೆದ ಬಾಲ್ಯ ವಿವಾಹಗಳು, ನಡೆದ ಬಾಲ್ಯ ವಿವಾಹಗಳು ಮತ್ತು ಎಫ್ ಐ ಆರ್ ದಾಖಲಾದ ಪ್ರಕರಣಗಳು ಪಡೆದು ಅವಲೋಕಿಸಿ ಕ್ರಮವಹಿಸಲಾಗುತ್ತಿದೆ. ಪ್ರತಿ ಬಾಲ್ಯವಿವಾಹ ಪ್ರಕರಣಕ್ಕೆ ಎಫ್ ಐಆರ್ ದಾಖಲಿಸಿ ಕಾನೂನು ಕ್ರಮ ಜರುಗಿಸಲು ಕ್ರಮವಹಿಸಲಾಗುತ್ತಿದೆ. ಅಲ್ಲದೆ, ಬಾಲ್ಯವಿವಾಹ ತಡೆಯುವುದಕ್ಕೆ ಸಂಬಂಧಿಸಿದಂತೆ ಎಲ್ಲಾ ಹಂತಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br><br>**ಪೊಲೀಸ್ ಇಲಾಖೆ:**<br><br>• ಬಾಲ್ಯ ವಿವಾಹಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಮಹಿಳಾ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಒಳಗೊಂಡ ಜಿಲ್ಲಾ ಮಟ್ಟದಲ್ಲಿ ಒಂದು ಹಾಗೂ ಪ್ರತಿ ಪೊಲೀಸ್ ಠಾಣೆಯ ಮಟ್ಟದಲ್ಲಿ ಪಿ.ಎಸ್.ಐ ನೇತೃತ್ವದ ಎಸ್.ಜೆ.ಪಿ.ಯು (Special Juvenile Police Unit) ಘಟಕಗಳು ಕರ್ತವ್ಯ ನಿರ್ವಹಿಸುತ್ತಿವೆ.<br>• ಸದರಿ ಘಟಕದ ಅಧಿಕಾರಿಗಳು ಡಿ.ಸಿ.ಪಿ.ಯು (District Child Protuction Unit) ಘಟಕದ ಅಧಿಕಾರಿಗಳೊಂದಿಗೆ ಸಮನ್ವಯತೆಯಿಂದ ಬಾಲ್ಯ ವಿವಾಹಗಳನ್ನು ತಡೆಯಲಾಗುತ್ತಿದೆ.<br>• ಬಾಲ್ಯ ವಿವಾಹ ನಡೆಸುವವರ ವಿರುದ್ಧ ಕಾನೂನು ಕ್ರಮ ಕೈಕೊಳ್ಳಲಾಗುತ್ತಿ . |

129 ಸಮಾಜದಲ್ಲಿ ಬಹುಸಂಖ್ಯೆಯಲ್ಲಿರುವ ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಗೆ ಹೆಚ್ಚು ಗಮನ ನೀಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ರಾಜ್ಯದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಿ ಇಲಾಖೆಯನ್ನು ಬಲಗೊಳಿಸುವುದು.

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವರ್ಷವಾರು ಆಯವ್ಯಯ ಹಂಚಿಕೆಯ ವಿವರ 2021 ರಿಂದ 2024 ರವರೆಗೆ )

(ರೂ. ಕೋಟಿಗಳಲ್ಲಿ)

| | | | | |
|---|---|---|---|---|
| 1 | 2021-22 | 4530.61 | 4653.34 | 4681.28 |
| 2 | 2022-23 | 4713.00 | 5665.37 | 4669.09 |
| 3 | 2023-24 | 24121.48 | 24932.90 | 23711.01 |
| 4 | 2024-25 | 34002.49 | 34699.65 | 34699.65 |

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯದಿಂದ ಪ್ರತ್ಯೇಕಗೊಂಡು 2018 ರಲ್ಲಿ ಮಕ್ಕಳ ರಕ್ಷಣಾ ನಿರ್ದೇಶನಾಲಯವು ಪ್ರಾರಂಭವಾಗಿರುತ್ತದೆ. ನಿರ್ದೇಶನಾಲಯವು ಪ್ರಾರಂಭವಾದ ವರ್ಷದಿಂದ ಅವಶ್ಯಕವಿರುವ ಅನುದಾನವನ್ನು ರಾಜ್ಯ ಸರ್ಕಾರವು ಒದಗಿಸುತ್ತಿದ್ದು, ಕಳೆದ ಮೂರು ವರ್ಷಗಳ ಅನುದಾನದ ಮಾಹಿತಿಯು ಈ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

| ಕ್ರ.ಸಂ | ವರ್ಷ | ಹಂಚಿಕೆ | ಬಿಡುಗಡೆ | ವೆಚ್ಚ |
|---|---|---|---|---|
| 1 | 2022-23 | 13500.63 | 13499.63 | 13175.77 |
| 2 | 2023-24 | 20376.83 | 20004.10 | 19033.36 |
| 3 | 2024-25 | 26102.28 | 18448.28 | 17767.29 |

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಕಳೆದ ಮೂರು ವರ್ಷಗಳ ಅನುದಾನದ ಮಾಹಿತಿಯು ಈ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

| ಕ್ರ.ಸಂ | ವರ್ಷ | ಹಂಚಿಕೆ | ಬಿಡುಗಡೆ | ವೆಚ್ಚ |
|---|---|---|---|---|
| 1 | 2022-23 | 8569.99 | 8178.96 | 8178.96 |
| 2 | 2023-24 | 8584.24 | 8584.24 | 8584.24 |
| 3 | 2024-25 | 9580.29 | 9580.29 | 9580.29 |

| | | |
|---|---|---|
| 130 | ರಾಜ್ಯದ ಕೆಲವು ಜಿಲ್ಲೆಗಳ ಗೊಲ್ಲರಹಟ್ಟಿಗಳಲ್ಲಿ ಮಹಿಳೆಯರನ್ನು ಮುಟ್ಟಿನ ಸಮಯದಲ್ಲಿ ಮತ್ತು ಬಾಣಂತನದ ಸಂದರ್ಭದಲ್ಲಿ ಜನವಸತಿ ಪ್ರದೇಶದಿಂದ ಪ್ರತ್ಯೇಕಗೊಳಿಸಿ ಮೂಲಭೂತ ಸೌಕರ್ಯಗಳು ಕೊರತೆಯಿರುವ, ನೈರ್ಮಲ್ಯವಿಲ್ಲದ ಅಮಾನವೀಯ ಪರಿಸ್ಥಿತಿಯಲ್ಲಿ ಇರಿಸುವ ಪದ್ಧತಿ ರೂಢಿಯಲ್ಲಿದೆ. ಇದಕ್ಕೆ ಸಮುದಾಯದೊಳಗಿನ ಹಲವು ಮೂಢನಂಬಿಕೆಗಳು ಕಾರಣವಾಗಿವೆ. ಈ ಅವೈಜ್ಞಾನಿಕ ಪದ್ಧತಿ ಮಹಿಳೆಯರ ಮತ್ತು ನವಜಾತ ಶಿಶುಗಳ ಆರೋಗ್ಯದ ಮೇಲೆ ತೀವ್ರ ದುಷ್ಪರಿಣಾಮ ಬೀರುತ್ತಿದ್ದು, ಇದು ಒಂದು ಸಮುದಾಯದ ಮಹಿಳೆಯರ ಮತ್ತು ಶಿಶುಗಳ ಮೇಲೆ ಹೇರಲಾಗಿರುವ ದೌರ್ಜನ್ಯವಾಗಿದೆ. ಈ ಮೌಢ್ಯಾಚರಣೆಯ ವಿರುದ್ಧ ಗೊಲ್ಲರಹಟ್ಟಿಗಳಲ್ಲಿ ಜನಜಾಗೃತಿ ಮೂಡಿಸಿ ಗೊಲ್ಲರಹಟ್ಟಿಯೊಳಗಿನ ಬಾಣಂತಿಯರನ್ನು ಮತ್ತು ಮಹಿಳೆಯರ ಆರೋಗ್ಯವನ್ನು ಕಾಪಾಡಬೇಕಿದೆ. ಈ ವಿಚಾರದಲ್ಲಿ ಪ್ರಚಾರಾಂದೋಲನಗಳಿಗೆ ಮತ್ತು ಜನಜಾಗೃತಿ ಕಾರ್ಯಕ್ರಮಗಳಿಗೆ | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ(ಮ.ಮ.ಅ.ನಿರ್ದೇಶನಾಲಯ)**<br><br>• ಮಾನ್ಯ ಮುಖ್ಯ ಕಾರ್ಯದರ್ಶಿಗಳಿಂದ ದಿನಾಂಕ:07.10.2024 ರಂದು ಸದರಿ SOP ಪಾಲಿಸುವ ಕುರಿತು ಸುತ್ತೋಲೆಯನ್ನು ಹೊರಡಿಸಿ ಜಿಲ್ಲಾಡಳಿತಗಳಿಗೆ ಸೂಚಿಸಲಾಗಿದೆ.<br><br>• ಕರ್ನಾಟಕ ಸರ್ಕಾರದ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ, ಹಾಗೂ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಸಹಮತಿಯೊಂದಿಗೆ ಮಹಿಳಾ ಮತ್ತು ಮಕ್ಕಲ ಅಭಿವೃದ್ಧಿ ಇಲಾಖೆಯು ದಿನಾಂಕ: 05.10.2024 ರಂದು ಸಮಾಜದ ಕೆಲವು ಸಮುದಾಯದ ಬಾಣಂತಿಯರ ಆರೈಕೆಯಲ್ಲಿ ಪಾಲಿಸಬೇಕಾದ ನಿರ್ದಿಷ್ಟ ಕಾರ್ಯಾಚರಣೆಯ ಕಾರ್ಯವಿಧಾನ (SOP) ಹೊರಡಿಸಲಾಗಿರುತ್ತದೆ ಹಾಗೂ ಜಿಲ್ಲಾಡಳಿತಗಳಿಗೆ ಕ್ರಮಕೈಗೊಳ್ಳಲು ಸೂಚಿಸಲಾಗಿರುತ್ತದೆ.<br><br>• ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರ ಮತ್ತು ಎಲ್ಲಾ ಭಾಗೀದಾರ ಇಲಾಖೆಗಳೊಂದಿಗೆ (ಸಮಾಜಕಲ್ಯಾಣ, ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್) ಇಲಾಖೆಗಳ ಸಹಕಾರದೊಂದಿಗೆ ಸಾಮಾಜಿಕ ಮೌಢ್ಯಗಳನ್ನು ತೊಡೆದು ಹಾಕಲು ಮತ್ತು ಕಾನೂನು ಅರಿವನ್ನು ಮೂಡಿಸುವ ಕಾರ್ಯಕ್ರಮಗಳನ್ನು ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ.<br><br>• ಜಿಲ್ಲಾಧಿಕಾರಿಗಳಿಗೆ ದಿನಾಂಕ:03.04.2025 ರಂದು ಮಹಿಳೆಯರು ಮತ್ತು ಮಕ್ಕಳ ದೌರ್ಜನ್ಯ ತಡೆಗಟ್ಟುವ ಕ್ರಮಗಳ ಬಗ್ಗೆ, ಹಾಗೂ ಮೌಢ್ಯತೆಯನ್ನು ಹೋಗಲಾಡಿಸುವ ಬಗ್ಗೆ, ಜಾಗೃತಿಯನ್ನು ಸಾರ್ವಜನಿಕ ಸಮಾರಂಭಗಳಲ್ಲಿ ಹಮ್ಮಿಕೊಳ್ಳಲು ಸೂಚಿಸಿ ಪತ್ರ ಬರೆಯಲಾಗಿದೆ.<br><br>ಈಗಾಗಲೇ ಸಮಾಜ ಕಲ್ಯಾಣ ಇಲಾಖೆಯಿಂದ ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನ ಅಧಿನಿಯಮ 2017 ಮತ್ತು ನಿಯಮಗಳು 2020ನ್ನು ರೂಪಿಸಲಾಗಿದೆ. ಸದರಿ ಕಾಯ್ದೆಯಡಿಯಲ್ಲಿ ಪೊಲೀಸ್ ಇಲಾಖೆಯಿಂದ ಕ್ರಮ ಜರುಗಿಸಲಾಗುತ್ತಿದೆ. |

| | | |
|---|---|---|
| | ಸರ್ಕಾರ ಹೆಚ್ಚಿನ ಮಹತ್ವ ನೀಡಬೇಕು. | |
| 131 | ಮಹಿಳೆಯರ ಮತ್ತು ಮಕ್ಕಳ ಬದುಕಿನ ಮೇಲೆ ದುಷ್ಪರಿಣಾಮ ಬೀರುವ ಅಪಾಯಕಾರಿ ಮೌಢ್ಯಾಚರಣೆಗಳ ವಿರುದ್ಧ ಜನರಲ್ಲಿ ಅರಿವು ಮೂಡಿಸಿ ಅವುಗಳನ್ನು ತಡೆಗಟ್ಟಬೇಕಿದೆ. ಈ ದಿಶೆಯಲ್ಲಿ ಜನರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು ಸರ್ಕಾರ ಕಾರ್ಯಕ್ರಮಗಳನ್ನು ರೂಪಿಸಬೇಕು. | **ಸಮಾಜ ಕಲ್ಯಾಣ ಇಲಾಖೆ:**<br><br>ಈಗಾಗಲೇ ಸಮಾಜ ಕಲ್ಯಾಣ ಇಲಾಖೆಯಿಂದ ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ಅಧಿನಿಯಮ 2017 ಮತ್ತು ನಿಯಮಗಳು 2020ನ್ನು ರೂಪಿಸಲಾಗಿದೆ. ಸದರಿ ಕಾಯ್ದೆಯಡಿಯಲ್ಲಿ ಪೊಲೀಸ್ ಇಲಾಖೆಯಿಂದ ಕ್ರಮ ಜರುಗಿಸಲಾಗುತ್ತಿದೆ. |
| 132 | ಪ್ರತಿನಿತ್ಯ ಕೆಲವು ಟಿ.ವಿ. (ದೃಶ್ಯ) ಮಾಧ್ಯಮಗಳು ಮಹಿಳೆಯರು ಮತ್ತು ಮಕ್ಕಳ ಮೇಲೆ ನಕಾರಾತ್ಮಕ ದೃಶ್ಯಗಳನ್ನು ಪ್ರದರ್ಶಿಸಿ ಸಮಾಜವನ್ನು ತಪ್ಪು ದಾರಿಗೆ ಕೊಂಡೊಯ್ಯುವ ಪ್ರಯತ್ನಗಳು ಅವ್ಯಾಹತವಾಗಿ ನಡೆಯುತ್ತಿವೆ. ಅಂತಹ ನಕಾರಾತ್ಮಕ ದೃಶ್ಯಗಳನ್ನು ಪ್ರದರ್ಶಿಸುವಂತಹ ದೃಶ್ಯಗಳನ್ನು ತಡೆಯಲು ಸರ್ಕಾರವು ಕಾನೂನು ರೂಪಿಸಬೇಕು. | **ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ:**<br><br>The Cable Television Networks (Regulation) Act, 1995 ಅಡಿಯ ಕಾರ್ಯಕ್ರಮ ಸಂಹಿತೆ (Programmee Code ) ಗಳನ್ನು ಪಾಲಿಸದ ಟಿ.ವಿ. ವಾಹಿನಿಗಳಿಗೆ ಜಿಲ್ಲಾ ಹಾಗೂ ರಾಜ್ಯಮಟ್ಟದ ಕೇಬಲ್ ಟಿ.ವಿ. ಸಮಿತಿ ಸಭೆಗಳ ಶಿಫಾರಸ್ಸಿನಂತೆ ಮಾಧ್ಯಮ ಸಂಸ್ಥೆಗಳಿಗೆ ಸಲಹೆಗಳನ್ನು ನೀಡಲಾಗುತ್ತಿದೆ. ನಕಾರಾತ್ಮಕ ದೃಶ್ಯಗಳ ಪ್ರಸಾರ ತಡೆಗೆ ನೇರ ಕ್ರಮವಹಿಸಲು ಕಾನೂನು ರೂಪಿಸುವುದು ಕೇಂದ್ರ ಸರ್ಕಾರದ ಹಂತದಲ್ಲಿ ಕೈಗೊಳ್ಳಬಹುದಾದ ಕ್ರಮವಾಗಿದೆ. |
| 133 | ಪ್ರತಿನಿತ್ಯ ಕೆಲವು ಟಿ.ವಿ. (ದೃಶ್ಯ) ಮಾಧ್ಯಮಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ಬಗ್ಗೆ ಮೌಢ್ಯಗಳನ್ನು ಬಿಂಬಿಸಿ. ಮಹಿಳೆಯರು ಮತ್ತು ಮಕ್ಕಳ ಮೇಲೆ ದುಷ್ಪರಿಣಾಮ ಬೀರುವಂತಹ ಪ್ರಯತ್ನಗಳು | **ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ:**<br><br>The Cable Television Networks (Regulation) Act, 1995 ಅಡಿಯ ಕಾರ್ಯಕ್ರಮ ಸಂಹಿತೆ (Programme Code ) ಗಳನ್ನು ಪಾಲಿಸದ ಟಿ.ವಿ. ವಾಹಿನಿಗಳಿಗೆ ಜಿಲ್ಲಾ ಹಾಗೂ ರಾಜ್ಯಮಟ್ಟದ ಕೇಬಲ್ ಟಿ.ವಿ. ಸಮಿತಿ ಸಭೆಗಳ ಶಿಫಾರಸ್ಸಿನಂತೆ ಮಾಧ್ಯಮ ಸಂಸ್ಥೆಗಳಿಗೆ ಸಲಹೆಗಳನ್ನು ನೀಡಲಾಗುತ್ತಿದೆ. ಮೌಢ್ಯಗಳನ್ನು ಬಿಂಬಿಸುವ ದೃಶ್ಯಗಳ ಪ್ರಸಾರ ತಡೆಗೆ ನೇರ ಕ್ರಮವಹಿಸಲು |

| | | |
|---|---|---|
| | ಅವ್ಯಾಹತವಾಗಿ ನಡೆಯುತ್ತಿವೆ. ಅಂತಹ ದುಷ್ಪರಿಣಾಮ ಮತ್ತು ಅಪಾಯಕಾರಿ ಮೌಡ್ಯಗಳನ್ನು ಬಿತ್ತರಿಸುವಂತಹವುಗಳನ್ನು ನಿಯಂತ್ರಿಸಲು ಸರ್ಕಾರ ಕಾನೂನು ರೂಪಿಸಬೇಕು. | ಕಾನೂನು ರೂಪಿಸುವ ಕಾರ್ಯವು ಕೇಂದ್ರ ಸರ್ಕಾರದ ಹಂತದಲ್ಲಿ ಕೈಗೊಳ್ಳಬಹುದಾದ ಕ್ರಮವಾಗಿದೆ. |
| 134 | ಕ್ಷುಲ್ಲಕ ಕಾರಣಗಳಿಂದಾಗಿ ಅಥವಾ ತನಿಖಾಧಿಕಾರಿ ಮಾಡಿದ ತಪ್ಪಿನಿಂದ ಆರೋಪಿ ಬಿಡುಗಡೆಯದಲ್ಲಿ ಅಂತಹಾ ತೀರ್ಪುಗಳನ್ನು ಪರಿಶೀಲಿಸಲು ಉನ್ನತಾಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ಸರ್ಕಾರ ರಚಿಸಬೇಕು. ತೀರ್ಪುಗಳನ್ನು ಪರಿಶೀಲಿಸಿದ ನಂತರ ತಪ್ಪಿತಸ್ಥ ತನಿಖಾಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲು ಅನುವಾಗುವಂತೆ ಕಾನೂನನ್ನು ರಚಿಸುವುದು. | **ಪೊಲೀಸ್ ಇಲಾಖೆ:**<br><br>ತನಿಖಾಧಿಕಾರಿಗಳ ಲೋಪದೋಷಗಳಿಂದ ಪ್ರಕರಣಗಳು ಮಾನ್ಯ ನ್ಯಾಯಾಲಯದಲ್ಲಿ ಸಾಬೀತಾಗದ್ದಿದ್ವಲ್ಲಿ, ಜಿಲ್ಲಾ/ ವಲಯ/ ರಾಜ್ಯ ಮಟ್ಟದ Acquittal Revies Committee ಗಳಿಂದ ಪ್ರಕರಣಗಳ ವಿಮರ್ಶೆ ಕೈಕೊಂಡು, ಅಂತಹ ತನಿಖಾಧಿಕಾರಿಗಳ ವಿರುದ್ಧ ಕ್ರಮ ಕೈಕೊಳ್ಳಲಾಗುತ್ತಿದೆ. |
| 135 | ಸಮಾಜದಲ್ಲಿ ಮಹಿಳೆಯರು 50% ಮತ್ತು 0-18 ವರ್ಷದ ಮಕ್ಕಳು 38% ಇರುತ್ತಾರೆ. ಈ ಮಹಿಳೆಯರು ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಯ ದೃಷ್ಟಿಯಿಂದ ಮತ್ತು ಅವುಗಳ ಬಗ್ಗೆ ಜಾಗೃತಿ ಉಂಟು ಮಾಡುವ, ಅವರನ್ನು ರಕ್ಷಿಸುವ ಮುಂತಾದವುಗಳ ಉಸ್ತುವಾರಿಗಾಗಿ | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ(ICPS):**<br><br>ಈ ಹಿಂದೆ ಮಹಿಳಾ ಮತ್ತು ಮಕ್ಕಳ ಮೇಲಿನ ಶೋಷಣೆ, ದೌರ್ಜನ್ಯ, ಅತ್ಯಾಚಾರ ನಿಯಂತ್ರಿಸುವ ಮತ್ತು ವರದಿ ನೀಡುವ ತಜ್ಞರ ಸಮಿತಿಯು ಒಳಾಡಳಿತ ಇಲಾಖೆಯಿಂದ ರಚಿಸಲಾಗಿರುವ ಹಿನ್ನೆಲೆಯಲ್ಲಿ ಮಹಿಳೆಯರು ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಯ ದೃಷ್ಟಿಯಿಂದ ಮತ್ತು ಅವುಗಳ ಬಗ್ಗೆ ಜಾಗೃತಿ ಉಂಟು ಮಾಡುವ, ಅವರನ್ನು ರಕ್ಷಿಸುವ ಮುಂತಾದವುಗಳ ಉಸ್ತುವಾರಿಗಾಗಿ ಖಾಯಂ ಆಗಿ "ತಜ್ಞರ ಸಮಿತಿಯನ್ನು ಒಳಾಡಳಿತ ಇಲಾಖೆಯಿಂದಲೇ ರಚಿಸುವುದು ಸೂಕ್ತವಾಗಿರುತ್ತದೆ.18 ವರ್ಷದೊಳಗಿನ ಮಕ್ಕಳ ರಕ್ಷಣೆಗೆ ಇರುವ ಕಾನೂನುಗಳು: |

| | | |
|---|---|---|
| | ಖಾಯಂ ಆಗಿ "ತಜ್ಞರ ಸಮಿತಿಯನ್ನು" ರಚಿಸಲು ಸರ್ಕಾರ ಕ್ರಮ ವಹಿಸಬೇಕು. | • ಬಾಲನ್ಯಾಯ (ಮಕ್ಕಳಪಾಲನೆ ಮತ್ತು ರಕ್ಷಣೆ) ಕಾಯ್ದೆ-2015<br>• ಬಾಲನ್ಯಾಯ (ಮಕ್ಕಳಪಾಲನೆ ಮತ್ತು ರಕ್ಷಣೆ) ತಿದ್ದುಪಡಿಕಾಯ್ದೆ 2021, 2016ರಮಾದರಿ ನಿಯಮಗಳು.<br>• ಮಕ್ಕಳಮೇಲಿನ ಲೈಂಗಿಕ ದೌರ್ಜನ್ಯತಡೆ (ಫೋಕ್ಸೋ) ಕಾಯ್ದೆ-2012 ನಿಯಮಗಳು-2020<br>• ಬಾಲ್ಯವಿವಾಹನಿಷೇಧಕಾಯ್ದೆ-2006,<br>• ಬಾಲ್ಯವಿವಾಹನಿಷೇಧ (ಕರ್ನಾಟಕ) ನಿಯಮಗಳು- 2014.<br>• ಬಾಲ್ಯವಿವಾಹನಿಷೇಧ (ಕರ್ನಾಟಕತಿದ್ದುಪಡಿ)ಕಾಯ್ದೆ-2016.<br>• ಬಾಲಕಾರ್ಮಿಕ (ನಿಷೇಧಮತ್ತುನಿಯಂತ್ರಣ) ಕಾಯ್ದೆ-1986<br>• ಮಹಿಳೆಯರ ಮತ್ತು ಮಕ್ಕಳ ಅನೈತಿಕಸಾಗಾಣಿಕೆ (ತಡೆಗಟ್ಟುವಿಕೆ) ಕಾಯ್ದೆ-1956.<br>• ಮಕ್ಕಳ ಮೇಲೆ ಆಗುತ್ತಿರುವ ದೌರ್ಜನ್ಯ ಹಾಗೂ ಬಾಲ್ಯ ವಿವಾಹಗಳನ್ನು ತಡೆಯಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳು:<br>• ಮಕ್ಕಳ ಸಹಾಯವಾಣಿ-1098 24*7 ಮಕ್ಕಳ ಸುರಕ್ಷತೆಗಾಗಿ ಕಾರ್ಯನಿರ್ವಹಿಸುತ್ತಿದೆ. ಸಂಕಷ್ಟದಲ್ಲಿರುವ ಮಗುವಿನ ಬಗ್ಗೆ ಯಾವುದೇ ಸಮಯದಲ್ಲಿ ಕರೆ ಸ್ವೀಕೃತವಾದರೂ ತಕ್ಷಣ ಮಗುವನ್ನು ರಕ್ಷಿಸಲು ಸಂಬಂಧಿಸಿದ ಅಧಿಕಾರಿಗಳು ಕಾರ್ಯ ಪ್ರವೃತ್ತರಾಗಿರುತ್ತಾರೆ.<br>• ಮಕ್ಕಳ ರಕ್ಷಣಾ ಕಾರ್ಯಕ್ರಮಗಳ ಕುರಿತು ಮಾನ್ಯ ಇಲಾಖಾ ಸಚಿವರ ಸಂದೇಶವನ್ನು ಆಕಾಶವಾಣಿ ಮೂಲಕ ದಿ:16-09-2024 ರಿಂದ 15-10-2024ರ ವರೆಗೆ ಪ್ರಸಾರ ಮಾಡಲಾಗಿದೆ.<br>• ದಿನಾಂಕ:11.08.2024 ರಿಂದ "ವಾತ್ಸಲ್ಯವಾಣಿ ಎಂಬ 13 ವಾರಗಳ ಸರಣಿ ಕಾರ್ಯಕ್ರಮವನ್ನು ಆಕಾಶವಾಣಿ ಮೂಲಕ ಪ್ರಸಾರ ಮಾಡಲಾಗುತ್ತಿದ್ದು, ಈ ಕಾರ್ಯಕ್ರಮದಲ್ಲಿ ಮಾನ್ಯ ಇಲಾಖಾ ಸಚಿವರು, ಇಲಾಖಾ ಕಾರ್ಯದರ್ಶಿಗಳು, ನಿರ್ದೇಶಕರು ಸೇರಿದಂತೆ ಹಲವು ಅಧಿಕಾರಿಗಳು ಭಾಗವಹಿಸಿ ಜಾಗೃತಿ ಮೂಡಿಸಿದ್ದಾರೆ.<br>0-18 ವರ್ಷದ ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಅವುಗಳ ಬಗ್ಗೆ ಜಾತ್ರುತಿ ಉಂಟುಮಾಡಲು ಹಾಗೂ ಮಕ್ಕಳನ್ನು ರಕ್ಷಿಸುವುದಕ್ಕಾಗಿ ರಾಜ್ಯ ಮಟ್ಟದಲ್ಲಿ ಮಕ್ಕಳ ಕಲ್ಯಾಣ ಮತ್ತು ರಕ್ಷಣಾ ಸಮಿತಿ ಬಾಲ್ಯ ವಿವಾಹಗಳನ್ನು ತಡೆಯುವ ರಾಜ್ಯ ಮಟ್ಟ ದ ಸಮನ್ವಯ ಮತ್ತು ಪರಿಶೀಲನಾ ಸಮಿತಿ, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬಾಲ್ಯ ವಿವಾಹ ನಿಷೇಧ ಉಸ್ತುವಾರಿ ಕೋಶ ಹೀಗೆ ಎಲ್ಲಾ ಅವಶ್ಯಕ ಆಡಳಿತಾತ್ಮಕ ವ್ಯವಸ್ಥೆ ಇರುತ್ತದೆ. ಇದರ ಜೊತೆಗೆ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಕಾರ್ಯನಿರ್ವಹಿಸುತ್ತಿರುತ್ತದೆ. |

******